
# ನವ ಚೈತ್ರ

ಸಾಯಿಸುತೆ



894.814 308 3
Sai N88
ಗ್ರಂಥ ಸ್ವಾಮ್ಯ ವಿಭಾಗ

# ನವಚೈತ್ರ

(ಕಾದಂಬರಿ)


ಸಾಯಿಸುತೆ



ದೂರವಾಣಿ : 642996

"NAVACHAITRA"—A Social Novel by Smt. Sai Suthe, I Edn : March 1988 ; Published by Vasavamba Prakashana, 'Vasavamba Nilaya', No. 63, Sarakki Road, Aryanagar, Bangalore-560078 ; All rights are reserved by the Authoress ; Price : Rs. 16-00·

ಪ್ರಥಮ ಮುದ್ರಣ : ಮಾರ್ಚ್ 1988

ಹಕ್ಕುಗಳು : ಲೇಖಕಿಯದು

ಅಧಿಕೃತ ಮಾರಾಟಗಾರರು :

ಬಳೇಪೇಟೆ ಚೌಕ, ಬೆಂಗಳೂರು-53
ದೂರವಾಣಿ : 24226

ಬೆಲೆ : ರೂ. 16-00

---

ಜಗನ್ನಾಥ್ ಪ್ರಿಂಟರ್ಸ್, ಸೌರಾಷ್ಟ್ರಪೇಟೆ, ಬೆಂಗಳೂರು-53

# ಮುನ್ನುಡಿ

ಆತ್ಮೀಯ ಓದುಗರಲ್ಲಿ,

ಸಣ್ಣ ಸಮಸ್ಯೆಗಳ ನಡುವೆ ಹುದುಗಿಹೋಗುವ ಎಷ್ಟೋ ವಿಷಯಗಳು ಇವೆ. ಸ್ವತಃ ಈ ಕಾದಂಬರಿ ನಾಯಕಿ ತೋಡಿಕೊಂಡ ಸತ್ಯಕತೆಯನ್ನು ಎಳೆ ಎಳೆಯಾಗಿ ಬಿಡಿಸಿ ನಿಮ್ಮ ಮುಂದೆ ಇಟ್ಟಿದ್ದೇನೆ. ಪಂಕಜಮ್ಮ, ಗುರುಮೂರ್ತಿಗಳಂಥ ಜನ ಈಗ ಅಪರೂಪವೇನಲ್ಲ.

ನನ್ನ ಕಾದಂಬರಿಗಳನ್ನು ಕೊಂಡು, ಓದಿ ಪ್ರೋತ್ಸಾಹಿಸುತ್ತಿರುವ ಓದುಗ ಬಾಂಧವರಿಗೆ ನನ್ನ ಮೊದಲ ನಮನ.

ನನ್ನ ಕಾದಂಬರಿಗಳ ಪ್ರಕಟಣೆಯಲ್ಲಿ ಅಪಾರ ಪ್ರೋತ್ಸಾಹ ನೀಡುತ್ತಿರುವ ಶ್ರೀ ಕೆ. ರಾಮಚಂದ್ರಯ್ಯನವರಿಗೂ, ಬಹಳ ಅಚ್ಚುಕಟ್ಟಾಗಿ ಪುಸ್ತಕಗಳನ್ನು ಹೊರ ತರುತ್ತಿರುವ ವಾಸವಾಂಬ ಪ್ರಕಾಶನದ ಮಾಲಿಕರಿಗೂ, ಮುಖಚಿತ್ರ ಕಲಾವಿದ ಶ್ರೀ ಜಿ. ಕೆ. ಸತ್ಯ ಅವರಿಗೂ, ಮುದ್ರಕರಾದ ಜಗನ್ನಾಥ್ ಪ್ರಿಂಟರ್ಸ್‌ನವರಿಗೂ ನನ್ನ ಕೃತಜ್ಞತೆಗಳು.

ತಾ|| 29-2-1988 ಸಾಯಿಸುತೆ

ಸಾಯಿಸದನ
ವಿದ್ಯಾನಗರ
ತುಮಕೂರು-3

# 'ಸಾಯಿಸುತೆ'ಯವರ ಕಾದಂಬರಿಗಳು

ನವಚೈತ್ರ
ಸೊಬಗಿನ ಪ್ರಿಯದರ್ಶಿನಿ
ಬಾಂದಳದ ನಕ್ಷತ್ರ
ಮಿಂಚು
ಭಾವ ಸರೋವರ
ಬಾನು ಮಿನುಗಿತು
ಬೆಳದಿಂಗಳ ಚೆಲುವೆ
ಪಸರಿಸಿದ ಶ್ರೀಗಂಧ
ಕಾರ್ತೀಕದ ಸಂಜೆ
ಶ್ರೀರಸ್ತು ಶುಭಮಸ್ತು
ಹೊಂಬೆಳಕು
ವಿವಾಹ ಬಂಧನ
ಬಾಡದ ಹೂ
ವಿಧಿವಂಚಿತೆ
ಹೃದಯರಾಗ
ಹಾ!! ವಸುಧಾ
ಕರಗಿದ ಕಾರ್ಮೋಡ
ಶುಭಮಿಲನ
ಗಿರಿಧರ
ಮಧುರಗಾನ
ಸಪ್ತಪದಿ
ನಾಟ್ಯ ಸುಧಾ
ವಸುಂಧರೆ
ಗಂಧರ್ವಗಿರಿ
ಮಮತೆಯ ಸಂಕೋಲೆ
ಮಾನಸ ವೀಣಾ
ಚೈತ್ರದ ಕೋಗಿಲೆ
ಚಿರಬಾಂಧವ್ಯ

ಮೂಡಿ ಬಂದ ಶಶಿ
ಅಭಿಲಾಷ
ಮಂಜಿನಲ್ಲಿ ಮಿಂದ ಪುಷ್ಪ
ಶರದೃತುವಿನ ಚಂದ್ರ
ಮಂಗಳ ದೀಪ
ಶ್ವೇತ ಗುಲಾಬಿ
ಜೀವನ ಸಂಧ್ಯ
ಇಬ್ಬನಿ ಕರಗಿತು
ನಿಶೆಯಿಂದ ಉಷೆಗೆ
ಸುಮಧುರ ಭಾರತಿ
ಸ್ವರ್ಣ ಮಂದಿರ
ಮಂದಾರ ಕುಸುಮ
ಪ್ರೇಮ ಸಾಫಲ್ಯ
ವಸಂತದ ಚಿಗುರು
ಬಿರಿದ ನೈದಿಲೆ
ಬಿಳಿ ಮೋಡಗಳು
ಅಮೃತ ಸಿಂಧು
ಆರಾಧಿತೆ
ಮುಗಿಲತಾರೆ
ಬೆಳ್ಳಿ ದೋಣಿ
ಕಲ್ಯಾಣರೇಖೆ
ಮೇಘವರ್ಷಿಣಿ
ರಾಗ ಬೃಂದಾವನ
ಆಶಾ ಸೌರಭ
ಸ್ನೇಹ ಮಾಧುರಿ
ಮುಂಜಾನೆಯ ಮುಂಬೆಳಕು
ಸಮ್ಮಿಲನ
ಮಿಡಿದ ಶೃತಿ

ನವಚೈತ್ರ

ವಿಕಾಸ್ ಕಾಲೇಜು ಆವರಣ ಬಿಟ್ಟು ಹೊರಗೆ ಬಂದಾಗ ಚಿಟಿಚಿಟಿ ಮಳೆ. ಮುಖ ಮೇಲೆತ್ತಿ ಆಕಾಶದ ಕಡೆ ನೋಡಿದ. ಸೂರ್ಯ ಮೋಡಗಳ ನಡುವೆ ಕಣ್ಣು ಮುಚ್ಚಾಲೆಯಾಡುತ್ತಿದ್ದ. ಇಂಥ ವಾತಾವರಣ ಅವನಿಗಿಷ್ಟ.

ಹೆಲ್ಮೆಟ್ ತಲೆಗೇರಿಸುತ್ತಿದ್ದ ನಾರಾಯಣ್ ಕೂಗಿಕೊಂಡರು "ಮಿಸ್ಟರ್ ವಿಕಾಸ್... ಬನ್ನಿ ಡ್ರಾಪ್ ಮಾಡ್ತೀನಿ" ಸಣ್ಣಗೆ ನಕ್ಕ. 'ಒಳ್ಳೆಯ ವಿಚಿತ್ರದ ಮನುಷ್ಯ' ಎಂದುಕೊಳ್ಳುತ್ತ ಮುಖಕ್ಕೆ ಕೈ ಅಡ್ಡ ಹಿಡಿದು ಅತ್ತ ಹೆಜ್ಜೆ ಹಾಕಿದ.

ಸ್ಕೂಟರ್ ಹ್ಯಾಂಡಲ್ ಮೇಲಿನ ನೀರಿನ ಹನಿಗಳನ್ನ ಬೆರಳಿನಿಂದ ತೊಡೆಯುತ್ತ ಹೇಳಿದ "ನಿಮ್ಮ ಮನೆ ಇರೋದೆಲ್ಲಿ! ನಾನು ತಲುಪಬೇಕಾದ್ದು ಎಲ್ಲಿ? ಒಂದಕ್ಕೊಂದು ಅಭಿಮುಖ. ಯಾಕೆ ಪಂಚಾಯ್ತಿ? ನೀವು ಆರಾಮಾಗಿ ಮಳೆ ಜೋರಾಗೋ ಮೊದ್ಲು ಮನೆ ಸೇರ್ಕೊಳ್ಳಿ" ಕಣ್ಣೊಡೆದು ನಕ್ಕ. ನಾರಾಯಣ್‌ನ ಕಂಡಾಗಲೆಲ್ಲ ಅವನಿಗೆ ತಮಾಷೆ ಮಾಡಬೇಕೆನಿಸುತ್ತಿತ್ತು. ಅವನ ಮಾತುಗಳು ಅವರಿಗೂ ಇಷ್ಟವೇ.

"ಹೋಗೀಪ್ಪ....ನಿಮ್ದು ಯಾವಾಗ್ಲೂ ತಮಾಷೆಯೇ" ಹತ್ತಿ ಕೂತಾಗ ವಿಕಾಸ್ ಹಿಂದಕ್ಕೆ ಬಂದ. ಅವರ ಸ್ವರ ತಡೆದು ನಿಲ್ಲಿಸಿತು "ಜಸ್ಟ್ ಎ ಮಿನಿಟ್" ಅವನಿಗೆ ರೇಗಿತು.

ನಾರಾಯಣ್ ಸ್ಕೂಟರ್‌ನಿಂದ ಕೆಳಗಿಳಿದರು "ಏನಾಯಿತಪ್ಪ....ವಿಕ್ಕಿ! ಎಲ್ಲೀವರ್ಗೂ ಬಂತು? ಎಳೆದಷ್ಟೂ ರಂಪ. ಒಂದು ನಿಲುವಿಗೆ ಬರೋದು ಒಳ್ಳೇದು, ಸಮಾಜದ ಮುಂದೆ ನಿನ್ನ ಡಿಗ್ನಿಟಿ ಇಳ್ದು ಹೋಗುತ್ತೆ. ಸ್ಟೂಡೆಂಟ್ಸ್ ಕೂಡ ಹಗುರವಾಗಿ ಮಾತಾಡ್ತಾರೆ."

ಅವರ ಮಾತು ಕೇಳಿ ವಿಕಾಸ್ ಮುಖ ಗಂಟಿಕ್ಕಿದ. ಮೈಮೇಲೆ ಕೆಂಡಗಳನ್ನು ಸುರಿದಂತಾಗಿತ್ತು. ಆದರೂ ತಾಳ್ಮೆ ಕಳೆದುಕೊಳ್ಳಲಿಲ್ಲ. ಇದು ಅವನ ಸಹಜ ಸ್ವಭಾವ. ಆದರೂ ಒಮ್ಮೊಮ್ಮೆ ಕೈ ಕೊಡುತ್ತಿತ್ತು.

"ಮಹಾಲಕ್ಷ್ಮಮ್ಮನೋರು ಕಾಯ್ತಾ ಇರ್ತಾರೆ. ಬೇಗ ಮನೆಗೆ ಹೋಗಿ. ತುಂತುರಿನಲ್ಲಿ ನಿಂತು ಗಂಭೀರವಾದ ವಿಷ್ಯಗಳನ್ನು ಮಾತಾಡಿದ್ರೆ...." ಪರಟು ಕೊಡವಿದ "ಬರೀ ನೆನೀತೀವಿ, ಅಷ್ಟೆ" ತಣ್ಣಗೆ ಹೇಳಿದ.

ನಾರಾಯಣ್ ಮುಖ ಪೆಚ್ಚಾಯಿತು. ಏನೋ ಹೇಳಲು ಮುಂದಾದಾಗ ವಿಕಾಸ್ ಮುಗುಳ್ನಗು ತೇಲಿಸುತ್ತ "ಕ್ವಿಕ್, ನೆನೆಯೋದ್ಬೇಡ" ಎಂದವನು ಮುಂದಕ್ಕೆ ಸಾಗಿದ.

'ಎಳೆದಷ್ಟೂ ರಂಪ !' ಅವರ ಮಾತು ಅರ್ಥಪೂರ್ಣ. ಆದರೆ ಎಳೆದದ್ದು ಯಾರು ? ಅಂತಹುದಕ್ಕೆ ಅವಕಾಶ ಮಾಡಿಕೊಟ್ಟ ಜನ ಎಂಥವರು ? ಕೋಪದಿಂದ ಅವನ ಮುಖ ಕೆಂಪಾಯಿತು. ಸುಂದರವಾದ, ಸ್ವಚ್ಛವಾದ ಅವನ ಮನವೆಂಬ ಕೊಳದಲ್ಲಿ ಕಲ್ಲೆಸೆದು ರಾಡಿ ಎಬ್ಬಿಸಿದ್ದರು.

ಮನೆಯ ಬಳಿಗೆ ವಿಕಾಸ್ ಬರುವ ವೇಳೆಗೆ ಅವನ ಉಡುಪುಗಳು ಅಲ್ಲಲ್ಲಿ ನೆನೆದಿತ್ತು. ಅವನಿಗೆ ವಾಕ್ ಇಷ್ಟ.

ಷೂನಲ್ಲಿದ್ದ ಮಣ್ಣನ್ನ ಕೊಡವಿ ಮೂಲೆಗೆ ತಳ್ಳಿ ಒಳಗೆ ಬರುವ ವೇಳೆಗೆ ವಿಶ್ವನಾಥಯ್ಯನವರ ಮುಖದ ಮುಂದಿನ ಪೇಪರ್ ಕೆಳಗಿಳಿಯಿತು. "ಸುನಂದ, ವಿಕಾಸ್ ಬಂದಿದ್ದಾನೆ" ಕೆಮ್ಮಿ ಗಂಟಲು ಸರಿಪಡಿಸಿಕೊಂಡರು. "ಒಂದ್ಸಿಮ್ಸ ಸೀತಾರಾಮ್‌ನ ನೋಡಿ ಬಂದಿದ್ರಾಗಿತ್ತು" ಷರಟಿನ ಗುಂಡಿಗಳನ್ನು ಬಿಚ್ಚುತ್ತಿದ್ದ ವಿಕಾಸ್ ಕೈಗಳು ಸ್ತಬ್ಧವಾದವು. ಕೆಳತುಟಿಯನ್ನು ಕಚ್ಚಿಡಿದ. ಮನದಲ್ಲಿ ಕಹಿ ಇಣಕಿತು.

"ಬಂದ ಕೂಡ್ಲೇ ಯಾಕೆ, ಆಮೇಲೆ ವಿಷ್ಯ ತಿಳಿಸಿದ್ರಾಗಿತ್ತು" ಸುನಂದಮ್ಮ ಆಕ್ಷೇಪಣೆಯ ದನಿಯೆತ್ತಿದರು. ಮೂಗು, ಮುಖ ಕೆಂಪಾಗಿತ್ತು. ಅನುಮಾನಿಸಿತು ವಿಕಾಸ್ ಮನ.

"ಏನಣ್ಣ ವಿಷ್ಯ ?" ಅವರ ಎದುರಿನಲ್ಲೇ ಕೂತ. ವಿಶ್ವನಾಥಯ್ಯನವರ ಮನ ಸಂಕೋಚಿಸಿತು. "ನಿಮ್ಮಮ್ಮ ಹೇಳ್ತಾಳೆ" ಮೇಲಕ್ಕೆದ್ದಾಗ ಕೈ ಹಿಡಿದು ಕೂಡಿಸಿದ "ಅದೇನು ಹೇಳಿ, ಪರ್ವಾಗಿಲ್ಲ. ನಾನು ಅಲ್ಪಸ್ವಲ್ಪಕ್ಕೆ ತಲೆ ಕೆಡಿಸಿಕೊಳ್ಳೋಲ್ಲ"

ವಿಶ್ವನಾಥಯ್ಯನವರ ಮುಖ ಮಂಕಾಯಿತು. ಕಲ್ಪಿಸಿಕೊಳ್ಳಲಾರದ್ದು

ಎದುರಿಸಲು ಸಿದ್ಧವಾಗಬೇಕಿತ್ತು. ಒಮ್ಮೆ ದೀರ್ಘವಾಗಿ ಉಸಿರೆಳೆದು ದಬ್ಬಿದರು. ಅವರ ಕೈ ಇನ್ನೂ ವಿಕಾಸ್ ಕೈಯಲ್ಲೇ ಇತ್ತು.

"ಅಲ್ಪಸ್ವಲ್ಪ ವಿಷ್ಯವಾಗಿದ್ರೆ ಯಾಕೆ ತಲೆ ಕೆಡ್ಸಿಕೊಳ್ಳಬೇಕಿತ್ತು. ಡೈವೋರ್ಸ್‌ಗೆ ಕೇಸ್ ಫೈಲು ಮಾಡಿದ್ದಾರಂತೆ" ಅವನ ಕೈ ಹಿಡಿತ ಕಮ್ಮಿ ಆಗಿ ವಿಶ್ವನಾಥಯ್ಯನವರ ಕೈ ಸ್ವತಂತ್ರವಾಯಿತು. ಭಯಂಕರವಾದ ಸಿಡಿಲು ಅಪ್ಪಳಿಸಿತ್ತು. ಆದರೆ ಬಂಡೆಯಂತೆ ಅಚಲವಾಗಿ ನಿಲ್ಲಬಲ್ಲಂಥ ಮನೋದಾರ್ಢ್ಯ ಅವನಲ್ಲಿತ್ತು. ಪೂರಾ ಹೃದಯಕ್ಕೆ ಸಂಬಂಧಿಸಿದ ವಿಷಯ.

"ಅಮ್ಮ ಕೂಡ ತಲೆ ಕೆಡ್ಸಿಕೊಳ್ಳುವಂಥ ವಿಷ್ಯವಲ್ಲ !" ತಣ್ಣಗೆ ಹೇಳಿ ವಿಕಾಸ್ ತನ್ನ ಕೋಣೆಗೆ ನಡೆದ. ಮೈಯ್ಯಲ್ಲಿದ್ದ ಶಕ್ತಿಯೆಲ್ಲ ಹರಿದು ಹೋದಂಥ ಅನುಭವ. ಕುಸಿದು ಕೂತ.

'ಡೈವೋರ್ಸ್‌ಗಾಗಿ ಕೇಸ್ ಫೈಲು ಮಾಡಿದ್ದಾರಂತೆ' ಕಿವಿಯಲ್ಲಿ ಅದೇ ಮಾರ್ದನಿ. ವಿಕಟ ಅಟ್ಟಹಾಸ. ಮುಷ್ಟಿ ಬಿಗಿಯಾಯಿತು. 'ಬ್ಲಡಿ... ಬಾಸ್ಟರ್ಡ್' ತಾಳ್ಮೆ ಕಳೆದುಕೊಂಡು ಮುಂದಿದ್ದ ಟೀಪಾಯಿಯನ್ನು ಒದ್ದ. ಅದೇನು ಅಂಥ ಅನಾಹುತವನ್ನು ಮಾಡಲಿಲ್ಲ.

ಜೋಡಿ ಫ್ರೇಮ್‌ನಲ್ಲಿದ್ದ ರಜನಿ ಅತ್ಯಂತ ಸುಂದರವಾಗಿ ನಕ್ಕಳು. ಭಾರವಾದ ಉಸಿರು ದಬ್ಬಿ ಕಣ್ಮುಚ್ಚಿ ಹಿಂದಕ್ಕೆ ಒರಗಿದ. ಎಲ್ಲೆಡೆ ಅವಳದೇ ನಗು.

ಕಾಫೀ ಕಪ್ ಹಿಡಿದು ಬಂದ ಸುನಂದಮ್ಮ ಮತ್ತೆ ಮೂಗೊರೆಸಿಕೊಂಡಾಗ ಕಣ್ಣು ತೆರೆದು ಸಣ್ಣಗೆ ಮುಗುಳ್ನಕ್ಕ.

ಕಾಫೀ ಲೋಟಕ್ಕೆ ಕೈ ಚಾಚಿದ "ಅದ್ಕೆ ಯಾಕಮ್ಮ ಅಷ್ಟೊಂದು ಚಿಂತೆ? ಅವ್ಳಿಗೆ ನನ್ನೊತೆ ಸಂಸಾರ ಮಾಡೋಕೆ ಇಷ್ಟವಿಲ್ದೇ ಇರ್ಬಹುದ್ದು. ಅದ್ರೆ.... ನಾನು ಬಿಡೋಕೆ ತಯಾರಿಲ್ಲ" ಲೋಟ ತುಟಿಗೆ ಹಚ್ಚಿದರು. ಆಕೆ ಉಗುಳು ನುಂಗಿದರು.

"ನಾವೇ ಸ್ವಲ್ಪ ಸೋಲಬೇಕಿತ್ತು !" ಅರೆ ಮನಸ್ಸಿನಿಂದಲೇ ಆಕೆ ಅಂದರು. ವಿಕಾಸ್ ಕೈಯ್ಯಲ್ಲಿನ ಲೋಟ ಜಾರಿತು. "ಯಾಕೆ ಸೋಲಬೇಕಿತ್ತು ? ಅಂಥ ಅಗತ್ಯವಾದ್ರೂ ಏನಿದೆ ? ಪ್ರತಿಯೊಬ್ಬ ವ್ಯಕ್ತಿಗೂ ತನ್ನ ವ್ಯಕ್ತಿತ್ವದ ಮೇಲೆ ಅಭಿಮಾನವಿರುತ್ತೆ. ಕೀಲು ಕೊಟ್ಟು ಸುಲಭವಾಗಿ

ಕುಣಿಸೋಂಥ ಬೊಂಬೆ ಅಂತ ತಿಳಿದಿದ್ದು....ಅವ್ರ ತಪ್ಪು. ಮುಂದಿನ ಫಷ ರಿಂಗ್ ಬಗ್ಗೆ ಅವ್ರು ಯೋಚಿಸ್ಲಿಲ್ಲ" ಸಿಡಿದ. ಆಕೆ ನಡುಗಿಹೋದರು. ತಮ ಗಿಂತ ಒಂದಡಿ ಎತ್ತರವಿದ್ದ ಮಗನನ್ನು ಮಾಡದ ತಪ್ಪಿಗಾಗಿ ಹೇಗೆ ಕಿವಿ ಹಿಂಡಿಯಾರು ?

ತಾಯಿ, ಮಗನ ಮಾತುಗಳನ್ನು ಕೇಳಿಸಿಕೊಂಡ ವಿಶ್ವನಾಥಯ್ಯ ನಿಸ್ಸಹಾಯಕತೆಯಿಂದ ಕೈ ಚೆಲ್ಲಿದರು. "ಅಡ್ವೋಕೇಟ್ ಸೀತಾರಾವ್‌ನ ನೋಡ್ತೀರ್ತೀಯಾ ?" ಕೇಳಿದರು. ವಿಕಾಸ್ ಮುಖ ಗಂಭೀರವಾಯಿತು. "ನವಿರಾದ ಸಂಬಂಧಗಳು ಅವಿವೇಕದಿಂದ ಹೇಗೆ ಛಿದ್ರ ಛಿದ್ರವಾಗಿ ಬಿಡ ಬಲ್ಲುದು ? ಮೊದ್ಲು ರಜನೀನ ನೋಡ್ತೀನಿ. ಆಮೇಲೆ ಮುಂದಿನದು" ಟವಲು ಹೆಗಲು ಮೇಲೆ ಹಾಕ್ಕೊಂಡು ಬಾತ್‌ರೂಂನತ್ತ ನಡೆದ. ಕುದಿಯುವ ರಕ್ತ ವೊಂದು ಕಡೆ, ತೊಳಲಾಡುವ ಹೃದಯವೊಂದು ಕಡೆ—ಇಬ್ಬದಿಯ ನೋವು ಬದುಕಿನ ಸೂಕ್ಷ್ಮ ಎಳೆಗಳು ಕಗ್ಗಂಟಾದಾಗ ಒದಗುವ ಸ್ಥಿತಿ.

ವಿಕಾಸ್ ಹತ್ತು ನಿಮಿಷದ ನಂತರ ಹೊರಬಂದು ನಿಂತ. ಹನಿಗಳು ಈಗ ಧಾರೆಯಾಗಿ ಸುರಿಯುತ್ತಿತ್ತು. ಆದರೂ ಪೂರ್ತಿ ಜನಸಂಚಾರವೇನೂ ನಿಂತಿರಲಿಲ್ಲ.

"ಮೈ ಗಾಡ್, ನಿಮ್ಮನ್ನು ಒಂದು ದಿನ ಬಿಟ್ಟಿರೋದೇ" ಬಾಯಿ ಮೇಲೆ ಕೈಯಿಟ್ಟುಕೊಂಡು "ನನ್ಕೈಯಲ್ಲಾಗೋಲ್ಲಪ್ಪ...." ಅವನೆದೆಯಲ್ಲಿ ಮುಖ ವಿಟ್ಟು ಕಣ್ಣೀರು ಸುರಿಸುತ್ತಿದ್ದ ರಜನಿಗೆ ಬಿಡುಗಡೆ ! ಅವನೆದೆ ಭಾರವಾಗಿ ಗಂಟಲುಬ್ಬಿತು.

ಸುಮಧುರ ರಾಗವಾಗಿ ಅವನೆದೆಯಲ್ಲಿ ಹರಿದಾಡಿದ್ದಳು ರಜನಿ. ಇಂಥ ಮಳೆ ದಿನಗಳಲ್ಲಿ ಅವಳೊಂದಿಗಿನ ನೆನಪುಗಳು ಅತ್ಯಂತ ಉಲ್ಲಾಸ.

"ಇಲ್ಲಿ ಸ್ವಲ್ಪ ಬಾ...." ಸುನಂದಮ್ಮ ಕೂಗಿದಾಗ ಒಳನಡೆದ. ಆಕೆ ಕೈಯಲ್ಲಿದ್ದ ಪಂಚಾಂಗ ಒಳಗಿಟ್ಟು ಬಂದರು. "ಬೀಗಿತ್ತಿ ಬಾಯಿಗೆ ಬಂದಿದ್ದು ಹೇಳಿಕೊಂಡಿದ್ದಾರೆ. ಜನ ನಮ್ಮನ್ನು ಏನೂ ಅನ್ನೋಲ್ಲ. ಅದು ಕೊಟ್ಟಿಲ್ಲ, ಇದು ಕೊಟ್ಟಿಲ್ಲಾಂತ ಎಂದಾದ್ರೂ ಅಂದಿದ್ದುಂಟೆ? ರಜನಿ ನಂಗೆ ಯಾವಾಗ್ಲೂ ಬೇರೆಯಾಗಿ ಕಂಡಿದ್ದೇ ಇಲ್ಲ" ಆಕೆಯ ಸ್ವರ ಒದ್ದೆಯಾಯಿತು. ಹೌದು,

ಆಕೆ ಸೊಸೆಯನ್ನು ಮಗಳಿನಂತೆ ಕಂಡಿದ್ದರು. ದುರಾಸೆಯ ಅತ್ತೆಯಂತೂ ಆಗಿರಲಿಲ್ಲ.

"ಬೇಕಾದ್ದು ಹೇಳಿಕೊಳ್ಳಿ. ಅದ್ಕೆ ಚಿಂತೆ ಯಾಕೆ? ನೀವು ಅದ್ನ ಮನಸ್ಸಿಗೆ ಹಚ್ಚಿಕೊಳ್ಳದ್ರೆ ಸಾಕು" ಎಂದು ಕೂತವನು ಅಂದಿನ ಪೇಪರ್ ಕೈಗೆತ್ತಿಕೊಂಡ. ಶಾಂತವಾಗಿರುತ್ತಿದ್ದ ಮನೆಯ ವಾತಾವರಣದಲ್ಲಿ ಮೋಡ ಗಳು ಮುಸುಕುವುದು ಅವನಿಗೆ ಬೇಕಿರಲಿಲ್ಲ.

ಸುನಂದಮ್ಮ ಅಲ್ಲೇ ನಿಂತರು. "ನಾನು ಹೋಗ್ಬರ್ಲಾ" ಅರೆ ಸ್ವರ ದಲ್ಲಿ ಕೇಳಿದಾಗ ತಟ್ಟನೇ ಪೇಪರಿನಿಂದ ನೋಟ ಮೇಲಕ್ಕೆತ್ತಿದ. "ಎಲ್ಲಿಗೆ?" ತೀಕ್ಷ್ಣವಾಗಿತ್ತು ಅವನ ಸ್ವರ. ಆಕೆ ಹೇಳದಿದ್ದರೂ ಅವನಿಗೆ ಅರ್ಥವಾಯಿತು. "ನೀನ್ಯಾಕಮ್ಮ ಹೋಗಿ ಅವ್ರುಗಳ ಕೈಯಲ್ಲಿ ಅನ್ನಿಸ್ಕೊಂಡ್ಬರ್ತೀಯಾ? ನಾನೇ ಹೋಗಿ ರಜನೀನ ನೋಡ್ಬರ್ತೀನಿ. ಅಷ್ಟಕ್ಕೂ ಪಟ್ಟು ಹಿಡಿದ್ರೆ ಆರಾಮಾಗಿ ಅಲ್ಲಿಯೇ ಇರಲಿ ಬಿಡು. ನಿನ್ನ ಮಗ ಸನ್ಯಾಸಿಯಾಗಿ ಹಿಮಾಲಯವೇನೂ ಸೇರಬಿಡೋಲ್ಲ."

ಸುನಂದಮ್ಮನ ಕಣ್ಣಂಚಿನ ಕಂಬನಿ ಥಳಕ್ಕೆಂದು ಕೆನ್ನೆಯ ಮೇಲೆ ಜಾರಿತು. "ಅಷ್ಟು ಹೃದಯನ ಕಲ್ಲು ಮಾಡಿಕೊಳ್ಳೋಕಾಗುತ್ತ! ರಜನಿ ಓಡಾಡಿಕೊಂಡಿದ್ದಾಗ ತುಂಬಿಕೊಂಡಂತಿದ್ದ ಮನೆ ಈಗ 'ಬಿಕೋ' ಅನ್ನುತ್ತೆ. ಮನೆ ವಿಷ್ಯ ಕೋರ್ಟಿನವರ್ಗೂ ಎಳೆದಾಡೋದು ಚೆನ್ನಲ್ಲ. ಅದು ತೀರಾ ಹುಡ್ಗುಹುಡ್ಗು" ಈಗಲೂ ಸೊಸೆಯ ಪರ ವಹಿಸಿದರು. ಆಕೆಗೆ ಸೊಸೆಯ ಮೇಲೆ ಸಿಟ್ಟಿನ ಬದಲು ಸಹಾನುಭೂತಿ.

ಇಂತಹ ಮಾತುಗಳು ಹತ್ತು ಹಲವು ಬಾರಿ ನಡೆದಿದ್ದವು. ಆದರೆ ಏನೂ ಪ್ರಯೋಜನವಿರಲಿಲ್ಲ. ವಿಶ್ವನಾಥಯ್ಯನವರು ಮಗನಿಗೆ ಗೊತ್ತಿಲ್ಲದಂತೆ ಸೊಸೆಯನ್ನು ಕರೆತರಲು ಹೋಗಿದ್ದರು. ಆಗ ಮುಖದ ಮೇಲೊಡೆದಂತೆ ಹೇಳಿಕಳಿಸಿದ್ದರು.

"ನಾವು ಎಂದೋ ಸಂಬಂಧ ಕಡಿದುಹಾಕಿದ್ದೀವಿ. ಅದೇನಿದ್ರೂ ಕೋರ್ಟಿನ ಮೂಲಕ ಬಗೆಹರಿಯಲಿ. ನೀವ್ಯಾಕೆ ಬಂದು ದಣೀತೀರಾ? ಇನ್ನೊಂದ್ಸಲ ಬಂದ್ರೆ ಇಷ್ಟು ಮರ್ಯಾದೆ ಕೂಡ ಸಿಕ್ಕೋಲ್ಲ."

ತಲೆ ತಗ್ಗಿಸಿಕೊಂಡು ವಿಶ್ವನಾಥಯ್ಯ ಮನೆಗೆ ಬಂದಿದ್ದರು. ಛಾಲೆಂಜ್

ಆಗಿ ನಿಲ್ಲಬಲ್ಲ ವ್ಯಕ್ತಿಯೆ. ಆದರೆ ಇಲ್ಲಿ ವಿಷಯ ಸೂಕ್ಷ್ಮ. ಮಗ ನೋಯು ವುದು ಅವರಿಗೆ ಬೇಕಿರಲಿಲ್ಲ.

"ಅವ್ರು ಬೇಕಾದ್ದು ಅನ್ಲೀ, ಅಂದಿರಲಿ. ನನ್ನ ಸೊಸೆ ಮನೆಗೆ ಬಂದಿದ್ರೆ.. ಸಾಕು" ಎಂದಿದ್ದರು ತಮ್ಮ ಸ್ವಾಭಿಮಾನ ನುಂಗಿ. ಮಗನ ಸುಖ ದಾಂಪತ್ಯಕ್ಕೆ ತಾವು ಸ್ವಲ್ಪ ಕಳೆದುಕೊಳ್ಳಲು ಸಿದ್ಧರಿದ್ದರು.

ಪೇಪರ್ ತಿರುವಿದ ಮೇಲೆ ವಿಕಾಸ್ ಒಂದೆಡೆ ಇಟ್ಟು ವೈಮುರಿದ. ಗೋಡೆ ಗಡಿಯಾರದತ್ತ ಅವನ ನೋಟ ಹರಿಯಿತು. ಇನ್ನೂ ಏಳು-ನಲ ವತ್ತು.

"ಅಮ್ಮ ತುಂಬ ಹಸಿವು. ಅಡ್ಗೇ ಆಗಿದ್ರೆ ಬಡ್ಸಿಬಿಡು. ಬಕಾಸುರ ನಿಗೂ ನಮ್ಮ ವಂಶಕ್ಕೂ ಏನಾದ್ರೂ ಸಂಬಂಧವಿದ್ಯಾ? ಈಚೆಗೆ ಯಾಕೋ ನನ್ನ ಹೊಟ್ಟೆ ಬಗ್ಗೆ ಅನುಮಾನ" ಹಾಸ್ಯ ಹರಿಸಿದ. ಗಂಭೀರವಾದ ಸನ್ನಿ ವೇಶಗಳಲ್ಲಿ ಹೀಗೆಯೇ ಅವನು ವ್ಯವಹರಿಸುತ್ತಿದ್ದುದು.

ಆದರೆ ಸುನಂದಮ್ಮ ತಲೆ ಎತ್ತುವ ವೇಳೆಗೆ ಅವನ ಸೀಟು ಖಾಲಿ ಯಾಗಿತ್ತು. ಮಗನ ಎದೆಯಲ್ಲಿ ಬೆಂಕಿ ಇದೆಯೆಂದು ಆಕೆಗೆ ಗೊತ್ತು.

ತಟ್ಟೆ, ನೀರು ಇಟ್ಟುಕೊಂಡು ತಾನೇ ಉಪ್ಪು, ಉಪ್ಪಿನಕಾಯಿ ಬಡಿಸಿ ಕೊಂಡ. ಮೆಲ್ಲಗೆ ಸ್ಪೂನಿನಿಂದ ತಟ್ಟೆಯ ಮೇಲೆ ತಾಳ ಹಾಕತೊಡಗಿದ. ಅಲ್ಲಿ ಕೂಡ ಅಪಸ್ವರ ಕೇಳಿಬಂತು.

'ರಜನಿ, ನಿಂಗೆ ಹೃದಯ ಅನ್ನೋದು ಇದ್ಯಾ?' ಅವನ ಮನ ಪ್ರಶ್ನಿಸಿ ದಾಗ ಉತ್ತರಿಸಲು ಅವಳೇ ಇರಲಿಲ್ಲ.

ಇಂಗ್ಲಿಷ್ ಲೆಕ್ಚರರ್ ಕೇಶವಯ್ಯ ಆತಂಕದಿಂದಲೇ ಅವನ ಮುಂದೆ ವಿಷಯ ಇಟ್ಟಿದ್ದರು. "ನಿಮ್ಮ ಅತ್ತೆ ಮನೆಯವ್ರು ತುಂಬ ಫಾರ್ವರ್ಡ್ ಜನ. ಮಗ್ಳಿಗೆ ಇನ್ನೊಂದ್ಮದ್ವೆ ಮಾಡ್ತಾರಂತೆ" ನಕ್ಕುಬಿಟ್ಟಿದ್ದ. ಆ ಏಟಿನಿಂದ ತತ್ತರಿಸಬಹುದಾಗಿದ್ದರೂ, ಅವನು ಅಚಲನಾಗೇ ಇದ್ದ. "ಈಗ ಅಂಥ ಅಗತ್ಯವಿದೆ ಬಿಡಿ. ಒಲ್ಲದ ಗಂಡನ ಜೊತೆ ಭಾರತೀಯ ಹೆಣ್ಣು ಈ ದಿನಗಳಲ್ಲಿ ಸಂಸಾರ ಮಾಡಲು ಸಿದ್ಧವಿಲ್ಲ" ವಿಷಯವನ್ನು ಹಗುರವಾಗಿ ತೇಲಿಸಿದ್ದ. ಇಂಥ ಮಾತುಗಳು ಆಗಾಗ ಕೇಳಬೇಕಾಗಿತ್ತು.

ಕೆಲವರಂತೂ ಮೂಗಿನ ಮೇಲೆ ಬೆರಳಿಟ್ಟರು. "ವಿಕಾಸ್ ಒಳ್ಳೆ ಗಟ್ಸ್

ಇರೋ ಹುಡ್ಗ. ನಾವುಗಳಾಗಿದ್ರೆ ಎಂದೋ ಅವ್ರುಗಳ ದರ್ಪಕ್ಕೆ ಬಗ್ಗಿಬಿಡ್ತಾ ಇದ್ವಿ. ಅಥ್ವಾ ಕೊರಗಿ ಮೂಲೆ ಸೇರ್‍ತಾ ಇದ್ವೋ, ಅಥ್ವಾ ಮರ್‍ಯೋಕೆ ಬಾರ್, ಹೆಣ್ಣೂಂತ ಓಡಾಡ್ತ ಇದ್ವಿ ಎರಡೂ ಇಲ್ಲ ನೋಡಿ, ಆ ಮಾರಾಯ ! ಗೆಲುವು ಸ್ಟೈಯಿಲ್, ನಗು—ಒಂದೂ ಬದಲಾವಣೆ ಇಲ್ಲ" ಮನದಲ್ಲೇ ನಕ್ಕಿದ್ದ.

"ಹೊಟ್ಟೆ ಹಸಿವು ಅಂದೇ, ಇದೇನು ಊಟ ಮಾಡಾಟ" ಸುನಂದಮ್ಮ ರೇಗಿಕೊಂಡಾಗಲೇ ಅವನು ವಾಸ್ತವಕ್ಕೆ ಮರಳಿದ್ದು.

"ಹೊಟ್ಟೆ ಸ್ವಲ್ಪ ಟ್ರಬಲ್ !" ತಟ್ಟೆಯಲ್ಲಿದ್ದುದೆಲ್ಲ ಬಳಿದು ಬಾಯಿಗಿಟ್ಟುಕೊಂಡು "ಒಂದ್ಲೋಟ ಮಜ್ಜಿಗೆ ಕೊಟ್ಬಿಡಮ್ಮ. ಕೊತ್ತಂಬರಿ, ಕರಿಬೇವು ಹಾಕೋದು ಮರಿಬೇಡ" ತಟ್ಟೆ ಎತ್ತಿಕೊಂಡು ಹೋದ.

ಸುನಂದಮ್ಮ ಅನ್ನದ ಪಾತ್ರೆ ಮುಚ್ಚಿಟ್ಟು ಮಜ್ಜಿಗೆ ಲೋಟ ಹಿಡಿದು ಬರುವ ವೇಳೆಗೆ ಕೋಣೆ ಸೇರಿಬಿಟ್ಟಿದ್ದ.

ಮಜ್ಜಿಗೆ ಲೋಟ ಅವನ ಮುಂದಿಟ್ಟರು. "ಹಾಲು ಕುಡ್ಯೋದು ಬಿಟ್ಟು ಮೂರ್‍ಹೊತ್ತೂ ಯಾಕೆ ಮಜ್ಜಿಗೆ ಕೇಳ್ತೀಯಾ ? ಇದು ಸ್ವಲ್ಪ ಕೂಡ ಸರಿಯಲ್ಲ" ಆಕೆಯ ದನಿಯಲ್ಲಿ ನೋವಿತ್ತು.

"ಹಾಲಿಗಿಂತ ಮಜ್ಜಿಗೆ ತಂಪು" ಲೋಟ ಕೈಗೆತ್ತಿಕೊಂಡ.

ಸುನಂದಮ್ಮ ಹೊರಗೆ ಬಂದ ಎರಡೇ ನಿಮಿಷದಲ್ಲಿ ವಿಕಾಸ್‌ನ ಕೋಣೆಯ ಲೈಟು ಆರಿತು. ಗಂಡ ಹೆಂಡತಿ ಮುಖ ಮುಖ ನೋಡಿಕೊಂಡರು ವಿಶ್ವನಾಥಯ್ಯ ನಿಟ್ಟುಸಿರು ದಬ್ಬಿದರು.

"ಆ ಹುಡ್ಗೀಗೆ ಯಾಕೆ ಬುದ್ಧಿ ಇಲ್ಲ. ಅವಳಾದ್ರೂ ಸುಖವಾಗಿದ್ದಾಳ? ಅದೂ....ಇಲ್ಲ !" ಅಡ್ಡಡ್ಡ ತಲೆಯಾಡಿಸಿದರು. ಸುನಂದಮ್ಮ ಏನೂ ಹೇಳಲಾರದೆ ಹೋದರು.

ವಿಕಾಸ್ ಕೈ ಪಕ್ಕದ ಇಡೀ ಹಾಸಿಗೆಯನ್ನು ತಡಕಿತು. ಬೆಚ್ಚನೆಯ ಅವನ ಬಾಹುಗಳಲ್ಲಿ ಮಲಗುತ್ತಿದ್ದ ರಜನ....ದೂರ. ಅವನೆದೆಯಲ್ಲಿ ಕೊಳ್ಳಿಯಾಡಿಸಿದಂತಾಯಿತು. ಎದ್ದು ಕೂತ. ಮಧುರವಾದ ನೆನಪುಗಳೂ ಕೂಡ ಅವನನ್ನು ದಿಕ್ಕೆಡಿಸುತ್ತಿತ್ತು.

"ಛಿ ! .. " ಮುಖ ಉಜ್ಜಿ ಮತ್ತೆ ಮಲಗಿದ. "ವಿಕಾಸ್....." ಅದೇ

ನವಿರಾದ ಸಿಹಿ ಸ್ವರ. ಮತ್ತೆ ಎದ್ದು ಕೂತ. ಅವನೆದೆಯ ಯೌವನದ ಭಾವನೆಗಳಿಗೆ ಜೀವ ತುಂಬಿದ ಅವಳೆಲ್ಲೋ !! ಮತ್ತೆ ಎದ್ದು ಕೂತ. ನಿದ್ದೆ ಎಲ್ಲಿಯೋ ತಲೆಮರೆಸಿಕೊಂಡಿತ್ತು.

ಇಡೀ ರಾತ್ರಿ ಹೊರಳಾಡಿ ಬೆಳಗಿನ ಜಾವ ನಿದ್ರಿಸಿದ. ಸ್ವಾಭಿಮಾನ ಮೆಟ್ಟಿ ಹೃದಯದ ಕರೆಗೆ ಸೋತು ಒಂದು ತೀರ್ಮಾನಕ್ಕೆ ಬಂದಿದ್ದ.

ಈ ಹೆಣ್ಣುಗಳಿಗೆ ಹೃದಯ, ಮನಸ್ಸು ಏನೂ ಇಲ್ಲ. ಗಂಡಿನ ವೀಕ್ ಪಾಯಿಂಟ್ ಹಿಡ್ದೇ... ಆಟ ಆಡಿಸೋದು. ನಾವುಗಳೂ ಹೃದಯ, ಮನಸ್ಸನ್ನು ಕಲ್ಲು ಮಾಡ್ಕೋಬೇಕು. ಹೆಣ್ಣು ಇಲ್ದೇ ಬದ್ಕು ಇಲ್ವೇನು ? ಛೆ ... ಛೆ....ತೆಗೀರಿ....ತೆಗೀರಿ" ಮುಖ ಕಹಿ ಮಾಡಿದ್ದರು ಕನ್ನಡ ಡಿಪಾರ್ಟ್‌ಮೆಂಟಿನ ಹೆಡ್ ಶ್ರೀರಾಮುಲು. ಅವರೆಂದೋ ಹೆಣ್ಣಿನಿಂದ ಮೋಸ ಹೋದವರು, ಆಜನ್ಮ ಬ್ರಹ್ಮಚಾರಿಯಾಗಿಯೇ ಇರಲು ತೀರ್ಮಾನಿಸಿದ್ದರು.

ಅವನ, ರಜನಿಯ ಮಧ್ಯೆ ಅಂತಹ ಬಿರುಕು ಇಲ್ಲದಿದ್ದರೂ ಹೆಚ್ಚು ಪ್ರಚಾರ ಹಬ್ಬಿಸಿದವರು ಪಂಕಜಮ್ಮ. ಆಕೆಯ ಬಾಯಿಂದ ಹೊರಟ ವಾಗ್ಬಾಣಗಳು ಹಲವು ಹತ್ತು ನಾಲಿಗೆಗಳಿಗೆ ಆಹಾರವಾಗಿತ್ತು. ಎಲ್ಲರ ಮಾತುಗಳನ್ನೂ ತೀರಾ ಹಗುರವಾಗಿ ತೆಗೆದುಕೊಂಡವನು ವಿಕಾಸ್ ಮಾತ್ರ.

ಕಾಲೇಜಿಗೆ ಮಗ ಹೊರಟಾಗ ವಿಶ್ವನಾಥಯ್ಯ ಬಂದು ಎದುರು ನಿಂತರು. ಅರ್ಥಮಾಡಿಕೊಂಡ ವಿಕಾಸ್. ಕನಸಿನಲ್ಲೂ ಕೂಡ ಡೈವೋರ್ಸ್ ಬಗ್ಗೆ ಯೋಚಿಸದಂಥ ಜನ.

"ನೀವೇನೂ ತಲೆ ಕೆಡಿಸ್ಕೋಬೇಡಿ, ಅಣ್ಣ. ನಾನು ರಜನಿ ಜೊತೆ ಮಾತಾಡ್ತೀನಿ. ಆಮೇಲೆ ಬೇಕಾದ್ರೆ ಅಡ್ವೋಕೇಟ್ ಸೀತಾರಾಮ್‌ನ ಭೇಟಿ ಮಾಡ್ತೀನಿ. ಇದೊಂದು ಪ್ರಯತ್ನ" ಕರ್ಚೀಫ್‌ನ ಜೇಬಿಗೆ ಸೇರಿಸಿದ.

ವಿಶ್ವನಾಥಯ್ಯ ಮಂಕಾದರು. "ನೀನೇ ಅವ್ರ ಮನೆಗೆ ಹೋಗ್ತೀಯಾ?" ಸ್ವರದಲ್ಲಿ ಆತಂಕವಿತ್ತು. ನಗೆ ಬೀರಿದ "ಹೇಗೂ ಹೆಣ್ಣು ಕೊಟ್ಟ ಮಾವನ ಮನೆ ತಾನೇ ! ರಜನಿ ಅಲ್ಲಿದ್ಮೇಲೆ ಸಂಕೋಚ ಯಾಕೆ ?" ಎಂದವನು ಮನಸ್ಸು ಬದಲಾಯಿಸಿದ. "ಇಲ್ಲ, ಫೋನ್ ಮಾಡ್ತೀನಿ" ವಿಶ್ವನಾಥಯ್ಯನವರಿಗೆ ಪ್ರಯೋಜನವಿಲ್ಲವೆನಿಸಿತು. ಆದರೆ ಬಾಯಿ ಬಿಟ್ಟು ಆಡಲಾರರು. "ಹೇಗೆ ತೋಚುತ್ತೋ ಹಾಗೆ ಮಾಡು. ಸುಮ್ನೆ ಯಾವ್ದೇ ಘರ್ಷಣೆಗೆ

ದಾರಿ ಮಾಡಿ ಕೊಡೋದ್ಬೇಡ. ಅವ್ರು ಪೊಲೀಸ್, ಕೋರ್ಟ್ ಅಂತ ಹೆ ರಿಸೋ ಜನ. ಅದ್ಕೆಲ್ಲ ನಾವು ಸಿದ್ಧವಾಗೋದ್ಬೇಡ !" ವೇದನೆಯಿಂದ ಉಸುರಿ ದರು. ವಿಕಾಸ್ ಸಂಕಟದಿಂದ ಒದ್ದಾಡಿದ.

"ಆಯ್ತು...." ಹೊರಗೆ ಕಾಲಿಟ್ಟವನು ಹಿಂದಕ್ಕೆ ತಿರುಗಿದ. "ನೀವೇ ಒಂದ್ಸಲ ಸೀತಾರಾಮ್‌ನ ಕಂಡ್ಬನ್ನಿ, ಲೀಗಲ್ ಆಗಿ ಅವ್ರು ಸಜೆಷನ್ ಪಡ್ದು ಕೊಳ್ಳೋದ್ರಲ್ಲಿ ತಪ್ಪೇನೂ ಇಲ್ಲ" ವಿಶ್ವನಾಥಯ್ಯನವರ ಮುಖ ಚಿಕ್ಕದಾ ಯಿತು.

"ನಂಗೆ ಮಾತಾಡೋಕೆ ತುಂಬ ಕಷ್ಟವಾಗುತ್ತೆ. ಇವೆಲ್ಲ ನಮ್ಮ ನಿರೀಕ್ಷೆ ಯಲ್ಲಿತ್ತಾ ? ನಂಗಂತೂ ತಲೆ ಬಿಸಿ. ಗುರುತು ಕಂಡವರೆಲ್ಲ ಒಂದೊಂದು ಮಾತು. ನಮ್ಮ ಸಂಕ್ಟದ ಜೊತೆ ಇವರುಗಳ ಇರಿತ"

ಮತ್ತೊಂದು ಮಾತಾಡದೆ ವಿಕಾಸ್ ಹೊರಗೆ ನಡೆದ. ಹೇಗೆ ಇದಕ್ಕೆ ಪರಿಹಾರ ? ನಮ್ಮಿಬ್ಬರ ನಡುವೆ ಯಾವ ಸಮಸ್ಯೆ ಇದೆಯೆಂದು ಈ ಹಾರಾಟ? ಬರೀ ಅವನ ತಲೆ ಬಿಸಿಯಾಯಿತು. ವ್ಯೆ ಮನ ತಂಪು ಮಾಡಬೇಕಾದ ರಜನಿ ಅವನ ಮಿದುಳಿಗೆ ನುಗ್ಗಿ ದಾಂಧಲೆ ನಡೆಸುತ್ತಿದ್ದಳು.

"ಗುಡ್ ಮಾರ್ನಿಂಗ್ ಸರ್" ತಟ್ಟನೆ ನಿಂತು ಸ್ವರ ಬಂದತ್ತ ತಲೆ ಹೊರಳಿಸಿದ. ಅವನ ತುಟಿಗಳ ಮೇಲೆ ಮುಗುಳ್ನಗೆ ಇಣಕಿತು. "ಗುಡ್ ಮಾರ್ನಿಂಗ್. ಈಗೇನು ಮಾಡ್ತಾ ಇದ್ದೀರ ?" ಅವಳ ತಲೆ ತಗ್ಗಿತು. ಹಿಂದಿನ ವರ್ಷ ಅವನ ವಿದ್ಯಾರ್ಥಿಯಾಗಿದ್ದ ಕೋಮಲ ಟ್ಯಾಲೆಂಟ್ ಲೇಡಿ. ಅವಳ ಬುದ್ಧಿಮತ್ತೆಗೆ ಕೆಲವೊಮ್ಮೆ ಅವನೇ ದಂಗಾಗಿದ್ದ. "ಏನು ಮಾಡ್ತಾ ಇಲ್ಲ, ಸರ್" ನೋವಿನಿಂದ ಉಸುರಿದಾಗ ಸಂತೈಯಿಸಲಾರದೇ ಹೋದ "ಬರ್ತೀನಿ...."

ಕಾಲೇಜು ಹಾದಿ ಬಿಟ್ಟು ಪಕ್ಕದ ರೋಡು ಹಿಡಿದ. ಪರಿಚಯದ ಹೋಟೆಲ್‌ಗೆ ಹೋಗಿ ಫೋನೆತ್ತಿದ "ಹಲೋ ." ಪಂಕಜಮ್ಮನ ದನಿ. ಅವನ ಮುಖದ ನರಗಳು ಬಿಗಿದುಕೊಂಡವು. ಪ್ಯಾಂಟ್ ಜೇಬಿನಲ್ಲಿದ್ದ ಕರ್ಚೀಫ್ ತೆಗೆದು ಮುಖದ ಮೇಲಾಡಿಸಿದ. "ನಾನು.....ವಿಕಾಸ್, ರಜನಿ ಹತ್ರ ಮಾತಾ ಡ್ಬೇಕು. ಸ್ವಲ್ಪ ಫೋನ್ ಹತ್ರ ಕರೀರಿ" ಅಂಜಿಕೆ, ಅಳುಕು ಇಲ್ಲದ ಬಿಗಿ ಸ್ವರ. ಕಾಣದ ಅತ್ತೆಯ ಕೆಟ್ಟ ಮುಖವನ್ನು ನೆನಪಿಸಿಕೊಂಡು ಅಸಹ್ಯಿಸಿಕೊಂಡ. "ಅವ್ಳು ಮನೆಯಲ್ಲಿಲ್ಲ." ಅದು ಸುಳ್ಳೆಂದು ಅವನಿಗೆ ಗೊತ್ತು. ಕೋಪ

ಹತ್ತಿಕ್ಕಿದ. ಎಲ್ಲಿಗೆ ಹೋಗಿದ್ದಾಳೆ ? ಯಾವಾಗ ಸಿಕ್ತಾಳೆ ?" ಅಧಿಕಾರದ ದನಿಯಿಂದಲೇ ಕೇಳಿದ.

"ಗೊತ್ತಿಲ್ಲ...." ಒರಟು ಉತ್ತರ.

ಅವನ ಮೈಯ ರಕ್ತವೆಲ್ಲ ಮುಖಕ್ಕೆ ನುಗ್ಗಿದಂತಾಯಿತು. "ಓ.ಕೆ, ಬಂದ ಕೂಡ್ಲೇ ನಾನು ಫೋನ್ ಮಾಡ್ದ ವಿಷ್ಯ ತಿಳ್ಸಿ. ಮತ್ತೆ ಫೋನ್ ಮಾಡ್ತೀನಿ" ರಿಸೀವರ್ ಇಟ್ಟ. ಆಕೆಯ ಸ್ವರ ಮತ್ತೆ ಕೇಳಲು ಅವನಿಗೆ ಇಷ್ಟವಾಗಲಿಲ್ಲ. ಸಂಯಮ, ಸಮಾಧಾನದಿಂದ ಪರಿಸ್ಥಿತಿಯನ್ನು ಎದುರಿಸಬೇಕೆಂದರೂ ಯಾವ ಕ್ಷಣದಲ್ಲಿಯಾದರೂ ತನ್ನ ಸ್ವಾಭಿಮಾನಕ್ಕೆ ಪೆಟ್ಟು ಬಿದ್ದು ಸಹನೆ ಸತ್ತುಹೋಗಬಹುದೆಂಬ ಅನುಮಾನ ಅವನಿಗೆ ಇದ್ದೇ ಇತ್ತು.

ಅಂದು ಕಾಲೇಜಿನಲ್ಲಿ ಪಾಠ ಮಾಡಲಾರದೆ ಹೋದ, ಇದು ಅವನ ಸ್ವಭಾವಕ್ಕೆ ವಿರುದ್ಧ. ಅವನು ಬಹಳ ಇಷ್ಟಪಟ್ಟು ಆಯ್ದುಕೊಂಡ ವೃತ್ತಿ ಇದು. ಅದಕ್ಕೆ ಚ್ಯುತಿ ತರುವುದು ಅವನಿಗೆಂದೂ ಇಷ್ಟವಾಗದು.

ರಜನಿಯನ್ನು ಭೇಟಿ ಮಾಡುವುದು ಹೇಗೆ ? ಮೊದಲಿನ ಹಳೆಯ ರಾಗವಾದರೆ ಏನು ಮಾಡುವುದು ? ಸ್ವಂತ ವ್ಯಕ್ತಿತ್ವವಿಲ್ಲದ ಅವಳ ಬಗ್ಗೆ ಬೇಸರದ ಜೊತೆ ಸಹಾನುಭೂತಿಯೂ ಉಂಟಾಯಿತು.

ಆಟೋ ಹತ್ತಿದ.ರಜನಿಯ ಮನೆಯ ಬಳಿ ಇಳಿದಾಗ ಅವನ ವ್ಯಕ್ತಿತ್ವವೇ ಕುಸಿದುಬಿದ್ದಂತಾಯಿತು. ಪದೇ ಪದೇ ಉಗುಳು ನುಂಗಿದ.

"ಗೇಟು ಭದ್ರವಾಗಿ ಹಾಕು. ಘುಂಡು ದನಗಳು ಸುಂದರವಾಗಿ ಬೆಳೆದ ಗಿಡಗಳನ್ನು ಮೇಯ್ದು ಹೋಗುತ್ತೆ" ಪಂಕಜಮ್ಮನ ಮಾತುಗಳು ಕಾದ ಸೀಸದಂತೆ ಅವನ ಕಿವಿಯನ್ನು ಹೊಕ್ಕಿತು. ಕ್ಷಣ ಮೈ ಮರಗಟ್ಟಿತು. ಅವುಡುಗಳು ಬಿಗಿದು ಕೂತವು. ಮೈನ ಇಡೀ ರಕ್ತಸಂಚಾರ ಕ್ಷಣ ನಿಂತಂತಾಯಿತು.

ಅವನಲ್ಲಿ ಚೇತರಿಕೆ ಹುಟ್ಟಲು ಹಲವು ಕ್ಷಣಗಳೇ ಬೇಕಾಯಿತು. 'ರಜನಿ ... ' ಅವನ ಮುಷ್ಟಿ ಬಿಗಿಯಿತು. ಪಾದಗಳನ್ನು ಎಳೆದು ಹಾಕಿದ.

ಗೇಟು ತೆರೆದಾಗ ಎದುರಾದ ಆಳು ವಿನಮ್ರತೆಯಿಂದ ಸರಿದು ಹೋದ. ನೋಟ ಅತ್ತಿತ್ತ ಹರಿದಾಡಿತು. ಅಚ್ಚ ಹಸುರಿನ ನಡುವೆ ಒಂದು ಹೂ ಕೂಡ ಕಾಣಲಿಲ್ಲ. ಈ ಜನರ ಬದುಕು ಕೂಡ ಇಷ್ಟೆ !

ಕಾಲಿಂಗ್ ಬೆಲ್ ಒತ್ತಿದಾಗ ಅವನೆದೆಯ ಬಡಿತ ಏರಿತು. ಈ ಮನೆಯ

ಪ್ರಶ್ನಿಸುವ, ತಡವರಿಸುವ ಮುನ್ನ ತುಟಿ ಬಿಚ್ಚಿದ "ರಜನೀನ ನೋಡ್ಬೇಕಿತ್ತು" ವಿಕಾಸ್‌ನ ತೀಕ್ಷ್ಣ ನೋಟಕ್ಕೆ ಅವನ ಬಂಡ ತನ ಕೂಡ ತತ್ತರಿಸಿತು. ಚೇತ ಕೆಗೆ ಕ್ಷಣಗಳನ್ನು ತೆಗೆದುಕೊಂಡ.

"ಅಂಥ ಅಗತ್ಯವೇನಿಲ್ಲ !" ಒರಟಾಗಿ ಹೇಳಿದ. ಮುಷ್ಟಿ ಬಿಗಿ ಹಿಡಿದು ಅವನ ಮುಖಕ್ಕೆ ಗುದ್ದಬೇಕೆನಿಸಿತು ವಿಕಾಸ್‌ಗೆ. "ಅದ್ನ ನಿರ್ಧರಿಸ್ಬೇಕಾದವ್ರು ....ನಾವ್ರು" ಫಟೀರನೆ ಕೆನ್ನೆಗೆ ಬಿಗಿದಂತಾಯಿತು ಅವನಿಗೆ. ಬಿಗಿಯಾಗಿ ಕೆಳ ತುಟಿಯನ್ನು ಕಚ್ಚಿಡಿದ ಪ್ರಕಾಶ್. ವಿಕಾಸ್ ಎದುರು ಸೋಲು ಅವನದಾಗುತ್ತಿತ್ತು.

ವಿಕಾಸ್ ಅವನನ್ನು ಸವರಿಕೊಂಡೇ ಹೋಗಿ ಸೋಫಾ ಮೇಲೆ ಕೂತ. ಇದು ಭಂಡತನವೆಂದು ಅವನಿಗೆ ಗೊತ್ತು. ಇತ್ತ ಮುಖ ಹಾಕಿ ಮಲಗಲು ಕೂಡ ಬೇಸರಪಡುತ್ತಿದ್ದ. ವೈವಾಹಿಕ ಜೀವನವನ್ನು ಪ್ರೀತಿಸುತ್ತಿದ್ದ ಅವನು ಹೃದಯದ ಕೂಗಿಗೆ ಸೋತು ಬಂದಿದ್ದ, ಆದರೂ ಬೇಸರ.

ಬಂದ ಪಂಕಜಮ್ಮ ಗೊಣಗಿದರು "ರಜನಿ ಇಲ್ಲ" ಅವನ ನೋಟ ಆಕೆಯನ್ನು ಇರಿಯಿತು. 'ಇದು ಸುಳ್ಳು' ಎಂದು ದೂರುವಂತಿತ್ತು ಅವನ ಮುಖದ ಭಾವ.

"ಎಲ್ಲಿಗೆ ಹೋಗಿದ್ದಾಳೆ ? ಎಷ್ಟೊತ್ತಿಗೆ ಬರ್ತಾಳೆ ?" ಅದೇ ಫೋನ್‌ನಲ್ಲಿ ಕೇಳಿದ ಪ್ರಶ್ನೆಗಳು. ಮತ್ತೆ ಅಂತಹುದೇ ಉತ್ತರ ಬರುವುದೆಂಬ ನಿರೀಕ್ಷೆ. ಮೇಲಕ್ಕೆದ್ದ "ರಜನಿಗೆ ನನ್ನ ನೋಡೋಕೆ ಹೇಳಿ" ಎಂದಾಗ ಪ್ರಕಾಶ್ ವ್ಯಂಗ್ಯವಾಗಿ ನಕ್ಕ. ಭಯಪಟ್ಟು ಬಂದ್ರಾ? ಏನಾಯ್ತು ನಿಮ್ಮ ಕೆಚ್ಚು ?" ವಿಕಾಸ್ ಕೈ ಕೆನ್ನೆಯ ಮೇಲಾಡಿತು. ಅಡಿಯಿಂದ ಮುಡಿಯವರೆಗೂ ಅವನ ನೋಟ ಪ್ರಕಾಶ್ ಮೇಲೆ ಹರಿದಾಡಿತು. 'ಬದ್ಮಾಶ್....' ಮನ ಒತ್ತಿ ಹೇಳಿತು.

"ನಿಮ್ಮ ಪ್ರಶ್ನೆಗಳಿಗೆ ನಿಧಾನವಾಗಿ ಉತ್ತರ ಸಿಕ್ಕೀತು ! ಮೊದ್ಲು ರಜನಿನ ಕಳ್ಸಿಕೊಡು. ಅವ್ಳು ಇನ್ನು ನಿನ್ನ ಮನೆಯವ್ರ ಪ್ರಕಾರ ನನ್ನ ಹೆಂಡ್ತಿಯಾಗೇ ಉಳಿದಿದ್ದಾಳೆ. ಜ್ಞಾಪ್ಕದಲ್ಲಿ ಇರಲಿ" ಸಿಡಿದ.

ಪ್ರಕಾಶ್ ಎದೆಯ ಮೇಲೆ ಕೈಕಟ್ಟಿ ಸವಾಲ್ ಎಸೆಯುವಂತೆ ಹೇಳಿದ "ಅದ್ನ ಮುರಿಯೋ ಪ್ರಯತ್ನದಲ್ಲೇ ನಾವು ಇದ್ದೀವಿ. ಏನಿದ್ರೂ ಲಾಯರ್ ಮೂಲಕ ವ್ಯವಹರಿಸಿ, ಗುಡ್ ಬೈ...."

ಹಲ್ಲುಗಳನ್ನು ಕಚ್ಚಿಡಿದ ವಿಕಾಸ್. ಅವನಿಗೆ ಪ್ರಕಾಶ್ ಏನೂಂತ ಗೊತ್ತು "ಈಸ್....ಇಟ್ .. ಅಷ್ಟೇ ಮುನ್ನಿನ ಪ್ರಯತ್ನ ಇದು. ಜೊತೆಯಲ್ಲಿ ಬಾಳಬೇಕಾದವ್ರು ನಾವು. ನಿರ್ಧಾರ ಕೂಡ ನಮ್ದೇ. ನೀವುಗಳು ಈ ವಿಷಯ ದಿಂದ ಹಿಂದಕ್ಕೆ ಸರ್ಯೋದು ಉತ್ತಮ. ಇಲ್ದಿದ್ರೆ ರಿಗ್ರೆಟ್ ಮಾಡ್ಕೋಬೇಕಾ ಗುತ್ತೆ" ಸಹನೆ ಕಳೆದುಕೊಳ್ಳದೆ ತಣ್ಣಗೆ ಉಸುರಿದ. ಈಗ ಅಂಥ ಅಗತ್ಯವು ಇತ್ತು. ಮೂರ್ಖರ ಕೈಗೆ ಸಿಕ್ಕಿ ತನ್ನ ದಾಂಪತ್ಯ ಜೀವನ ಛಿದ್ರವಾಗುವುದು ಅವನಿಗೆ ಬೇಕಿರಲಿಲ್ಲ.

ಮಧ್ಯೆ ಬಂದರು ಪಂಕಜಮ್ಮ "ಅದು ಈಗ ನಿಮ್ಮಿಬ್ರ ಮಧ್ಯೇನೇ ಉಳಿ ದಿಲ್ಲ. 'ಕೊಟ್ಟ ಹೆಣ್ಣು ಕುಲದಿಂದ ಹೊರಗೆ' ಎಂದು ಕೊಡುವಂಥ ಜನ ನಾವಲ್ಲ. ನಮ್ಗೆ ರಜನಿ ಕ್ಷೇಮ ಮುಖ್ಯ. ಅವ್ಳು ನೆಮ್ದಿಯಿಂದ ಇರೋದು ಬೇಕು. ಎರಡೂ ಕೊಡದ ನಿಮ್ಮೊಂದಿಗೆ ಅವಳು ಸಂಸಾರ ಮಾಡೋಲ್ಲ. ವಿಷ್ಯ ಇಷ್ಟು. ಮಿಕ್ಕಿದ್ದು ಕೋರ್ಟ್ ತೀರ್ಮಾನಿಸುತ್ತೆ."

ಅವನ ಸಹನೆ ಪೂರ್ತಿ ಕರಗಿಹೋಗುವ ಹಂತ ತಲುಪಿತು. ವಿಚಾರ, ವಿವೇಕಕ್ಕಿಂತ ಹಟವೇ ಮುಖ್ಯವಾದಾಗ ಹಲವು ಜೀವಿಗಳು ನೋಯುವುದು ಅನಿವಾರ್ಯ.

"ಓ.ಕೆ....ಮೇಡಮ್. ರಜನಿ ಅನ್‌ಲಕ್ಕಿ, ನೀವು ಅವ್ಳಿಗೆ ಒಳ್ಳೆ ತಾಯಿ ಯಲ್ಲ. ವಿಷಯ ತಡವಾಗಿಯಾದ್ರೂ ಗೊತ್ತಾದಾಗ ಸಂಕ್ಟಪಡ್ತಾಳೆ. ಗುಡ್ ....ಬೈ" ಕಾಲು ಅಪ್ಪಳಿಸಿ ಹೊರಗೆ ನಡೆದ.

ಪ್ರಕಾಶ ಭುಜ ಕುಣಿಸಿ ನಕ್ಕ "ನೋಡಿದ್ಯಾ, ಹೇಗೆ ಮೆತ್ತಗಾಗಿದ್ದಾರೆ. ಇನ್ನೆರಡು ದಿನಕ್ಕೆ ಬಂದು ಕಾಲು ಹಿಡಿಯದಿದ್ರೆ....ಕೇಳು" ದ್ವೇಷ ತೀರಿಸಿ ಕೊಂಡು ತೃಪ್ತನಾದವನಂತೆ ನುಡಿದು. ಆ ತಾಯಿ ಕೂಡ ಹಿಂದೆ ಬೀಳಲಿಲ್ಲ.

"ಏನು ಸ್ವಾಭಿಮಾನ, ಏನು ಕೆಚ್ಚು. ಈಗ ಅವ್ನಿಗೆ ಗೊತ್ತಾಗುತ್ತೆ ಹೆಂಡ್ತಿ ಬೆಲೆ" ಗೆದ್ದವರಂತೆ ಹೂಂಕರಿಸಿದರು.

ಡ್ರಾಯಿಂಗ್ ರೂಮಿನಿಂದ ಬಂದ ಗುರುಮೂರ್ತಿಗಳ ಮುಖ ಗಂಭೀರ

ವಾಗಿತ್ತು. ಸ್ವಲ್ಪ ನಾವು ಎಡವಿಬಿಟ್ಟಿವೇನೋ ಎಂದು ಚಿಂತಿಸಿದರು. ವಿಕಾಸ್ ಪ್ರಜ್ವಲಿಸುವ ಬೆಂಕಿಯಂತೆ ಕಂಡ. ಆದರೂ ದೊಡ್ಡಸ್ಥಿಕೆಯ ಬಿಗುಮಾನ ಬಿಡದು.

"ಹೋಗೂ ಬಂದಿದ್ದ. ಒಂದು ಕಪ್ ಕಾಫಿ ಕೊಟ್ಟು ಹೇಳೋ ಮಾತುಗಳ್ನ ನಯವಾಗಿ ಹೇಳಬಹುದಿತ್ತು" ವಿವೇಚಿಸಿದರು. ಪ್ರಕಾಶ್‌ನ ಮೂಗು ಕೋಪದಿಂದ ಕೆಂಪಾಯಿತು.

"ಅವ್ನಿಗಿರೋ ಅಹಂಕಾರನ ಊರಿನವ್ರಿಗೆಲ್ಲ ಹಂಚಿದ್ರೂ ಇನ್ನಷ್ಟು ಉಳಿಯುತ್ತೆ. ಹೇಗೂ ಒಂದಷ್ಟು ದಿನ ಕೋರ್ಟಿಗೆ ಅಲೆದಾಡ್ಲಿ. ಹೆಣ್ಣಿಗೆ ಸಿಂಪತೀ ಇದ್ದೇ ಇದೆ. ಇದ್ನ ಸ್ವಲ್ಪ ಸರಿಯಾಗಿ ಬಳಸ್ಕೊಂಡ್ರೆ ...ಕಂಬಿಗಳ ಹಿಂದಕ್ಕೆ ತಳ್ಳಬಹುದ್ದು."

ಇಂಥ ದುಡುಕುತನ ಗುರುಮೂರ್ತಿಗಳಿಗೆ ಇಷ್ಟವಾಗಲಿಲ್ಲ. ಇಂಥ ಪ್ರಕರಣಗಳನ್ನು ಎಳೆದು ರಾಡಿ ಎಬ್ಬಿಸಬಾರದು. ಅದರಲ್ಲಿ ತಮ್ಮ ಹಣ, ಕಾಲ ವ್ಯರ್ಥವಾಗುತ್ತದೆಯೆಂದು ಅವರಿಗೆ ಗೊತ್ತು. ಒಂದೇ ಸಲಕ್ಕೆ 'ಖತಂ' ಆಗಬೇಕು. ಸುಗಮವಾದ ದಾರಿ ಆರಿಸಿಕೊಳ್ಳಲು ಇಷ್ಟಪಟ್ಟರು.

ರಜನಿಯ ಕೋಣೆಯ ಕಡೆ ನೋಡಿದರು. ಬಿಕ್ಕುವಿಕೆ ಬಾಗಿಲನ್ನು ದಾಟಿ ಹೊರಗೆ ಬಂದಿತು. "ಪೂರ್ ಗರ್ಲ್....ಹೋಗಿ ಸಮಾಧಾನ ಮಾಡಿ. ಹೆಣ್ಣುಗಳಿಗೆ ಬದಲಾಗೋಕೆ ಇಷ್ಟವಿಲ್ಲ ! ಅವೇ ಪ್ರೀತಿ, ಪ್ರೇಮ. ಮಕ್ಳನ್ನ ಹೆತ್ತು ಕಟ್ಟಿಕೊಂಡವ್ನ ಬೂಟು ಪಾಲಿಶ್ ಮಾಡೋಕೆ ಇಷ್ಟಪಡ್ತಾರೆ. ಇಂಥವರನ್ನು ಇಟ್ಕೊಂಡ್....ಏನು ತಲೆ ಚಚ್ಚಿಕೊಳ್ಳೋಕೆ ಆಗುತ್ತೆ !" ಚಿಗುಪ್ಸೆಗೊಂಡರು.

ಪಂಕಜಮ್ಮ ಮಗಳನ್ನು ಸಮಾಧಾನಿಸಿದಷ್ಟು ಅವಳ ಬಿಕ್ಕುವಿಕೆ ಜೋರಾಯಿತು. ಅವರಿಗೆ ರೇಗಿತು.

"ಏನಾಯ್ತು ಅಂತ ಅಳ್ತೀಯಾ ? ಅವ್ನು ಮನೆ ಆಳಾಗಿ ಮಾಡ್ಕೋತಾನೆ. ಹೋಗಿ ಬಿದ್ದರು, ಇಂಥದಕ್ಕೆ ಯಾಕೆ ಬೇಕಾಗಿತ್ತು, ಓದು ಬರಹ ! ಹಳ್ಳಿ ಹೆಣ್ಣು ಮಕ್ಳೇ ವಾಸಿ" ಸಂಕಟಪಟ್ಟರು.

ರಜನಿ ಮುಖ ಮೇಲೆತ್ತಿ ಮುಂಗೈನಿಂದ ಕಣ್ಣೀರು ತೊಡೆದುಕೊಂಡಳು.

"ನಾನು ಹಾಗಂತ ಎಲ್ಲಿ ಹೇಳ್ದೆ ? ನೀವುಗಳು ಒಂದ್ಸ್ವಲ್ಪ ಕೂಡ್ಸಿ

ಕೊಂಡು ಬುದ್ಧಿ ಹೇಳ್ಬೇಕಿತ್ತು" ಅಳುವಿನ ಮಧ್ಯೆ ಹೇಳಿದಾಗ ಅವರಿಗೆ ಬಾರಿಸಿ ಬಿಡಬೇಕೆನಿಸಿತು. "ಕೇಳ್ಕೊಂಡಾ ಆಸಾಮಿನಾ ! ಅವ್ನಿಗೆ ನಾವು ಕಾಲು ಕಸ. ವಿದ್ಯೆ ಇದ್ದ ಮಾತ್ರಕ್ಕೆ ಏನು ಪ್ರಯೋಜನ ? ಸುಖ ಪಡ್ಯೋಕೂ ಕೇಳ್ಕೊಂಡ್ಬರ್ಬೇಕು" ಪದೇ ಪದೇ ಕೇಳುವ ರಾಗ. ರಜನಿ ಎದ್ದುಹೋದಳು.

ಪ್ರಕಾಶ್ ಉದಾಸವಾಗಿ ಅವಳು ಹೋದತ್ತಲೇ ನೋಡಿದ. "ಸಿಲ್ಲಿ ಗರ್ಲ್ ! ಅವ್ಳಿಗೆ ಸ್ವಲ್ಪನೂ ಕಾನ್‌ಸ್ಟೆಂಟ್ ವ್ಯೆಂಡ್ ಇಲ್ಲ" ಗೊಣಗಿದ.

ಸೋಷಿಯಲ್ ವರ್ಕರ್, ವುಮನ್ಸ್ ಲಿಬ್‌ನ ಪ್ರೆಸಿಡೆಂಟ್ ಪಂಕಜಮ್ಮನಿಗೆ ಹೊರಗಿನ ಅಮಲೇ ಸದಾ. ಅದೇ ಗುಂಗಿನಲ್ಲಿರುವ ಆಕೆಗೆ ಮಗಳೊಂದು ತಲೆನೋವು. ಇವಳ ಮುಖಾಂತರವಾದರೂ ಒಂದು ಬದಲಾವಣೆ ತಂದು ಸಮಾಜದಲ್ಲಿ ತಮ್ಮ ನಿಲುವನ್ನು ಸಮರ್ಥಿಸಿಕೊಳ್ಳುವ ಹಂಬಲ ಆಕೆಗೆ.

"ಒಂದ್ಸಲ ವಿಕಾಸ್ ಕೈಯಲ್ಲಿ ಏಟು ತಿಂದು ನಂತರ ಅವನೊಂದಿಗೆ ಸಂಸಾರ ಮಾಡೋದೂಂದ್ರೆ....ಏನು ! ಇವ್ಳ ಪ್ರೀತಿ ಕೊಳ್ಳೆಹೋಗುತ್ತೆ. ಗಂಡು, ಯಾಕೆ ನಾಟ್ಕ ಆಡ್ತಾನೇಂತ ಇವ್ಳಿಗೆ ಗೊತ್ತಿಲ್ಲ" ರಭಸದಿಂದ ಎದ್ದು ಹೋದರು.

ಪ್ರಕಾಶ್ ಕೆಟ್ಟ ನಗೆ ನಕ್ಕ.

○ ○ ● ●

ವಿಕಾಸ್ ಎರಡು ದಿನ ಕಾದ. ರಜನಿ ಬರುವ ಸೂಚನೆಯೇನು ಕಾಣಲಿಲ್ಲ. ಮನುಷ್ಯರು ಮೃಗಗಳಂತೆ ವರ್ತಿಸಬಾರದು. ಸಹನೆ ವಹಿಸಿದ.

ತಂದೆ ಒಂದೆರಡು ಸಲ ನೆನಪಿಸಿದರು. "ಒಂದ್ಸಲ ಹೋಗಿ ಸೀತಾರಾಮ್‌ನ ನೋಡಪ್ಪ. ಯಾವ್ದಕ್ಕೂ ಒಳ್ಳೇದು. ಆ ಜನರ ರೀತಿ ನೀತಿಗಳೇ ಅರ್ಥವಾಗೋಲ್ಲ. ನಾವು ಆ ಹುಡ್ಗೀಗೆ ಮಾಡಬಾರದ್ದು, ಏನು ಮಾಡಿದ್ದಿ?" ತಲೆ ತಗ್ಗಿಸಿ ಭಾರವಾದ ದನಿಯಲ್ಲಿ ಉಸುರಿದರು. ಸಹಜವಾಗಿ ಹೆಣ್ಣಿನ ಕಡೆಗೆ ಸಿಂಪತಿ ವ್ಯಕ್ತಪಡಿಸುವ ಸಮಾಜ ಅವರನ್ನು ವಕ್ರದೃಷ್ಟಿಯಿಂದನೋಡುತ್ತಿತ್ತು.

ದೇವರ ದೀಪ ಹಚ್ಚುತ್ತಿದ್ದ ಸುನಂದಮ್ಮ ಅದೇ ಕೈಯಲ್ಲಿ ಹೊರಗೆ ಬಂದರು. ಕೈಯಲ್ಲಿನ ಬೆಂಕಿ ಪೊಟ್ಟಣ ಕೆಳಗೆ ಬಿತ್ತು. ಹಿಂದಿನ ದಿನ ದೂರದ ಸಂಬಂಧಿ ಅಚ್ಚಮ್ಮ ಹೇಳಿದ ಮಾತುಗಳು—

"ಬೀಗಿತ್ತಿ ಏನೇನೋ ಹೇಳಿಕೊಂಡಿದ್ದಾರೆ. ನಾವು ವರದಕ್ಷಿಣೆ, ವರೋಪಚಾರ ಸಾಲ್ದೂಂತ ಪೀಡಿಸಿದ್ವಂತೆ. ಆಕೆ ಮಗ್ಳಿಗೂ, ಅಳಿಯನಿಗೂ ಕೊಟ್ಟಿಲಿಸ್ಟನ್ನೇ ಹಿಡ್ದು ಓಡಾಡ್ತ ಇದ್ದಾರೆ" ವಿಕಾಸ್ ಜೋರಾಗಿ ನಕ್ಕುಬಿಟ್ಟ. ಪಂಕಜಮ್ಮನ ಚಾಲೂಕಿತನ ಅವನಿಗೆ ಗೊತ್ತು.

"ಏನಾದ್ರೂ.... .. ....ಹೇಳ್ಕೊಳ್ಳಿ ಬಿಡಮ್ಮ. ಸುಮ್ನೇ ತಲೆಗೆ ಹಚ್ಚಿಕೊಂಡಷ್ಟೂ ಸಿಡಿತ" ಬಾಗಿಲು ದಾಟಿ ಹೊರಗೆ ನಡೆದ.

ತೀರಾ ಸಾತ್ವಿಕ ಸ್ವಭಾವದ ತಾಯಿಯನ್ನು ಬಲ್ಲ. ಒಳ್ಳೆಯ ಗಂಡ, ಉತ್ತಮ ಸಂಸ್ಕಾರದ ಮಗನನ್ನು ಸಮಾಜಕ್ಕೆ ಕೊಟ್ಟ ತೃಪ್ತಿ ಆಕೆಗೆ ಇದಿಷ್ಟರಲ್ಲೇ ಆಕೆ ಸುಖಿ.

ವಿಕಾಸ್‌ನ ಬಲ್ಲವರಾರು ಅವನ ಕಡೆ ಬೊಟ್ಟು ಮಾಡಲಾರರು. ರಸಿಕ, ಸುಂದರ, ವಿದ್ಯಾವಂತ, ಉತ್ತಮ ಮೌಲ್ಯಗಳನ್ನು ರೂಢಿಸಿಕೊಂಡ ವ್ಯಕ್ತಿ. ಆ ಬಗ್ಗೆ ಅವನ ಶತ್ರುಗಳು ಕೂಡ ಸ್ವರವೆತ್ತಲು ಸಾಧ್ಯವಿಲ್ಲ.

ಅಡ್ವೋಕೇಟ್ ಸೀತಾರಾಮ್‌ನ ನೋಡುವ ಸಲುವಾಗಿಯೇ ಹೊರಟಿದ್ದ. ಆದರ ಆ ಕಾರ್ಯಕ್ಕೆ ಅವನ ಮನ ಒಪ್ಪಲಿಲ್ಲ ಇಷ್ಟಪಟ್ಟೇ ಅವಳನ್ನು ಮದುವೆಯಾಗಿದ್ದ. ಪ್ರೀತಿಯ ಹೊಳೆ ಹರಿದಿತ್ತು ಅವರಿಬ್ಬರ ನಡುವೆ.

"ರಜನಿ, ಡೈವೋರ್ಸ್ ತಗೊಳ್ಳೊಂಥ ಕಹಿ ನಮ್ಮಿಬ್ರ ನಡುವೆ ಇತ್ತಾ?" ಪ್ರಶ್ನಿಸುವ ಕಾತುರ ಮಾತ್ರವಲ್ಲ, ಅಧಿಕಾರದ ಅಮಲು ಕೂಡ ಅವನೆದೆಯಲ್ಲಿ ಇತ್ತು.

ನಡಿಗೆಯ ವೇಗವನ್ನು ತಗ್ಗಿಸಿದ. ನಾರಾಯಣ್ ಸ್ಕೂಟರ್ ಅವನನ್ನು ಸವರಿಕೊಂಡೇ ಮುಂದಕ್ಕೆ ಹೋಗಿ ನಿಂತಿತು. ಬ್ರೇಕ್ ಮೇಲೆ ಕಾಲಿಟ್ಟೇ ಅವನತ್ತ ನಗೆ ಬೀರಿದರು.

"ನೀನಿನ್ನು ಸ್ಟೂಡೆಂಟ್ ಅಲ್ಲ" ಸಲಿಗೆಯ ನಗೆಗೆ ವಿಕಾಸ್ ತನ್ನ ನಗೆಯನ್ನು ಸೇರಿಸಿದ. "ಆ ದಿನಗಳೇ ಹೆಚ್ಚು ಖುಷಿ ಕೊಡ್ತಾ ಇದ್ವು" ಕಣ್ಣೊಡೆದ. ಅವರು ಕ್ಷಣ ತಬ್ಬಿಬ್ಬಾದರು. ತೀರಾ ಗಂಭೀರವಾಗಿ ಕಾಲೇಜಿನಲ್ಲಿ 'ಸ್ಟ್ರಿಕ್ಟ್' ಆಗಿ ವರ್ತಿಸೋ ವಿಕಾಸ್ ಕೆಲವೊಮ್ಮೆ ಚಿಕ್ಕವನಂತೆ ವರ್ತಿಸುತ್ತಿದ್ದ. ಅದೇ ಹಿಂದಿನ ನಡತೆ, ನಗು-ಒಂದಿಷ್ಟೂ ಬದಲಾವಣೆ ಇಲ್ಲ. ಅವರ ಕಣ್ಣುಗಳಲ್ಲಿ ಮೆಚ್ಚುಗೆ ಮೂಡಿತು.

ಸ್ಕೂಟರ್ ಮೇಲೆ ಕೂತೇ ಪ್ರಶ್ನಿಸಿದರು ನಾರಾಯಣ್. "ಎಲ್ಲೋ ಹೊರಟಂತಿದೆ ?" ಈಗ ಸುಳ್ಳು ಹೇಳುವ ಅಗತ್ಯವಿತ್ತು ವಿಕಾಸ್‌ಗೆ. "ನಿಮ್ಮ ಮನೆಗೆ ಅಂದ್ರೆ ನೀವು ನಂಬೋಲ್ಲ" ಹಾಸ್ಯ ಮಾಡಿದ. ಇಳಿದು ಸ್ಕೂಟರ್‌ಗೆ ಸ್ಟಾಂಡ್ ಹಾಕಿದರು.

"ಹಾಗಾದ್ರೆ ನಡೀ, ಫಸ್ಟ್‌ಕ್ಲಾಸ್ ಬಿಸಿಬೇಳೆಬಾತ್ ಮಾಡಿಸ್ತೀನಿ. ನಮ್ಮಲ್ಲೇ ಊಟ" ಕನ್ನಡಕ ತೆಗೆದು ಕರ್ಚೀಫ್‌ನಿಂದೊರೆಸಿಕೊಂಡು ಹಾಕಿಕೊಂಡರು ನಾರಾಯಣ್. ಅತಿ ಸರಳ ಸ್ವಭಾವದ ಮನುಷ್ಯ.

ವಿಕಾಸ್‌ನ ಬೇಯುತ್ತಿದ್ದ ಮನಸ್ಸಿಗೆ ಸ್ವಲ್ಪ ಸಾಂತ್ವನದ ಅಗತ್ಯವಿತ್ತು. "ಷೂರ್, ಆದ್ರೆ ಒಂದು ಷರತ್ತು. ಟೊಮಾಟೋ ತಿಳಿಸಾರು, ಅನ್ನ ಅಷ್ಟೆ. ನಿಮ್ಮ ವರೈಟಿಗಳು ಕ್ಯಾನ್ಸಲ್" ಎಂದ. ನಾರಾಯಣ್ ನಸುನಕ್ಕರು. ವಿಕಾಸ್‌ನ ಸ್ವಭಾವ ಅವರಿಗೆ ಹೆಚ್ಚು ಇಷ್ಟವಾಗಿತ್ತು.

"ಸರಿ ಹತ್ತು...." ಎಂದಾಗ ಹಾರಿ ಪಿಲಿಯನ್ ಮೇಲೆ ಕೂತವನು ಇಳಿದ. "ನೀವು ಬಿಸಿಬೇಳೆಬಾತ್ ಮಾಡ್ಸೋ ಹೊತ್ಗೆ ಬರ್ತೀನಿ" ಬೀಳ್ಕೊಟ್ಟ. ಪರ್ಸ್ ಕೈಯಲ್ಲಿ ಹಿಡಿದು ಹೊರಟಿದ್ದ ರಜನಿ ತಟ್ಟನೇ ನಿಂತಳು. ನೂರು ವಸಂತಗಳಲ್ಲಿ ಮಿಂದಂತೆ ಅವಳ ಮನ ಹೊಯ್ದಾಡಿತು.

ಅವಳತ್ತ ಬಂದ ವಿಕಾಸ್ "ನಿನ್ಹತ್ರ ಸ್ವಲ್ಪ ಮಾತಾಡ್ಬೇಕು" ಎದೆಯ ತುಮುಲ, ದಾವಾನಲ, ಉದ್ವೇಗ ಮೆಟ್ಟಿ ಸಹಜವಾಗಿ ಹೇಳಿದ. ರಜನಿಯ ಕಣ್ಣಂಚಿನಲ್ಲಿ ನೀರು ಜಿನುಗಿತು. "ಎದುರು ಸಿಕ್ಕಿದ್ದಕ್ಕೆ ನನ್ನ ನೆನಪು. ನಿಮ್ಗೇ ನನ್ನ ನೆನಪು ಇದ್ಯಾ ?"

ವಿಕಾಸ್ ತುಟಿ ಕಚ್ಚಿ ಅವಳನ್ನು ಅಡಿಯಿಂದ ಮುಡಿಯವರೆಗೂ ನೋಡಿದ. ಬಹುಶಃ ನಡುವೆ ಐದಾರು ಹೆಜ್ಜೆಗಳ ಅಂತರ. ಕೈ ಚಾಚಿ ಕ್ಷಣ ಅವಳನ್ನು ತನ್ನೆದೆಯಲ್ಲಿ ಹುದುಗಿಸಿಕೊಳ್ಳಬೇಕು. ತಟ್ಟನೆ ಸಟೆದುಕೊಂಡ.

"ಎಲ್ಲಿಗೆ ಹೋಗೋಣ ?" ಕೈ ತಟ್ಟಿ ಹೋಗುತ್ತಿದ್ದ ಆಟೋ ನಿಲ್ಲಿಸಿದ. ಅವಳ ಮನ ಹುಚ್ಚೆದ್ದು ಕುಣಿದರೂ ಹೃದಯ ಮಧುರವಾಗಿ ಹಾಡಿದರೂ ಕಣ್ಣುಗಳಲ್ಲಿ ಭಯ ಇಣಕಿತು. ಅರ್ಥವಾದಾಗ ವಿಕಾಸ್ ಕೋಪದಿಂದ ಕುದಿದ. ಎಲ್ಲಕ್ಕೂ ಕಾರಣ ಅವಳ ದುರ್ಬಲ ಮನ !

ತೀರಾ ಸನ್ನಿಹಕ್ಕೆ ಹೋಗಿ ಅತ್ತಿತ್ತ ನೋಡಿ ಉಸುರಿದ "ಬಲವಂತದಿಂದ

ನಿನ್ನ ಬದ್ಕನ್ನ ನನ್ಜೊತೆ ಜೋಡ್ಸಿಕೊಳ್ಳೋಕೆ ಇಷ್ಟಪಡೋಲ್ಲ. ಒಂದೆರಡು ಮಾತು ಅಷ್ಟೆ. ಅದು ವಿವಾಹಬಂಧನವನ್ನು ಗೌರವಿಸಿದ್ದ ಕ್ಕೋಸ್ಕರ" ರಜನಿ ಆಟೋ ಹತ್ತಿದಳು. ಅವಳೆದೆ ಹಾರುತ್ತಿತ್ತು.

ತನ್ನ ವ್ಯಕ್ತಿತ್ವಕ್ಕೆ ಬೆಲೆ ಕೊಡದ ಅಳಿಯನ ಬಗ್ಗೆ ಪಂಕಜಮ್ಮ ಕಿಡಿ ಕಾರುತ್ತಿದ್ದರು "ನಿಂಗೆ ವಿಕಾಸ್ ಸ್ವಭಾವ ಗೊತ್ತಿಲ್ಲ. ನೀನು ಎಚ್ಚೆತ್ತುಕೊಳ್ಳ ದಿದ್ರೆ....ಕಾಲ ಕಸ ಮಾಡ್ಕೊಂಡ್ಬಿಡ್ತಾನೆ. ಅವ್ನಿಗಿರೋ ಸ್ಟೈಲಿಶ್, ಹ್ಯಾಂಡ್ ಸಮ್‌ಗೆ ಕಾಲೇಜು ಹುಡ್ಗೀರು ಅವ್ನ ಸುತ್ತಮುತ್ತಲೂ ಇರ್ತಾರೆ. ನೀನು ಮನೆ ಯಲ್ಲಿ ಗೌರಮ್ಮ. ಅವ್ನ ರೂಪು, ಬಣ್ಣಕ್ಕೆ ನೀನು ಪಂಕೇ. ಇನ್ನಷ್ಟು ಮಂಕಾದ ಕೂಡ್ಲೇ ಮೂಲೆಗೆ ಎಸೀತಾನೆ" ಇಂಥ ಮಾತುಗಳನ್ನೇ ಆಕೆ ಮಗಳ ಮುಂದೆ ಆಡುತ್ತಿದ್ದುದು. ಅದೇ ಮಾತುಗಳು ಅವಳ ಕಿವಿಗಳಲ್ಲಿ ಮಾರ್ದನಿ ದಾಗ ಸಿಟಿದು ಕೂತಳು. ಅವನ ತುಟಿಯಂಚಿನಲ್ಲಿ ಮುಗುಳ್ನಗೆಯೊಂದು ಹಾದುಹೋಯಿತು. ರಜನಿ ವಿದ್ಯಾವಂತೆಯಾದರೂ ವಿವೇಕಿಯಲ್ಲವೆಂದು ಅವ ನಿಗೆ ಗೊತ್ತು.

ಆಟೋ ನಿಂತಾಗ ತಾನೇ ಹಣ ಕೊಟ್ಟ ವಿಕಾಸ್. ಹತ್ತು ಹೆಜ್ಜೆ ದೂರ ದಲ್ಲಿ ನಿಂತು ಅವನನ್ನ ನಿರೀಕ್ಷೆ ಮಾಡುತ್ತಿದ್ದಳು. ಅವಳ ಮುಖದ ಮೇಲೆ ವ್ಯಥೆಯು ನೆರಳಾಡುತ್ತಿತ್ತು, ಕರಗಿಹೋದ.

"ಬಾ... ಹೋಗೋಣ" ಎಂದಾಗ ಅವನ ಜೊತೆ ಹೆಜ್ಜೆ ಹಾಕಿದಳು. ಅತ್ಯಂತ ಮೃದುವಾದ ವಿಕಾಸ್. ನವಿರಾದ ಸಂಬಂಧದ ಮೇಲೆ ಕತ್ತರಿಯಾಡು ವುದು ಅವನಿಗೆ ಬೇಕಿರಲಿಲ್ಲ. "ಬಾಳಿನುದ್ದಕ್ಕೂ ಜೊತೆಯಾಗಿ ಹೆಜ್ಜೆ ಹಾಕ ಬೇಕಾದವ್ರು" ನಿಂತು ಅವಳತ್ತ ತಿರುಗಿದ.

ಪಂಕಜಮ್ಮನ ಭಾಷಣಗಳಿಂದ ಪ್ರೇರಿತಳಾದ ಅವಳು ಪ್ರತ್ಯೇಕ ಮೂಡಿ ನಲ್ಲಿದ್ದಳು. "ಅಂಥ ಫಾರ್ಮಾಲಿಟೀಸ್‌ಗೆ ನೇಣು ಹಾಕಿಕೊಳ್ಳೋಕೆ ಯಾರೂ ಸಿದ್ಧವಿಲ್ಲ" ಒರಟಾಗಿ ನುಡಿದಾಗ ಕ್ಷಣ ಅವನ ಮೈ ಬಿಸಿಯಾಯಿತು. ಮತ್ತೆ ಕಹಿ....ತಾಳ್ಮೆ ವಹಿಸಿದ.

"ನೇಣು ಹಾಕಿಕೊಳ್ಳೋ ಅಗತ್ಯವಿಲ್ಲ. ಅದು ಮಲ್ಲಿಗೆಯ ಹಾರವಾದ್ರೆ ....ದೂರ ಸರಿಸೋದು ...ಅವಿವೇಕ !" ಹಗುರವಾಗೇ ನುಡಿದ. ಇನ್ನಷ್ಟು ಮುಖ ತಿರುಗಿಸಿದಳು ರಜನಿ.

ಮರದ ಕೆಳಗಿನ ಕಲ್ಲು ಬೆಂಚಿನ ಮೇಲೆ ಕೂಡುವಂತೆ ಸನ್ನೆ ಮಾಡಿದ. ಒಂದು ತುದಿಗಂಟಿದಂತೆ ಕೂತಳು.

ಎದೆಯ ಮೇಲೆ ಕೈಕಟ್ಟಿ ತುಟಿಗಳ ಮೇಲೆ ನಗುವನ್ನರಳಿಸಿದ "ನೀನೆಷ್ಟು ದೂರ ಕೂತ ಮಾತ್ರಕ್ಕೆ ನನ್ನ ಲೈಫ್ ಪಾರ್ಟನರ್ ಅನ್ನೋದು ಸುಳ್ಳಾಗೋಲ್ಲ. ಮನಸ್ಸು ಮಾಡಿದರೆ...." ಕಣ್ಣಲ್ಲಿ ಮಾರ್ದವತೆ ಬೆರೆಸಿ ತೋಳುಗಳತ್ತ ನೋಡಿಕೊಂಡ. ಪೂರ್ತಿ ಆ ಕಡೆ ತಿರುಗಿದಳು. ಅವನನ್ನ ಪೂರ್ತಿಯಾಗಿ ಬಗ್ಗಿಸುವತ್ತ ಯೋಚಿಸುತ್ತಿದ್ದಳು. ಅದು ಪಂಕಜಮ್ಮನ ಚಿತಾವಣೆ ! ಗಂಭೀರನಾದ ವಿಕಾಸ್.

"ರಜನಿ, ಯಾವಾಗ ಬರ್ತೀಯಾ ?" ನೇರವಾಗಿ ವಿಷಯಕ್ಕೆ ಬಂದ. ಅವನತ್ತ ತಿರುಗಿದವಳು ಧುಮುಗುಟ್ಟಿದಳು. ಎದೆಯ ಭಾವನೆಗಳನ್ನು ಕಲ್ಲು ಮಾಡಿಕೊಂಡು, "ಯಾಕೆ....ಬರ್ಲಿ? ನನ್ನ ಅಗತ್ಯ ನಿಮ್ಗೆ ಏನಿದೆ ? ಜೋರು ಮಾಡಿ ನಿಮ್ಗೆ ಅಭ್ಯಾಸವಿದ್ಯೇ ವಿನಃ ಪ್ರೀತಿ ಮಾಡಿಯಲ್ಲ" ರೋಷ ತುಂಬಿಕೊಂಡಳು.

ದೀರ್ಘವಾಗಿ ಅವಳತ್ತ ನೋಡಿದ. ತೀರಾ ಮೂರ್ಖಳಾಗಿ ಕಂಡಳು. "ಅಫ್‌ಕೋರ್ಸ್....ಸದ್ಯಕ್ಕೆ ಪ್ರೀತಿಯ ಪಾಠ ನಿನ್ನಿಂದ್ಲೇ ಹೇಳ್ಸಿಕೊಡ್ತೀನಿ. ಬಂದ್ಬಿಡು...." ಇಷ್ಟು ದಿನದ ವಿರಸಕ್ಕೆ ಮುಕ್ತಾಯವಾಡಲು ಸಿದ್ಧನಾದ.

"ನಾನು ಬರೋಲ್ಲ ! ಒಂದ್ಸಲ...." ತಟ್ಟನೇ ಅವಳ ಕಣ್ಣಿಂದ ಹರಿದ ಕಂಬನಿ ದುಂಡು ಕೆನ್ನೆಯ ಮೇಲೆ ಹರಿದಾಗ ಅವನೆದೆ ತೊಯ್ದಂತಾಯಿತು. ಕೈ ಹಿಡಿದ ಹೆಣ್ಣು ಕಣ್ಣೀರು ಸುರಿಸುವುದು ಅವನಿಗೆ ಬೇಕಿರಲಿಲ್ಲ. "ಪ್ಲೀಸ್ ಅಳ್ಬೇಡ. ನಿನ್ನ ಕಣ್ಣೀರು ನೋಡೋಕೆ ನನ್ಕೈಲ್ಲಾಗೋಲ್ಲ" ಅತ್ತಿತ್ತ ನೋಡಿದಾಗ ಅರ್ಥಮಾಡಿಕೊಂಡಳು. ಅವಳತ್ತ ಪೂರ್ಣವಾಗಿ ಬಗ್ಗಿದ. "ರಜನಿ .. " ಸ್ವರಕ್ಕೆ ಅವನೆದೆಯ ಒಲವು ಬೆರೆತು ಅತ್ಯಂತ ಮಧುರವಾಯಿತು. ಕ್ಷಣ ಕರಗಿದರೂ ಅವನ ಮುಖ ಸರಿಸಿ ಮೇಲೆದ್ದಳು. "ಐ ಡೋಂಟ್ ಲೈಕ್, ಐ ಡೋಂಟ್ ಲವ್" ಸಿಡಿದಂತೆ ನಟಿಸಿದಳು.

ವಿಕಾಸ್‌ನ ಮುಖ ಕೆಂಪಾಯಿತು. ಅವಳ ತೋಳಿಡಿದು ಜಗ್ಗಿ ಕೂಡಿಸಿದ "ರಜನಿ, ಇಟ್ಸ್ ನಾಟ್ ಪ್ರಾಪರ್ ಟು ಟಾಕ್ ದಿಸ್ ವೇ. ಈ ತರಹ

ಮಾತಾಡಿ ನಿನ್ನ ಸುಂದರ ಬದ್ಕನ್ನ ಚಿಂದಿ ಮಾಡ್ಕೋಬೇಡ" ಎಚ್ಚರಿಸಿದ. ಅವಳಲ್ಲಿ ಯಾವುದೇ ಬದಲಾವಣೆ ಕಾಣಲಿಲ್ಲ.

"ಡೈವೋರ್ಸ್ ಕೇಸ್ ಫೈಲ್ ಮಾಡಿರೋದು ನಿಜ್ವಾ ? ಅಂಥ ಅಗತ್ಯ ತಾನೇ ಏನಿತ್ತು ? ಮೂರು ತಿಂಗಳಿಂದ ಬೇರೆ ಬೇರೆನೇ ಇದ್ದೀವಲ್ಲ"

ಬಾಯಿಗೆ ಕೈ ಹಿಡಿದು ಬಿಕ್ಕಿದಳು ರಜನಿ. ಆದರೆ ವಿಕಾಸ್ ಶಿಥಿಲ ವಾಗುವ ಬದಲು ಶಿಲೆಯಾಗಿದ್ದ. ಕರಗುವ ಬದಲು ಮತ್ತಷ್ಟು ಗಟ್ಟಿಯಾದ, ಸತ್ಕೈಯಿಸುವುದಕ್ಕೆ ಹೋಗಲಿಲ್ಲ.

"ನಂಗೆ ಬಿಡುಗಡೆ ಬೇಕು, ನಿಮ್ಮಿಂದ ಬಿಡುಗಡೆ ಬೇಕು" ತಾಳ್ಮೆ ಕಳೆದು ಕೊಂಡು ಕೂಗಿದಳು. ಮರ, ಗಿಡಗಳಲ್ಲಿ ಅವಳ ಸ್ವರ ಮಾರ್ದನಿಸಿದಂತಾ ಯಿತು ವಿಕಾಸ್‌ಗೆ. ಸಾವಿರ ಸಿಡಿಲುಗಳು ಒಟ್ಟಿಗೆ ಬಡಿದಂತಾಯಿತು ಅವನಿಗೆ.

ರಜನಿಯ ಮೇಲೆ ಸ್ವಲ್ಪ ಕೋಪ, ಬೇಸರ ಇತ್ತೇ ವಿನಃ 'ಬಿಡುಗಡೆ'ಯ ಹಂತದವರೆಗೂ ಅವನು ಯೋಚಿಸಿರಲಿಲ್ಲ. ಮುಜಾಜಿಲ್ಲದೇ ಕಡಿದೊಯ್ಯುವ ಸಂಬಂಧಕ್ಕೆ ಅಷ್ಟೊಂದು ಪವಿತ್ರ ವಿಧಿಗಳ, ಪ್ರಮಾಣಗಳ ಅಗತ್ಯವಿತ್ತೆ? ವಿಷ ಣ್ಣತೆಯ ನಗು ಅವನ ತುಟಿಯಂಚಿನಲ್ಲಿ ತೇಲಿತು.

"ಕೊಡೋಲ್ಲಾಂದ್ರೆ....." ಹಟ ನುಸುಳಿತು ಅವನಲ್ಲಿ.

ಅಷ್ಟರಲ್ಲಿ ಒಂದು ಸ್ವರ ಹರಿದು ಬಂದು ಮುಂದಿನ ಚಿತ್ರವನ್ನೆ ತಳ ಕೆಳಕು ಮೂಡಿತು.

"ಹಲೋ ..." ಮಿರುಗುವ ಷೂನಿಂದ ವಿಕಾಸ್‌ನ ನೋಟ ಅವನ ನೆತ್ತಿಯವರೆಗೂ ಹರಿಯಿತು. "ಸಾರಿ, ಫಾರ್ ದಿ ಡಿಸ್ಟರ್ಬ್" ಕ್ಷಮೆಯಾಚಿ ಸಿದ, "ನಾನು ಅಖಿಲೇಶ್ ಅಂತ. ರಜನಿ ಫ್ಯಾಮಿಲಿ ಫ್ರೆಂಡ್" ಪರಿಚಯಿಸಿ ಕೊಂಡ. ಆ ಕ್ಷಣ ಕೋಪ, ಅಸಮಾಧಾನಗಳನ್ನು ಹತ್ತಿಕ್ಕಿದ ವಿಕಾಸ್.

"ಗ್ಲಾಡ್ ಟು ಮೀಟ್ ಯು" ಕೈ ಕುಲುಕಿದ. ಆದರೆ ಅಖಿಲೇಶ್ ಬೆವತುಬಿಟ್ಟ. "ವಿಕಾಸ್ ರಿಯಲೀ ಜಂಟಲ್‌ಮ್ಯಾನ್. ಗಂಡು ಹೇಗಿದ್ದರೆ ಚೆನ್ನಂತ ಅವನನ್ನು ನೋಡೇ ಕಲಿಯಬೇಕು" ಅವನ ಸ್ನೇಹಿತನೊಬ್ಬ ಹೇಳಿದ್ದ. ಇಂದು ನೋಡಿದ ಕೂಡಲೇ ಚಲಿಸಿಹೋದ.

ಗಾಢವಾಗಿ ನೋಡಿದ ಅಖಿಲೇಶ್‌ನ, ಚಂಚಲಚಿತ್ತವಾದ ಕಣ್ಣುಗಳು ಎತ್ತಿ ಬಾಚಿದ ಮಿರಮಿರನೇ ಮಿನುಗುವ ಕಪ್ಪು ಕೂದಲು, ಸಿಗರೇಟು ಸೇವನೆ

ಯಿಂದ ಸ್ವಲ್ಪ ಬಣ್ಣ ಕೆಟ್ಟ ತುಟಿಗಳು, ಅದರ ಮೇಲಿನ ಮೀಸೆ–ಕಾಲೇಜಿನಲ್ಲಿ ಇಂಥ ವಿದ್ಯಾರ್ಥಿಗಳನ್ನು ನೋಡುತ್ತಿದ್ದ. ಗುರಿ ಇಲ್ಲದ ಬದುಕು.

ಒಮ್ಮೆ ನಾರಾಯಣ್ ಅವನ ಕಿವಿಯ ಮೇಲೆ ಒಂದು ಮಾತು ಹಾಕಿದ್ದರು. "ಅವ್ರು ಬರೀ ನಾಟ್ಕದ ಜನಾಂತ ಕಾಣಿಸ್ತಾರೆ. ಸೋಷಿಯಲ್ ವರ್ಕ್‌ನ ಬೇಸಿಕ್ ಕೂಡ ಪಂಕಜಮ್ಮನಿಗೆ ಗೊತ್ತಿದ್ದಂಗೆ ಕಾಣ್ಲಿಲ್ಲ. ಮಗಳು ಮುಸಿದು ಬಂದಿದ್ದಾಳೇಂದ ಕೂಡ್ಲೇ ಗಂಡುನ ಹುಡ್ಕಿ ಇಟ್ಟಿದ್ದಾಳೆ. ಅವ್ನು ಪ್ರಗತಿಪರದ ಹೆಸರಿನಲ್ಲಿ ಓಡಾಡೋ ಗಂಡು. ಎಲ್ಲಿ ಸಭೆ, ಸಮಾರಂಭ ಇರುತ್ತೋ ಅಲ್ಲಿಗೆ ನೀಟಾಗಿ ಡ್ರೆಸ್ ಮಾಡ್ಕೊಂಡ್....ಹಾಜರು, ಉದ್ಧಾರಕ್ಕೆ ಆಕೆಗೆ ಇದೊಂದು ಛಾನ್ಸ್" ಆ ಸಂದರ್ಭದಲ್ಲಿ ಅವರ ಮುಖದ ಮೇಲೆ ತೇಲಿದ ಅಪಹಾಸ್ಯದ ನಗುವನ್ನು ಅವನು ಇಂದಿಗೂ ಮರೆತಿರಲಿಲ್ಲ.

ಅಲ್ಲಿದ್ದ ರಜನಿಯನ್ನು ಮರೆತು ಪ್ರಶ್ನಿಸಿದ ವಿಕಾಸ್. "ಏನ್ಮಾಡ್ತಾ ... ಇದ್ದೀರಾ ?" ಅಖಿಲೇಶ್ ನಗೆ ಹಾರಿಸಿದ. "ಅಪ್ಪ, ಕೂಡಿ ಹಾಕಿರೋ ಹಣ, ವಹಿವಾಟು ಇದೆ. ಸೋಷಿಯಲ್ ವರ್ಕ್ ನೆಪದಲ್ಲಿ ಓಡಾಡಿಕೊಂಡಿದ್ದೀನಿ. ಪ್ರಕಾಶ್ ಕ್ಲೋಸ್ ಫ್ರೆಂಡ್. ಅವ್ರ ಮನೆಯವನೇ ಆಗ್ಬಿಟ್ಟಿದ್ದೀನಿ" ಮತ್ತೆ ಒಮ್ಮೆ ಪುನರುಚ್ಚರಿಸಿದ. ತನಗೂ, ರಜನಿಯ ಮನೆಯವರಿಗೂ ಇರುವ ಬಾಂಧವ್ಯ ಇನ್ನಷ್ಟು ಸ್ಪಷ್ಟಪಡಿಸುವ ಇಚ್ಛೆಯೇನೋ, ಅವನಿಗೆ.

ಈಗ ಅಖಿಲೇಶ್ ನೋಟ ರಜನಿಯ ಮೇಲಿತ್ತು. ಷರಟಿನ ಕಾಲರ್ ಹಿಡಿದು ನಾಲ್ಕು ಬಾರಿಸಬೇಕೆನಿಸಿತು ವಿಕಾಸ್‌ಗೆ. ಹೇಳುವ, ಕೇಳುವವರಿಲ್ಲದ ಪುಂಡು ಹುಡುಗನಂತೆ ಕಂಡ.

"ಗುರುಮೂರ್ತಿ ಮನೆಯವ್ರು ಒಂದು ರೀತಿ ಮುಗ್ಧ ಜನ ಮಾತ್ರವಲ್ಲ, ಮೂರ್ಖ ಜನರು ಕೂಡ" ವಿಕಾಸ್ ಕಹಿ ಕಕ್ಕಿದಾಗ ಮೇಲಕ್ಕೂ, ಕೆಳಕ್ಕೂ ನೋಡಿದ ಅಖಿಲೇಶ್. ಬೆನ್ನಲ್ಲಿ ಒಂದು ರೀತಿಯ ಚಳಿ.

"ಸಿಕ್ಕಾಪಟ್ಟೆ ಮನುಷ್ಯನಿಗೆ ಅನುಕೂಲತೆಗಳು ಸಿಕ್ಕಿದಾಗ....ಕೆಟ್ಟು ಹೋಗ್ತಾನಂತೆ. ನಿಮ್ಮ ವಿಷ್ಯದಲ್ಲಿ ಆ ಮಾತು ಸುಳ್ಳಾಗ್ಲಿ" ಎಂದವ ಹಿಂದಕ್ಕೆ ತಿರುಗಿದ ವಿಕಾಸ್ ನಿಂತ. ಅಖಿಲೇಶ್‌ನ ಆಸೆಯ ಕಣ್ಣುಗಳು ರಜನಿಯ ಮೇಲೆ ಇತ್ತು. ವಿಕಾಸ್‌ನ ಮೈನ ರಕ್ತ ಬಿಸಿಯಾಯಿತು. ಇಂಥದನ್ನು ಸರಿಯಾದ ಯಾವ ಭಾರತೀಯ ಗಂಡೂ ಸೈರಿಸಲಾರ!

ರಜನಿಯ ತೋಳಿಡಿದು ಹತ್ತಿರಕ್ಕೆಳೆದುಕೊಂಡ. "ಈಕೆ ನನ್ನ ಮಿಸಸ್, ನಿಮ್ಗೇ ಗೊತ್ತಿರಬೇಕಲ್ಲ : ಅಕಸ್ಮಾತ್ ಮರೆತಿದ್ದರೆ ...ನೆನಪಿಟ್ಕೊಳ್ಳಿ" ಸೀರಿಯಸ್ಸಾಗಿ ಹೇಳಿದ. ರಜನಿಯ ಪ್ರತಿಭಟನಾ ಶಕ್ತಿ ಸತ್ತುಹೋಗಿತ್ತು. ಅವನ ಜೊತೆ ಹೆಜ್ಜೆ ಹಾಕಿದಳು.

ರೋಡಿಗೆ ಬಂದು ಹಿಂದಿರುಗಿ ನೋಡಿದ. ಅಖಿಲೇಶ್ ಅಲ್ಲಿಯೇ ನಿಂತಿದ್ದ "ನೀತಿ, ನಿಯಮವಿಲ್ದ ಬೆಗ್ಗರ್ಸ್" ರಜನಿಗೆ ಕೇಳುವಂತೆ ಬೈದ. ಅಖಿಲೇಶ್ ಅವನಲ್ಲಿ ಒಳ್ಳೆಯ ಅಭಿಪ್ರಾಯುಗಳನ್ನು ಹುಟ್ಟಿಸಲಿಲ್ಲ.

"ನೇರವಾಗಿ ಮನೆಗೆ ಹೋಗೋಣ" ರಜನಿಗೆ ಹೇಳಿದ. ಅಲಕ್ಷ್ಯದಿಂದ ಹಿಂದಕ್ಕೆ ತಿರುಗಿ ಅಖಿಲೇಶ್‌ನತ್ತ ಕೈ ಬೀಸಿದಳು ರಜನಿ "ನಾನು ಅಖಿಲೇಶ್ ಜೊತೆ ಕಾರಿನಲ್ಲಿ ಹೋಗ್ತೀನಿ" ಎಂದ ಕೂಡಲೇ ವಿಕಾಸ್‌ನ ಮುಖ ಬಿಗಿಯಿತು. ಕೆಲವೊಮ್ಮೆ ಧೈರ್ಯ ತುಂಬಿ ಮಹಾನ್ ವ್ಯಕ್ತಿಯನ್ನಾಗಿ ರೂಪಿಸಬಲ್ಲ ಹೆಣ್ಣು, ನಿರ್ದಾಕ್ಷಿಣ್ಯವಾಗಿ ಕೊಲೆಗಡುಕನಾಗಿಸಿಬಿಡುತ್ತಾಳೆ. ಅದಕ್ಕೆ ರಜನಿ ಅಪವಾದವೆಲ್ಲವೆನಿಸಿತು.

"ರಜನಿ, ಅಂಥ ಧೈರ್ಯ ಮಾಡ್ಬೇಡ. ಬರೀ ಎಂ.ಎಸ್ಸಿ. ಮಾಡಿ ಪಾಠ ಮಾಡೋದ್ನ ಮಾತ್ರ ಕಲೀತಿಲ್ಲ. ವ್ಯಾಯಾಮದಿಂದ ದೇಹ ಬಲಿಷ್ಟವಾಗಿದೆ. ಸ್ವಲ್ಪ ಪುಂಡು ಧೈರ್ಯಮಾಡಿ ಅಖಿಲೇಶ್‌ನ ಕೈಕಾಲುಗಳು ಮುರಿಯಬೇಕಾಗುತ್ತೆ. ಅಷ್ಟಕ್ಕೆ ಅವಕಾಶ ಮಾಡಿ ಕೊಡ್ಬೇಡ" ಸಿಟ್ಟನಿಂದ ಹೇಳಿದ ರಜನಿ ಬೆದರಿದಳು.

ಅವನತ್ತ ಮತ್ತೆ ತಿರುಗಲಿಲ್ಲ ರಜನಿ. ಆ ಬಲಿಷ್ಟ ಬಾಹುಗಳಲ್ಲಿ ಅದೆಷ್ಟು ಶಕ್ತಿ ಇದೆಯೆಂದು ಅವಳಿಗೆ ಗೊತ್ತು. ಕಣ್ಣುಗಳು ಮಿನುಗಿದವು.

ಅಖಿಲೇಶ್‌ನ ಕಾರು ಸನ್ನಿಹದಲ್ಲಿ ಬಂದು ನಿಂತಿತು. ತಲೆ ಹೊರಗೆ ಹಾಕಿದ "ಬರ್ತೀರಾ " ಎಂದವನ ಸ್ವರ ಒಣಗಿತು. ಆ ಗಂಭೀರ ಮುಖದಲ್ಲಿನ ಸ್ಥೈರ್ಯ ಅವನನ್ನು ಹೆದರಿಸುತ್ತಿತ್ತು.

"ಇಲ್ಲಿ ಯಾರ್‍ಗೂ ನಿಮ್ಮ ಸರ್ವಿಸ್ ಅಗತ್ಯವಿಲ್ಲ. ತಾವು ಹೊರಡಬಹುದು" ವಿಕಾಸ್ ಒರಟಾಗಿ ಹೇಳಿದ. ಕಾರು ಮುಂದಕ್ಕೆ ಹೋಯಿತು.

ರಜನಿಯ ಮುಖ ಗಡಿಗೆ ಗಾತ್ರವಾಯಿತು. "ಬರೀ ಆರ್ಡರ್ ಮಾಡೋದ್ರಿಂದಲೇ ಎಲ್ಲಾ ಕಳ್ದುಕೊಳ್ಳೋದು ! ನೀವು ಸ್ವಲ್ಪ ಒಬಿಡಿಯಂಟ್ ಆಗಿದ್ರೆ

ಮಿಕ್ಕ ಅಳಿಯಂದಿರಿಗಿಂತ ನಿಮ್ಮನ್ನ ಚೆನ್ನಾಗಿ ನೋಡಿಕೊೞ್ತಾ....ಇದ್ರು" ಮೆಲ್ಲಗೆ ತಿವಿದಳು.

"ಹೌದಾ....!" ಎನ್ನುವಂತೆ ನೋಡಿದ.

"ನಮ್ಮಮ್ಮ ಗರ್ಭಿಣಿಯಾಗಿದ್ದಾಗ ರಾಮಾಯಣ, ಮಹಾಭಾರತದ ಜೊತೆ ಸುಭಾಷ್ ಚಂದ್ರಬೋಸ್, ಚಂದ್ರಶೇಖರ ಅಜಾದರ ಪೌರುಷದ ಕತೆಗಳ್ನ ಓದ್ತಾ ಇದ್ದಳಂತೆ. ಆ ಪ್ರಭಾವ ನನ್ಮೇಲೆ ಇದ್ದೇ ಇರುತ್ತೆ. ನಿಮ್ಮಪ್ಪನಿಗೆ ಒಬಿಡಿಯಂಟ್ ಆಗಿರೋಕೆ....ನಾನೇನು ಅವ್ರ ಸರ್ವೆಂಟಲ್ಲ" ದನಿಯೇರಿಸದಿದ್ದರೂ ಛಾಟಿ ಬೀಸಿದಂತಾಯಿತು ಅವಳಿಗೆ.

ಅಷ್ಟರಲ್ಲಿ ಆಟೋ ಬಂದಿದ್ದರಿಂದ ಹತ್ತುವಂತೆ ಸನ್ನೆ ಮಾಡಿದ "ಈಗ ಎಲ್ಲಿಗೆ ಹೋಗೋಣ?" ಸ್ವರವನ್ನು ಅತ್ಯಂತ ಮೃದುವಾಗಿರಿಸಿದ "ಈಗ ನಮ್ಮ ಮನೆಗೆ ಹೋಗೋಣ. ಅಮ್ಮ, ಅಪ್ಪ ಕಾಯ್ತ ಇದ್ದಾರೆ. ಒಂದಷ್ಟು ದಿನವಾದ್ಮೇಲೆ ಅವ್ರೇ ಸಮಾಧಾನಕ್ಕೆ ಬರ್ತಾರೆ" ಪುಸಲಾಯಿಸಿದ. ತಳ್ಳಿ ಹಾಕಿದಳು ರಜನಿ. 'ನಾನು ಬರೋಲ್ಲ...' ತಲೆದೂರಿದ. ಅವಳತ್ತ ತಿರುಗಲಿಲ್ಲ. "ಥಿಂಕ್ ಯುವರ್‌ಸೆಲ್ಫ್" ಅವನ ಮುಖ ಗಂಭೀರವಾಯಿತು. ಮತ್ತಷ್ಟು ಬಲವಂತ ಮಾಡಲಾರ.

ಆಟೋ ನಿಲ್ಲುವ ವೇಳೆಗೆ ಅಖಿಲೇಶ್ ಕಾರು ಕಾಂಪೌಂಡಿನಲ್ಲಿ ನಿಂತಿತ್ತು. ಇಳಿದಾಗ ಅವಳತ್ತ ನೋಡದೆಯೆ "ಬೆಸ್ಟ್ ಆಫ್ ಲಕ್" ಎಂದ. ಆಟೋ ಮುಂದಕ್ಕೆ ಹೋಯಿತು. ಅವಳ ಪಾದಗಳು ಚಲಿಸಲಿಲ್ಲ. ನಿಂತಲ್ಲಿಯೇ ಕಲ್ಲಾದಳು. "ವಿಕಾಸ್" ಅವಳ ಹೃದಯ ಹೊರಳಿ ನರಳಿತು. ಬದುಕಿನ ಅರ್ಥವೇ ಕಳೆದುಹೋಯಿತು.

"ನಂಗೆ ಭಯವಾಗಿತ್ತು!" ಪಂಕಜಮ್ಮ ಗೇಟಿಗೆ ಬಂದರು. "ಯಾಕೋ" ಮುಖ ತಿರುಗಿಸಿಕೊಂಡು ಒಳನಡೆದಳು. ಕೆಲವೊಮ್ಮೆ ತಾಯನ್ನು ಪರಚಿ ಬಿಡಲೇ ಎನ್ನಿಸುತ್ತಿತ್ತು ಅವಳಿಗೆ.

ಪ್ರಕಾಶ್ ಕಣ್ಣಲ್ಲೇ ನಕ್ಕ "ಅವ್ನಿಗೆಲ್ಲಿದೆ ಅಂಥ ಧೈರ್ಯ" ಜೋರು ಕೊಟ್ಟಿದ. ಆದರೆ ಅಖಿಲೇಶ್ ಚೇತರಿಕೆಯಲ್ಲೇ ಇದ್ದ. ವಿಕಾಸ್‌ನ ಸಂಪೂರ್ಣ ವ್ಯಕ್ತಿತ್ವ ನೋಡಿದಂತಾಗಿತ್ತು ಅವನಿಗೆ. ತೀರಾ ಸರಳವಾಗಿ ಕಾಣುವ ಅವನ ಆತ್ಮವಿಶ್ವಾಸ ಅಧಿಕವೆನಿಸಿತು.

ರಜನಿ ಯಾರತ್ತ ನೋಡದೇ ಕೋಣೆಗೆ ಹೋದಳು. ಕೈಗೆ ಸಿಕ್ಕ ಸಾಮಾನುಗಳನ್ನು ಚೆಲ್ಲಾಡಿದಳು. ವಿಕಾಸ್ ಇನ್ನಷ್ಟು ಯಾಕೆ ಬಲವಂತ ಮಾಡಲಿಲ್ಲ. ತನ್ನ ಮೇಲೆ ಪ್ರೀತಿ ಇಲ್ಲವೇ ? ಹಾಸಿಗೆಯ ಮೇಲಿನ ದಿಂಬು ಗಳನ್ನು ಎತ್ತಿ ಬಾಗಿಲಿಗೆ ಎಸೆದಳು.

ಒಳಗೆ ಬಂದ ಪಂಕಜಮ್ಮ ರೇಗಿದರು.

"ಛಿ ! ಸ್ವಲ್ಪವಾದ್ರೂ ಸ್ವಾಭಿಮಾನ ಬೇಡ್ವಾ ! ಹೆಣ್ಣಿಗೆ ಹಟ ಬೇಕು. ಅವ್ನು ಕರ್ದ ಮಾತ್ರಕ್ಕೆ ಯಾಕೆ ಹೋಬೇಕು ? ಏನಿದ್ರೂ ಲಾಯರ್....ಮುಖಾಂ ತರ ಮಾತಾಡಿ ಅನ್ನಬೇಕಿತ್ತು." ತೀರಾ ಭಾಷಣ ಮಾಡಿ ಮಾಡಿ ಅಭ್ಯಾಸ ಮಾಡಿಕೊಂಡ ಆಕೆ ತುಟಿ ತೆರೆದರೆ ಮುಚ್ಚಿಸಲು ಕಷ್ಟವೆಂದು ಮನೆಯವರಿ ಗೆಲ್ಲ ಗೊತ್ತು.

"ಸುಮ್ನೇ ಬಿಟ್ಬಿಡಿ" ರಜನಿ ಹೊರಗೆ ಹೋದಳು. ಒಂದೇ ರೀತಿಯ ಮಾತುಗಳನ್ನು ಕೇಳಿ ಅವಳಿಗೆ ಸಾಕಾಗಿತ್ತು. 'ಪ್ರತಿಭಟನೆ, ಸೇಡು....' ಈ ಪದಗಳೇ ಪಂಕಜಮ್ಮ ಬಹಳವಾಗಿ ಬಳಸುತ್ತಿದ್ದುದು.

ಪ್ರಕಾಶ್ ಸಿಗರೇಟು ಹಚ್ಚಿದರೇ, ಅಖಿಲೇಶ್ ಮುಖದ ಮುಂದೆ ಪೇಪರ್ ಸರಿಸಿದ ಅಖಿಲೇಶ್ ನುಡಿದ.

"ಹ್ಯಾಂಡ್‌ಸಮ್, ವಿಶಿಷ್ಟವಾದ ಗಂಭೀರತೆ ಇದೆ ಮುಖದ ಮೇಲೆ. ಐ ಲೈಕ್ ಹಿಮ್...."

ಪ್ರಕಾಶ್ ಅರ್ಧ ಉರಿದ ಸಿಗರೇಟನ್ನು ಆಷ್‌ಟ್ರೇನಲ್ಲಿ ಅದುಮಿದ. ಅವನ ತುಟಿಯಂಚಿನಲ್ಲಿ ವಿಲಕ್ಷಣವಾದ ನಗೆ ಹಾದುಹೋಯಿತು.

"ಅದ್ನೆಲ್ಲ ಪರೀಕ್ಷಿಸಿಯೇ ಬಿಡ್ಬೇಕು. ನಮ್ಮಪ್ಪ ಅವ್ನ ಬರೀ ಎಂ.ಎಸ್ಸಿ. ಕ್ಲಾಸ್ ನೋಡಿ ಕೊಟ್ರೂ, ಅವ್ರ ಉದ್ದೇಶವೆ ಬೇರೆ ಇತ್ತು. ಆಗಿದ್ದೇ ಬೇರೆ" ವಿಷಾದ ಇಣಕಿತು. ವಿಕಾಸ್‌ನ ಬಗ್ಗೆ ಎಲ್ಲರಿಗಿಂತ ಅಸಹನೆ ಅವನಿಗೆ ಹೆಚ್ಚು. ಇವನ ಅಹಂಕಾರಕ್ಕೆ ಸಡ್ಡು ಹೊಡೆದವನು ಅವನೊಬ್ಬನೆ.

ಅಖಿಲೇಶ್ ಗೊಂದಲದಲ್ಲಿ ಬಿದ್ದಿದ್ದ "ಇಂಥದ್ನೆಲ್ಲ ಡೀಪಾಗಿ ಥಿಂಕ್ ಮಾಡ್ಬೇಕು. ಮೇಲ್ಪದರಕ್ಕೆ ಯಾವ್ದೇ ನಿಶ್ಚಯಕ್ಕೆ ಬರೋಕಾಗೋಲ್ಲ. ಯೋಚ್ಸಿ ಮುಂದುವರಿಯೋದು ಉತ್ತಮ" ಅವನಿಗಿದ್ದ ವಿವೇಕವನ್ನು ಒರೆ ಗಚ್ಚಿದಂತಿತ್ತು. ಪ್ರಕಾಶ್ ನಕ್ಕ. ಬಹಳ ಜೋರಾಗಿ ನಕ್ಕ. ನಗುವಿನಲ್ಲಿದ್ದಿದ್ದು

ಬರೀ ಸೀಡು. ಅವನಾಗಿ ದೂರ ಉಳಿದರೆ ವಿಕಾಸ್ ತಂಟೆಗೆ ಹೋಗಲಾರ. ಇಲ್ಲ ಕೆಚ್ಚಾಗಿ ಅವನನ್ನು ದಹಿಸಲು ಸಿದ್ಧ.

"ನಂಗೆ ರಜನಿ ಇನ್ನು ವಿಕಾಸ್ ಪರವೇ ಅನ್ನಿಸುತ್ತೆ. ಅದ್ನ ಕೂಡ ಗಮನದಲ್ಲಿಟ್ಕೋ....ಬೇಕು" ಬಗ್ಗಿ ಅಖಿಲೇಶ್ ಅವನ ಕೆನ್ನೆಯ ಬಳಿ ಪಿಸು ಗುಟ್ಟಿದ.

ಪ್ರಕಾಶ್ ಖಾಲಿಯಾದ ಸಿಗರೇಟ್ ಪ್ಯಾಕನ್ನು ಕಸದ ಬುಟ್ಟಿಗೆ ರೊಯ್ಯನೆ ಎಸೆದ. ಈ ಮನೆಯ ವಾತಾವರಣ ಅವನಿಗೆ ಗೊತ್ತು. ರಜನಿ ಕೂಡ ವಿಭಿನ್ನವಾಗಿ ಬೆಳೆಯಲಾರಳು.

"ಛಿ, ನಿಂಗಿನ್ನ ಗೊತ್ತಿಲ್ಲ ಬಿಡು. ಈ ಪರಿಸರದಲ್ಲಿ ಬೆಳ್ದ ಅವ್ಳು ಆ ವಾತಾವರಣದಲ್ಲಿ ಉಳಿಯಲಾರಳು ! ಮೊದಲ ಬಿಸಿ ಕಡ್ಮೆಯಾಗೋವರ್ಗ್ಗೂ ಚೆಚ್ಚಗಿದ್ಲು. ಈಗ ಅದೇ ಸುಖ ಅಲ್ಲಾ ಅಂತ ಅವ್ಳಿಗೆ ಗೊತ್ತಾಗಿದೆ" ಇಂಥ ಬಿಸಿ ಮಾತುಗಳನ್ನು ಕೇಳಲು ಅಖಿಲೇಶ್‌ಗೆ ಇಷ್ಟವಾಗಲಿಲ್ಲ. ಮೇಲೆದ್ದ. ವಿಕಾಸ್‌ನ ಪರಿಚಯ ಸರಿಯಾಗಿ ಆದಮೇಲೆ ಅವನ ಆಸೆ ಕಮರಿಹೋದರೂ ರಜನಿಯ ಮೇಲೆ ಪ್ರೇಮ ಇದು ಕೂಡ ವಿಚಿತ್ರ ! ಮನದಲ್ಲೇ ನಕ್ಕ.

"ಒಂದ್ಸಲ ನಮ್ಮ ಆಟೋಮೋಬೈಲ್ಸ್‌ಗೆ ವಿಸಿಟ್ ಕೊಟ್ಬು.... ಸಂಜೆಯ ವೇಳೆಗೆ ಕ್ಲಬ್‌ನಲ್ಲಿ ಹಾಜರು. ಇಲ್ದಿದ್ರೆ ಪಪ್ಪ ಬಿಸಿ ಆಗ್ತಾರೆ" ಅಖಿಲೇಶ್‌ನ ಕೈಯಲ್ಲಿನ ಕೀ ಬಂಚ್ ಒಂದು ಸುತ್ತೊಡೆದು ಕೆಳಗೆ ಬಿತ್ತು. ಬಗ್ಗಿ ಹೆಕ್ಕಿಕೊಂಡ.

ಪ್ರಕಾಶ್ ಬಾಗಿಲವರೆಗೂ ಹೋಗಿ ಬೀಳ್ಕೊಟ್ಟ. ಸಧ್ಯಕ್ಕೆ ಅವನ ಕೆಲ್ಸ ಅಷ್ಟೆ. ತುರುಬಿಗೆ ಗುಲಾಬಿ ಸಿಕ್ಕಿಸುತ್ತ ಹೊರಗೆ ಬಂದ ಪಂಕಜಮ್ಮ ರೇಗಿದರು.

ಅಖಿಲೇಶ್‌ನ ಸ್ವಲ್ಪ ಹೊತ್ತು ಇಸ್ಸಿಕೊಳ್ಳೋಕೆ ಆಗ್ತಾ ಇರ್ಲಿಲ್ವಾ ! ಚಿಲ್ಡ್ರನ್ಸ್ ವೆಲ್‌ಫೇರ್ ಸೊಸೈಟಿ ಮೀಟಿಂಗ್ ಇದೆ. ನಾನು ಅಟೆಂಡ್ ಆಗ್ಬೇಕಿತ್ತು" ಗೊಣಗಿದರು. ಉದಾಸ ನಗೆ ನಕ್ಕ ಪ್ರಕಾಶ್. ಅವನಿಗೆ ತಾಯಿಯ ಬಗ್ಗೆ ಗೌರವ ಇಲ್ಲ. ಇಂದೂ ಇಲ್ಲ. ಮುಂದೆ ಕೊಡಲಾರ.

"ನಾಚ್ಕೇ... ಆಗ್ಬೇಕೂ ..." ಸಿಡುಕಿ ಒಳಗೆ ನಡೆದರು ಆಕೆ. ಮಗನ ಎದುರು ನಿಂತು ಮಾತಾಡಲು ಆಕೆಗೆ ಭಯ,

ಸಿಕ್ಕಿದ ಹಣ ಖರ್ಚು ಮಾಡ್ಕೊಂಡು ಹಾಯಾಗಿ ತಿರುಗಿಕೊಂಡಿರುವ ಮಗನ ಬಗ್ಗೆ ಆಕೆಗೆ ಕೋಪ. ಬಾಯಿಬಿಟ್ಟು ಆಡಿದರೇ ಮುಲಾಜಿಲ್ಲದೆ ಎದುರು ನಿಲ್ಲುತ್ತಾನೆ. ಇದೊಂದು ವಿಪರೀತ ಸಂಕಟ ಆಕೆಗೆ.

ಸರಿಯಾಗಿ ಕೂರದ, ತುಸು ನಲುಗಿದ ಗುಲಾಬಿಯನ್ನೆಸೆದು ಗಂಡನ ಕೋಣೆಗೆ ಬಂದರು. "ಪ್ರಕಾಶನಿಗೆ ಒಂದು ದಾರಿ ಮಾಡಿ. ಇಲ್ದಿದ್ರೆ ಶೀಲಾ ಪುಂಡನಾಗಿಬಿಡ್ತಾನೆ. ಹೊರ್ಗೇ ಎಲ್ಲಾದ್ರೂ ಹಾಳಾಗ್ಲಿ... ಮನೆಯಲ್ಲಿ ಕೂಡ ಅದೇ ನಡತೆ" ತೋಡಿಕೊಂಡರು. ಫೈಲ್‌ನಿಂದ ತಲೆಯೆತ್ತಿದ ಗುರುಮೂರ್ತಿಗಳು ನಸುನಕ್ಕರು.

"ಅದಕ್ಯಾಕೆ ಯೋಚ್ನೆ ? ಈಗ ಪ್ರಕಾಶ್ ಅಂಥವ್ರೇ ಮುಂದಕ್ಕೆ ಬರೋದು. ಇವ್ರಿಗೆ ಯಾವ್ದೇ ನೆಲೆ ಇಲ್ಲ. ಇಂಥ ಜನ ಮೇಲಕ್ಕೇರೋಕೆ.... ಹತ್ತು ಹಲವು ದಾರಿಗಳು ಇವೆ, ಇನ್ನು ವಿಕಾಸ್ ಅಂಥವ್ರು...." ತಲೆ ಅಡ್ಡಡ್ಡ ಆಡಿಸಿದರು. "ಯಾವ್ದೇ ಆಸೆಗಳ್ನ ಇಟ್ಕೋಬಾರ್ದು. ಅವ್ನ ಮನಸ್ಸು ಮಾಡಿದ್ರೆ....ಏನೋ ಮಾಡ್ತಾ ಇದ್ದೆ. ಅವ್ನಿಗೆ ಕೇದು ಕೇದು ಕೂದ್ಲು ಬೆಳ್ಳಗೆ ಮಾಡಿಕೊಳ್ಳೋಕೆ ಇಷ್ಟ" ಅವರ ಮಾತಿನ ಸರಣಿಯ ರೀತಿಯೇ ಈ ತರಹ. ಗುರುಮೂರ್ತಿ ಚಾಣಾಕ್ಷ ವ್ಯಕ್ತಿಯೆಂದು ಎಲ್ಲರಿಗೂ ಗೊತ್ತು.

ಮದುವೆಯಾದ ಹೊಸದರಲ್ಲಿ ಮಗಳಿಗೆ ಹೇಳಿದ್ದರು. "ವಿಕಾಸ್‌ನ ಮೇಷ್ಟ್ರಗಿರಿ ಸಾಕು. ಐ.ಎ.ಎಸ್. ಮಾಡಿಕೊಳ್ಳಿ....ಬೇಗ ಕೆಲ್ಸನು ಸಿಕ್ಕುತ್ತೆ. ಬದ್ಕಿಗೆ ಒಂದು ವಾಲ್ಯೂ ಬರುತ್ತೆ"

ರಜನಿಯೇನೋ ಖುಷಿಯಿಂದ ತಲೆದೂಗಿದಳು. ತಾನು ಐ.ಎ.ಎಸ್. ಆಫೀಸರ್ ಹೆಂಡತಿಯಾದ ಕನಸ್ಸು ಕಂಡಿದ್ದಳು. ಅಪ್ಪ, ಮಗಳಿಗೆ ವಿಕಾಸ್‌ನ ನಿರಾಕರಣೆಯ ಕಲ್ಪನೆಯು ಇರಲಿಲ್ಲ.

ಮಡದಿಯ ಕಣ್ಣುಗಳಲ್ಲಿನ ಬುದ್ಧಿಯ ಆಳ ಅಳೆಯುತ್ತ ಹೇಳಿದ್ದ ವಿಕಾಸ್ "ನಂಗೆ ಐ.ಎ.ಎಸ್. ಬಗ್ಗೆ ಅಂಥ ಆಸಕ್ತಿ ಇಲ್ಲ. ಅದ್ಕೇ ಬೇಕಾದ ಜನರಲ್ ನಾಲೆಡ್ಜ್ ಆಗ್ಲಿ, ಇಂಗ್ಲೀಷ್ ಭಾಷೆಯ ಮೇಲೆ ಕಮ್ಯಾಂಡಿಂಗ್ ಆಗ್ಲಿ ನಂಗೆ ಮೊದ್ಲೇ ಇಲ್ಲ. ಸಧ್ಯಕ್ಕೆ ನನ್ನ ಫಿಸಿಕ್ಸ್ ನನಗೆ ಸಾಕು"

ಈ ಮಾತುಗಳಿಂದ ರಜನಿಯ ತಲೆಯೇನು ಕೆಡದಿದ್ದರೂ ಗುರುಮೂರ್ತಿ

ಗಳ ಕಿವಿಗೆ ಬಿದ್ದಾಗ ಸಿಟ್ಟಾಗಿದ್ದರು. ಮೈಮೇಲೆ ಬಾಸುಂಡೆಗಳು ಎದ್ದಂತೆ ಆಗಿತ್ತು. ಸಿಕ್ಕಾಪಟ್ಟೆ ಹಾರಾಡಿದರು.

"ಸ್ವಲ್ಪನಾದ್ರೂ ಬುದ್ಧಿ ಬೇಡ್ವಾ! ಇಂಥ ಆರ್ಡಿನರಿ ಲೆಕ್ಚರರ್‌ಗೆ ನನ್ಮಗಳನ್ನ ಕೊಡ್ಬೇಕಿತ್ತಾ? ಟ್ಯಾಲೆಂಟ್ ಇದೆ. ಪೋಸ್ಟ್ ಗ್ರಾಜುಯೇಟ್—ಏನಾದ್ರೂ ನಿರೀಕ್ಷಿಸ್ಬಹುದ್ದು ಅಂದ್ಕೊಂಡಿದ್ರೆ...." ಸಹನೆ ಕಳೆದುಕೊಂಡು ಶತಃಪತಃ ಓಡಾಡಿದ್ದರು. ಈಗ ಅಳಿಯನ ಸಿರಾಕರಣೆ ತಮಗೆ ಮಾಡಿದ ಅವಮಾನವೆಂದೇ ಅದರ ಭಾವನೆ.

ಮನೆಯ ಇತ್ತರರ ಮೇಲೆ ಯಾವ ಪರಿಣಾಮ ಬೀರಿತೋ, ರಜನಿ ಮಾತ್ರ ಆರಾಮಾಗಿದ್ದಳು. ಅವಳೀಗ ಪ್ರೇಮಮಯ ಜಗತ್ತಿನಲ್ಲಿ ವಿಹರಿಸುತ್ತಿದ್ದಳು. ಸಧ್ಯಕ್ಕೆ ಅಲ್ಲಿ ಯಾವ ಗೊಡವೆಯೂ ಇಲ್ಲ. ಅವಳೀಗ ಈಗ ಬೇಕಾದ್ದು ವಿಕಾಸ್‌ನ ಬೆಚ್ಚನೆಯ ಎದೆಯ ಆಸರೆ.

"ಹೋಗ್ಲಿ ಬಿಡಿ, ಪಪ್ಪ. ಸಾಕಷ್ಟು ಸಂಬ್ಳ ಬರುತ್ತೆ. ಮಾವನೋರ ಪೆನ್‌ಷನ್, ಸ್ವಂತ ಮನೆ—ಸುಖವಾಗಿರೋಕೆ ಇಷ್ಟು ಸಾಕು" ಮೋಡಗಳ ಮಧ್ಯೆ ತೇಲುವಂತೆ ಹೇಳಿದಾಗ ಗುರುಮೂರ್ತಿಗಳ ಕಣ್ಣುಗಳು ಕೆಂಪಗಾಗಿದ್ದವು. ಅಸಹ್ಯಿಸಿಕೊಂಡರು.

"ವಿಕಾಸ್ ಅಸಾಧ್ಯ, ಅವನ ಕಮ್ಯಾಂಡಿಂಗ್‌ನಲ್ಲಿ ನಿನ್ನ ಇಟ್ಕೋತಾನೆ. ನೀನು ಕಸ ಮುಸುರೆ ಮಾಡ್ಕೊಂಡಿರು. ಇದಕ್ಕಾಕೆ ಬೇಕಿತ್ತು ಡಿಗ್ರಿ" ಮಗಳಿಗೆ ಮುಖ ಮುರಿದಿದ್ದರು. ಅದರ ಪರಿಣಾಮವೇನು ಹೆಚ್ಚಿಗೆ ಅವಳ ಮೇಲೆ ಆಗಲಿಲ್ಲ.

ಮಧ್ಯಮ ದರ್ಜೆಯ ಬದುಕಿನ ಬಗ್ಗೆ ಗುರುಮೂರ್ತಿಗಳಿಗೆ ಅಸಹ್ಯ. ಸಾಕು ಸಾಲದಂಥ ಸಂಪಾದನೆ. ಜೀವನ ಕೂಡ ಅಷ್ಟಕ್ಕಷ್ಟೆ. ಬರೀ ಅಡ್ಜಸ್ಟ್‌ನಲ್ಲಿ ನಡೆದುಹೋಗೋ ಜೀವನ. ಯಾವುದೇ ಥ್ರಿಲ್ ಇಲ್ಲ. ಕನಸ್ಸು ಕಾಣಲು ಅವರಿಂದ ಸಾಧ್ಯವಿಲ್ಲ. ದಿನಗಳನ್ನು ಉರುಳಿಸಲು ಪ್ರಯಾಸಪಡುವ ಜನರು. ಅಂಥ ಬದುಕು ಮಗಳಿಗೆ ಬೇಡ—ಸೈರಿಸಲಾರದಂಥದ್ದು.

ಇದನ್ನು ಪಂಕಜಮ್ಮ ಕೂಡ ವಿರೋಧಿಸುತ್ತಿರಲಿಲ್ಲ. ತಾಪತ್ರಯವೆಂದರೆ ಮುಜುಗರ. ಪೈಸೆ ಪೈಸೆಗೂ ಲೆಕ್ಕವಿಡುವ ಜನರ ಬದುಕು ಬದುಕಲ್ಲ. ಹಣ ಯಾವ ರೀತಿಯಲ್ಲಿ ಬಂದರೂ ಸ್ವಾಗತಾರ್ಹವೇ.

ವಿಕಾಸ್‌ನ ಒಪ್ಪಿಕೊಂಡ ದಿನವೇ ಆಕೆ ವಿರೋಧಿಸಿದ್ದಳು. "ಸುತರಾಂ ಅನ್ಕೂಲವಿಲ್ದ ಸಂಬಂಧ. ಏನಿದೆ ಆ ಮನೆಯಲ್ಲಿ ತೀರಾ ಸಾಧಾರಣದ್ದು. ಕಾಲಿಡೋಕು ಮುಜುಗರ, ನಮ್ಮ ಸ್ಟೇಟಸ್‌ಗೆ ಸರ್ಯಾದ ಜನವಲ್ಲ."

ಅದನ್ನ ಅಲ್ಲಗೆಳೆಯದಿದ್ದರೂ ಗುರುಮೂರ್ತಿಗಳು ಒಂದು ಪ್ಲಾನ್ ತಯಾರಿಸಿಟ್ಟಿದ್ದರು. "ಡೋಂಟ್ ವರೀ, ಅವ್ನ ಸ್ಟೇಟಸ್ ಬೆಳೆಯೋ ಹಾಗೆ ನಾನು ಮಾಡ್ತೀನಿ" ಎದೆಯುಬ್ಬಿಸಿದ್ದರು. ಈಗ ತಿರುಗುಮುರುಗಾಗಿತ್ತು.

○ ○ ○ ○

ಸಂಜೆ ಬಂದು ರಜನಿ ಹೊರಗೆ ನಿಂತಾಗ ಸಂಜೆಯ ಹೊಂಬಣ್ಣ ಎಲ್ಲೆಡೆ ಹರಡಿಕೊಂಡಿತ್ತು. ಇಂಥ ಸಮಯದಲ್ಲಿ ಸಡಗರ, ಸಂಭ್ರಮದಿಂದ ಅಲಂಕರಿಸಿಕೊಂಡು ವಿಕಾಸ್‌ನ ಮೆಚ್ಚಿಗೆಗಾಗಿ ಕಾದು ನಿಲ್ಲುತ್ತಿದ್ದಳು. ಅವನ ಕಣ್ಣ ಹೊಳೆವು ಬಾಯಿ ಹೇಳದೇ ನೂರು ಮೆಚ್ಚಿಗೆಯ ಮಾತುಗಳನ್ನು ಚಿತ್ತಾರದಂತೆ ಬಿಡಿಸುತ್ತಿತ್ತು. ಆ ನೆನಪಿನಲ್ಲಿ ಪೂರ್ತಿ ಮೈಮರೆತಳು.

ಹೊರಗೆ ಬಂದ ಪಂಕಜಮ್ಮ ಮಗಳನ್ನು ನೋಡಿ ಮುಖ ಗಂಟಿಕ್ಕಿದರು. ತೀರಾ ಸಾಧಾರಣ ಸೀರೆ. ಮುಖದಲ್ಲಿ ಮೇಕಪ್ ಇಲ್ಲ. ಈ ವಯಸ್ಸಿನಲ್ಲಿ ಹೆಣ್ಣು ಮಕ್ಕಳು ಹೀಗೆ ನಿಲ್ಲುವುದು ಆಕೆಗೆ ಸುತರಾಂ ಇಷ್ಟವಿಲ್ಲ.

"ಯಾಕೆ, ಹೀಗೆ ನಿಂತೆ ? ಹೋಗಿ ಡ್ರೆಸ್ ಮಾಡ್ಕೋ. ಸದಾ ಪುಟ್ಟಮ್ಮನ ಹಾಗೆ ಸೀರೆ ಉಡೋದೇನು ಚೆಂದ. ಇರೋ ಡ್ರೆಸ್ ಉಪಯೋಗ್ಸು. ವಿಕಾಸ್‌ನ ಜೊತೆಯ ಜೀವ್ನ ಮರೆತುಬಿಡು. ಸಂಜೆ ಸೀತಾರಾಮ್‌ನ ಭೇಟಿ ಮಾಡ್ತೀನಿ" ತಾಯಿಯ ಮಾತುಗಳಿಗೆ ರಜನಿ ಕಿವಿ ಮುಚ್ಚಿಕೊಂಡಳು. 'ಮಾತು ಮಾಣಿಕ್ಯವಾದರೆ, ಮೌನ ಮುತ್ತೆ'ಂದು ಆಕೆಗೆ ತಿಳಿಯದು

"ಹೊರಗಂತೂ ಮಾತಾಡೋ ಹಣೆಬರಹ ಮನೆಯಲ್ಲಿ ಯಾಕೆ ?" ಹಣೆ ಯೊತ್ತಿಕೊಂಡಳು. ಅದನ್ನ ಲಕ್ಷ್ಯಕ್ಕೆ ತೆಗೆದುಕೊಳ್ಳಲಿಲ್ಲ ಆಕೆ.

ಪಂಕಜಮ್ಮ ಗೇಟು ದಾಟಿದ ಮೇಲೆ ರಜನಿ ಒಳಕ್ಕೆ ಬಂದಳು. ಕಾಲು ಮೇಲೆ ಕಾಲು ಹಾಕಿ ಕೂತ ಪ್ರಕಾಶ್ ಸಿಗರೇಟು ಮೇಲೆ ಸಿಗರೇಟು ಸುಡುತ್ತಿದ್ದ. ಇದು 'ಹಾಬಿ'ಯಲ್ಲ ಪ್ರೊಫೇಷನ್ ಆಗಿಬಿಟ್ಟಿತ್ತು. ಹಚ್ಚಿದ

ಸಿಗರೇಟು ಅವನ ಕೈ ಬೆರಳುಗಳ ಮಧ್ಯೆಯೋ, ತುಟಿಯ ನಡುವೆಯೋ ಇರುತ್ತಿತ್ತು.

ಬೇಸರದಿಂದ ಅವನ ಮುಂದೆ ಬಂದು ಕುಕ್ಕರಿಸಿದಳು ರಜನಿ. "ಯಾವುದಾದ್ರೂ ಸಿಗರೇಟು ಕಂಪನಿ ಸುಡೋಕೆ ಕಾಂಟ್ರಾಕ್ಟ್ ತಗೊಂಡಿದ್ದೀಯಾ ?" ಮೂಗು-ಬಾಯಿಯಲ್ಲಿ ತುಂಬಿಕೊಂಡ ಹೊಗೆಯನ್ನು ಸ್ಟೈಲ್ ಆಗಿ ಹೊರಗೆ ತಳ್ಳುತ್ತ ಸೊಟ್ಟಗೆ ನಕ್ಕ. ವಿಕಾಸ್‌ನ ತುಟಿಗಳ ನಡುವೆ ಬಿರಿಯುವ ನಗೆಗೆ ಹೋಲಿಸಿದಾಗ ಜಿಗುಪ್ಸೆಯೆನಿಸಿತು. "ಛಿ ..." ಮುಖ ಸಿಂಡರಿಸಿದಳು. ಅವಳಿಗೆ ಉಗ್ಗುವಂತಾಯಿತು. ಬಾಯಿಗೆ ಕೈ ಅಡ್ಡ ಹಿಡಿದು ಕೆಮ್ಮಿದಳು.

"ಪಪ್ಪ, ಮಮ್ಮಿ ಏನಾದ್ರೂ ಭರವಸೆ ಇಟ್ಕೊಳ್ಳಿ, ನೀನಾಗೋದಂತೂ ಅಪ್ರಯೋಜಕ. ಊರವರ ಬಗ್ಗೆ ಮಾತಾಡೋ ಜನಕ್ಕೆ ಮಗನ ಬಗೆಗೆ ಯೋಚ್ಸೋಕೆ ಟೈವಿಲ್ಲ" ಮನದ ಕಹಿಯನ್ನ ಕಕ್ಕಿದಳು.

ಅಪ್ರಯತ್ನವಾಗಿ ಅವಳ ಮನವನ್ನು ಹೊಕ್ಕ ರೋಷ ಈ ರೀತಿ ಕಕ್ಕಲು ಅನುವು ಮಾಡಿಕೊಟ್ಟಿತು. ತನ್ನ ಪಾಲಿಗೆ ಇವರಲ್ಲಿ ಶತ್ರುಗಳು ಎನ್ನುವ ಭಾವ ಅವಳಲ್ಲಿ ಇಣುಕಿ ಆಗಾಗ ಮರೆಯಾಗುತ್ತಿತ್ತು.

ಸಿಗರೇಟು ಪ್ಯಾಕ್ ಮೇಲೆಸೆದು ಹಿಡಿದ ಪ್ರಕಾಶ್. "ನೀನು ಬದಲಾಗ್ಬೇಕು ರಜನಿ. ರಂಜಿತಾ, ರಮಣಿಯರನ್ನು ನೋಡಿ ಕಲೀ.... ನಿನ್ನ ಬಗಲಲ್ಲಾದ್ರೂ ಡಿಗ್ರಿ ಇದೆ. ಅವಕ್ಕೆ ಅದೂ ಇಲ್ಲ. ಆದ್ರೆ........ಎಷ್ಟೊಂದು ಫಾರ್ವಡ್ ಗೊತ್ತ. ಬೇಕಾದ್ರೆ ನಿನ್ನ ಮಮ್ಮಿನ ವಿಚಾರಿಸಿಬಿಡ್ತಾರೆ" ಒಂದು ರೀತಿಯಾಗಿ ಹೇಳಿದ.

ಅವನ ಕೈಯಲ್ಲಿನ ಸಿಗರೇಟು ಪ್ಯಾಕ್ ಕಿತ್ತುಕೊಂಡಳು. ತ್ರಿಬಲ್ ಫೈವ್—ಕ್ಷಣ ಅವಳೆದೆಯ ಬಡಿತ ನಿಂತಂತಾಯಿತು. ಇಷ್ಟು ದಿನ ಅವನು ಸೇದುವ ಬ್ರಾಂಡನ್ನ ಗಮನಿಸಿರಲಿಲ್ಲವೋ, ಅತ್ತ ಗಮನ ಕೊಟ್ಟಿರಲಿಲ್ಲವೋ, ಮೂರು ಪೈಸೆ ಸಂಪಾದನೆ ಇಲ್ಲದ ವ್ಯಕ್ತಿಯ ಖರ್ಚನ್ನು ಲೆಕ್ಕಹಾಕಿದಳು.

ವಿಕಾಸ್‌ನ ಕೈ ಹಿಡಿದ ಮೇಲೆಯೋ ಅವಳಿಗೆ ಹಣದ ಬೆಲೆ ಮಾತ್ರವಲ್ಲ, ಜೀವನದ ಬೆಲೆಯೂ ಗೊತ್ತಾಗಿದ್ದು. ಲೆಕ್ಕಾಚಾರದ ಬದುಕು. ಐದು ರೂಪಾಯಿ ಅನಾವಶ್ಯಕವಾಗಿ ಖರ್ಚಾದರೂ ನಾಲ್ಕಾರೂ ಸಲವಾದರೂ ಸುನಂದಮ್ಮ ಅಂದುಕೊಳ್ಳುತ್ತಿದ್ದರು.

"ಹಿಡಿತವಿಲ್ದಿದ್ರೆ ಆಗುತ್ತಾ ? ನಾಳೆ ಸಂಸಾರ ಬೆಳೆಯುತ್ತೆ. ಮೊಮ್ಮಕ್ಕಳಿಗೇಂತ ಅಷ್ಟಿಷ್ಟು ತೆಗೆದಿಡಬೇಡ್ವಾ !" ಎಂದಾಗ ಸುನಂದಮ್ಮ ರಜನಿಯ ಕೆನ್ನೆ ಕೆಂಪು ಮಾಡುತ್ತಿದ್ದ ವಿಕಾಸ್. "ನೋಡಿದ್ಯಾ, ಯಾವಾಗ ನಿನ್ನ....?" ಕಣ್ಣಲ್ಲೇ ಪ್ರಶ್ನಿಸಿದಾಗ ಅವನ ಬಾಹುಗಳಲ್ಲಿ ಹುದುಗಿಬಿಡುತ್ತಿದ್ದಳು. ಲಕ್ಷ ಲಕ್ಷಗಳು ಕೊಟ್ಟರೂ ಅಂತಹ ಮಧುರ ಕ್ಷಣಗಳಿಗೆ ಸಮನಾಗುತ್ತಿರಲಿಲ್ಲ. ಕನಸ್ಸಿನ ಲೋಕದಲ್ಲಿ ವಿಹರಿಸತೊಡಗಿದಳು.

ಮಗನ ಮದುವೆಯ ನಿಶ್ಚಿತಾರ್ಥ ಮುಗಿದ ಮೇಲೆ, ಸುನಂದಮ್ಮನಿಗೆ ಎರಡು ಕೈಗಳು ಸಾಲಲಿಲ್ಲ ; ಹಪ್ಪಳ ಸಂಡಿಗೆ, ಚಕ್ಕುಲಿ ಹಿಟ್ಟು, ಉಂಡೆಗಳನ್ನು ಮಾಡಲು ತೊಡಗಿದರು.

ಅಂದು ವಿಕಾಸ್ ಬಂದಾದ ಹರವಿದ್ದ ಹಪ್ಪಳಗಳನ್ನು ಡಬ್ಬಕ್ಕೆ ತುಂಬುತ್ತಿದ್ದವರು ಮೇಲೆದ್ದರು. "ಬೀಗರ ಕಡೆಯವ್ರು ಬಂದಿದ್ರು. ಸರ್ಯಾದ ಛತ್ರ ಸಿಗಲಿಲ್ಲಾಂತ ಅವರ ಗೋಣಗು" ಸ್ವರದಲ್ಲಿನ ಬೇಸರ ಗುರ್ತಿಸಿ ಸಣ್ಣನೆ ನಕ್ಕ ಅವನಲ್ಲಿ ಜಿಜ್ಞಾಸೆ ಇಣಕಿತು. ಇವರಿಂದ ಅಂಥ ಬೇಡಿಕೆ ಯಾವುದು ಇರಲಿಲ್ಲ. ಸ್ವತಃ ಯಾಕೆ ಪೇಚಾಡುತ್ತಾರೆ ?

"ಛತ್ರ ಸಿಗ್ದಿದ್ರೆ ಯಾವುದಾದ್ರೂ ದೇವಸ್ಥಾನದಲ್ಲಿ ಆಯ್ತು !" ಬಗ್ಗಿ ಷೂ ಲೇಸುಗೆ ಕೈ ಹಾಕಿದ. ಆಕೆ ಭಾರವಾದ ನಿಟ್ಟುಸಿರು ದಬ್ಬಿದರು. "ಅದ್ನ ನಾನು ಹೇಳೋಕೆ ಆಗುತ್ತಾ ? ಹೇಳಿದ್ರೂ ಕೇಳೋ ಜನರ ಹಾಗೆ ಕಾಣೋಲ್ಲ. ಪ್ರತಿಯೊಂದು ಅವ್ರ ಯೋಗ್ಯತೆಗೆ ಹಚ್ಚಿ ಅಳೆದು ನೋಡ್ತಾರೆ. ಏನಾದ್ರೂ ಮಾಡ್ಕೊಳ್ಳಿ" ಸೋತವರಂತೆ ಹೇಳಿದರು.

ತಾಯಿಯ ಸರಳ ಒಳ್ಳೆಯ ಮನಸ್ಸು ಅವನಿಗೆ ಗೊತ್ತು. ಹೆಣ್ಣು ಒಪ್ಪಿಗೆಯಾದ ಮೇಲೆ ಆಕೆ ಯಾವುದೇ ಪ್ರಸ್ತಾಪ ಮಾಡಿರಲಿಲ್ಲ. ಲೋಕ ರೂಢಿಯಾಗಿಯಾಗಲಿ ಅವರು ಏನು ಕೊಡಬಹುದೆಂದು ಲೆಕ್ಕ ಹಾಕಲಿಲ್ಲ.

ಷೂ-ಮೂಲೆಗೆ ಸರಿಸಿ ತಾಯಿಯ ಮುಂದೆ ಬಂದು ಕೂತ. "ಈ ಸಲ ಬಂದ್ರೆ ಒಂದ್ಕೆಲ್ಸ ಮಾಡೋಕ್ಹೇಳು. ರಜನೀನ ಇಲ್ಲಿಗೆ ಕಳ್ಸಬಿಡ್ಲಿ.

ಯಾವುದಾದ್ರೂ ದೇವಸ್ಥಾನದಲ್ಲಿ ತಾಳಿ ಕಟ್ಟಿ, ಸಂಜೆ ನನ್ನ ಫ್ರೆಂಡ್ಸ್ ಸಹೋದ್ಯೋಗಿಗಳಿಗೆ ಒಂದು ಡಿನ್ನರ್ ಕೊಟ್ಟುಬಿಡ್ತೀನಿ. ಅವ್ರಿಗೆ ಯಾವ್ದೇ ಟೆನ್ಷನ್ ಬೇಡ" ಸರಳವಾಗಿ ಹೇಳಿದಾಗ ಆಕೆ ನಕ್ಕುಬಿಟ್ಟರು.

"ಮಗ್ಳ ಮದ್ವೆ ಮಾಡಿ ದಣಿದ ನಾವು ಒಪ್ಕೋತೀವಿ. ಅವ್ರು ಒಪ್ಪೋಲ್ಲ. ಇದು ಅವ್ರ ಕಡೆ ಮಗಳ ಮದ್ವೆ. ಹೆಚ್ಚು ಆದ್ದೂರಿಯಾಗಿ ಮಾಡ್ಬೇಕೊಂತ ಅವರಿಚ್ಛೆ" ಸುನಂದಮ್ಮ ತಮ್ಮ ನಿಸ್ಸಹಾಯಕತೆ ತೋಡಿಕೊಂಡರು. ವಿಕಾಸ್ ಎದ್ದು ಹೋದ.

ಅವರುಗಳ ನಡತೆ, ಸ್ವಭಾವದಿಂದ ಅವನ ತಲೆ ಬಿಸಿಯಾಗಿತ್ತು. ಸರಳ ನೇರ ಬದುಕು ಅವನಿಗಿಷ್ಟ. ಆದರೆ ಆ ಜನರ ರೀತಿ, ನೀತಿಗಳೇ ಬೇರೆ. ಈಗಾಗಲೇ ಅವನಿಗೆ ತಲೆ ಕೆಡುವಂತಾಗಿತ್ತು. ರಜನಿಯನ್ನು ಒಪ್ಪಿದ್ದ. ಮಿಕ್ಕೆಲ್ಲ ಗೌಣ. ಮದುವೆಯಾಗುವವರೆಗೂ ಅವರನ್ನು ಅನುಸರಿಸುವ ಅಗತ್ಯವಿತ್ತು.

ಬಟ್ಟೆ ಬದಲಾಯಿಸಿ ಬಂದಾಗ ಸುನಂದಮ್ಮ ಹಪ್ಪಳದ ಹಿಟ್ಟಿನ ಸಣ್ಣ ಸಣ್ಣ ಉಂಡೆಗಳನ್ನು ಮಾಡುತ್ತಿದ್ದರು

"ಈಗ ನಾವೇನು ಮಾಡ್ಬೇಕಂತೆ ?" ಮಗನ ಪ್ರಶ್ನೆಗೆ ಆಕೆ ತಲೆಯೆತ್ತಿದ್ದರು. "ಅದೇ ನಂಗೂ ಗೊತ್ತಾಗ್ತಾ ಇಲ್ಲ." ಅರ್ಧ ಗಂಟೆ ಕೂತು ಬಡಬಡಿಸಿದರು ಸುಮ್ನೆ... ಕೇಳ್ದೆ. ನಮ್ಮಂಥ ಸಾಮಾನ್ಯ ರೀತಿಯ ಜನರಲ್ಲ" ಹಣೆಯುಜ್ಜಿದ ವಿಕಾಸ್. ಅವರುಗಳ ನವಿರಾದ ಮಾತು, ಪಂಕಜಮ್ಮನಿಗಿದ್ದ ಸಮಾಜದ ಬಗೆಗಿನ ಕಳಕಳಿ ಅವನಿಗೆ ಇಷ್ಟವಾಗಿತ್ತು. ಈಗ ಸಾಚಾತನ ಬಯಲಾಗತೊಡಗಿತ್ತು. ಬರೀ ಸೊಗು, ನಟನೆಯ ಜನ. ಇಂಥದ್ದೇ ಪಾತ್ರವೆನ್ನದೆ ಅಭಿನಯಿಸಬಲ್ಲ ಚತುರರು ಎಂದು ಅರಿವಾಗಿತ್ತು. ಆದರೆ ರಜನಿ ಮಾತ್ರ ಅವನೆದೆಯ ಬಾಗಿಲನ್ನ ಬಡಿದ ಪ್ರೀತಿಯ ಹೂ.

ಅವನ ಕಣ್ಮುಂದೆ ರಜನಿಯ ಚಿತ್ರ ತೇಲಿತು. ನಸುಗೆಂಪು ಮುಖದಲ್ಲಿ ಲಜ್ಜೆಯ ಬೆಡಗು. ತಾಯಿಗಿಂತ ಸ್ವಲ್ಪ ಭಿನ್ನವಾಗಿ ಅತ್ಯಂತ ಸರಳವಾಗಿ ಅವನನ್ನು ಆಕರ್ಷಿಸಿದ್ದಳು.

ವಯಸ್ಸಿಗೆ ಬಂದ ಹೆಣ್ಣುಗಳನ್ನು ನೋಡಿದ ಕೂಡಲೇ ಕನಸಿನ ಲೋಕದಲ್ಲಿ ತೇಲಿ ಪ್ರತಿಯೊಬ್ಬರ ಬಗ್ಗೆ ತಲೆ ಕೆಡಿಸಿಕೊಳ್ಳುವ ಸ್ವಭಾವ ಅವನದಲ್ಲ.

ರಜನಿಗಿಂತ ರೂಪವತಿಯರಾದ ಎಷ್ಟೋ ವಿದ್ಯಾರ್ಥಿಗಳನ್ನು ಕಂಡಿದ್ದ: ಅವರ ಕಣ್ಣುಗಳ ಹೊಳಪಿನಲ್ಲಿ ಹೊಚ್ಚಹೊಸ ಪ್ರೀತಿಯನ್ನು ಕಂಡಿದ್ದ. ಮಾರು ಹೋಗುವಂಥ ದುರ್ಬಲ ಮನಸ್ಸು ಅವನದಲ್ಲ. ಮದುವೆಯಾಗಬೇಕೆಂಬ ನಿಶ್ಚಯಕ್ಕೆ ಬಂದ ಮೇಲೆಯೇ ಬದಲಾಗಿದ್ದು.

ಟವಲನ್ನು ಛೇರ್‌ನ ಹಿಂಭಾಗಕ್ಕೆ ಹಾಕಿ ಕೂತ "ಅಮ್ಮ, ಒಂದಿಷ್ಟು ಅನ್ನ ಕಲ್ಸಿಕೊಡು. ಯಾಕೋ ಹೊಟ್ಟೆ ಹಸಿವು" ಹೊರಗೆ ಏನೂ ತಿನ್ನುವ ಅಭ್ಯಾಸ ಅವನಿಗಿರಲಿಲ್ಲ ಅವನ ಊಟ, ತಿಂಡಿಗಳ ಪೂರೈಕೆಯೆಲ್ಲ ಮನೆಯಲ್ಲೇ. ಬದುಕಿನ ಬಗ್ಗೆ ನೀತಿ ನಿಯಮ ಪಾಲಿಸಿಕೊಂಡು ಬಂದ ವ್ಯಕ್ತಿ.

"ಮೊದ್ಲೇ ಹೇಳಿದ್ರೆ....ತಿಂಡಿ ಮಾಡ್ತಾ ಇದ್ದೆ" ಮುಜುಗರದಿಂದ ಆಕೆ ಅಡಿಗೆ ಮನೆಗೆ ಹೋದಾಗ ಟೇಬಲ್ ಮೇಲೆ ತಾಳ ಹಾಕತೊಡಗಿದ. ಕೆಲವು ವಿಷಯಗಳಲ್ಲಿ ಎಷ್ಟು ಸೀರಿಯಸ್ಸಾಗಿರುತ್ತಿದ್ದನೋ, ಮಿಕ್ಕ ವಿಷಯಗಳಲ್ಲಿ ಹುಡುಗುತನ.

ಬಾಗಿಲಿನ ಸದ್ದು ಕೇಳಿದಾಗ ಪಕ್ಕದ ಮನೆಯ ಪುಟ್ಟ ಶಾರದೆಯ ನೆನಪಾಯಿತು. "ಯೆಸ್ ಕಮಿನ್" ಎಂದ. ಅವನ ಬೆರಳುಗಳೇನೂ ಸ್ತಬ್ಧವಾಗಲಿಲ್ಲ. ಅದಕ್ಕೆ ಸ್ವರ ಕೂಡಿಸಿ ಹಾಡತೊಡಗಿದ. ಯಾರ ಸುಳಿವೂ ಇಲ್ಲ.

"ಯೆಸ್ ಕಮಿನ್... ಬೇಬಿ" ಹಾಲ್‌ನಲ್ಲಿ ನಿಂತ ರಜನಿ ಕೆಂಪು ಕೆಂಪಾದಳು. ಅವಳ ಮೈಯಲ್ಲಿ ನವಿರಾದ ಕಂಪನ. "ನಾನು...." ಉಗುಳು ನುಂಗಿದಳು. ವಿಕಾಸ್‌ನ ನೋಟ ಇತ್ತ ಹರಿಯಿತು. ಆಗ ಅವನಿಗೆ ನೆನಪಾದದ್ದು ಪಂಕಜಮ್ಮ. 'ಬೋಲ್ಡ್‌ಲೇಡಿ' ಕೆಲವರು ಹೇಳುವ ಮಾತು. ಅವನ ತುಟಿಯಂಚಿನಲ್ಲಿ ಕಿರುನಗು ಹಾದುಹೋಯಿತು.

"ಬಾ... ರಜನಿ" ಕರೆದವನು ಛೇರ್‌ನತ್ತ ಕೈ ತೋರಿದ. ರಜನಿಯ ಕತ್ತು ಮತ್ತಷ್ಟು ಬಗ್ಗಿದರೂ ಕಳ್ಳನೋಟ ಅವನತ್ತ ಇತ್ತು. "ಪೂರ್ತಿನೇ ನೋಡ್ಕೊಡ್ದು. ಯಾರದೇನೂ ಆಕ್ಷೇಪಣೆ ಇಲ್ಲ" ಎಂದ ವಿಕಾಸ್. ಹೂ ಅರಳಿದಂತೆ ನಕ್ಕುಬಿಟ್ಟಳು.

ತಟ್ಟೆ ಹಿಡಿದು ಬಂದ ಸುನಂದಮ್ಮನ ಕಣ್ಣುಗಳಲ್ಲಿ ಸಂಭ್ರಮವಿತ್ತು. ಮಗನ ಬದುಕು ಸುಂದರ ಕಾವ್ಯವಾಗಬೇಕೆಂದು ಆಕೆಗೆ ಇಷ್ಟ.

"ಬೇರೆ ಏನಾದ್ರೂ ತಿಂಡಿ ಮಾಡ್ತೀನಿ" ಎಂದಾಗ ತಾಯಿಯ ಕೈಯಲ್ಲಿನ

ತಟ್ಟೆ ಕಿತ್ತುಕೊಂಡ. "ತಿಂಡಿ ಆಗೋವರ್ಗ್ಗೂ ಕಾಯೋಕೆ ನನ್ನ ಹೊಟ್ಟೆ ಸಮ್ಮತಿಸೋಲ್ಲ ! ರಜನಿಗೆ ಬೇರೆ ತಂದ್ಕೊಡು" ಮಗನ ಮಾತಿಗೆ ಆಕೆ ತುಟಿ ಅರಳಿಸಿದರು.

ರಜನಿ ಸಂಕೋಚಿಸಿದಳು, ಅವಳು ಪಟ್ಟಾಗಿ ತಿಂಡಿಯೊಡೆದು ಬಂದಿದ್ದಳು. ಈಗ ಹೊಟ್ಟೆ ತುಂಬಿಸೋದು ಪ್ರಯಾಸವೇ !

ಅವನತ್ತ ತಿರುಗದೇ ಮೆಲ್ಲಗೆ ಉಸುರಿದಳು "ನಾನು ತಿಂಡಿ ತಿಂದು ಬಂದಿದ್ದೆ." ಅವಳ ಮಾತಿನತ್ತ ಗಮನ ಕೊಡದೇ ತಿಂದು ಮುಗಿಸಿ ಮೇಲೆದ್ದ. ಸಹಜ ಸ್ವಭಾವಕ್ಕೆ ಅವನೆಂದೂ ಸೋಗು ಹಚ್ಚಲಾರ. ಅದನ್ನು ಅವಳಿಗೆ ತಿಳಿಸಿಯೇ ಒಪ್ಪಿಗೆ ಪಡೆದಿದ್ದ.

ಆದರೆ ಸುನಂದಮ್ಮನ ಮನ ಒಪ್ಪಬೇಕಲ್ಲ ! ಭಾವೀ ಸೊಸೆಯನ್ನು ಮುಂದೆ ಕೂಡಿಸಿಕೊಂಡೇ ಒಂದಿಷ್ಟು ಉಪ್ಪಿಟ್ಟು, ಕೇಸರಿಭಾತ್ ಮಾಡಿದರು. ಆಗ ಆಕೆ ಮಾತಾಡುತ್ತಿದ್ದರೆ ರಜನಿ ಮೌನವಾಗಿ ಕೇಳುತ್ತಿದ್ದಳು. ಮನ ಮಾತ್ರ ವಿಕಾಸ್‌ನ ಬಳಿ ಇತ್ತು.

ಒಂದು ತಟ್ಟೆಗೆ ಹಾಕಿ ಅವಳ ಮುಂದಿಟ್ಟರು. ಅವಳ ಕೈ ಮುಂದಾಗಲಿಲ್ಲ. ಅರ್ಥಮಾಡಿಕೊಂಡರು ಆಕೆ "ಅವನಿನ್ನ ತಿನ್ನೋದಿಲ್ಲ. ಕೆಲವು ನಿಯಮಗಳ ಕಟ್ಟಾ ಪಾಲಕ. ಅವನು ಬೆಳಸಿಕೊಂಡ ಅವನ ವ್ಯಕ್ತಿತ್ವದ ಬಗ್ಗೆ ಅವನಿಗೆ ಅಭಿಮಾನ ಜಾಸ್ತಿ" ಮಗನ ಬಗ್ಗೆ ಮೆಚ್ಚಿಗೆಯಿಂದ ಹೇಳಿಕೊಂಡರು. ಅವನನ್ನು ಕೂಗಿದರು.

ಬಾಗಿಲಿಗೆ ಬಂದ ಮಗನನ್ನು ನೋಡಿದರು. "ನೀನು ಸ್ವಲ್ಪ ತಗೋ ..." ತಲೆ ಅಡ್ಡಡ್ಡ ಆಡಿಸಿದ. ಬುದ್ಧಿಮತ್ತೆಯಿಂದ ತೂಗುವ ಕಣ್ಣುಗಳಲ್ಲಿದ್ದಿದ್ದು ದೃಢತೆ "ರಜನಿ ಒಬ್ಳೇ ತಿನ್ನೋಕೆ ಸಂಕೋಚಪಡ್ತಾಳೆ" ಎಂದವರೇ ಹೊರಗೆ ಬಂದರು.

ಮಣೆ ಎಳೆದುಕೊಂಡು ಅಲ್ಲಿಯೇ ಕೂತ. ಬಾಡಿದ ಮುಖವನ್ನು ಬೊಗಸೆಯಲ್ಲಿಡಿದು ಮುಖದ ಮೇಲೆಲ್ಲ ಮುತ್ತಿನ ಮಳೆಗರೆಯಬೇಕೆಂಬ ಆದಮ್ಯ ಬಯಕೆ—'ಈಗ ಅದಕ್ಕೆ ಸಮಯವಲ್ಲ' ಲಕ್ಷ್ಮಣ ರೇಖೆ.

"ತಗೋ ರಜನಿ ಪಟ್ಟಾಗಿ ಹೊಡೆದದ್ದರಿಂದ ಇನ್ನು ಹೊಟ್ಟೆಯಲ್ಲಿ ಭಾಗವಿಲ್ಲ. ಅದಕ್ಕೆ ಅನಾವಶ್ಯಕವಾಗಿ ಹಿಂಸೆ ಕೊಡೋ ಅಭ್ಯಾಸವಿಲ್ಲ" ಅರ್ಥ

ಗರ್ಭಿತವಾಗಿ ಹೇಳಿದಾಗ ರಜನಿ ಮುಂದಿದ್ದ ತಟ್ಟೆಯನ್ನು ಸ್ವಲ್ಪ ಪಕ್ಕಕ್ಕೆ ಸರಿಸಿದಳು. "ನಂಗೆ....ಬೇಡ" ನಸುಮುನಿಸು ಆ ಕ್ಷಣ ಮಧುರವೆನಿಸಿತು. "ಬರೀ ನಟನೆ ! ನೀನು ತಿಂತೀಯಾ ! ಬೇಗ ಮುಗ್ಸದಿದ್ರೆ ಹೊರ್ಗಡೆಯ ಪ್ರೋಗ್ರಾಂ ಕ್ಯಾನ್ಸಲ್" ತಟ್ಟನೇ ನೋಟವೆತ್ತಿದಳು. ಕಣ್ಸೆರೆ ಹಿಡಿದು ನಕ್ಕ.

"ಅಮ್ಮ ಅಷ್ಟೊಂದು ಪ್ರೀತಿಯಿಂದ ಮಾಡಿದ್ದಾಳೆ. ಬೇಡಾಂದ್ರೆ ಹೇಗೆ? ಮಾಡೋವಾಗ್ಲೇ ನಿಂಗೆ ತಡೆಯೋ ಅವಕಾಶವಿತ್ತು. ಈಗ ನೋಯಿಸೋದ್ಬೇಡ. ಒಂದ್ನಾಲ್ಕು ಸ್ಪೂನ್ ತಿಂದ್ಬಿಡು. ನಮ್ಮ ಬದ್ಕು ನಮ್ದೇ ಆದ್ರೂ.... ಸುತ್ತಲೂ ಅಂಟಿಕೊಂಡ ಮಧುರವಾದ ಸಂಬಂಧಗಳಿವೆ" ಒತ್ತಾಯಿಸಿದ. ಅವನು ಗಂಭೀರವಾಗಿ ಮಾತಾಡುವಾಗ ವಿಕಾಸ್‌ನ ಮುಖವನ್ನೇ ಕೂತು ನೋಡಬೇಕೆನಿಸುತ್ತಿತ್ತೇ ವಿನಃ ಅಳಕ್ಕಿಳಿದು ಅರ್ಥೈಯಿಸಿಕೊಳ್ಳಲು ಹೋಗುತ್ತಿರಲಿಲ್ಲ ರಜನಿ.

ವಿಕಾಸ್ ತಂದೆಯ ದನಿ ಕೇಳಿ ಹೊರಗೆದ್ದು ಬಂದ. ಆತ ಸ್ಥೂಲದೇಹಿಯಾದರೂ ಚಟುವಟಿಕೆಯ ವ್ಯಕ್ತಿ. ಇಂದು ತುಂಬ ಬೆವತುಬಿಟ್ಟಿದ್ದರು. ಫ್ಯಾನ್‌ನ ಕೆಳಗೆ ಕೂತು ದಣಿವಾರಿಸಿಕೊಳ್ಳುತ್ತಿದ್ದವರು ಮಗನ ಕಡೆ ನೋಡಿದರು.

"ಛತ್ರಕ್ಕೋಸ್ಕರ ಹೋಗಿದ್ದೆ. ವಿಚಿತ್ರ ಜನ ! ಇಂಥ ತಕರಾರುಗಳು ನಮ್ಮಿಂದ ಪ್ರಾರಂಭವಾಗ್ಬೇಕಿತ್ತು. ಆಗ್ಲಿಲ್ಲ. ಅವ್ರೇ ಷುರು ಮಾಡ್ಕೊಂಡಿದ್ದಾರೆ. ಆ ಛತ್ರ ಚಿಕ್ಕು, ಇನ್ನೊಂದು ಛತ್ರದ ಸುತ್ತಮುತ್ತಲಿನ ಪರಿಸರ ಚೆನ್ನಿಲ್ಲ. ಮತ್ತೊಂದು ತಮ್ಮ ಡಿಗ್ನಿಟಿಗೆ ಕಮ್ಮಿ. ಒಂದಾ, ಎರಡಾ ...ತಲೆ ಚಿಟ್ಟುಹಿಡ್ದುಹೋಯ್ತು" ತಲೆಯ ಮೇಲೆ ಕೈಯೊತ್ತರು. ವಿಶ್ವನಾಥಯ್ಯನವರು ಭಾವಿ ಬೀಗರ ಮಾತು, ನಡವಳಿಕೆಯಿಂದ ಜಿಗುಪ್ಸೆಗೊಂಡುಬಿಟ್ಟಿದ್ದರು. 'ಇಂಥ ಪ್ರಸಕ್ತಿಯನ್ನ ತಾವಾಗಿ ತಂದುಕೊಂಡಿದ್ದ ?' ಯೋಚಿಸುವ ಮಟ್ಟಕ್ಕೆ ಹೋಗಿದ್ದರು.

ಸುನಂದಮ್ಮ ಆತಂಕದಿಂದ ಗಂಡನಿಗೆ ಸನ್ನೆ ಮಾಡಿದರು. "ಆ ಹುಡ್ಗೀ ಬಂದಿದ್ದಾಳೆ" ವಿಶ್ವನಾಥಯ್ಯನವರ ಬಾಯಿಗೆ ಬೀಗ ಬಿತ್ತು. ಮಗನ ಮದುವೆಯ ಬಗೆಗಿನ ಉತ್ಸಾಹ ಅರ್ಧದಷ್ಟು ಕಡಿಮೆಯಾಗಿತ್ತು ಆ ಜನರಿಂದ.

"ಛತ್ರ ಹುಡ್ಗೀ....ಮದ್ವೆ ನಿಶ್ಚಯ ಮಾಡೋ ಕಾಲ. ಯಾರ್ಗೂ ತಪ್ಪಿ

ದ್ದಲ್ಲ ಪರದಾಟ" ಸುನಂದಮ್ಮ ಹಗುರವಾಗಿ ತೇಲಿಸಿದರು. ಆಕೆಯಲ್ಲು ಮೊದಲಿನ ಉತ್ಸಾಹ ಉಳಿದಿರಲಿಲ್ಲ.

ವಿಕಾಸ್‌ನ ಹುಬ್ಬುಗಳು ಬಿಗಿದುಕೊಂಡವು. "ಅದೆಲ್ಲ ತಾನಾಗಿ ಮಾಡಿಕೊಳ್ಳೋದು. ಛತ್ರ ಸಿಕ್ಕದಿದ್ರೆ ಬೇಡ. ಯಾವುದಾದ್ರೂ ದೇವಸ್ಥಾನ ಆಯ್ತು. ಅಥ್ವಾ ಅವ್ರ ಮನೆಯಲ್ಲೇ ಮಾಡಿಕೊಟ್ಟಿದ್ರೆ ಆಗಿತ್ತು. ಬರೀ ಆಡಂಬರ. ಮಗಳ ಬದ್ಕು ಹಸನಾಗಿ ಇರ್ಬೇಕೂ ಅನ್ನೋಕ್ಕಿಂತ ಈ ಮದ್ವೆಯಿಂದ *ಸೊಸೈಟಿಯಲ್ಲಿ ತಮ್ಮ ಗೌರವ, ಘನತೆ ಎಷ್ಟು ಹೆಚ್ಚಾಯ್ತುಂತ ಯೋಚ್ಸೋ* ಜನ" ರೇಗಿದ. ರಜನಿಯ ಕೈಯಲ್ಲಿನ ಸಜ್ಜಿಗೆಯ ಸ್ಪೂನ್ ಕೆಳಗೆ ಬಿತ್ತು. ಕೆಲವೊಮ್ಮೆ ಅವರುಗಳು ಅವಳಿಗೆ ಅರ್ಥವಾಗದವರು.

ಮಗನನ್ನು ಸುನಂದಮ್ಮ ಕಣ್ಣಲ್ಲಿಯೇ ಗದರಿದರು. ವಿಕಾಸ್ ತೆಪ್ಪಗೆ ಕೋಣೆಗೆ ಹೋದ. ಬದುಕಿದ ಬಗ್ಗೆ ಒಂದು ನಿಲುವನ್ನು ಇಟ್ಟುಕೊಂಡವನು. ಸೋಫಾಗೆ ಒರಗಿ ಕಣ್ಮುಚ್ಚಿದ.

ಸದ್ದಾದರೂ ಕಣ್ಣು ತೆರೆಯಲಿಲ್ಲ. ಸುಂದರ ವನದಲ್ಲಿ ವಿಹರಿಸುವ ವ್ಯಕ್ತಿಗೆ ಮಧ್ಯೆ ಮಧ್ಯೆ ಕ್ರೂರ ಪ್ರಾಣಿಗಳ ಆರ್ಭಟೆ. ಅವುಗಳ ಕರ್ಕಶ ಅಬ್ಬರದಲ್ಲಿ ಸವಿಯಬಹುದಾದ ಕ್ಷಣಗಳು ಕಠೋರವಾಗಿದ್ದವು.

ನಿಂತ ರಜನಿ ದೀರ್ಘವಾಗಿ ಅವನತ್ತ ನೋಡಿದಳು. ವಿಕಾಸ್‌ನಲ್ಲಿ ಏನೋ ಪ್ರತ್ಯೇಕತೆ ಇದೆ. ಅದನ್ನು ಸ್ಪಷ್ಟವಾಗಿ ತಿಳಿಯದಿದ್ದರೂ ಅಂತಹ ಅರಿವು ಅವಳಲ್ಲಿತ್ತು. ಅದೇನೆಂದು ಸ್ಪಷ್ಟವಾಗಿ ವಿವರಿಸಲಾರಳು.

"ಹ್ಯಾವ್ ಎ ಲಿಟಲ್ ಪೇಷನ್ಸ್" ಎಂದಾಗ ಹುಬ್ಬೆತ್ತಿ ನಕ್ಕ. ಆ ನಗುವಿನಲ್ಲಿ ಜಗವನ್ನು ಜಯಿಸುವ ಕೆಚ್ಚು ಇತ್ತು. ಅವಳ ನೋಟ ಅಚಲವಾಯಿತು. ಮಾರ್ದವತೆ ಚಿಮ್ಮಿತು. "ಪ್ಲೀಸ್ ಬಿ ಸೀಟೆಡ್" ಕೈ ಕೈ ಹೊಸೆದು ಮೈ ಮುರಿದ. ಹರವಾದ ಎದೆಯಲ್ಲಿ, ಬಲಿಷ್ಠ ತೋಳುಗಳ ನಡುವೆ ಹುದುಗಿಹೋಗಬೇಕೆನಿಸಿತು ಅವಳಿಗೆ.

'ಫಾರ್ವರ್ಡ್' ಎನಿಸಿಕೊಂಡ ಕುಟುಂಬದಲ್ಲಿ ಹುಟ್ಟಿ ಬೆಳೆದವಳು. ಆದರೂ ವಿಕಾಸ್ ನೇರ, ಧೀಮಂತ, ಮಾರ್ದವತೆ ಬೆರೆತ ತೀಕ್ಷ್ಣ ನೋಟದಿಂದ ಅವಳ ನೋಟ ತಪ್ಪಿಸಿಕೊಳ್ಳಲು ಹೆಣಗಾಡಿತು.

"ತಿಂಡಿ ಸೇರ್ಲಿಲ್ವಾ ?" ಮೆಲ್ಲಗೆ ಪ್ರಶ್ನಿಸಿದ. ಅವಳ ತುಂಬು ಮುಖದ

ಗೆಲುವು ಹಾರಿಹೋಯಿತು. ಕಂಬನಿ ಕೆನ್ನೆಯ ಮೇಲೆ ಬಂತು. "ಇದ್ಕ ಯಾವ ಬಾಷ್ಪ ಅಂದ್ಕೊಳ್ಳೋದು ?" ತೋರು ಬೆರಳಿನಿಂದ ತೊಡೆದ.

ಕಣ್ಣುಗಳಲ್ಲಿ ನುಸುಳುವ ದ್ವಂದ್ವವನ್ನು ನೋಡಿ ಕೆಲವೊಮ್ಮೆ ವಿಕಾಸ್ ಚಿಂತಿತನಾಗುತ್ತಿದ್ದ. ಸ್ವಂತ ಯೋಚನೆಯಿಂದ ದೃಢ ನಿಲುವಿಗೆ ಬರುವ ಮನಸ್ಥಿತಿ ಇವಳದೇ ? ಅದರ ಹಿಂದೆ ರಜನಿಯ ಕುಟುಂಬದ ಸದಸ್ಯರೆಲ್ಲ ನೆನಪಿಗೆ ಬರುತ್ತಿದ್ದರು. ಬಿರುಗಾಳಿಯ ಮಧ್ಯೆ ತೇಲುವ ತರಗೆಲೆಗಳು. ಎಲ್ಲಿಗೆ ಬೇಕಾದರೂ ಸೇರಬಹುದು. ಅಂಥ ಕಡೆಯಿಂದ ರಜನಿಯನ್ನು ಹೆಕ್ಕಿದಂತಾಗಿತ್ತು. ಈಗ ಉಳಿಸಿಕೊಳ್ಳಬೇಕಷ್ಟೆ.

ಮದುವೆ ನಿಶ್ಚಯವಾದ ಮೇಲೆ ರಜನಿ ನಾಲ್ಕಾರು ಸಲ ಬಂದಿದ್ದಳು. ಅವಳು ಬೆಳೆದ ರೀತಿ ಬೇರೆಯಾದರೂ ಸ್ವಲ್ಪ ಭಿನ್ನ. ಸಂಕೋಚ, ನಾಚಿಕೆ, ಲಜ್ಜೆ—ಇವೆಲ್ಲಾ ಇದ್ದುದರಿಂದಲೇ ಒಂದು ರೀತಿಯ ಪ್ರತ್ಯೇಕತೆ. ಅದೇ ಅವನ ಮನವನ್ನು ಲೂಟಿ ಮಾಡಿರಬೇಕು.

"ನಿಂಗೆ ಯಾರ ಪುಸ್ತಕ ಇಷ್ಟ ?" ಗಂಭೀರತೆಗೆ ಬಯ್ಯುವಂತೆ ಪ್ರಶ್ನಿಸಿದಾಗ ಅವಳ ಮುಖದ ಮೇಲೆ ನಸು ಮುನಿಸು ಇಣಕಿತು. "ನಾನು ಲೈಬ್ರರಿ ಅಂದ್ಕೊಂಡ್ ಬರ್ಲಿಲ್ಲ."

ವಿಕಾಸ್ ಹಗುರವಾಗಿ ನಕ್ಕು ಮೇಲೆದ್ದ. ಇದು ಅವನಿಗೆ ಹೊಸದಲ್ಲ. ಹೆಚ್ಚು ವಿದ್ಯಾರ್ಥಿನಿಯರಿದ್ದ ಕಾಲೇಜಿನಲ್ಲಿ ಅವನು ಅಧ್ಯಾಪಕ. ಅದರಲ್ಲಿ ಹೆಚ್ಚು ಕನಸುಗಣ್ಣಿನ ಲಲನೆಯರಾದರೇ, ಇನ್ನು ಮಿಕ್ಕವರಲ್ಲಿ ಕೆಲವರು ತೀರಾ ದಿಟ್ಟೆಯರು.

ಬದುಕನ್ನ ಸೀರಿಯಸ್ಸಾಗಿ ತೆಗೆದುಕೊಂಡವರು ಒಂದಿಬ್ಬರು ಮಾತ್ರ. ಇದರಲ್ಲಿ ರಜನಿ ಯಾವ ವರ್ಗಕ್ಕೆ ಸೇರಬಹುದು ? ಮೂರರ ಮಿಶ್ರಣವೇ ? ಅವನಿಗೆ ನಗು ಬಂತು. ತೀರಾ ಸೆನ್ಸಿಟಿವ್ ಆಗಿಬಿಡುವ ಹೆಣ್ಣುಗಳ ಬಗ್ಗೆ ಅವನಿಗೆ ಸಹಾನುಭೂತಿ.

ರಜನಿ ಹೊರಗೆದ್ದು ಹೋದಳು. ಮದುವೆಗೆ ಮುನ್ನಿನ ಓಡಾಟ, ನೆಗೆದಾಟ ಅವನಿಗಿಷ್ಟವಿಲ್ಲ. ಇದನ್ನು ಅವಳ ಮುಂದೆ ಹೇಳುವುದು ಹೇಗೆ ? ಗಳಿಗೆ ಗಳಿಗೆಗೂ ಬದಲಾಗುತ್ತಿರುವ ಅವಳಪ್ಪ, ಅಮ್ಮನ ದೆಸೆಯಿಂದ ಮದುವೆ ಕೊನೆಯ ಗಳಿಗೆಯಲ್ಲು ನಿಲ್ಲಬಹುದು. ಆಗ ರಜನಿಯ ಜೀವನಕ್ಕೆ ಇದೊಂದು

ಹೊಡೆತ ! ಅಷ್ಟಕ್ಕೆ ಅವಕಾಶ ಕೊಡಬಾರದು. ಇದು ಅವನ ಅನಿಸಿಕೆ. ಹೇಗೆ ಅರ್ಥವಾಗುವಂತೆ ಅವಳಿಗೆ ವಿವರಿಸಬಲ್ಲ ? ಸಂದಿಗ್ಧವೆನಿಸಿತು.

ಸುನಂದಮ್ಮ ಭಾವಿ ಸೊಸೆಯನ್ನು ಹತ್ತಿರ ಕೂಡಿಸಿಕೊಂಡು ಸಂಭ್ರಮ ದಿಂದ ಮಾತಾಡುತ್ತಿದ್ದರು. ಇನ್ನು ಕೆಲವು ದಿನಗಳಲ್ಲಿ ನಗು ನಗುತ್ತಾ ಮನೆಯ ತುಂಬ ಓಡಾಡುವ ಸುಂದರ ಕನಸು.

ಆಕೆ ಅವಳ ಜಡೆಯ ಕಡೆ ನೋಡಿದರು. "ಅಳ್ಳಕವಾಗಿ ಜಡೆ ಹಾಕಿದ್ರೇನೇ....ನಿಂಗೆ ಚೆನ್ನಾಗಿ ಕಾಣುತ್ತೆ." ರಜನಿ ತನ್ನ ಮೊಂಡು ಜಡೆಯನ್ನು ಮುಟ್ಟಿ ನೋಡಿಕೊಂಡಳು. ಕ್ರಾಪ್, ನಂತರದ ಬಾಬ್, ಈಗ ಒಂದಿಷ್ಟು ಕೂದಲು ಬೆಳೆಯಲು ಬಿಟ್ಟಿದ್ದಳು. ಕತ್ತಿಗಿಂತ ಸ್ವಲ್ಪ ಕೆಳಗಿತ್ತು. ಬಿಚ್ಚು *ಗೂದಲಾಗಿ ಬೆನ್ನ ತುಂಬ ಹರಡಿಕೊಂಡಿರುತ್ತಿದ್ದುದು ಇಲ್ಲಿಗೆ ಬಂದಾಗ ಜಡೆ* ಆಗುತ್ತಿತ್ತು.

"ಉದ್ದ ಕೂದ್ಲು ಮಮ್ಮಿ ಇಷ್ಟಪಡೋಲ್ಲ. ಅವೆಲ್ಲ ಓಲ್ಡ್ ಅಂತಾರೆ, ನಾನೇ ಗಲಾಟೆ ಮಾಡಿ ಇಷ್ಟು ಬೆಳೆಯೋಕೆ ಬಿಟ್ಟಿದ್ದು" ಮತ್ತೊಮ್ಮೆ ತನ್ನ ಮೊಂಡು ಜಡೆಯ ಮೇಲೆ ಕೈಯಾಡಿಸಿಕೊಂಡಳು. ನಸುನಕ್ಕರು ಸುನಂದಮ್ಮ.

"ಇಲ್ಲಿಗೆ ಬಂದ್ಮೇಲೆ ನಿಂಗೆ ಹೇಗೆ ಬೇಕೋ ಹಾಗೆ ಇದ್ಕೋ. ವಾರಕ್ಕೆರಡು ಸಲ ಎಣ್ಣೆ ಹಚ್ಚಿ ಎರೀತೀನಿ. ಕೂದ್ಲು ಉದ್ದವಾಗಿ ಬೆಳೆಯುತ್ತೆ." ಆಕೆಯ ಸ್ವರದಲ್ಲಿ ಅಕ್ಕರೆ ಇತ್ತು. ವಿಕಾಸ್ ಚಾವಣಿಯತ್ತ ನೋಡಿ ನಿಟ್ಟುಸಿರು ಬಿಟ್ಟ. ಅವನಿಗೆ ಎಲ್ಲೋ ತಪ್ಪಿದ ಅನುಭವ !

ಮೊದಲಿನಿಂದಲೂ ವಿಕಾಸ್‌ಗೆ ಪ್ರೇಮ ವಿವಾಹಗಳ ಬಗ್ಗೆ ಒಲವಿಲ್ಲ. ಅವನ ಸ್ಫುರದ್ರೂಪ, ಬುದ್ಧಿವಂತಿಕೆಗಳ ಬಗ್ಗೆ ಆಕರ್ಷಿತರಾದ ಹೆಣ್ಣುಗಳೆಷ್ಟೋ.

"ಸ್ನೇಹವಾಗಿರಲು ಅಡ್ಡಿ ಇಲ್ಲ. ಹೆಣ್ಣು, ಗಂಡು ಶುದ್ಧ ಮಿತ್ರತ್ವಕ್ಕೆ ಪ್ರೇಮ, ಪ್ರಣಯದ ಕಟ್ಟು ಬೇಡ. ಸರಳವಾದ ಸ್ನೇಹದಿಂದ ಹೆಣ್ಣು, ಗಂಡಿನ ತೀವ್ರತರ ಭಾವನೆಗಳು ಬದಲಾಗಬಹುದು. ಆಗ ಸಮಾಜದ ವಕ್ರ ದೃಷ್ಟಿನೂ ಬದಲಾಗುತ್ತೆ. ಒಂದು ಹೆಣ್ಣು ಗಂಡು ಒಟ್ಟಿಗೆ ಕಲೆತು ಓಡಾಡಿದಾಗ 'ಪ್ರಣಯ' ಅನ್ನದೆ ಬೇರೆ ದೃಷ್ಟಿಯಲ್ಲಿ ನೋಡುವ ದಿನಗಳು ಬರ್ಬೇಕು. ಒಳಗೆ ಕೂತ ಹೆಣ್ಣು ಈಗ ಹೊರಗೆ ಬಂದು ದುಡಿಯುತ್ತಿದ್ದಾಳೆ. ಅಂತಹ

ಸಾಮರಸ್ಯದ ಬದ್ಕು ಸಿಗದಿದ್ರೆ .... ಅವ್ರ ಬದ್ಕು ತೀರಾ ಅಂಧಕಾರವಾಗಿ ಬಿಡುತ್ತೆ"

ಕೆಲವರು ನಕ್ಕಿದ್ದರು. ಮಿಕ್ಕವರು ತಲೆದೂಗಿದ್ದರು. ಆದರೆ ಪ್ರಾಮಾಣಿಕವಾಗಿ ಯಾರೂ ನಿಂತು ಅವನ ಮಾತುಗಳನ್ನು ವಿರೋಧಿಸಲು ಸಾಧ್ಯವಿರಲಿಲ್ಲ. ಅವನು ಲಿಂಗಭೇದ ತೋರದೆ ಎಲ್ಲರೊಡನೆಯೂ ಸ್ವಚ್ಛವಾಗಿ ನಡೆದುಕೊಳ್ಳುತ್ತಿದ್ದ.

ಹೊರಟು ನಿಂತಾಗ ರಜನಿಗೆ ಅವನು ಜೊತೆಯಾದ. ಅದು ಅನಿವಾರ್ಯ ಕೂಡ.

"ರಜನಿನ ಮನೆಗೆ ಬಿಟ್ಟು ಬಂದ್ಬಿಡ್ತೀನಿ" ಪರ್ಸನ್ನ ಪ್ಯಾಂಟ್ ಜೇಬಿಗೆ ಸೇರಿಸಿದ. ಗೆಲುವಿನ ನಗೆ ರಜನಿಯ ತುಟಿಗಳ ಮೇಲೆ ಮಿನುಗಿತು. "ಹಾಗೆ ಬರೋವಾಗ ಒಂದಿಷ್ಟು ತರಕಾರಿ ಹಿಡ್ದು ಬಾ" ಸುನಂದಮ್ಮ ಸಂತೋಷ ಗೊಂಡರು. ಎಲ್ಲಕ್ಕಿಂತ ಅವರಿಗೆ ಮಗನ ನೆಮ್ಮದಿ ಮುಖ್ಯ.

ಇಬ್ಬರು ತಿರುವಿಗೆ ಬಂದಾಗ ವಿಕಾಸ್ ನಿಂತು ಹಿಂದಕ್ಕೆ ತಿರುಗಿದ. ಸುನಂದಮ್ಮ, ವಿಶ್ವನಾಥಯ್ಯ ಹೊರಗೆ ನಿಂತಿದ್ದರು. ಆ ಹೃದಯಗಳ ಹರ್ಷ ಅವನೆದೆ ತಲುಪಿದಾಗ ರಜನಿಯತ್ತ ನೋಡಿದ.

"ನೋಡಿದ್ಯಾ, ರಜನಿ ಅವ್ರಿಗೆ ಬರೋ ಸೊಸೆಯ ಬಗ್ಗೆ ಎಷ್ಟೊಂದು ಪ್ರೇಮ, ಅಕ್ಕರೆ. ನಾವು ಸಂತೋಷವಾಗಿರೋದು ಅವ್ರಿಗೆ ಇಷ್ಟ. ಅದ್ನ ನಾವು ಅರ್ಥ ಮಾಡ್ಕೋಬೇಕು" ಅರ್ಥಗರ್ಭಿತವಾಗಿ ಹೇಳಿದ.

"ನನ್ನಂಡ್ರೆ ಅವ್ರಿಗೆ ತುಂಬ ಪ್ರೀತಿ" ರಜನಿಗಿಂತ ಸ್ವರದಲ್ಲಿ ಮುಗ್ಧತೆ ಇಣುಕಿತು. ಅವನ ಹಣೆ ನೆರಿಗೆಗಟ್ಟಿತು. ಮನ ಅನುಮಾನಿಸಿತು. "ಯಾವಾಗ್ಲೂ ಈ ಮಾತನ್ನು ನಿನ್ನ ಹೃದಯದಲ್ಲಿ ಬರೆದಿಡು" ಒತ್ತಿ ಹೇಳಿದ. ರಜನಿಯ ಅಪ್ಪ, ಅಮ್ಮನ ಬಗ್ಗೆ ಅವನು ಸಂಶಯಿತನಾಗಿದ್ದ. ತಮ್ಮ ಫಾಲ್ಸ್ ಪ್ರೆಸ್ಟೀಜ್‌ಗಾಗಿ ಎಲ್ಲಿ ಇಡೀ ಕುಟುಂಬವನ್ನು ಬಲಿಕೊಟ್ಟುಬಿಡ್ತಾರೋ !

ಇಬ್ಬರು ನಿಧಾನವಾಗಿ ಹೆಜ್ಜೆ ಹಾಕಿದರು. ಅರೆ ಮನಸ್ಸಿನಿಂದಲೇ ವಿಕಾಸ್ ಪ್ರಸ್ತಾಪಿಸಿದ.

"ದೊಡ್ಡ ಛತ್ರನೇ ಯಾಕೆ ಬೇಕು ? ಸರಳವಾಗಿ ಮನ್ವೆನ ದೇವಸ್ಥಾನ, ಅಥ್ವಾ ನಿಮ್ಮ ಮನೆಯಲ್ಲೇ ಮಾಡಿಕೊಟ್ರೆ ಸಾಕು. ಈ ಪರದಾಟ, ಆಡಂಬರ

ಎಲ್ಲಾ ಯಾಕೆ ? ಇಷ್ಟ ಯಂಗ್ ಪೀಪಲ್ಸ್ ವಿರೋಧಿಸ್ಬೇಕು. ಮೊದ್ಲು ನಿಮ್ಮಂಥ ಕಲಿತ ಯುವತಿಯರು ಮಾಡ್ಬೇಕು" ದನಿಯೇರಿಸದೇ ಮೃದುವಾಗೀ ಹೇಳಿದ. ಅವಳಿಗೆ ಚಪ್ಪಾಳೆ ತಟ್ಟಬೇಕೆನಿಸಿತು. ಆದರೆ ಅವನ ಸೀರಿಯಸ್ ನೆಸ್ ನೋಡಿ ಧೈರ್ಯವಾಗಲಿಲ್ಲ.

ಕ್ಷಣ ಸುಮ್ಮನಿದ್ದ ರಜನಿ ಬಾಯಿ ತೆರೆದಳು "ಮಮ್ಮಿನು ... ಹಾಗೇ ! ಬಾಷಣದಲ್ಲಿ ಇಪ್ಪತ್ನಾಲ್ಕು ಹೇಳ್ತಾಳೆ ; ಒಂದೂ ಅನುಸರಿಸೋಕೆ ಬಿಡೋಲ್ಲ ಏನಾದ್ರೂ ಮಾಡ್ಕೊಳ್ಳಿ ಬಿಡಿ. ಛತ್ರಕ್ಕಾಗಿ ಪರದಾಡೋ ಜನ ಅವ್ರುಗಳು ತಾನೇ" ಉದಾಸೀನ ಇಣುಕಿತು. ಆಳವಾಗಿ, ಗಂಭೀರವಾಗಿ ಚಿಂತಿಸಲಾರ ಳೆನಿಸಿತು. ತಾನೂ ಎಲ್ಲಿ ತಪ್ಪಿದೆ ?

"ಗುಡ್ ಇವ್ನಿಂಗ್, ಸರ್" ಪರಿಚಿತ ಸ್ವರ ಹರಿದು ಬಂದಾಗ ಅತ್ತ ತಿರುಗಿದ. ಗಂಭೀರ ಮುಖದ ಕೋಮಲ ನಿಂತಿದ್ದಳು. "ಗುಡ್ ಇವ್ನಿಂಗ್..... ಎಲ್ಲಿಗೆ ಹೊರಟಿದ್ದೀರಾ ?" ಅವಳ ಕೈಯಲ್ಲಿದ್ದ ಪುಸ್ತಕಗಳ ಕಡೆ ನೋಡಿದ. ಅವನು ಮೆಚ್ಚಿಕೊಂಡ ವಿದ್ಯಾರ್ಥಿನಿ ಅವಳು. ಓದುವುದಕ್ಕೋಸ್ಕರವೇ ಬರುವ ಕೆಲವೇ ಮಂದಿ ವಿದ್ಯಾರ್ಥಿಗಳಲ್ಲಿ ಅವಳೊಬ್ಬಳು.

"ಲೈಬ್ರರಿ ಕಡೆ ಹೊರಟಿದ್ದೆ. ಯಾವಾಗ ಸರ್, ಸ್ವೀಟ್ಸ್" ಅವಳ ಕಣ್ಣುಗಳು ಮಿನುಗಿದವು. ಸ್ವಲ್ಪ ಗಮನ ಕೊಟ್ಟಿದ್ದರೇ ಅದೆಂಥ ಆಳವಾದ ಗಾಯವೆಂದು ಅವನಿಗೆ ಅರ್ಥವಾಗುತ್ತಿತ್ತು. ಹಾಗೆ ಗಮನ ಕೊಡುವುದು ಅವನ ಸ್ವಭಾವವಲ್ಲ.

ರಜನಿಯತ್ತ ವಾರೆನೋಟ ಹರಿಸಿದ "ಬಹಳ ಕಾಯಬೇಕಾಗಿಯೇನು ಇಲ್ಲ" ಅವಳನ್ನು ಕೋಮಲಗೆ ಪರಿಚಯಿಸಿದ. ಬರೀ ಮುಗುಳ್ನಗುವಿನ ವಿನಿಮಯ ಮಾತ್ರ. ಕೋಮಲ ತೀರಾ ಯೋಚಿಸುವಂತೆ ಕಂಡಳು. ಮತ್ತೆ 'ವಿಶ್' ಮಾಡಿ ಮರೆಯಾದ ಕೋಮಲ ಬಗ್ಗೆಯೇ ಯೋಚಿಸತೊಡಗಿದ. ಚಿನ್ನದ ಪದಕ ಪಡೆದ ವಿದ್ಯಾರ್ಥಿನಿ. ಓದು ಮುಂದುವರಿಸಲಾಗದುದಕ್ಕೆ ಬೇಕಾ ದಷ್ಟು ಕಾರಣಗಳಿರಬಹುದು. ಕ್ಷಣ ಅವನ ಮನ ನೊಂದಿತು.

ಓದುವ ಆಕಾಂಕ್ಷೆ ಬೆಳೆಸಿಕೊಂಡವರ ಪಾಲಿಗೆ ವಿದ್ಯಾಭ್ಯಾಸ ಮರೀಚಿಕೆ. ಇಲ್ಲದ ಜನ ಬಂದು ಕಾಲೇಜುಗಳಿಗೆ ಎಡಕಾಕಿ ಯೂನಿವರ್ಸಿಟಿಗಳಿಗೆ ಕೆಟ್ಟ ಹೆಸರು,

ಮೌನವಾಗಿ ಹೆಜ್ಜೆ ಹಾಕುತ್ತಿದ್ದ ರಜನಿ ನಿಂತಳು. "ಯಾರು ಕೋಮಲ ?" ಅವಳ ಸ್ವರವೇ ಬದಲಾಯಿತು. ಅವನೇನು ಗಮನಿಸಲಿಲ್ಲ "ನನ್ನ ಸ್ಟೂಡೆಂಟ್ ತುಂಬ ಬ್ರಿಲಿಯಂಟ್. ಓದಿನಲ್ಲಿ ತುಂಬ ಆಸ್ಕರೆ ಇದ್ದ ಹುಡ್ಗೀ....ಛೆ ..." ಮುಖ ಹಿಂಡಿದ. ವಿಷಯ ಇಂಥದ್ದೇ ಎಂದು ಗೊತ್ತಾಗ ದಿದ್ದರೂ ಅವನಿಗೆ ನೋವಾಗಿತ್ತು.

ರಜನಿ ಸ್ತಬ್ಧಳಾದಳು. 'ಬ್ರಿಲಿಯಂಟ್ ಸ್ಟೂಡೆಂಟ್' ಎನ್ನುವುದು ಅವಳನ್ನು ಇರಿಯಿತು. ತುಂಬ ಬುದ್ಧಿವಂತರನ್ನ ವಿಕಾಸ್ ಮೆಚ್ಚಿಕೊಳ್ಳು ತ್ತಾನೆ. ಅವಳ ಮೈ ಮೇಲೆ ಮುಳ್ಳುಗಳು ಎದ್ದಂತಾಯಿತು. ರಜನಿ 'ಜಸ್ಟ್ ಪಾಸ್' ಸ್ಟೂಡೆಂಟ್. ಅವಳ ಶಾಲಾ, ಕಾಲೇಜುಗಳಲ್ಲಿ ಇದೇ ಹಣೆಬರಹ. ಅವಳು ಓದಿ ಗಳಿಸಿದ ಮಾರ್ಕುಗಳಿಗಿಂತ ಬೇರೆ ರೀತಿಯಲ್ಲಿ ಗಳಿಸಿದ್ದೇ ಹೆಚ್ಚು!

ಇಬ್ಬರಲ್ಲಿ ಮಾತಾಡುವ ಉತ್ಸಾಹವೇ ಕಮ್ಮಿಯಾಯಿತು. ರಜನಿ ಮುಖ ಸಪ್ಪಗಾಯಿತು. "ಫಿಲಂಗೆ ಹೋಗೋಣಾಂತ್ಬಂದೆ" ನಿರಾಶೆ ಇಣುಕಿತು. ನಣ್ಣಗೆ ನಕ್ಕ. "ನಂಗೆ ಗೊತ್ತೇ ಇರ್ಲಿಲ್ಲ. ಅದ್ನೆಲ್ಲ ಮದ್ವೆವಗರ್ೂ ಉಳ್ಸಿ ಕೊಳ್ಳೋಣ. ಇಲ್ದಿದ್ರೆ ಆಮೇಲಿನದು ಸಪ್ಪೆ" ಪೆಚ್ಚಾದಳು, ಮತ್ತೆ ಚೇತ ರಿಸಿಕೊಂಡಳು.

ಆಮೇಲಿನ ಮಾತುಗಳೆಲ್ಲ ಅವಳವೇ. ಈಚೆಗೆ ನೋಡಿದ ಫಿಲಂಗಳ ಬಗ್ಗೆಯೆಲ್ಲ ಹರಟತೊಡಗಿದಳು. ಅವನ ಮಿದುಳು ಪಟಪಟ ಎನ್ನತೊಡಗಿತು. ಸಿನಿಮಾ ಪುರಾಣ ಬೇಸರ ತಂದಿತ್ತು.

ಮೌನವಾಗಿ ನಿಂತುಬಿಟ್ಟ. ರಜನಿಯ ಬೆಳವಣಿಗೆ ಅವನಿಗೆ ಸ್ಪಷ್ಟ ವಾಗಿತ್ತು. "ಇನ್ನು ನಡೆದದ್ದು ಸಾಕು. ಆಟೋನಲ್ಲಿ ನಿನ್ನ ಮನೆ ತಲುಪಿ ಸ್ತೀನಿ" ಮಂಕಾದಳು. ಕೆನ್ನೆ ತಟ್ಟಿದ. "ಸ್ವಲ್ಪ ದಿನ ಮಾತ್ರ......ಆಮೇಲೆ ಹೋಗ್ತೀನೀಂದ್ರು ಕಳ್ಸೋಲ್ಲ." ಕಣ್ಣಲ್ಲಿಯೇ ಸಮಾಧಾನಿಸಿದ.

ಆಟೋ ಅವಳ ಮನೆ ಮುಂದೆ ನಿಂತಾಗ ಇಳಿದಿದ್ದು ರಜನಿಯೊಬ್ಬಳೇ. ವಿಸ್ಮಯ ಇಣುಕಿತು ಅವಳ ಕಣ್ಣುಗಳಲ್ಲಿ.

"ಬನ್ನಿ ಒಳ್ಗಡೆ, ನಮ್ಮಕ್ಕ, ಭಾವ ಎಲ್ಲಾ ಬಂದಿದ್ದಾರೆ. ಅವರಿಗೆ ನಿಮ್ಮನ್ನು ನೋಡೋ ಇಚ್ಛೆ" ಈಗ ಇಂಥ ಇಚ್ಛೆಗೆ ಮಣಿಯಲು ವಿಕಾಸ್ ಸಿದ್ಧನಿರಲಿಲ್ಲ. "ಈಗ್ಬೇಡ ನಂಗೆ ಬೇರೆ ಕೆಲ್ಸವಿದೆ" ಕೈ ಬೀಸಿದ. ಆಟೋ

ಮುಂದಕ್ಕೆ ಓಡಿತು. ಅವಳಿಗೆ ಪೂರ್ತಿ ನಿರಾಶೆಯಾಯಿತು. ಕನಸುಗಳೆಲ್ಲಾ ಚೆಲ್ಲಾಪಿಲ್ಲಿಯಾಯಿತು.

ನಿಂತ ಜಾಗ ಬಿಟ್ಟು ಅಲುಗಲಿಲ್ಲ. ರಂಜಿತ ಕೈ ಅವಳ ಭುಜದ ಮೇಲೆ ಬಿತ್ತು. "ಯಾಕೆ ನಿಂತೆ ?" ತುಂಬಿದ ಕಣ್ಣೋಟ ಅವಳತ್ತ ಹೊರಳಿಸಲಿಲ್ಲ. "ಏನಿಲ್ಲ, ಸುಮ್ನೇ ನೋಡ್ತಾ ಇದ್ದೆ" ರಂಜಿತ ಅವಳ ತಲೆಯ ಮೇಲೊಂದು ಮೊಟಕಿ ನಕ್ಕಳು. ರಜನಿಗಿಂತ ಅವಳು ದೊಡ್ಡವಳು.

ಅವಳು ಹೊರಗೆ ಬರುವ ವೇಳೆಗೆ ಪಂಕಜಮ್ಮ ಸೀರೆಗಳನ್ನು ಹರವಿ ಕೊಂಡು ಕೂತಿದ್ದರು. ಮುಖದ ಮೇಲೆ ಸುಸ್ತಿನ ಛಾಯೆ.

ಮಗಳನ್ನು ನೋಡಿದವರು ಬೇಸರಗೊಂಡರು. "ಒಬ್ಳೇ....ಬಂದ್ಯಾ ?" ಉತ್ತರಿಸದೆ ಕುಕ್ಕರಿಸಿದಳು. ಆಕೆಗೆ ಅರ್ಥವಾಯಿತು. "ಅಂತು ನಿಂದು ವಿಚಿತ್ರವಾಯ್ತು. ಗಂಡು ಕೂಡ ಅತಿಶಯದ ವ್ಯಕ್ತಿಯೇ ! ನೀನಾಗಿ ಹುಡ್ಕಿ ಕೊಂಡು ಅವ್ನ ಬಾಗ್ಲಿಗೆ ಹೋಗ್ಬೇಕೇ ವಿನಃ ಅವನಾಗಿ ಬಂದಿಲ್ಲ. ಎಲ್ಲಾ ತಿರ್ಗ್ಗಿ ಮುರ್ಗ್ಗಿ, ನಮ್ಮ ಸ್ಟೇಟಸ್‌ಗೆ ಕಮ್ಮಿಯವ್ರ ಜೊತೆ ಸಂಬಂಧ ಬೆಳೆಸಿದ್ರೆ ....ಇದೇ ಪಾಡು" ಷುರು ಮಾಡಿದರು.

ರಜನಿ ಮುಖ ಮತ್ತಷ್ಟು ದಪ್ಪಗಾಯಿತು. "ವಿಕಾಸ್ ಬಗ್ಗೆ ಕಾಮೆಂಟ್ಸ್ ಮಾಡೋದ್ನ ನಾನು ಇಷ್ಟಪಡೋಲ್ಲ. ಅವ್ರ ಯೋಗ್ಯತೆ ನಿಮ್ಗೇನು ಗೊತ್ತು ?" ಮುಖದ ಮೇಲೆ ಹೊಡೆದಂತೆ ಹೇಳಿ ಎದ್ದು ಹೋದಳು. ಇದ್ದವರು ಮೂಗಿನ ಮೇಲೆ ಬೆರಳಿಟ್ಟರು.

ಮುಖದ ಮುಂದಿದ್ದ ಪೇಪರನ್ನು ಸರಿಸಿದರು ಗುರುಮೂರ್ತಿಗಳು. "ನೋಡಿದ್ಯಾ, ನಿನ್ಮಗುಳ್ನ ! ಒಂದು ದಿನವಾದ್ರೂ ನಿಂಗೆ ಗಂಡನ ಬಗ್ಗೆ ಇಂಥ ಅಭಿಮಾನ ಬಂದಿದ್ಯಾ ?" ನೇರವಾಗಿ ನೋಡುತ್ತಾ ಪ್ರಶ್ನಿಸಿದರು.

ಪಂಕಜಮ್ಮ ಹಣೆ ಗಟ್ಟಿಸಿಕೊಂಡರು. ರಂಜಿತ ಗಂಡ ಪಕಪಕನೆ ನಕ್ಕ. ನಗುವಿನಲ್ಲಿದ್ದಿದ್ದೇನು ? ಮೂವರೂ ತಲೆ ಕೆಡಿಸಿಕೊಂಡರು.

ರಂಜಿತ ಮುಖ ಕೆಂಪಗೆ ಮಾಡಿ ಗಂಡನ ಕಡೆ ನೋಡಿದಳು "ಯಾಕೆ ನಕ್ಕಿದ್ದು ?" ರಾಘವನ್ ನೋಟ ಆಳವಾಯಿತು. "ಅದೆಲ್ಲ ನಮ್ಮಂಥವ್ರಿಗಲ್ಲ. ನಾವು ಬದ್ಕನ್ನ ನೋಡೋ ದೃಷ್ಟಿನೇ ಬೇರೆ. ಹಣ, ಆಡಂಬರ ನಮ್ಗೇ ಪ್ರಧಾನವಾದ್ರೆ ವಿಕಾಸ್ ಅಂಥವ್ರಿಗೆ ಅಭಿಮಾನ.......ಸ್ವಾಭಿಮಾನ ಪ್ರಧಾನ

ವಾಗುತ್ತೆ. ಅವ್ರು ಆತ್ಮಕ್ಕೆ ಹೆಚ್ಚು ಒತ್ತು ಕೊಡ್ತಾರೆ. ಅದ್ಕೇ ರಿಸಲ್ಟ್ ಬೇರೆ ಬೇರೆನೇ ಇರುತ್ತೆ" ಜೇಬಿನಲ್ಲಿದ್ದ ಸಿಗರೇಟು ಪ್ಯಾಕ್ ಹೊರ ತೆಗೆದು ಹಚ್ಚಿದರು.

ಅಳಿಯನ ಮಾತಿನಲ್ಲಿದ್ದ ಗೂಢ ಅರ್ಥವಾಗದಿದ್ದರೂ 'ಇನ್‌ಸಲ್ಟ್' ಹಾಗೇ ಕಂಡಿತು. "ಬರೀ ತಲೆನೋವು!" ಹಣೆಯೊತ್ತುತ್ತ ಎದ್ದುಹೋದರು.

"ಈ ಸೀರೆ ಬಾರ್ಡರ್ ಚೆನ್ನಾಗಿದೆ" ಅಲ್ಲಿದ್ದ ಹಸಿರು ಸೀರೆಯನ್ನು ಎತ್ತಿ ತೊಡೆಯ ಮೇಲಾಕಿಕೊಂಡಳು ರಂಜಿತಾ. ಹೆಂಡತಿಯ ಮನದಿಂಗಿತ ಅರಿತವ ನಂತೆ ರಾಘವ ಎದ್ದು ಹೊರಗೆ ಹೋದ. 'ಸೀರೆ, ಒಡವೆ, ಪಿಕ್‌ನಿಕ್' ಅವನ ರೋಸಿದ ಮನ ಒಳಗೊಳಗೇ ಒದರಿತು. ಹೆಣ್ಣು ಕೊಟ್ಟ ಅತ್ತೆ ಮಾವಂದಿರ ಬಗ್ಗೆ ಅವನಿಗೆ ಗೌರವವಿಲ್ಲ.

ರಜನಿ ದಿಂಬಿನಲ್ಲಿ ಮುಖ ಹುದುಗಿಸಿ ಬಿಕ್ಕಿ ಬಿಕ್ಕಿ ಅತ್ತಳು. ಅವಳಿಗೆ ಎಲ್ಲರ ಮೇಲೂ ರೋಷ. ಹಲ್ಲು ಕಿರಿಯುವ, ಹುಬ್ಬುಗಳು ಹಾರಿಸುವ, ಕಣ್ಣು ಕಣ್ಣುಗಳಲ್ಲಿ ಬಯಕೆ ತುಂಬಿಕೊಂಡು ಹರಿದಾಡುವ ಗಂಡುಗಳಿಗಿಂತ ಪುರುಷ ಸಿಂಹನಂತೆ ಗಂಭೀರವಾಗಿ ಕಾಣುವ ವಿಕಾಸ್ ಅವಳಿಗೆ ಬಹಳ ಇಷ್ಟವಾಗಿದ್ದ.

ನೋಡಿದ ಮೊದಲ ನೋಟದಲ್ಲಿಯೇ ರಜನಿ ಒಂದು ತೀರ್ಮಾನಕ್ಕೆ ಬಂದಿ ದ್ದಳು "ನಾನು ವಿಕಾಸ್‌ನೇ ಮದ್ವೆ ಆಗೋದು" ತಾಯ್ತಂದೆ ಪ್ರಶ್ನಿಸುವ ಮುನ್ನವೇ ತನ್ನ ಇಷ್ಟವನ್ನು ವ್ಯಕ್ತಪಡಿಸಿದ್ದಳು. ಗುರುಮೂರ್ತಿ ಹೆಂಡತಿಗೆ ಕಣ್ಣಲ್ಲಿಯೇ ಸನ್ನೆ ಮಾಡಿ "ಆಯ್ತು....." ಅಂದಿದ್ದರು. ಆದರೆ ಅವರ ತೀರ್ಮಾನ ಬೇರೆ ಇತ್ತು.

"ನಾನೆಲ್ಲ ಮಾಡ್ತೀನಿ ! ಜುಜುಬಿ ಮೇಷ್ಟ್ರು ಕೆಲ್ಸದಿಂದ ಏನಾದೀತು ? ಸಾಕು ಸಾಲ್ದ ಬದ್ಕಿಗೆ ನನ್ಮಗ್ಳನ್ನ ಎಂದಿಗೂ ಒಡ್ಡೋಲ್ಲ" ಆತ್ಮವಿಶ್ವಾಸದಿಂದ ನುಡಿದಿದ್ದರು. ಆದರೆ ಪಂಕಜಮ್ಮನನ್ನ ಅನುಮಾನ ಕಾಡಿತ್ತು.

"ಯಾಕೋ ನಂಗೆ ಅನುಮಾನ. ವಿಕಾಸ್ ಒಂದು ರೀತಿಯ ಧಿಮಾಕಿನ ವ್ಯಕ್ತಿಯಾಗಿ ಕಾಣ್ತಾನೆ" ಎಂದಾಗ ನಕ್ಕುಬಿಟ್ಟಿದ್ದರು. "ಈ ವಿಷ್ಯದಲ್ಲಿ ನೀನು ತಲೆ ಹಾಕ್ಬೇಡ. ಗಂಡಸಿನ ವೀಕ್ ಪಾಯಿಂಟ್ ಎಲ್ಲಿದೇಂತ ನಂಗೆ ಗೊತ್ತು. ನಿನ್ನ ಮಗ್ಳನ ಸರಿ ಮಾಡಿದ್ರೆ....ತಾನಾಗಿ ಸರಿಹೋಗ್ತಾನೆ" ಎಂದಿದ್ದರು.

ರಂಜಿತಾ ಕೋಣೆಗೆ ಬಂದಾಗ ರಜನಿ ಅದೇ ಸ್ಥಿತಿಯಲ್ಲಿದ್ದಳು. ಎಲ್ಲಾ ಬರೀ ಗೊಂದಲವಾಗಿ ಕಂಡಿತು ಅವಳಿಗೆ. ಇಲ್ಲಿ ಮುಖ್ಯವಾದ ವ್ಯಕ್ತಿ ವಿಕಾಸ್.

ತಂಗಿಯ ಕೆನ್ನೆ ಸವರಿದಳು. "ಏನು ವಿಷ್ಯ ? ರೋಮಾನ್ಸ್ ಜಗಳ ದಿಂದ್ಲೇ ಶುರುವಾಯ್ತ ?" ರಜನಿ ತಲೆಯಾಡಿಸಿದಳು. "ಎಂಥದ್ದು ಇಲ್ಲ. ಏನು ಹೇಳ್ಬೇಕೋ ಗೊತ್ತಾಗ್ತ ಇಲ್ಲ" ಚಡಪಡಿಸಿದಳು. ವಿಸ್ಮಿತಳಾದಳು ರಂಜಿತ.

"ಏನೇನು ಮಾತಾಡಿದ್ರಿ? ಎಲ್ಲೆಲ್ಲಿಗೆ ಹೋಗಿದ್ರಿ?" ರಂಜಿತ ಮತ್ತಷ್ಟು ತಿಳಿಯಲು ಪ್ರಯತ್ನಪಟ್ಟಳು. ರಜನಿಯ ತಲೆ ತಗ್ಗಿತು. ಪರ್ಸ್‌ನಲ್ಲಿದ್ದ ಫಿಲಂ ಟಿಕೆಟ್‌ಗಳನ್ನು ಹರಿದು ಬಿಸುಟಳು. ಆ ಚೂರುಗಳಂತೆ ಅವಳ ಮನಸು ಚಿಲ್ಲಾಪಿಲ್ಲಿಯಾಗಿತ್ತು. "ಪ್ರಕಾಶ್ ನೋಡಿದ್ರೆ.....ಫಸ್ ಮಾಡ್ತಾನೆ. ಮದ್ವೆಗೆ ಮೊದ್ಲು ಅದೆಲ್ಲ ವಿಕಾಸ್‌ಗೆ ಇಷ್ಟವಿಲ್ಲ."

ರಂಜಿತಾ ಬೆಪ್ಪು ಹಿಡಿದವಳಂತೆ ಕೂತುಬಿಟ್ಟಳು. ಹತ್ತಾರು ಅನುಮಾನ ಗಳು ಇಣುಕಿ ಮರೆಯಾದರೂ, ಗಂಡಸಿನ ಬಗ್ಗೆ ಅವಳಿಗಿದ್ದ ಅಭಿಪ್ರಾಯವೇ ಕ್ಷಣ ಅಲುಗಾಡಿ, ಗಾಬರಿಯಿಂದ ತಲೆ ಕೊಡವಿದಳು.

ತೀರಾ ಮೃದುವಾಗಿ ತನ್ನ ಅನುಮಾನ ತಂಗಿಯ ಮುಂದೆ ಇಟ್ಟಳು. "ತುಂಬ ಸಂಕೋಚ ಪ್ರವೃತ್ತಿಯ ಗಂಡು ಇರ್ಬೇಕು" ಅವಳ ಮಾತನ್ನು ರಂಜಿತ ತಳ್ಳಿಹಾಕಿದಳು. "ನಾನು ಒಪ್ಪೋಲ್ಲ. ರಿಯಲಿ, ಹೀ ಈಸ್ ಜಂಟಲ್‌ಮನ್. ಸಂಕೋಚ ನಾಚಿಕೆ ಅನ್ನೋದು ಬಹುಶಃ ಅವ್ರ ಹತ್ತಿರ ಸುಳಿಯೋಕು ಹೆದರ್ಬಹುದ್ದು" ಮಿಂಚು ಹರಿದಾಡಿತು ರಜನಿಯ ಕಣ್ಣುಗಳಲ್ಲಿ. ರಂಜಿತಾಳ ಮಿದುಳು ಕ್ಷಣ ನಿಷ್ಕ್ರಿಯವಾಯಿತು.

ಗದ್ದಕ್ಕೆ ಕೈಯೂರಿ ಕೂತ ರಂಜಿತ ತಂಗಿಯನ್ನೇ ದಿಟ್ಟಿಸಿದಳು. ಪಂಕ ಜಮ್ಮ ಈ ಮದುವೆಯ ಮುಂದಿನ ಚಿತ್ರ ಬಿಚ್ಚಿಟ್ಟಿದ್ದರು. "ಮಧ್ಯಮ ದರ್ಜೆಯ ಕುಟುಂಬ. ನೀವಿಬ್ರೂ ಬೇರೆ ಊರಿನಲ್ಲಿದ್ದೀರ. ಇವಳಿಗಾದ್ರೂ ಮನೆಯಲ್ಲಿ ಇರಿಸ್ಕೋಬೇಕು. ಇನ್ನು ಪ್ರಕಾಶನ ನೆಚ್ಚಿಕೆ ಇಲ್ಲ" ಮಗನ ಬಗ್ಗೆ ನಿರಾಸೆಗೊಂಡೇ ದೂರ ದೃಷ್ಟಿಯಿಂದ ನಿರ್ಧಾರಕ್ಕೆ ಬಂದಿರಬಹುದೆಂದುಕೊಂಡಿ ದ್ದಳು. ಇದು ಕೂಡ ಮಂಚಿಕೆಯೆನಿಸದೆ ಹೋಗಿರಲಿಲ್ಲ ಆ ಕ್ಷಣ.

"ರಜನಿ, ಆಟೋದಲ್ಲಿ ಜೊತೆಯಲ್ಲಿ ಬಂದ ವಿಕಾಸ್ ಮನೆಯೊಳಕ್ಕೆ ಏಕೆ

ಬರ್ಲಿಲ್ಲ. ನೀನು ಕರೀಲಿಲ್ವಾ?" ಮತ್ತವೇ ಪ್ರಶ್ನೆಗಳು ಗಂಭೀರ ಪ್ರಶ್ನೆಗಳು ಗಂಭೀರ ರೂಪದಲ್ಲಿ. ರಜನಿ ಕೈಗಳಿಂದ ಮುಖ ಮುಚ್ಚಿಕೊಂಡಳು. ತುಷ್ರ ಮಂಜಿನಲ್ಲಿ ಮಿನುಗುವ ತೇಜೋ ಪುಷ್ಪ ಅವಳ ಹೃದಯಕ್ಕೆ ತಾಕಿ ಮರೆಯಾಯಿತು. "ನನ್ನ ಏನು ಕೇಳ್ಬೇಡ. ಮದ್ವೆ ಆಗೋವರ್ಗೂ ಅವ್ರಿಗೆ ಬರೋಕೆ ಇಷ್ಟವಿಲ್ಲ. ಮತ್ತೆ ನಾನ್ಯಾಕೆ....ಕರೆಯಲೀ?" ಅಲ್ಲಿ ಕೂರುವುದು ರಂಜಿತಾಗೆ ಬೇಡವೆನಿಸಿತು. ತಂಗಿ ಮನ ಬಿಚ್ಚಿ ಹೇಳಲು ಇಚ್ಛಿಸುತ್ತಿಲ್ಲ ಅಥವಾ ಹೇಳಲು ಅವಳ ಮನ ಸಹಕರಿಸುತ್ತಿಲ್ಲ ; ಮೇಲೆದ್ದಳು.

ರಜನಿ ಅಕ್ಕನ ಕೈ ಹಿಡಿದು ಜಗ್ಗಿ ಕೂಡಿಸಿದಳು. "ಕೂತ್ಕೋ....ತುಂಬ ಮಾತಾಡ್ಬೇಕು" ಎಂದಾಗ ರೇಗಿದಳು. "ನಾನು ವಾಸ್ತವ ಸತ್ಯ ಅರಿಯೋಕಾಂದ್ರೆ ಗೂಢವಾಗಿ ಮಾತಾಡ್ತಾಳೆ. ನಂಗಂತೂ ವಿಕಾಸ್ ಸ್ವಭಾವ ಹಿಡಿಸ್ಲಿಲ್ಲ. ಹೆಚ್ಚು ಡಿಮ್ಯಾಂಡ್ ಮಾಡೋ ರೀತಿ ಇದು. ಅದಿಲ್ಲಾಂದ್ರೆ....ಅವ್ನಿಗೆ ಈ ಮದ್ವೆ ಇಷ್ಟವಿಲ್ಲ. ಕೆಂಪು ಕೆಂಪಗಾಗಿ ಮನೆಗೆ ಬರಬೇಕಾದವ್ಳು ಅಳುಮುಖ ಹೊತ್ತು ಬಂದಿದ್ದೀಯ!" ಸರಿಯಾದ ಸ್ಥಳಕ್ಕೆ ಭರ್ಜಿ ನೆಟ್ಟಳು. ಹೌಹಾರಿದಳು ರಜನಿ. ಅಲೆಗಳ ಮಧ್ಯೆ ತೇಲುತ್ತಿರುವವಳ ಮೇಲೆ ಅಗಿ ವರ್ಷವಾದಂತೆ ಆಯಿತು.

ತಂಗಿಯ ಕೈಯನ್ನು ತನ್ನ ಕೈಯೊಳಗೆ ತಗೊಂಡಳು. ಕಣ್ಣಲ್ಲಿ ಕಣ್ಣಿಟ್ಟು ತನ್ನ ಅನುಭವಿ ಮನದ ವ್ಯಾಕುಲವನ್ನು ಹೆಚ್ಚು ಸ್ಪಷ್ಟಪಡಿಸಲು ಬಯಸಿದಳು.

"ನೀನು ಕಾಲೇಜು ಕಲಿತ ಹೆಣ್ಣು. ವಯಸ್ಸಿಗೆ ಸಹಜವಾದ ಪ್ರೇಮ, ಪ್ರೀತಿ—ಅದರ ಹಿಂದಿರುವ ಹಂಬಲವೆಲ್ಲ ನಿಂಗೆ ಗೊತ್ತು. ಗೊತ್ತಾದ ಹೆಣ್ಣಿನ ಜೊತೆ ರೊಮಾನ್ಸ್ ಗೊತ್ತಿಲ್ದ ಗಂಡಿನ ಬಗ್ಗೆ ಅಲರ್ಟ್ ಆಗಿರೋದು ಒಳ್ಳೇದು."

ಯಾವುದೋ ಜವಾಬ್ದಾರಿ ಕಷ್ಟನಷ್ಟಗಳ ಅರಿವಿಲ್ಲದೆ ಮುಗ್ಧವಾಗಿ ತುಂಟ ಹುಡುಗಿಯಾಗಿ ಕಾಲೇಜು, ಫ್ರೆಂಡ್ಸ್ ಎಂದು ಅಲೆದುಕೊಂಡು ಬೆಳೆದಿದ್ದಳು ರಜನಿ. ಯಾವುದನ್ನೂ ಆಳವಾಗಿ ಅನಾಲಿಸಿಸ್ ಮಾಡಿದವಳೇ ಅಲ್ಲ. ಈಗ ಬಾಂಬ್ ಪಕ್ಕದಲ್ಲಿ ಸಿಡಿದಂತಾಗಿತ್ತು.

ಪೂರ್ತಿ ಮಂಕು ಬಡಿದಂತಾಯಿತು ರಜನಿಗೆ. ರಂಜಿತಾ ಇನ್ನಷ್ಟು ಹೇಳಲು ಇಚ್ಛಿಸಿದಳು.

"ನಮ್ಮ ಮದ್ವೆ ಗೊತ್ತಾದ್ಮೇಲೆ ನಿಮ್ಮ ಭಾವ ಇಲ್ಲೇ ಇರ್‍ತಾ ಇದ್ರು. ಇಲ್ಲೂ ಕೂಡ ಅಡ್ಡಿ ಇರ್ಲಿಲ್ಲ. ಅವ್ರು ಮದ್ವೆ ದಿನಕ್ಕಾಗಿ ಬರೀ ಚಪ್ಪರ, ಗದ್ದಲ, ಪುರೋಹಿತರ ಮಂತ್ರಗಳನ್ನು ಮಾತ್ರ ಉಳಿಸಿದ್ದರು" ಕೆಂಪು ಕೆಂಪಾಗಿ ಉಸುರಿದಳು. ಆನೇ ಸ್ಪಂದನ ಆಮೇಲೆ ಉಳಿಯಲಿಲ್ಲವೆಂಬ ಸತ್ಯ ಸಂಗತಿ ಅವಳೊಬ್ಬಳಿಗೆ ಮಾತ್ರ ಗೊತ್ತು.

"ಅದ್ನ ವಿಕಾಸ್ ಇಷ್ಟಪಡೋಲ್ಲ!" ಕೆಳಗೆ ಬಿದ್ದ ಪರ್ಸನ್ನು ಎತ್ತಿ ಟೇಬಲ್ ಮೇಲಿಟ್ಟಳು ನಿರುತ್ಸಾಹದಿಂದ ರಜನಿ "ನೀನು ಅವ್ರನ್ನ ನೋಡಿಯೇ ತಿಳೀಬೇಕು" ವಿಕಾಸ್ ಮೇಲಿನ ಅಭಿಮಾನ ಅವಳಲ್ಲಿ ಕಿಂಚಿತ್ ಕಡಿಮೆಯಾಗ ಲಿಲ್ಲ.

ರಂಜಿತ ಹೊರಗೆ ಬಂದಳು. ತಾಯಿ, ಮಗಳಿಗೆ ರಜನಿ ಅಭಿಪ್ರಾಯ ಇಷ್ಟವಾಗಲಿಲ್ಲ. ತೀರಾ ಮಹಿಳಾ ವಿಮೋಚನೆಯ ಬಗ್ಗೆ ಮಾತಾಡುತ್ತ ಓಡಾ ಡುತ್ತ ಇದ್ದ ಸಮಾಜ ಸೇವಕಿ ಪಂಕಜಮ್ಮನಿಗೆ ತಮ್ಮ ಮಗಳ 'ಗುಗ್ಗುತನ'ದ ಬಗ್ಗೆ ಜಿಗುಪ್ಸೆಯಾಯಿತು. ಡಿಗ್ರಿ ಪಡೆದ ರಜನಿಯ ಬಗ್ಗೆ ಅವರಿಗೆ ಅಪಾರ ವಾದ ಹೆಮ್ಮೆ. ತಮ್ಮ ರಕ್ತ ಹಂಚಿಕೊಂಡ ಮಗಳು ಅವರ ಧ್ಯೇಯ ಧೋರಣೆ ಗಳನ್ನು ಎತ್ತಿ ಹಿಡಿಯುತ್ತಾಳೆನ್ನುವ ಅಭಿಪ್ರಾಯ ಈಗ ತಲೆಕೆಳಗಾಗಿತ್ತು. ಇನ್ನೊಂದು ಸಂದರ್ಭ ನೋಡಿ ಮಗಳಿಗೆ ಬುದ್ಧಿ ಹೇಳಲು ನಿಶ್ಚಯಿಸಿದರು.

ಹಾಗೆ ರಂಜಿತ, ಅವಳ ಗಂಡನನ್ನು ತಮ್ಮ ಪರವಾಗಿಸಿಕೊಳ್ಳಲು ಇಚ್ಛಿ ಸಿದ್ದರು. ಹೊರಗಿನ ರಾಜಕೀಯ ಕಸರತ್ತುಗಳು ಮನೆಯಲ್ಲೂ ಇಣುಕಿ ಹೊಸ ಚಿತ್ರವೊಂದು ಸೃಷ್ಟಿಯಾಗುತ್ತಿತ್ತು.

ರಾತ್ರಿ ಊಟಕ್ಕೆ ಕೂತಾಗ ಪಂಕಜಮ್ಮ ಮಗಳನ್ನು ಪ್ರಶ್ನಿಸಿದರು. "ಒಡ್ವೆ, ಸೀರೆ ಏನಾದ್ರೂ ತೋರ್‍ಸಿದ್ರಾ?" ಇಡೀ ಉಪ್ಪಿನಕಾಯಿ ಹೋಳನ್ನ ನುಂಗಿಬಿಟ್ಟ ರಜನಿ ಕಣ್ಣು ಕಣ್ಣು ಬಿಟ್ಟಳು. "ಎಲ್ಲೋ ವಿಕಾಸ್ ನೆನಸಿ ಕೊಂಡಿತಾ ಇರ್ಬೇಕು" ರಂಜಿತಾ ಮುಸಿ ಮುಸಿ ನಕ್ಕಳು, ಕಹಿಯನ್ನು ನುಂಗಿ. ಅಸಹಜ ಧೋರಣೆಯ ವಿಕಾಸ್ ಅವಳಿಗೆ ಇಷ್ಟವಾಗಿರಲಿಲ್ಲ.

"ನಿಂಗೆ ಯಾವಾಗ್ಲೂ ತಮಾಷೆನೇ" ಮೂಗು, ಕಣ್ಣುಗಳಲ್ಲಿ ತುಂಬಿದ

ಶೀರನ್ನು ಮುಂಗೈನಿಂದ ತೊಡೆದುಕೊಂಡಳು ರಜನಿ "ಸಾರಿ ಮಂ...." ತಂಗಿಯನ್ನು ಅನುನಯಿಸಿದರೂ ಕೊಂಕಿತ್ತು.

ಮಜ್ಜಿಗೆ ಅನ್ನದವರೆಗೆ ಬರುವವರೆಗೂ ಬೇಕಿಲ್ಲದ ಮಾತಾಡುತ್ತಿದ್ದ ಪಂಕಜಮ್ಮ ಮತ್ತೆ ಅದೇ ಪ್ರಶ್ನೆಯನ್ನು ಮಗಳ ಮುಂದಿಟ್ಟರು.

"ಏನು ಮಾಡ್ಸಿದ್ದಾರೆ. ಸೀರೆಗಳ ಬಣ್ಣವಾದ್ರೂ ನೋಡಿದ್ಯಾ?" ರಜನಿಯ ಕೈ ಸ್ಥಬ್ಧಗೊಂಡಿತು. ತುಟಿ ಕಚ್ಚಿ ತಾಯಿಯ ಕಡೆ ನೋಡಿದಳು. ಸುಲಭವಾಗಿ ಮಗಳ ಮುಖ ಓದಿದರು "ನಾವು ಅವ್ರು ಒಂದೇ ತರಹ ಒಡ್ವೆ ಮಾಡ್ಸಬಾರ್ದು! ಒಂದೇ ಬಣ್ಣದ ಸೀರೆಗಳನ್ನ ತಂದ್ರೆ........" ರಜನಿ ತಟ್ಟೆಗೆ ನೀರು ಹೊಯ್ದು ಎದ್ದಳು. "ಎರಡನ್ನ ಹಾಕ್ಕೊಳ್ತೀನಿ, ಉಟ್ಕೊಳ್ತೀನಿ......... ಸರಿನಾ?" ಊಟ ಮಾಡುತ್ತಿದ್ದ ಗುರುಮೂರ್ತಿಗಳು ನಕ್ಕುಬಿಟ್ಟರು. ತಾವು ಕಲ್ಪಿಸಿಕೊಳ್ಳಲಾರದಷ್ಟು ಬೆಳೆದಿದ್ದಾಳೆಂದುಕೊಂಡರು. ತೀವ್ರವಾದ ಅಸಮಾಧಾನವಾಗಿತ್ತು ಅವರಿಗೆ.

ಬೆರಳಿನಲ್ಲಿ ಜೀರೋ ಸುತ್ತಿ ಹೆಂಡತಿಗೆ ತೋರಿಸಿದರು. "ವಿದ್ಯಾಭ್ಯಾಸದಲ್ಲಿ ಜಸ್ಟ್ ಪಾಸಿಂಗ್ ಮಾರ್ಕ್ಸ್, ವೈವಾಹಿಕ ಜೀವನದಲ್ಲಿ ಅಷ್ಟು ಕೂಡ ಗಳಿಸಿಕೊಳ್ಳುವುದು ಇವಳಿಂದ ಸಾಧ್ಯವಿಲ್ಲ" ಮೇಲೆದ್ದವರು ಮತ್ತೆ ಹೇಳಿದರು "ಮೊದ್ಲು ಮಗಳನ್ನು ತಯಾರುಮಾಡು... .....ಪೂರ್ ಗರ್ಲ್" ನೀರು ಕುಡಿದಿಟ್ಟರು.

ಹಾಲ್‌ಗೆ ಬಂದವರು ಶತಃಪಥಃ ಹಾಕಿದರು. ವಿಕಾಸ್ ಬಿಗುಮಾನಕ್ಕೆ ಮಗಳೇ ಕಾರಣವೆನ್ನುವುದು ಅವರಿಗೆ ಈಗ ಅರ್ಥವಾಗಿತ್ತು, ಚಿಂತಿತರಾದರು. ಎಸ್.ಎಸ್.ಎಲ್.ಸಿ. ಫೇಲ್ ಆಗುವುದರೊಂದಿಗೆ ತಮ್ಮ ವಿದ್ಯಾಭ್ಯಾಸಕ್ಕೆ ಇತಿಶ್ರೀ ಹಾಡಿದ ಮೊದಲಿಬ್ಬರಿಗಿಂತ ಇವಳು ಬುದ್ಧಿವಂತಳೆಂಬ ಭಾವ ಅವರಿಗಿತ್ತು. ಈಗ 'ಶತದಡ್ಡಿ' ಎಂದು ವಿಶ್ಲೇಷಿಸಿಕೊಂಡರು.

ಸಿಗರೇಟು ತುದಿಗೆ ಲೈಟರ್ ತಾಗಿಸುತ್ತಾ ಕೂಗಿದರು "ರಂಜಿತಾ..... ಇಲ್ಬಾ..." ಬಂದಿದ್ದು ರಾಘವನ್. ವಿನಯ, ವಿಧೇಯತೆ, ಮಾವನೆಂಬ ಗೌರವ ಬೇಡವೆಂದು ಇವರೇ ಬೋಧಿಸಿದ್ದರು. "ಕೂತ್ಕೋ... ...." ಸಿಗರೇಟು ಪ್ಯಾಕ್ ಅವನತ್ತ ದೂಡಿದರು. ತೀರಾ ಸಮಾನತೆಯ ಒಂದು ನಿರ್ಮಾಣ ಮಾಡಿಬಿಡುವ ಬಯಕೆ ಇವರದು.

ಸಿಗರೇಟು ಪ್ಯಾಕ್ ಕೈಗೆತ್ತಿಕೊಳ್ಳದೆ ಕೂತ ರಾಘವನ್ "ನಾನು ಊರಿಗೆ ಹೋಗ್ತಾ ? ರಂಜಿತಾ ಬೇಕಾದ್ರೆ....ಇಲ್ಲೇ ಇರ್ತಾಳೆ" ಕೇಳಿದ. ಗುರುಮೂರ್ತಿಗಳ ಹಣೆಯ ಮೇಲೆ ನೆರಿಗೆಗಳು ಮೂಡಿದವು "ಇಲ್ಲಿನ ಏರ್ಪಾಟು ಯಾರು ನೋಡ್ಕೋತಾರೆ? ಪ್ರಕಾಶ್ ಯೂಸ್‌ಲೆಸ್. ಅವ್ನಿಗೆ ಬುದ್ಧಿನೆ ಕಡ್ಮೆ. ಕೆಲ್ಸ ಕೆಡೋದೇ ಜಾಸ್ತಿ, ಇನ್ನ .. ರಂಜಿತಾ .... ವಿಷ್ಯ" ಜೋರಾಗಿ ನಕ್ಕರು. ಅವಳು ತೀರಾ ಸಾಧಾರಣವಾದ ಹೆಣ್ಣೆಂದು ಅವರಿಗೆ ಗೊತ್ತು. ಅವಳ ಪ್ರಬುದ್ಧತೆಯೆಲ್ಲ ಸೀರೆ, ಒಡವೆಗಳ ನಡುವೆ ಸೊರಗಿಹೋಗಿತ್ತು.

ಮಾವ, ಅಳಿಯ ಕೂತು ಹತ್ತು ನಿಮಿಷ ಮಾತಾಡಿದರು. ಎಷ್ಟೋ ವಿಷಯಗಳು ಬಂದು ಹೋದವು. ಅವರಿಗೆ ವಿಕಾಸ್ ಇಷ್ಟವಾಗಿದ್ದ. ಅವನನ್ನೇ ಒಂದು ಚೌಕಟ್ಟಿನಲ್ಲಿ ನೋಡುತ್ತಿದ್ದಾರೆನಿಸಿತು. ಕಡೆಯಲ್ಲಿ ಅವರ ಮಹತ್ವಾಕಾಂಕ್ಷೆ ಪ್ರಕಟವಾಯಿತು.

"ಹೇಗೂ ವಿಕಾಸ್ ಬುದ್ಧಿವಂತ. ತುಂಬ ಕ್ಲೆವರ್ ಮೈಂಡ್, ಶಿಸ್ತಿನ ಸಿಪಾಯಿ. ಅವ್ನು ಕೆಲ್ಸದಲ್ಲಿರೋ ಕಾಲೇಜು ಈಗ ಪ್ರವರ್ಧಮಾನ ಸ್ಥಿತಿಗೆ ಬರ್‍ತಾ ಇರೋದು. ಹುಬ್ಬುಗಳ ಬಿಗಿತದಲ್ಲೇ ವಿದ್ಯಾರ್ಥಿಗಳನ್ನು ಹದ್ದುಬಸ್ತಿನಲ್ಲಿಡಬಲ್ಲ ಹೆಣ್ಣಿನ ವಾಂಛೆಯೇನು ಇಲ್ಲ. ಒಂದು ಐ.ಎ.ಎಸ್. ಮಾಡ್ಲೀಂತ ನನ್ನ ಆಸೆ"

ಮಾತು ಬಹಳ ಹೊತ್ತಿನ ಮೇಲೆ ಮುಗಿದಿದ್ದು.

o o o o

ತಣ್ಣಗೆ ಕೂತಿದ್ದ ವಿಕಾಸ್‌ಗೆ ಬಿರುಗಾಳಿ ಪ್ರವಹಿಸಿದಂತಾಯಿತು. ಪಂಕಜಮ್ಮ ಮಗಳು, ಅಳಿಯನೊಂದಿಗೆ ಬಂದರು. ವಿದೇಶೀ ಪರಿಮಳ ಆ ವಾತಾವರಣದಲ್ಲಿ ಹರಡಿಕೊಂಡಿತು. ಮುಜುಗರದಿಂದ ಮೇಲೆದ್ದ. ಈಗಲೇ ಆ ಜನರ ಸೋಗಲಾಡಿತನದ ಬಗ್ಗೆ ಬೇಸರ ಬಂದುಹೋಗಿತ್ತು.

ಇವರುಗಳನ್ನು ಪರಿಚಯಿಸಿದ ಪಂಕಜಮ್ಮ ಆಕ್ಷೇಪಣೆ ಎತ್ತಿದರು. "ನಾವೇನು ಹಳೆಯ ಸಂಪ್ರದಾಯಸ್ಥ ಜನರಲ್ಲ. ತಡಸೀನೇ ಧಾರಾಳವಾಗಿ ಬಂದು

ಹೋಗೋವಾಗ ವಿಕಾಸ್‌ಗೆ ಬರುವುದಕ್ಕೇನು ?" ಸುನಂದಮ್ಮ ಪೆಚ್ಚಾಗಿ ನಕ್ಕರು. ಮಗನ ಬಗ್ಗೆ ಆಕೆಗೆ ತುಂಬು ಅಭಿಮಾನ.

"ಅದು ಅವನಿಷ್ಟ. ಇಂಥದ್ದರ ಬಗ್ಗೆ ಬೇರೆಯವ್ರು ಏನು, ನಾವು ಕೂಡ ಶಾಸಿಸೋಕೆ ಆಗೋಲ್ಲ!" ವಿಶ್ವನಾಥಯ್ಯನವರು ದೃಢವಾಗಿ ಹೇಳಿದಾಗ ಆಕೆಯ ಮುಖದ ಮೇಲೊಡೆದಂತಾಯಿತು. ಸ್ವರ ಒಣಗಿತು. ಮೌನವಾಗಿ ಕೂತುಬಿಟ್ಟರು.

ಮದುವೆಯ ಬಗ್ಗೆ ತಾವು ಪಡುತ್ತಿರುವ ಪಾಡು, ಪ್ರತಿಯೊಂದರಲ್ಲು ಇರುವ ಸಮಸ್ಯೆಗಳನ್ನು ಆಕೆ ಪಟ್ಟಿ ಮಾಡುತ್ತ ಹೋದಾಗ ವಿಶ್ವನಾಥಯ್ಯ ಲೆಕ್ಕ ಹಾಕಿಕೊಂಡರೇ ವಿನಃ ಅವರೇನು ಹೇಳಲಿಲ್ಲ. 'ಇದು ಸ್ವಯಂಕೃತ ಅಪ ರಾಧ'—ಅನುಭವಿಸಲಿಯೆನ್ನುವುದು ಅವರ ಧೋರಣೆ.

ರಂಜಿತಾ ತಾವು ತಂದ ಸೀರೆಗಳನ್ನು ತೆಗೆದು ಹರವಿದಾಗ ವಿಶ್ವನಾಥಯ್ಯ ಎದ್ದು ಹೋದರು. ಮೊದಲೇ ಪೂರ್ತಿ ಮನದಟ್ಟಾಗುವಂತೆ ತಮ್ಮ ಆರ್ಥಿಕ ಸಾಮಾಜಿಕ, ಶೈಕ್ಷಣಿಕ ವಿಷಯಗಳನ್ನು ಹೇಳಿದ್ದರು. ಇದೊಂದು ರೀತಿಯ ಹಿಂಸೆಯೆನಿಸಿತು.

ಕೋಣೆಗೆ ಹೋದ ವಿಕಾಸ್ ಓದುವುದರಲ್ಲಿ ಇನ್ನಷ್ಟು ತಲ್ಲೀನನಾದ. ತಾನೆಲ್ಲಿ ತಪ್ಪಿದೆ ? ಎಂದು ಯೋಚಿಸಲು ಶುರು ಮಾಡಿದ್ದ. ಅವನಿಗೆ ಅಂಥ ಜೀವನ ಇಷ್ಟವಿಲ್ಲ.

ಸುನಂದಮ್ಮನಿಗೆ ಪ್ರತಿಯೊಂದು ಸೀರೆಯ ಅಂಚು, ಸೆರಗು, ಒಡಲನ್ನು ಬಿಚ್ಚಿ ತೋರಿಸಿದಳು ರಂಜಿತಾ.

"ನೀವು, ನಾವು ಒಂದೇ ಬಣ್ಣದ ಸೀರೆಗಳನ್ನು ತರಬಾರದಲ್ಲ. ಹೇಗಿವೆ ಸೀರೆಗಳು ?" ಅರ್ಥಗರ್ಭಿತವಾಗಿ ಕೇಳಿದಳು. ಆಕೆ ಹೆಣ್ಣಿನ ಸಹಜ ಆಸೆ ಯಿಂದಲೂ ಕೂಡ ಅವುಗಳನ್ನು ನೋಡಲಿಲ್ಲ. "ಸಧ್ಯಕ್ಕೆ ನಾವೇನು ತಂದಿಲ್ಲ. ರಜನಿ ಒಪ್ಪಿದ್ದು ತಂದರಾಯ್ತು" ತಣ್ಣಗೆ ನುಡಿದರು.

ತಾಯಿ, ಮಗಳು ಮುಖ ಮುಖ ನೋಡಿಕೊಂಡರು. ಅವರಲ್ಲಿ ಯಾವ ಧಾವಂತ ಕಾಣುವುದು ಹೋಗಲಿ ಶ್ರೀಮಂತ ಬೀಗರನ್ನು ಕೂಡ ಸರಳ ವಾಗಿಯೇ ಉಪಚರಿಸುತ್ತಿದ್ದರು. ಮದುವೆಗಾಗಿ ತಾವಿಷ್ಟು ಪರದಾಡುತ್ತಿರು ವಾಗ ಇಷ್ಟು ಹಗುರವಾಗಿದ್ದಾರಲ್ಲ - ಅವರುಗಳ ನೆತ್ತಿ ಹತ್ತಿ ಉರಿಯಿತು.

"ಕೂತ್ಕೊಳ್ಳಿ... ಬಂದೆ...." ಸುನಂದಮ್ಮ ಒಳಗೆ ಹೋದಾಗ ಮುಖ ಊದಿಸಿಕೊಂಡೇ ರಂಜಿತಾ ಸೀರೆಗಳನ್ನು ಮಡಚಿಟ್ಟಳು. "ಇವ್ರಿಗಿಂತ ಬೇರೆ ಸಂಬಂಧ ಸಿಕ್ತಾ ಇರ್ಲಿಲ್ವಾ! ಬರೀ ದುರಹಂಕಾರ ಜನ" ಗೊಣಗಿದಳು. ಪಂಕಜಮ್ಮನ ಬಿ.ಪಿ. ಹೆಚ್ಚತೊಡಗಿತು.

ಕಡೆಗೆ ರಾಘವನ್ ಹೋಗಿ ವರಾಂಡದಲ್ಲಿ ವಿಶ್ವನಾಥಯ್ಯನವರ ಜೊತೆ ಮಾತಿಗೆ ಕೂತಾಗ ರಂಜಿತಾ, ಪಂಕಜಮ್ಮ ವಿಕಾಸ್‌ನ ಕೋಣೆಗೆ ಬಂದರು. ನೀಡಿದ್ದ ಕಾಲನ್ನು ಹಿಂದಕ್ಕೆಳೆದುಕೊಂಡ, ಎಲ್ಲವೂ ಅಚ್ಚುಕಟ್ಟು.

ಪಂಕಜಮ್ಮ ಮುಖ ಒಂದು ತರಹ ಮಾಡಿದರು: "ನೀವು ಮನೆವರ್ರೂ ಬಂದು ಒಳಕ್ಕೆ ಬರ್ಲಿಲ್ಲಾಂದ್ರೆ ... ನಮಗೆಷ್ಟು ಬೇಸರ ..." ಬಿಗಿಯಾಗಿ ಆಡಿದಾಗ ವಿಕಾಸ್ ಪುಸ್ತಕದಿಂದ ನೋಟವೆತ್ತಿದ. "ಸ್ವಲ್ಪ ಅರ್ಜೆಂಟ್ ಕೆಲ್ಸವಿತ್ತು" ಸಹಜವಾಗಿ ನುಡಿದ.

ತಾಯಿ, ಮಗಳು ಅಲ್ಲೇ ಕೂತರು. ಬೀಗರಿಗಿಂತ ಅವರಿಗೆ ಭಾವಿ ಅಳಿಯನ ಮೇಲೆ ಕಣ್ಣು ಹೆತ್ತು, ಹೊತ್ತು, ಬೆಳೆಸಿದ ಅವರ ಪ್ರೀತಿಯ ಮಗನನ್ನು ಅನಾಮತ್ತಾಗಿ ಎತ್ತಿಕೊಂಡು ಹೋಗೀವ ದುರಾಸೆ. ಇದೆಂಥ ಚೂರಿ ಹಾಕುವ ಕೆಲಸವೆಂದು ಆ ಜನರಿಗೆ ಗೊತ್ತಿಲ್ಲ.

ಮತ್ತಷ್ಟು ಬೆಣ್ಣೆಯಾದರು ಆಕೆ "ಹೇಗೂ ಪುರಸತ್ತಾಗಿದ್ದೀಯಲ್ಲ ವಿಕಾಸ್ ನನ್ಜೊತೆ ಬಾ. ಸೂಟು ಹೊಲಿದು ಹಾಕೋಕೆ ಅನ್ಕೂಲವಾಗುತ್ತೆ" ವಿಕಾಸ್ ಕರಗುವ ಬದಲು ಮತ್ತಷ್ಟು ಗಟ್ಟಿಯಾದ.

"ನಿಮ್ಗೇ ಅಂಪೇ ವಿಷ್ಯ ತಿಳ್ಸಿದ್ದೆ. ರಜನಿಗೂ ಒತ್ತಿ ಹೇಳಿದ್ದೆ. ಉಡುಗೊರೆ, ಚಳುವಳಿ ಯಾವ್ದೂ ಬೇಡ. ನಿಮ್ಮ ಮಗ್ಳೇ ಈ ಮನೆಗೆ ಉಡುಗೊರೆ. ಮತ್ತೆ ಅವುಗಳ ಪ್ರಸ್ತಾಪ ಬೇಡ. ಅರ್ಥ ಮಾಡ್ಕೊಳ್ಳಿ" ಪುಸ್ತಕ ಎತ್ತಿ ಪಕ್ಕಕ್ಕಿಟ್ಟ; ಈ ವಿಷಯ ಸಾಕು ಎನ್ನುವಂತಿತ್ತು ಅವನ ಮುಖಭಾವ.

ಆಕೆಯ ಗಂಟಲಲ್ಲಿ ಏನೋ ಸಿಕ್ಕಿಹಾಕಿಕೊಂಡಂತಾಯಿತು. ಒಳಕ್ಕೂ ಹೋಗದು, ಹೊರಕ್ಕೂ ಬರದು, ಎರಡು ಕಡೆಯಿಂದಲೂ ಹಿಡಿದು ಒತ್ತಿದಂತೆ ಆಯಿತು.

ಬೇರೊಂದು ವರಸೆ ಪ್ರಾರಂಭಿಸಿದರು.

"ಇದು ನಿಮ್ಮ ಸರಳ ಸ್ವಭಾವ ಇರ್ಬಹುದ್ದು. ಆದ್ರೆ....ನೀವು ನಮ್ಮ ಆಸೆ

ಆಕಾಂಕ್ಷೆ ಕಡೆ ಗಮನ ಕೊಡ್ಬೇಕು" ಒತ್ತಿ ಹೇಳಿದಾಗ ವಿಕಾಸ್‌ಗೆ ಮೈ ಪರಚಿಕೊಳ್ಳುವಂತಾಯಿತು. ತಾನೆಲ್ಲಿ ಮೋಸಹೋದೆ ?

"ದಯವಿಟ್ಟು ಕ್ಷಮ್ಸಿ, ಮನುಷ್ಯನಿಗೆ ಸ್ವತಂತ್ರ, ತನ್ನತನ ಹೆಚ್ಚು ಪ್ರಿಯ. ಅದ್ನ ಅಪರೂಪ ಸಂದರ್ಭದಲ್ಲಿ, ಕ್ಲಿಷ್ಟ ಸನ್ನಿವೇಶಗಳಲ್ಲಿ ಮಾತ್ರ ಬಲಿ ಕೊಡ್ಬೇಕು. ಅದ್ನ ನೀವು ಚೆನ್ನಾಗಿ ಅರ್ಥ ಮಾಡ್ಕೊಬೇಕು. ನಾಲ್ಕು ಗೋಡೆಯ ಮಧ್ಯೆ ಇರುವ ಹೆಣ್ಣು ನೀವಲ್ಲ. ಸ್ವಲ್ಪ ಅರಿಯುವ ಪ್ರಯತ್ನ ಮಾಡಿ" ಹೆಚ್ಚು ಸ್ಪಷ್ಟವಾಗಿ ಹೇಳಿದ. ಪಂಕಜಮ್ಮ ಪೆಚ್ಚಾದರೂ ಮೇಲೆ ತೋರಿಸಿಕೊಳ್ಳಲಿಲ್ಲ. ಗಂಡುಗಳ ನಡುವೆ ಹೆಚ್ಚು ಓಡಾಡಿದಾಕೆ ಮೆಚ್ಚಿಗೆಯಿಂದ ತಲೆದೂಗಿದರು.

ಆಕೆ ಜಾಣೆ. ಹೇಗೆ ಬಗ್ಗಿಸಬೇಕೆಂದು ಆಕೆಗೆ ಗೊತ್ತು. ಎರಡನೆಯ ಮಗಳು ರಮಣಿಯ ಗಂಡ ಬೆಂಕಿಯಂತೆ ಉರಿಯುತ್ತಿದ್ದ ಸದಾ. ಅವನನ್ನು ಮದುವೆಯಾಗಿ ವರ್ಷ ತುಂಬುವ ಮುನ್ನವೇ ಪಳಗಿಸಿಬಿಟ್ಟಿದ್ದರು. ಈಗ ವಿಧೇಯ ಅಳಿಯ. ಒಂದು ಸಲ ಫೋನ್ ಹಚ್ಚಿದರೆ ಮಾಡುವ ಕೆಲಸ ಬಿಟ್ಟು ಓಡಿ ಬರುತ್ತಿದ್ದ. ಇನ್ನು ವಿಕಾಸ್ ಯಾವ ಮಹಾ ? ಹಗುರಗೊಂಡರು.

ರಂಜಿತ ಮನದಲ್ಲಿಯೇ ವಿಕಾಸ್‌ನ ರೂಪ, ವ್ಯಕ್ತಿತ್ವವನ್ನು ಪರಿಶೀಲಿಸಿ ಸಿದಳು. ನಸುಕಂಪು ಬೆರೆತ ಬಿಳಿಯ ಬಣ್ಣ ಫಳಫಳ ಹೊಳೆಯುತ್ತಿದ್ದರೆ, ಅವನ ಅಭಿಮಾನ ತುಂಬಿಕೊಂಡ ತೇಜೋಪುಂಜ ಕಣ್ಣುಗಳು ಎದುರು ನಿಂತವರ ಕಣ್ಣುಗಳಲ್ಲಿ ಅಭಿಮಾನ ಮೂಡಿಸುತ್ತಿತ್ತು. ನೀಳ ಮೂಗು, ಸೆಟೆದುಕೊಂಡ ಹುಬ್ಬುಗಳು, ತುಟಿಗಳ ಮೇಲಿನ ಕಿರುಮೀಸೆ ಪೂರ್ಣ ಪುರುಷತ್ವವನ್ನು ಬಿಂಬಿಸುವಂತೆ ಕಂಡಿತು. ಅವನಲ್ಲಿ ವಿಶೇಷವಾದದ್ದು ಏನೋ ಇದೆ, ಗುರ್ತಿಸಲಾರದೆ ಹೋಯಿತು ಅವಳ ಮನ.

ಹೊರಗೆ ಸೀರೆಗಳು ಅನಾಥವಾಗಿ ಬಿದ್ದಿದ್ದವು. ನೂರಾರು ಸೀರೆಗಳು ವಾರ್ಡ್‌ರೋಬ್‌ನಲ್ಲಿ ನೇತಾಡುತ್ತಿದ್ದರೂ ತಾಯಿ ಮಗಳ ಸೀರೆಯ ಹುಚ್ಚು ಕಮ್ಮಿಯಾಗಿರಲಿಲ್ಲ. ಯಾವುದೇ ಹೊಸ ಮಾದರಿ ಸೀರೆ ಬಂದರೂ ಕೊಳ್ಳುವ ತವಕ. ಮಧ್ಯಮ ದರ್ಜೆಯ ಬದುಕನ್ನು ಅಪ್ಪಿಕೊಂಡ ಸುನಂದಮ್ಮ ಕಣ್ಣುಗಳನ್ನು ಕೂಡ ಅರಳಿಸಲಿಲ್ಲ. ಸಂತೃಪ್ತ ಜೀವನ ಅವರದು

ರಂಜಿತಾ ಸ್ವಲ್ಪ ಧೈರ್ಯವಹಿಸಿ ಹೇಳಿದಳು.

"ನೀವು ರಜನಿಗೋಸ್ಕರ ಸ್ವಲ್ಪ ತ್ಯಾಗ ಮಾಡಿ" ವಿಕಾಸ್‌ನ ಹುಬ್ಬುಗಳು ಮೇಲೇರಿ ಕೆಳಗಿಳಿದವು. ಕಣ್ಣಲ್ಲೇ ನಕ್ಕ "ಎಂಥಾ .. ತ್ಯಾಗ ? ಆ ಪದದ ಬಳಕೆ ಯದ್ವಾತದ್ವಾ ಆಗಿ ಈಗ ಬರೀ ಗೊಂದಲವೇ ತುಂಬಿಕೊಂಡಿದೆ ಅದರ ಸುತ್ತಲೂ...." ಅವಳ ಉತ್ಸಾಹ ತಗ್ಗಿತು.

ಬಂದ ರಾಘವನ್ ಕಣ್ಣರಳಿಸಿದ. ಸರಳವಾಗಿದ್ದ ಕೋಣೆ ಅಚ್ಚುಕಟ್ಟಾಗಿತ್ತು. ನೀರವಡೆ ರಾಗಾಲಾಪನೆ ಮಾಡಿದಂತಿತ್ತು. 'ವಾಹ್' ಎಂದುಕೊಂಡ.

ಸಲ್ಪ ಸಲಿಗೆವಹಿಸಿ ರಾಘವನ್ ಅವನ ಭುಜದ ಮೇಲೆ ಕೈ ಹಾಕಿದ. ಬನ್ನಿ ಹೋಗೋಣ। ಅಲ್ಲಿ ರಜನಿ ಅಳು ಮುಖವೊತ್ತು ಕೂತಿದ್ದಾಳೆ" ತೋಳಿನ ಮೇಲಿದ್ದ ಅವರ ಕೈಯನ್ನ ಮೆಲ್ಲಗೆ ಸರಿಸಿದ "ಕೂತ್ಕೊಳ್ಳಿ...." ಬೆಚ್ಚಿಬಿದ್ದ.

ಇವರ ಯಾವುದೇ ಮಾತುಗಳಿಗೆ ವಿಕಾಸ್ ಒಂದಿಂಚು ಚಲಿಸಲಿಲ್ಲ. ರಂಜಿತಾ, ರಾಘವನ್ ಕೂಡ ಅವನಿಗೆ ಇಷ್ಟವಾಗಲಿಲ್ಲ. ಅದೇ ನೇರ ನುಡಿ, ಅದೇ ಗಂಭೀರ ಮುಖ — ಸೋತ ಮುಖದಿಂದ ಪಂಕಜಮ್ಮ ಎದ್ದು ಹೊರಗೆ ಬಂದರು.

ಇಷ್ಟು ದಿನ ಮೌನವಹಿಸಿದ ವಿಶ್ವನಾಥಯ್ಯ ಕೆಲವು ಮಾತುಗಳನ್ನು ಹೇಳಲು ಇಚ್ಛಿಸಿದರು. ಇದೇ ರೀತಿಯ ಮುಂದುವರಿಕೆ ಅವರಿಗೆ ಬೇಕಿಲ್ಲ.

"ಸ್ವಲ್ಪ. ಕೂತ್ಕೊಳ್ಳಿ. ನಿಮ್ಮಂಥ ತಿಳಿದ, ಬುದ್ಧಿವಂತ ಜನರ ಎದುರು ಇಂಥ ಮಾತುಗಳು ಆಡೋ ಪ್ರಸಕ್ತಿಯೇ ಬಂದಿರಲಿಲ್ಲ. ಆದ್ರೆ ... ಈಗ ಆಡ್ಬೇಕೂಂತ ಅನ್ನಿಸಿದೆ" ವಿಶ್ವನಾಥಯ್ಯ ಗಡ್ಡ ಕೆರೆದರು. ಆಕೆ ಕಣ್ಣಗಲಿಸಿದಳು. ಶತ ಮೂರ್ಖರಾಗಿ ಕಂಡಿದ್ದರು ಇವರುಗಳೆಲ್ಲ.

"ನಾನು ಮಗ್ಳ ಮದ್ವೆ ಮಾಡಿದವ. ಅದ್ರ ಹಿಂದಿನ ಕಷ್ಟಸುಖಗಳು ನಂಗೆ ಗೊತ್ತು. ಹುಡ್ಗಿ ನಮ್ಗೆ ಒಪ್ಗೆ. ಹೇಗೆ ಮದ್ವೆ ಮಾಡಿಕೊಟ್ರೂ ಪರ್ವಾಗಿಲ್ಲ. ಒಡ್ವೆ, ಸೀರೆಗಳ ಪ್ರಸ್ತಾಪ ಬೇಡ. ಇಲ್ಲಿನ ಸಮಸ್ತವು ಅವಳದೇ" ಒತ್ತಿ ಹೇಳಿದಾಗ ಪಂಕಜಮ್ಮ ಮುಖ ಹಿಂಡಿದರು. ಅವರ ಪ್ರಕಾರ ಮಿಕ್ಕ ಅಳಿಯಂದಿರು ಇವರಿಗಿಂತ ಶ್ರೀಮಂತರೇ, ಆದರೆ ಅವರ ವರ್ತನೆ ಇವರಿಗಿಂತ ತೀರಾ ಬೇರೆಯಾಗಿತ್ತು.

ಪಂಕಜಮ್ಮ ತೀರಾ ಉದ್ವೇಗಗೊಂಡರು. "ನಿಮ್ಮ ಮನೆಗೆ ಸೊಸೆಯಾದ

ಮಾತ್ರಕ್ಕೆ ನಾವೇನು ಅಲ್ವಾ! ಮುಗ್ಸಿಗೆ ಕೊಡೋ ಬಿಡೋ ನಿರ್ಧಾರ ನಮ್ದೇ!" ಸಹನೆ ಕಳೆದುಕೊಳ್ಳುವ ಮಟ್ಟಕ್ಕೆ ಹೋದರು. ಹಣೆಗೆ ಅಂಗೈಯೊತ್ತಿದರು. ಆತ "ನಾನು ಹೇಳಿದ್ದು ಆ ಅರ್ಥದಲ್ಲಿ ಅಲ್ಲ. ನಿಶ್ಚಯಕ್ಕೆ ಮೊದ್ಲೇ ನಮ್ಮ ನಿಲುವನ್ನು ನಿಮ್ಗೆ ಸ್ಪಷ್ಟಪಡಿಸಿದ್ದೆ. ಒಡ್ವೆ ಸೀರೆಗಳ ಬಗ್ಗೆ ನಮ್ಮನ್ನು ಪ್ರಶ್ನಿಸೋದ್ಬೇಡ. ನಿರಾಭರಣಳನ್ನಾಗಿಯೇ ನಮ್ಗೆ ಧಾರೆಯೆರೆದು ಕೊಡಿ" ಇದು ಮುಕ್ತಾಯವೆನ್ನುವಂತೆ ಮೇಲಕ್ಕೆದ್ದರು.

ರಂಜಿತಾ ಸೀರೆಯ ಪ್ಯಾಕೆಟ್‌ಗಳನ್ನು ಒಯ್ದು ಹಿಂದಿನ ಸೀಟಿಗೆ ಎಸೆದಳು ಅಸಹನೆಯಿಂದ. ತನ್ನಮ್ಮನಂಥ ವ್ಯಕ್ತಿಗೆ ಇದು ಅಪಮಾನವೆಂದು ಅವಳ ಭಾವನೆ.

ತುಟಿ ಬಿಚ್ಚದೆ ರಾಘವನ್ ಕಾರು ಹತ್ತಿದರು. ಮನ ನೊಂದರೂ ಸ್ವಾಭಿಮಾನಿ ಜನಗಳನ್ನು ಮೆಚ್ಚಿಕೊಂಡ ಅಸೆ, ಚಂಚಲತೆ ಇಲ್ಲದ ವಿಕಾಸ್ ದಿಟ್ಟ ವ್ಯಕ್ತಿತ್ವಕ್ಕೆ ಅವರು ಮಾರುಹೋಗಿದ್ದರು.

ಕಾರು ಹೊರಟ ಕೂಡಲೇ ರಂಜಿತಾ ಗುಡುಗಿದಳು "ನೋಡಿ, ನೋಡಿ ಇಂಥ ಸಂಬಂಧ ಹುಡ್ಕಿದ್ದೀಯಲ್ಲ! ಬೇರೆಯವರಿಗಿಂತ ತದ್ವಿರುದ್ಧ. ಕುಟೀರ ಕಟ್ಟಿಕೊಂಡು ಕಾಡಿನಲ್ಲಿ ವಾಸ ಮಾಡ್ಬೇಕಾದ ಜನ ಸಿಟಿಯಲ್ಲಿ ಯಾಕಿದ್ದಾರಂತೆ? ಅಪ್ಪ, ಅಮ್ಮನ ಸ್ವಾಭಿಮಾನಕ್ಕಿಂತ ಮಗನದು ಒಂದು ಪಟ್ಟು ಹೆಚ್ಚೇ. ಜಪ್ಪಯ್ಯ ಅಂದ್ರೆ ಸೋಲೋಲ್ಲ, ನೀವುಗಳೆಲ್ಲ ಸೋತು ಶರಣಾಗ್ಬೇಕಷ್ಟೆ" ಒಡಬಡನೆ ಆಡಿದ ಮಾತು ಆಕೆಯ ಮೇಲೆ ಹೆಚ್ಚು ಪರಿಣಾಮ ಬೀರಿತು. ಬಲವಾದ ನಿರ್ಧಾರಕ್ಕೆ ಬಂದರು. ಡ್ರೈವರ್ ಕಾರಿನ ವೇಗ ಕಡಿಮೆ ಮಾಡಿದ.

"ಈಗ ಎಲ್ಲಿಗೆ ಹೋಗೋದು?" ಅವನ ನಮ್ರ ಪ್ರಶ್ನೆಗೂ ರೇಗಿಬಿಟ್ಟರು. ಅಷ್ಟು ಕಾಮನ್‌ಸೆನ್ಸ್ ಇಲ್ವಾ, ಮನೆಗೆ ನಡೀ."

ಕಾರಿನ ವೇಗ ಹೆಚ್ಚಿತು. ಬೆರಳುಗಳ ಮಧ್ಯೆ ಇದ್ದ ಅರ್ಧ ಸಿಗರೇಟನ್ನ ಆಚೆಗೆ ಎಸೆದರು ರಾಘವನ್. ಈ ಕೊಬ್ಬಿದ ಜನರಿಗೆ ಸರಿಯಾದ ಪ್ರತಿಭಟನೆ ತೋರಬಲ್ಲಂಥ ಗಂಡು ಸಿಕ್ಕಿದನಲ್ಲ ಎನ್ನುವ ಖುಷಿ.

ಎದೆಯ ಭಾರವನ್ನು ಪಂಕಜಮ್ಮ ಸ್ವಲ್ಪ ಹೊರಕ್ಕೆ ತಳ್ಳಿದರು "ಸಂಬಂಧ

ಕಣ್ಣಿಗೆ ಬಿತ್ತು. ವಿಕಾಸ್ ಮೆಚ್ಚಿಗೆಯಾದ. ನನ್ತಂಗಿ ಕುಣಿದ್ಳು. ನಿಶ್ಚಯಿಸಿ ಬಿಟ್ವಿ. ಇದೇ ಊರಿನಲ್ಲಿ ಇರ್ತಾಳಲ್ಲ ಅನ್ನೋ ಆಸೆಗೆ ಒಂದಿಷ್ಟು ತ್ಯಾಗ ಮಾಡ್ಬೇಕಾಯ್ತು. ಈಚೆಗೆ ಒಬ್ಳೇ ಹೊರ್ಗೆ ಓಡಾಡೋದು ಕಷ್ಟವಾಗಿದೆ. ಆಗಾಗ ಬಿ.ಪಿ. ರೈಸಾಗಿ ತೊಂದರೆ ಕೊಡೋಕೆ ಷುರುವಾಗಿದೆ. ಜೊತೆಯಾಗಿ ಇರ್ತಾಳೆ. ಅವ್ಳಿಗೂ ರೂಢಿಯಾಗುತ್ತೆ. ಇದೆಲ್ಲ ನನ್ನ ಯೋಚನೆಗಳು. ಪ್ರಥಮ ಹಂತದಲ್ಲಿಯೇ ತಲೆಕೆಳಗಾಗ್ತಯಿದೆ" ತೋಡಿಕೊಂಡರು. ಆಕೆಯ ಸ್ವರ ಪೂರ್ತಿ ಒಣಗಿಹೋಗಿತ್ತು.

ಈ ಸಂಬಂಧ ತಪ್ಪಿಹೋಗುವುದು ರಾಘವನ್‌ಗೆ ಇಷ್ಟವಿಲ್ಲ. "ಇದೆಲ್ಲ ಮೊದ್ಲಿನ ಹಾರಾಟ, ಆಮೇಲೆ ತಾನಾಗಿ ತಣ್ಣಗಾಗ್ತಾನೆ. ತಾಳಿ ಮಗಳ ಕೊರಳಿಗೆ ಬಿದ್ದು ಮೊದ್ಲು ಅಳಿಯನಾಗ್ಲಿ........" ರಂಜಿತಾಗೆ ಕಣ್ಣೊಡೆದು ಚಿಟಿಕೆ ಹಾಕಿದ. ಅವಳ ಮುಖದಲ್ಲಿ ಕೆಂಪೊಡೆಯಿತು. 'ಛಿ ...' ರಾಘವನ್ ಮುಖ ಪಕ್ಕಕ್ಕೆ ತಿರುಗಿಸಿದ. ಸೀರೆ, ಒಡವೆ, ಆರಾಮಾಗಿ ಹಾಕಿಗೆಗೆ ಬರುವ ಹೆಂಡತಿಯ ಬಗ್ಗೆ ಜಿಗುಪ್ಸೆಗೊಂಡಿದ್ದ. ಈಗ ಯಾವ ಆಕರ್ಷಣೆಯೂ ಉಳಿದಿರಲಿಲ್ಲ.

ಇವರುಗಳು ಒಳಗೆ ಬಂದಾಗ ರಜನಿ ಮುಖದ ಮುಂದೆ ಪೇಪರು ಹಿಡಿದಿದ್ದಳು. ಸದ್ದಿಗೆ ಅವಳ ಕೈ ಇಳಿಯಿತು. ಕಣ್ಣಲ್ಲಿ ಮಿಂಚು ಹರಿದಾಡಿತು. ಪಂಕಜಮ್ಮ ಮುಖ ಗಂಟಿಕ್ಕಿದರು.

"ಅಂತೂ .......ಇಂತೂ ...... ನೋಡಿ ಒಳ್ಳೆ ಸಂಬಂಧವನ್ನೇ ನಿಶ್ಚಯಿಸಿದ್ದಾಯ್ತು. ಒಡ್ವೆ ಬೇಡ, ಸೀರೆ ಬೇಡ, ಇಷ್ಟ ಬಂದ ಕಡೆ ಧಾರೆಯೆರೆದು ಕೊಂಡಿಂತಾರೆ. ಬ್ಲಡಿ ಬೆಗ್ಗರ್ಸ್...." ಉರಿದುಬಿದ್ದರು. ಕೆಲವೊಮ್ಮೆ ಅಮ್ಮನ ಮುಂದೆ ನಿಲ್ಲುವುದು ಕಷ್ಟವೆಂದು ರಜನಿಗೆ ಗೊತ್ತು.

"ಹಾಗೇ ಮಾಡಿ" ತಣ್ಣಗೆ ಹೇಳಿದಳು.

ಭೂಮಿ, ಆಕಾಶ ಒಂದಂತಾಯಿತು ಆಕೆಗೆ. "ಸ್ವಲ್ಪ ಕೂಡ ಕಾಮನ್ ಸೆನ್ಸ್ ಬೇಡ್ವಾ ! ನಮ್ಮ ಸಂಕ್ಟ ನಿಮ್ಗೆ ಹೇಗೆ ಅರ್ಥವಾಗುತ್ತೆ ?" ಇಂಥ ಸಂದರ್ಭಗಳಲ್ಲಿಯೇ ನಮ್ಮ ಸ್ಟೇಟಸ್ ತೋರ್ಸಿಕೊಳ್ಳೋಕೆ ಸಾಧ್ಯವಾಗೋದು. ಎಷ್ಟೋ ಜನಾನ ಕರೀಬೇಕಾಗುತ್ತೆ. ಕೆಲವು ಪ್ರತಿಷ್ಠಿತರ ಪರಿಚಯಕ್ಕೆ ಇದು ಒಂದು ಸುಸಂದರ್ಭ" ಸರಳವಾದ ಮಾತುಗಳಾದರೂ ಸಿಡಿಲುಗಳಂತೆ ವಿಜೃಂಭಿ

ಸಿದವು. ರಜನಿ ಜಾಗ ಖಾಲಿ ಮಾಡಿದಳು. ಶೀರಾ ಹಾರಾಟಕ್ಕೆ ಅವಕಾಶ ಮಾಡಿಕೊಡಬೇಕಾದರೇ ಮೊದಲೇ ಡಾಕ್ಟರನ್ನು ಕರೆಸಿರಬೇಕೆಂದು ಆವಳಿಗೆ ಗೊತ್ತು. ಹೈಪರ್ ಬಿ.ಪಿ.ಯಿಂದ ನರಳುವ ಆಕೆ ತಿಂಗಳಲ್ಲಿ ನಾಲ್ಕಾರು ದಿನ ಗಳಾದರೂ ನರ್ಸಿಂಗ್ ಹೋಂಗೆ ಖಾಯಂ ಅತಿಥಿಯಾಗಿರುತ್ತಿದ್ದರು.

ರಂಜಿತಾ ತಂಗಿಯ ಕೋಣೆಯತ್ತಲೇ ನೋಡಿದಳು. "ಇವ್ಳು ನಿನ್ನ ಸೋಷಿಯಲ್ ವರ್ಕ್ಸ್‌ಗೆ ಎಷ್ಟು ಹೆಲ್ಪ್ ಮಾಡ್ತಾಳೋ, ಕಾಣೆ! ಅಂಥ ಜಾಯಮಾನದ ಹೆಣ್ಣಾಗಿ ಕಾಣಿಸೋಲ್ಲ" ಉಸುರಿದಳು. ಪಂಕಜಮ್ಮನ ಶರೀರದಲ್ಲಿ ಸ್ವಲ್ಪವೂ ತ್ರಾಣವಿರಲಿಲ್ಲ. "ಏನೋ... ಹೇಗೋ ಆಗಿಹೋಗ್ಲಿ. ಇಡೀ ಜವಾಬ್ದಾರಿ ನಿನ್ನ ಪಪ್ಪ ಒಪ್ಪಿಕೊಂಡಿದ್ದಾರೆ" ಆಕೆಯ ಮುಖ ಇನ್ನಷ್ಟು ಬಿಳಚಿಕೊಂಡಿತು.

ಗಂಭೀರವಾದ ಚಿಂತನೆಯಲ್ಲಿ ಮುಳುಗಿದರು. ರಜನಿ ಕಾಲೇಜಿಗೆ ಹೋಗು ತ್ತಿದ್ದರೂ ತನ್ನ ಸೌಂದರ್ಯ ಕಾಯ್ದುಕೊಳ್ಳುವ ವಿಷಯದಲ್ಲಿ ಅಂತಹ ಆಸಕ್ತಿ ಇರಲಿಲ್ಲ. ಫ್ಯಾಷನ್ ಉಡುಪು, ಮೇಕಪ್ ಬಗ್ಗೆ ಅಂಥ ಕ್ರೇಜ್ ಇರಲಿಲ್ಲ. ಮನೆಯವರ ಒತ್ತಡಕ್ಕೆ ಆಗಾಗ ಮಣಿದರೂ ಮಿಕ್ಕ ವೇಳೆಯಲ್ಲಿ ಒಂದಿಷ್ಟು ಪೌಡರ್ ಬಳಿದು ತನ್ನ ಮುಖಾಲಂಕಾರ ಮುಗಿಸುತ್ತಿದ್ದಳು.

"ಬರೀ ವೇಸ್ಟ್....ಕನ್ನಡಿಯ ಮುಂದೆ ನಿಲ್ಲೋದು ಅಂದ್ರೆ..." ಗಂಟೆ ಗಟ್ಟಲೇ ಕನ್ನಡಿಯ ಮುಂದೆ ಕೂರೋ ರಮಣಿ, ರಂಜಿತಾನ ನೋಡಿದಾಗ ಸಿಡಿಮಿಡಿಗುಟ್ಟುತ್ತಿದ್ದಳು. ಆಗಾಗ ಹಂಗಿಸುತ್ತಲೂ ಇದ್ದಳು. ಕೆಲವೊಮ್ಮೆ ತಾಯಿಯ ಕಡೆಗೂ ಅವಳ ಗಮನ ಹರಿಯುತ್ತಿತ್ತು "ಅಮ್ಮಾ, ನೀನು ಸ್ಲೀವ್ ಲೆಸ್ ಬ್ಲೌಸ್ ಹಾಕ್ಬೇಡ. ಸ್ವಲ್ಪಾನು ಚೆನ್ನಾಗಿ ಕಾಣೋಲ್ಲ. ಉದ್ದ ತೋಳಿನ ಬೌಸ್ಲ ಸಿಂಗೆ ಚೆನ್ನಾಗಿ ಕಾಣುತ್ತೆ" ಆಗೆಲ್ಲ ಉರಿದುಬೀಳುತ್ತಿದ್ದಳು ಆಕೆ. ಮುಖ, ಮೂತಿ ನೋಡದೇ ಚಚ್ಚಿಬಿಡುವಷ್ಟು ಸಿಟ್ಟು. ಆಗಾಗ ಬ್ಯೂಟಿ ಪಾರ್ಲರ್‌ಗೆ ಭೇಟಿ ಕೊಟ್ಟು ತನ್ನ ಸೌಂದರ್ಯ ಉಳಿಸಿಕೊಳ್ಳಲು ಪ್ರಯತ್ನಿ ಸುತ್ತಿದ್ದಳು. ಆದರೆ ಸೊಂಟದ ಸುತ್ತಲೂ ಬೆಳೆದ ಬೊಜ್ಜನ್ನು ಕರಗಿಸ ಲಾಗಿರಲಿಲ್ಲ.

ಅಂಥ ಸಂದರ್ಭಗಳಿಗೆ ಗುರುಮೂರ್ತಿಗಳು ಹಗುರವಾಗಿ ನಗುತ್ತಿದ್ದರು.

"ಇವಳೊಬ್ಬ ಗೌರಮ್ಮ, ಹುಟ್ಟಿದ್ಳು ! ಈ ಜಡತೆ ಎಷ್ಟು ದಿನಾನೋ !" ಮಗಳ ಮಾತುಗಳನ್ನು ಗಂಭೀರವಾಗಿ ತೆಗೆದುಕೊಳ್ಳುತ್ತಲೇ ಇರಲಿಲ್ಲ.

ಸಿಡಿಯುವ ತಲೆಯನ್ನು ಎರಡು ಕೈಯಲ್ಲು ಒತ್ತಿಕೊಳ್ಳುತ್ತ ತಮ್ಮ ಕೋಣೆಗೆ ಹೋಗಿ ಹಾಸಿಗೆಯ ಮೇಲೆ ಕುಸಿದರು. ಅವರತನಕ್ಕೆ ವಿಕಾಸ್ *ಬಲವಾದ ಪೆಟ್ಟು ಕೊಟ್ಟಿದ್ದ. ಸಹಿಸಲಾರದ್ದು. ಅತ್ತಿತ್ತ ಹೊರಳಾಡಿದರು.* ಎದ್ದು ಕೂತರು. ಮತ್ತೆ ಮಲಗಿದರು.

ರಂಜಿತಾ ಬಂದು ಕೂತಳು. ಸಂತೈಯಿಸಲಾರದ ಸ್ಥಿತಿ ಅವಳದು. ಪಂಕಜಮ್ಮ ದಿಢೀರನೇ ಒಂದು ನಿರ್ಧಾರಕ್ಕೆ ಬಂದರು. "ಈ ಸಂಬಂಧಾನೇ ಬೇಡ. ಬೇರೆ ಗಂಡು ಹುಡ್ಕಿದ್ರಾಯ್ತು. ಇಟ್ಟ ಲಗ್ನಕ್ಕೆ ಬೇರೆ ಗಂಡನ್ನು ಜೋಡಿಸೋದು ಕೂಡ ಕಷ್ಟವಾಗೋಲ್ಲ" ಯಾರನ್ನೋ ಗಮನದಲ್ಲಿಟ್ಟುಕೊಂಡು ಈ ಮಾತು ಹೇಳಿದ್ದರು. ರಂಜಿತಾ ತಲೆಯಾಡಿಸಿದಳು. ಬೇಸರವಿದ್ದರೂ 'ವಿಕಾಸ್ ಪರಿಪೂರ್ಣ ಗಂಡು' ಎಂದು ಅವಳ ಮನ ಒತ್ತಾಯಿಸಿ ಹೇಳಿತು. ಅವಳಿಗೆ ರಜನಿಯ ಬಗ್ಗೆಯು ಅನುಮಾನ.

"ಬಹುಶಃ ರಜನಿ ಒಪ್ಪೋಲ್ಲ" ಮೆಲ್ಲಗೆ ನುಡಿದಳು. ಆಕೆ ದನಿಯೇರಿಸಿದರು "ಯಾಕೆ ಒಪ್ಪೋಲ್ಲ. ಇದೇನು ಲವ್ ಅಫೇರ್ ಅಲ್ಲ. ನಾವೇ ನಿಂತು, ನೋಡಿ ನಿಶ್ಚಯಿಸಿದ್ದು. ಈಗ ಬೇಡಾಂತೀವಿ. ಅದೇನು ಮಾಡ್ತಾಳೋ ನೋಡ್ತೀನಿ" ಛಾಲೆಂಜ್ ಎಸೆದರು. ಮಗಳನ್ನು ಬಗ್ಗಿಸುವ ಆತ್ಮವಿಶ್ವಾಸ ಆಕೆಯಲ್ಲಿತ್ತು.

ರಂಜಿತಾಳ ತಲೆ ತಗ್ಗಿತು. ಯಾವುದು ಸರಿ ? ಯಾವುದು ತಪ್ಪು ? ನಿಶ್ಚಯಿಸಲಾರದ ಸಂದಿಗ್ಧ.

ಗುರುಮೂರ್ತಿಗಳು ಮನೆಗೆ ಬಂದ ಕೂಡಲೇ ತಮ್ಮ ನಿಶ್ಚಯವನ್ನು ಅವರ ಮುಂದಿಟ್ಟರು. ಪಂಕಜಮ್ಮ ಅವರ ತಲೆ ಬಿಸಿಯಾಯಿತು. ಮಗಳಿಗೆ ಗಂಡು ಹುಡುಕುವುದು ಕಷ್ಟವಾಗದು. ಒಂದೈವತ್ತು ಹೆಚ್ಚಿಗೆ ಕೈ ಬಿಡಬಹುದು. ಅದಕ್ಕೆ ಹಿಂಜರಿಯಲಾರರು. ಸಾಕು ಸಾಲದ ಬದುಕು ಮಾತ್ರ ಮಗಳಿಗೆ ಬೇಡ.

"ಮಧ್ಯಮ ದರ್ಜೆಯ ಬದ್ಕಿಗಿಂತ ಕಿರಿದು ಕಿನ್ನೋ ಜನ ಮೇಲು ! ಅಷ್ಟಿಷ್ಟು ನೆಮ್ದಿ, ಸುಖ ಇರುತ್ತೆ ಇಲ್ಲಿ ಅವ್ರದ್ದೇ ಒಂದು ಪ್ರಪಂಚ,

ಸಮಾಜ ಸೃಷ್ಟಿಯಾಗುತ್ತೆ. ನಿಶ್ಚಿಂತೆಯಿಂದ ಇರ್ತಾರೆ. ಆದ್ರೆ ಅಲ್ಲಿಯು ತಲುಪಲಾರದೆ, ಇಲ್ಲಿಯೂ ಇರಲಾರದ ಜನರ ಜೀವನ ಬರೀ ಸೋಗು, ನಟನೆ. ಉಪವಾಸವಿದ್ರೂ ಮೃಷ್ಟಾನ್ನದ ಮಾತಾಡೋ ಬೆಪ್ಪು ಜನ !" ಇಂಥ ಮಾತು ಗಳನ್ನು ಆಗಾಗ ಗುರುಮೂರ್ತಿಗಳು ಆಡುತ್ತಿದ್ದರು. ಮೂರು ಸಾವಿರಕ್ಕೆ ಮಿಕ್ಕಿ ಸಂಬಳ ತರುವ ಜನ ಈಗಿನ ದಿನಗಳಲ್ಲಿ ಹೇಗೆ ಪರದಾಡುತ್ತಾರೆಂದು ಅವರಿಗೆ ಗೊತ್ತು.

ಬಹಳ ಹೊತ್ತು ಗುರುಮೂರ್ತಿಗಳು ಸುಮ್ಮನೆ ಕೂತರು "ಇದು ಅಲಕ್ಷ್ಯ ಮಾಡ್ಬಾರ್ದ ವಿಷ್ಯ. ಆ ಜನಕ್ಕೆ ಏನಾದ್ರೂ ಹೇಳ್ತೀನಿ. ನಿನ್ನ ಮಗ್ಳು ಬಗ್ಗೆ ಮಾತ್ರ ಯೋಚಿಸ್ಸು. ಕೆಲವು ವಿಷ್ಯಗಳಲ್ಲಾದ್ರೂ ನಮ್ಮನ್ನು ಹೋತುಕೊಂಡಿ ರ್ತಾಳೆ" ಸಮಸ್ಯೆಯನ್ನು ಹೆಂಡತಿಯ ಮುಂದಿಟ್ಟರು. ಹೊರಗಿನ ದಾಳಿಯನ್ನು ಅನಾಯಾಸವಾಗಿ ಎದುರಿಸಬಹುದು. ಒಳಗಿನ ಸಪ್ಪಳದ ಸದ್ದನ್ನು ಅಡಗಿ ಸುವುದು ಕಷ್ಟ.

ಪಂಕಜಮ್ಮನ ಅಭಿಮಾನಕ್ಕೆ ಸವಾಲ್ ಎನಿಸಿತು. "ಏನ್ಮಾಡ್ತಾಳೆ ? ಅವಳಪ್ಪನಂಥ ಗಂಡುನ ತಂದು ಮದ್ವೆ ಮಾಡ್ತೀನಿ !" ಹಟ ಮಿನುಗಿತು. ತಕ್ಷಣ ಪ್ರತ್ಯಕ್ಷಳಾದಳು ರಜನಿ. "ಅವನಪ್ಪನಂಥ ಗಂಡು ಸಿಗ್ಬಹುದ್ದು. ವಿಕಾಸ್ ಸಿಗೋಲ್ಲ" ಕಣ್ತುಂಬಿ ಹೇಳಿದಾಗ ಎಲ್ಲರೂ ಚಕಿತರಾದರು. ಅವನಲ್ಲಿ ಏನು ಅಂಥದ್ದು ಕಂಡಳು ? "ಥಿಂಕ್ ಯುವರ್‌ಸೆಲ್ಫ್. ವಿದ್ಯೆ, ರೂಪು, ಕೆಲ್ಸದಲ್ಲಿ ಅವನನ್ನು ಮೀರಿಸೋಂಥ ಗಂಡು ಜೊತೆ ನಿನ್ನದ್ವೆ ಮಾಡ್ತೀನಿ" ಅವಳಪ್ಪ ಸಂತೈಯಿಸಲು ನೋಡಿದರು. ಹಟ ಮಿನುಗಿತು ಅವಳ ಮನದಲ್ಲಿ. "ನಾನು ವಿಕಾಸ್‌ನ ಬಿಟ್ಟು ಬೇರೆ ಯಾರನ್ನೂ ಮದ್ವೆ ಆಗೋಲ್ಲ. ಹಾಗೇನಾದ್ರೂ ಈ ಸಂಬಂಧ ಮುರ್ಯೋ ಪ್ರಯತ್ನ ಮಾಡಿದ್ರೆ ಆತ್ಮಹತ್ಯೆ ಮಾಡ್ಕೋತೀನಿ" ತೀರಾ ಭಾವುಕಳಾದಳು.

"ಪೂರ್ ಗರ್ಲ್...." ಉದ್ಗರಿಸಿದರು ಗುರುಮೂರ್ತಿಗಳು. "ನೀನು ಸುಖಪಡೋಲ್ಲ" ಭವಿಷ್ಯ ನುಡಿದರು. ಅವರ ಅಂದಾಜಿನ ಸುಖವೇನೋ !

ಪಂಕಜಮ್ಮನ ಕತ್ತಿನ ನರಗಳು ಬಿಗಿದುಕೊಂಡವು. ಎದೆಯ ಮೇಲೆ ದಂಡೆಯೇರಿದಂಥ ಭಾರ. ಇಂಚು ಇಂಚಾಗಿ ಕಾಲ ಕೆಳಗಿನ ನೆಲ ನುಂಗಿ ಬಂತಾಯಿತು.

"ಎಲ್ಲಾದ್ರೂ....ಸತ್ಕೋ! ನಿಂಗೆ ಈಗಲ್ಲ ಆಮೇಲೆ ಗೊತ್ತಾಗುತ್ತೆ. ಗೋಳೋ ಅಂತ ಓಡಿ ಬರ್ತಿ" ಸಹನೆ ಕಳೆದುಕೊಂಡು ಕೂಗಾಡಿದರು. ಬೇರೆಯವರು ಎದುರು ನಿಂತಾಗ ಬಗ್ಗುಬಡೆಯಬಹುದು, ಮನೆಯ ಮಕ್ಕಳೇ ತಿರುಗಿಬಿದ್ದಾಗ ಶರಣಾಗತಿಯೊಂದೇ ಮಾರ್ಗ!

ರಂಜಿತಾ ಮಧ್ಯೆ ಬಾಯಿ ಹಾಕಿದಳು. "ಸುಮ್ನೇ ಪೇಷನ್ಸ್ ಕಳ್ದುಕೊಳ್ಳೋದ್ರಿಂದ ಪ್ರಯೋಜನವಿಲ್ಲ. ವಿಕಾಸ್ ಜೊತೆ ಅವ್ಳೇ ತಾನೇ ಸಂಸಾರ ಮಾಡೋದು. ಅದ್ರ ಕಷ್ಟನಷ್ಟಗಳು ಅವ್ಳಿಗೆ ಇರ್‍ಲಿ" ಸಮಾಧಾನ ಮಾಡಿದಳು.

ಸ್ವಲ್ಪ ಹಾರಾಡಿದ ಪಂಕಜವಮ್ಮ ಎದ್ದು ಹೋದರು. ಕೋಣೆಗೆ ಬಂದ ರಜನಿ ಬಿಕ್ಕಿದಳು. ಅವಳ ಸುಂದರ ಕನಸು, ಭಾವನೆಗಳಿಗೆ ಮೂರ್ತೀಭವಿಸಿದ ವಿಕಾಸ್‌ನ ಯಾವ ಲೋಪದೋಷಗಳೂ ಅವಳನ್ನು ಹಿಮ್ಮೆಟ್ಟಿಸಲಾರವು.

ಬಾಯನ್ನು ದಿಂಬಿಗೆ ಒತ್ತಿ ಬಿಕ್ಕಳಿಸಿದಳು. "ವಿಕಾಸ್, ವಿಕಾಸ್...." ಅವನ ಗಂಭೀರ ರೂಪ, ಮುಗುಳ್ನಗು, ಮೇರುವಿನೆತ್ತರದ ವ್ಯಕ್ತಿತ್ವ ಅವಳ ಕಣ್ಮುಂದೆ ತೇಲಿತು. ಸಂಜೆಯ ಸಾಗರದ ಅಲೆಗಳು ದಡಕ್ಕೆ ಅಪ್ಪಳಿಸಿ ಸಿಕ್ಕಿದ್ದದನ್ನು ತನ್ನ ಮಡಿಲಲ್ಲಿ ಹುದುಗಿಸಿಕೊಳ್ಳುವಂತೆ ರಜನಿಯನ್ನು ವಿಕಾಸ್ ನೆನಪು ಸೆಳೆದೊಯ್ದಿತು.

"ನಂಗೆ ಯಾರೂ ಬೇಡ. ಛತ್ರ ಬೇಡ. ಮದ್ವೆ ಬೇಡ. ವಿಕಾಸ್ ಒಬ್ನೇ ಸಾಕು" ಬಡಬಡಿಸಿದಳು.

ಈ ಹಂತದಲ್ಲಿ ಪ್ರತಿಯೊಂದು ಹೆಣ್ಣು ಎಷ್ಟು ಭಾವುಕಳಾಗಿಬಿಡುತ್ತಾಳೆ. ರಂಜಿತಾ, ರಮಣಿ ಹಿಂದಿನ ದಿನಗಳನ್ನು ನೆನಸಿ ಚಿಂತಿಸಿದಳು. ಅದೇ ಅವಸ್ಥೆ ತನ್ನದು. ಅದಕ್ಕಿಂತ ತೀವ್ರವಾದದ್ದು. ಅವರಿಗೆ ಪ್ರತಿಸ್ಪಂದನವಿತ್ತು. ಇಲ್ಲಿ ವಿಕಾಸ್ ಕಲ್ಲಾಗಿದ್ದ. ಭಾವನೆಗಳಿಗೆ ಕಂಗೆಡದ ಶಿಲ್ಪದಂತಿದ್ದ.

ಆರಾಮಾಗಿ ಓಡಾಡಿಕೊಂಡು ಇರುತ್ತಿದ್ದ ರಜನಿ ಕಾಲೇಜಿನ ದಿನಗಳಲ್ಲಿ ಯಾರನ್ನೂ ಪ್ರೇಮಿಸಿರಲಿಲ್ಲ. ಕೆಲವರು ಅಂಥ ಪ್ರಯತ್ನಪಟ್ಟಾಗ್ಲೂ ನಿರಾಕರಿಸಿದಳು. ಯಾಕೆ? ಅವಳು ಉತ್ತರಿಸಲಾರಳು. ಕೆಲವನ್ನು ತರ್ಕಿಸಲಾಗದು.

o o o o

ಮದುವೆಯಲ್ಲಿ ವಿಕಾಸ್ ಬಲವಂತವಾಗಿ ಮೌನವಹಿಸಿದ. ಬಂದ ಜನಗಳ ಕೃತಕ ನಗೆಯನ್ನು ನೋಡಿ ಬೇಸತ್ತುಹೋದ. ಪಂಕಜಮ್ಮನ ಸ್ನೇಹಿತರ ಹಿಂಡು ಬಹಳ ದೊಡ್ಡದು. ದೊಡ್ಡ ಹೆಸರಿನಲ್ಲಿ ಚಲಾವಣೆಯಾಗುತ್ತಿದ್ದ ಜನ. ಪ್ರಯಾಸಪಟ್ಟು ಕೆಲವನ್ನು ಸಹಿಸಿಕೊಂಡನು. ಆರತಕ್ಷತೆ ಮುಗಿದ ಕೂಡಲೇ ಸೂಟು ಕಳಚಿಟ್ಟು ದೀರ್ಘ ಮೌನಕ್ಕೆ ಮುಕ್ತಾಯವಾಡಿದ.

ಆಯಾಸದಿಂದ ಕಾಲು ಚಾಚಿ ಕೂತಿದ್ದ ತಾಯಿಯ ಕಡೆ ನೋಡಿದ. ಆಕೆಯ ಸೌಮ್ಯ ಸ್ವಭಾವ ಬಹಳಷ್ಟನ್ನು ಸಹಿಸಿಕೊಂಡಿತ್ತು. "ಅಮ್ಮ ಇನ್ನು ಮನೆಗೆ ಹೊರಡಬಹುದಲ್ಲ!" ಸಾಕಾದವನಂತೆ ಕೇಳಿದಾಗ ಆಕೆ ನಕ್ಕುಬಿಟ್ಟರು. "ಒಳ್ಳೆ ಹುಡ್ಗ" ಮಗನ ಬಗ್ಗೆ ಆಕೆಯ ಸ್ವರದಲ್ಲಿ ಮೆಚ್ಚಿಗೆ ಇತ್ತು.

"ಸಧ್ಯಕ್ಕೆ ಮೂರು ದಿನವಾದ್ರೂ ಅಳಿಯನ್ನ ತಮ್ಮಲ್ಲಿ ಇಟ್ಕೊಳ್ಳೋ ಆಸೆ ಬೀಗರಿಗೆ" ಎಂದಾಗ ಎದೆಯ ಮೇಲೆ ಕೈಯಿಟ್ಟುಕೊಂಡ ವಿಕಾಸ್. ಕ್ರೂರ ಮೃಗಗಳ ನಡುವೆ ಇದ್ದಂತಾಗಿತ್ತು ಅವನಿಗೆ. ಬರೀ ಗೋಸುಂಬೆ ಮುಖಗಳು, ಸ್ವಚ್ಛವಾದ ಪ್ರೀತಿ ಎಲ್ಲೂ ಇಲ್ಲ. "ಆಮೇಲೆ ನಿಮ್ಮಗ ಎಲ್ಲಿದ್ದಾನೇಂತ ಹುಡ್ಕಿ ಕೊಳ್ಳಬೇಕಾಗುತ್ತೆ ಈಗ್ಲೇ ನಂಗೆ ಉಸಿರು ನಿಂತಂತಾಗಿದೆ" ಎದೆಯ ಮೇಲಿನ ಕೈಯನ್ನು ನಿಧಾನವಾಗಿ ತೆಗೆದ.

"ಹೊಸದರಲ್ಲಿ ಎಲ್ಲಾ ಹೀಗೇನೇ! ಅತ್ತೆ ಮಾವನ ಮನೆ ಒಗ್ಗದೆ ಹೋದೀತೆ ?" ತಾಯಿಯ ಮಾತಿಗೆ ಅರಳಬೇಕಾದ ಅವನ ಮುಖ ಮತ್ತಷ್ಟು ಬಿಗಿಯಿತು. ಹಣೆ ಹಿಂಡಿದ.

"ನ್ಯೂರೋ ಸೆಂಟರ್ ಸೇರಬೇಕಾಗುತ್ತೆ ರಜನಿನ ಕಳ್ಸು. ನಾನು ತಿಳ್ಸಿಹೇಳ್ತೀನಿ" ಸುನಂದಮ್ಮ ಅತ್ತಿತ್ತ ನೋಡಿದವರು ಮೇಲೆದ್ದು ಮಗನ ತಲೆಯ ಮೇಲೊಂದು ಮೊಟಕಿದರು.. "ಬೀಗರು ಏನಾದ್ರೂ ಅಂದ್ಕೋತಾರೆ. ನೀನು ಅವ್ರಿಗೆ ಅಳಿಯ ಕೂಡ. ಅವ್ರ ಆಶಯಗಳನ್ನು ಗಮನಿಸ್ಬೇಕು" ಬುದ್ಧಿ ಹೇಳಿದರು. ವಿಕಾಸ್ ಎರಡು ಕೈ ಜೋಡಿಸಿದ.

"ಅವ್ರ ಕೆಟ್ಟ ಕೆಟ್ಟ ಆಶಯಗಳನ್ನು ನನ್ನ ಮೇಲೇರೋಕೆ ನಾನು ಕುರಿಯಲ್ಲ. ಹಾಗಂತ ತಿಳ್ದುಕೊಂಡಿದ್ರೆ ಅದು ಅವ್ರ ಮೂರ್ಖತನವಷ್ಟೆ" ಅವನ ಮುಖ ಕೋಪದಿಂದ ಕೆಂಪಾಯಿತು.

ಆಕೆ ಹೊರ ಹೋದರು. ವಿಕಾಸ್ ಶತಃಪಥ ಹಾಕಿದ. ರಾಜಕಾರಣಿ

ಗಳು, ಸಮಾಜಸೇವಾಸಕ್ತರು ತುಂಬಿಕೊಂಡ ಈ ಮದುವೆಯಲ್ಲಿ ಸಾಧಾರಣ ಜನಕ್ಕೆ ಬೆಲೆಯೇ ಇಲ್ಲ. ಬಂದ ಸಹೋದ್ಯೋಗಿಗಳು ಮುಖ ಬಾಡಿಸಿಕೊಂಡು ಹೋದದ್ದು ಅವನ ಗಮನಕ್ಕೆ ಬಂತು. ನಾಟಕದ ಪಾತ್ರಧಾರಿಯಂತೆ ನಟಿಸಿ ಅವನಿಗೆ ಸಾಕಾಗಿಹೋಗಿತ್ತು. ಪದೇಪದೇ ಬೆವರೊರೆಸುತ್ತಿದ್ದರು ವಿಶ್ವ ನಾಥಯ್ಯ. ಆಡಲಾರದ, ಅನುಭವಿಸಲಾರದ ಸ್ಥಿತಿ ಅವರದು.

ಮದುವೆ ನಿಶ್ಚಯಕ್ಕೆ ಮುನ್ನವೇ ವಿಶ್ವನಾಥಯ್ಯನವರೇನು ಸುನಂದಮ್ಮ ಕೂಡ ತಮ್ಮ ಮನೆಯ ಬಗ್ಗೆ ವಿವರಿಸಿ, ಸಾಮಾನ್ಯ ಮದುವೆ ಸಾಕೆಂದಿದ್ದರು. ಆಗ ಹೊಗಳಿ ಅಟ್ಟಕ್ಕೇರಿಸಿದ ಪಂಕಜಮ್ಮ ಇನ್ವಿಟೇಷನ್ ಪ್ರಿಂಟಾದ ಮೇಲೆ ಬದಲಾಗಿದ್ದರು. ಆಗಿನಿಂದಲೇ ಇವರುಗಳ ತಾಳ್ಮೆಗೊಂದು ಸವಾಲ್.

*ಆ ರಾತ್ರಿ ನಿಲ್ಲಬೇಕಾದ ಅನಿವಾರ್ಯವಿತ್ತು.* ಎಲ್ಲಕ್ಕಿಂತ *ತನ್ನ ಜೀವನ* ದಲ್ಲಿ ಅಡಿಯಿಟ್ಟ ಹೆಣ್ಣಿಗೆ ಮೊದಲ ದಿನವೇ ನಿರಾಶೆ ಮಾಡುವುದು ಬೇಕಿರಲಿಲ್ಲ.

ಪಂಕಜಮ್ಮನ ಸಡಗರದ ಆರ್ಭಟ. ಆ ಜನರ ನಡುವೆ ವಿಕಾಸ್‌ನ ಮೊದಲ ರಾತ್ರಿಯ ಸಂಭ್ರಮವೇ ಹಾರಿ ಹೋಗಿತ್ತು. ಅರ್ಥವಿಲ್ಲದೆ ಪದೇಪದೇ ನಗುವ ಜನರನ್ನ ಕಂಡರೆ ಅವನಿಗೆ ಉರಿ. ~ದು ಉತ್ಸಾಹ, ಉಲ್ಲಾಸದ ನಗು ವಲ್ಲ. ಕೂಲಿಗಾಗಿ ನಗುವ ಜನರ ಹಿಂಡು

ಬೆಳಗಿನ ಜಾವ ಮಡದಿಯ ಕಿವಿಯಲ್ಲಿ ಪಿಸುಗುಟ್ಟಿದ "ಇನ್ನರ್ಧ ಗಂಟೆ ಯಲ್ಲಿ ರೆಡಿಯಾಗು" ಅವನೆದೆಯಲ್ಲಿ ಮುಖವಿಟ್ಟು ಹ್ಞೂಗುಟ್ಟಿದಳು. ಮೊದಲ ರಾತ್ರಿಯ ಸುಖದ ಅನುಭವದಲ್ಲಿ ತೊಯ್ದ ಸುಂದರ ಹೂ ರಜನಿ. ಅತ್ಯಂತ ಉಲ್ಲಾಸ, ಸಂಭ್ರಮದಿಂದಿದ್ದಳು. "ಈಗ್ಲೇ ಬೇಕಾದ್ರೂ ಹೊರಡೋಣ. ನಿಮ್ಜೊತೆ ದಿಗಂತದ ಅಂಚಿಗೆ ಬೇಕಾದ್ರೂ.... ಬರಬಲ್ಲೆ" ಅಮಲಿನ ಆ ಮಾತು ಗಳನ್ನು ಹಗುರವಾಗಿ ಭಾವಿಸಿದ ದೃಢ ಮನಸ್ಸಿಲ್ಲದ, ಚಿಂತನೆಯ ಆಳಕ್ಕಿಳಿ ಯದ ರಜನಿಯ ಬಗ್ಗೆ ಅವನಿಗೆ ಹೆಚ್ಚಿನ ಸಹಾನುಭೂತಿ. ಮುಂದೆ ಬದಲಾಗ ಬಲ್ಲಳೆಂಬ ಆಸೆ.

ಸ್ನಾನ ಮುಗಿಸಿ ಉಡುಪು ತೊಟ್ಟು ನಿಂತಾಗ ಗುರುಮೂರ್ತಿಗಳು ಬಂದರು. ತುಟಿಯಲ್ಲಿ ಮುಗುಳ್ನಗು ಇದ್ದರೂ ಕನ್ನಡಕದ ಹಿಂದಿದ ಕಣ್ಣು ಗಳಲ್ಲಿ ಗತ್ತು. ನೋಡಬೇಕೆನಿಸಲಿಲ್ಲ ವಿಕಾಸ್‌ಗೆ.

"ಈಗ ನೇರವಾಗಿ ನಮ್ಮ ಮನೆಗೇನೇ" ಅವನ ಮೇಲೆ ಅಧಿಕಾರವಹಿಸಿ

ಕೊಂಡವರಂತೆ ಹೇಳಿದರು, ಅವನ ನೋಟ ಕ್ಷಣ ನೆಲದಲ್ಲಿ ಅಡ್ಡಾಡಿತು "ನಂಗೆ ರಜಾ ಇಲ್ಲ" ಅವರ ಹುಬ್ಬುಗಳು ನಿಗಿರಿ ನಿಂತವು. 'ಖೊ, ಖೋ' ನಕ್ಕರು. ಅವನ ಕೈಗಳು ನಿಧಾನವಾಗಿ ಪ್ಯಾಂಟ್ ಜೇಬಿನೊಳಕ್ಕೆ ಇಳಿಯಿತು. ಇಲ್ಲಿ ಮಾವ, ಅಳಿಯನ ಮಧ್ಯದ ಅನ್ಯೋನ್ಯ ಸಂಬಂಧ ಸುಟ್ಟು ಭಸ್ಮವಾಗಿತ್ತು. ತಮ್ಮ ನಗೆ ಪ್ರಯೋಜನಕ್ಕೆ ಬರಲಿಲ್ಲವೆನಿಸಿತು ಅವರಿಗೆ.

"ನಂಗೆ ಆಶ್ಚರ್ಯ!" ಗುರುಮೂರ್ತಿಗಳು ಅಂದಾಗ ಹಗುರವಾಗಿ ತೇಲಿಸಿದ. "ಅದರಲ್ಲೇನಿದೆ ಆಶ್ಚರ್ಯಪಡೋಕೆ ? ನಾಳೆ ಬೆಳಗ್ಗೆ ನಾನು ಕಾಲೇಜಿಗೆ ಹೋಗ್ಬೇಕು" ಅವನ ಸ್ವರದಲ್ಲಿನ ದೃಢತೆಯನ್ನು ಅರಗಿಸಿಕೊಳ್ಳಲು ಗುರುಮೂರ್ತಿಗಳು ಸ್ವಲ್ಪ ಪ್ರಯಾಸಪಡಬೇಕಾಯಿತು. ತಣ್ಣೀರು ಎರಚಿದಂತಾಗಿತ್ತು.

"ಆಯ್ತು, ಅಲ್ಲಿಂದ್ಲೇ ಹೋಗ್ಬಹುದು!" ಮುಕ್ತಾಯ ಹಾಡುವಂತೆ ಹೇಳಿದಾಗ ಅವನ ಮೈನ ನರನಾಡಿಗಳೆಲ್ಲ ಸೆಟೆದುಕೊಂಡವು. ಕೈ ಮುಷ್ಟಿ ಬಿಗಿಯಾಯಿತು. ಇಂಥ ಅಧಿಕಾರವನ್ನು ವಿಕಾಸ ಸಹಿಸಲಾರ.

ಮುಖ ತಿರುಗಿಸಿ ಹೊರಗೆ ನಡೆದ. ಹೆಣ್ಣು ಕೊಟ್ಟ ತಾಯ್ತಂದೆಯರೆಲ್ಲ ಇಂಥ ಅಭಿಲಾಷೆಗಳನ್ನಿಟ್ಟುಕೊಂಡರೆ ಗಂಡು ಮಕ್ಕಳನ್ನು ಹೆರುವ ತಪ್ಪು ಯಾರೂ ಮಾಡಲಾರರು ಮಾತ್ರವಲ್ಲ, ಮಾಡಕೂಡದು.

ಒಂದು ಹೆಣ್ಣಿಗೆ ತಾಳಿ ಕಟ್ಟಿದ ಕೂಡಲೇ ತನ್ನ ಹೆತ್ತವರಿಂದ ಪೂರ್ತಿಯಾಗಿ ಬಿಡಬೇಕೆ? ಇಂಥ ಯೋಚನೆಗಳು ಹೆಣ್ಣು ಹೆತ್ತವರು ಯಾಕೆ ಮಾಡುತ್ತಾರೆ ?

ಅಷ್ಟಿಷ್ಟು ನೆಂಟರನ್ನು ಬೀಳ್ಕೊಟ್ಟ ಸುನಂದಮ್ಮ, ವಿಶ್ವನಾಥಯ್ಯ ಸಪ್ಪಗಿದ್ದರು. ಮಗಳು,. ಅಳಿಯ ಒಬ್ಬನೇ ಮಗನ ಮದುವೆಗೆ ಬರಲಿಲ್ಲವೆನ್ನುವ ಸಂಕಟ.

"ಅಮ್ಮ, ಎಲ್ಲಾ ರೆಡಿನಾ? ಯಶು ಹೋಗಿ ಆಟೋನೋ, ಟ್ಯಾಕ್ಸಿನೊ ತರ್ತಾನೆ" ಸಮರ ಸಾರಲು ಅವನು ಸಿದ್ಧನಿಲ್ಲದಿದ್ದರೂ ಅಂತಹ ಬಿಸಿಯೇರುತ್ತಿದೆಯೆಂದು ವಿಕಾಸ್‌ಗೆ ಗೊತ್ತು. ಸುನಂದಮ್ಮ ಕಣ್ಣೀರು ಮಿಡಿದರು. "ನಾವು ಹೋಗುತ್ತೀವಪ್ಪ, ಸದ್ಯಕ್ಕೆ ನಿಮ್ಮ ಮಾವನೋರು ಮನೆಯಲ್ಲೇ ಇರ

ಲೀಂದ್ರೂ" ಅವನ ಮೈನ ಇಡೀ ರಕ್ತ ಮುಖಕ್ಕೆ ನುಗ್ಗಿತು. "ಅವ್ರು ಯಾರು ಇದನ್ನೆಲ್ಲ ನಿರ್ಧಾರ ಮಾಡೋಕೆ ?" ಕನಲಿದ.

ಸುನಂದಮ್ಮ ಬಾಯಿ ಮೇಲೆ ಕೈಯಿಟ್ಟುಕೊಂಡರು. ಅವರ ಕಣ್ಣುಗಳ ಲ್ಲಿದ್ದುದು ಆತಂಕ. ಎರಡು ದಿನದಲ್ಲಿ ಅವರೆಂಥ ಜನರೆಂದು ತಿಳಿದುಕೊಂಡಿದ್ದರು. ಬೀಗರು ಎನ್ನುವ ಮರ್ಯಾದೆ ಕೂಡ ಕೊಟ್ಟಿರಲಿಲ್ಲ ಹಾದಿ ಬೀದಿ ಹಗರಣ ವಾಗಿ ಮಗನ ಬಾಳಿನಲ್ಲಿ ಇದೊಂದು ಕಪ್ಪು ಚುಕ್ಕೆಯಾಗಿಬಿಡುತ್ತದೆಯಲ್ಲ ಎಂದು ಬಾಯಿ ಮುಚ್ಚಿಕೊಂಡರು.

"ವಿಕಾಸ್ ಮೆತ್ತಗೆ ಮಾತಾಡಪ್ಪ" ಅತ್ತಿತ್ತ ನೋಡಿ ಹೇಳಿದರು. "ಅವ್ರಿಗೂ ಆಸೆ ಅಕ್ಕರಾಸ್ತೆ ಇರುತ್ತೆ. ನಾಲ್ಕು ದಿನ ಇದ್ದುಬಿಡು" ಮುಲಾಜಿ ಲ್ಲವೆ ತಲೆಯಾಡಿಸಿದ. ಈ ಜನರ ಮಧ್ಯೆ ನಾಲ್ಕು ದಿನ ಯಾಕೆ, ನಾಲ್ಕು ಗಂಟೆ ಕಳೆಯೋಕು....ನಂಗೆ ಸಾಧ್ಯವಿಲ್ಲ."

ಇಡೀ ಜನವೆಲ್ಲ ಬಂದು ಹೇಳಿದರು. ವಿಕಾಸ್ ಒಪ್ಪಲಿಲ್ಲ. ಕಡೆಗೆ ರಜ ನಿಯ ಕಣ್ಣಲ್ಲಿ ಒದ್ದೆ ಕಂಡಾಗ ಕರಗಿಹೋದ "ಆಲ್‌ರೈಟ್...." ತುಟಿಗಳಿಂ ದಲೇ ಕಣ್ಣೀರು ತೊಡೆದ. ಗೆದ್ದ ಮುಖದಿಂದ ಓಡಾಡಿದರು ಪಂಕಜಮ್ಮ ಮೀಸೆಯಡಿಯಲ್ಲಿ ನಕ್ಕರು ಗುರುಮೂರ್ತಿಗಳು. ತಮ್ಮ ಆಶಯ ಸುಳ್ಳಾಗ ಲಿಲ್ಲವೆಂದು ಅವರಿಗೆ ಹೆಮ್ಮೆ.

ಆದರೆ ವಿಕಾಸ್ ತಾಯ್ತಂದೆಯರ ಜೊತೆಯಲ್ಲಿ ಹತ್ತಿದ್ದು ಟ್ಯಾಕ್ಸಿ. ಕೈಯಾಡಿಸಿದಾಗ ಎಲ್ಲಾ ದಿಗ್ಭ್ರಮೆಗೊಂಡರು.

"ಮಧ್ಯಾಹ್ನ....ಬರ್ತಾರೆ" ರಜನಿ ಗೆಲುವಿನಿಂದ ಹೇಳಿದಾಗ ಕುಡಿದು ಹೋದರು ಗುರುಮೂರ್ತಿಗಳು? "ಛಾಲೆಂಜ್....ನೋಡೋಣ...." ಎದು ರಾಳಿ ಉಮೇದುವಾರನನ್ನು ನೋಡಿ ಮೀಸೆ ತಿರುವುತ್ತ ಸವಾಲ್ ಒಡ್ಡುವರಂತೆ ಕಂಡರು. ವಿಕಾಸ್ ಕೊಟ್ಟ ಪೆಟ್ಟು ಗುರುತು ಮೂಡಿಸದೆ ಇದ್ದರೂ ಬಹಳ ಕಾಲ ನೋವು ನೀಡಬಲ್ಲದಾಗಿತ್ತು.

ಮನೆಗೆ ಬಂದ ಗಂಡ, ಹೆಂಡತಿ ಮಂಕಾಗಿ ಕೂತುಬಿಟ್ಟರು. ಜೊತೆ ಯಲ್ಲಿ ಕರೆದೊಯ್ದು ನೆರೆಹೊರೆಯುವರನ್ನು ಕೂಡ ಅವರುಗಳು ಮಾತಾಡಿಸಿರ ಲಿಲ್ಲ. ಬೇಕೆಂದೇ ಮಾಡಿದ ಅವಮಾನವೆನಿಸಿತ್ತು.

ಬಟ್ಟೆ ಬದಲಾಯಿಸಿದ ವಿಕಾಸ್ ಬಂದು ಮಂಕಾಗಿ ಕೂತ ತಾಯಿಯ

ಬಳಿ ನಿಂತ "ಏನಮ್ಮ....ಇದು ? ನಮ್ಗೆ ಸುಳಿವು, ಸೂಕ್ಷ್ಮ ಸಿಕ್ಕಿದ್ಮೇಲೂ ಸಂಬಂಧ ಮುಂದುವರಿಸಲು ಇಚ್ಛಿಸಿದ್ದು ನಮ್ಮ ತಪ್ಪು. ಈಗ ಯೋಚ್ಸಿ ಪ್ರಯೋಜನವಿಲ್ಲ" ಸಮಾಧಾನಪಡಿಸಿದ. ಆಕೆ ಮಾತು ಬದಲಾಯಿಸಿದರು. "ನಿಖಿಲಾ ಅವಳ ಗಂಡ ಬರ್ಲಿಲ್ಲ. ಹೆಚ್ಚು ಸಂಭ್ರಮಪಡುತ್ತಿದ್ದ ಅವ್ನೇ ಇರ್ಲಿಲ್ಲ" ನೊಂದುಕೊಂಡರು. ಅದಷ್ಟೇ ನೋವಲ್ಲವೆಂದು ವಿಕಾಸ್‌ಗೆ ಗೊತ್ತು. ಕನಸುಗಳು ಅವರ ಮುಂದೆಯೇ ಕರಗಿಹೋಗಿದ್ದವು.

ಇಲ್ಲಿ ಹೆಣ್ಣು ತುಂಬಿಸಿಕೊಂಡು ಆರತಕ್ಷತೆ ಇಟ್ಟುಕೊಂಡು ತೀರಾ ಆತ್ಮೀಯರಿಗಾದರೂ ಔತಣದ ಊಟ ಹಾಕಬೇಕೆಂದುಕೊಂಡಿದ್ದರು. ನಾಲ್ಕಾರು ಸಲ ಪಂಕಜಮ್ಮನ ಬಳಿ ಹೇಳಿದ್ದರೂ ಅಲಕ್ಷಿಸಿಬಿಟ್ಟಿದ್ದರು.

"ಮದ್ವೇನೆ ಗ್ರ್ಯಾಂಡಾಗಿ ಮಾಡಿದ್ದೀವಲ್ಲ. ಅಲ್ಲಿ ನಿಮ್ಗ್ಯಾಕೆ ತೊಂದರೆ ತಗೋತೀರಾ. ನಾವೇ ಮಗಳು, ಅಳಿಯಾನ ಹನಿಮೂನ್‌ಗೆ ಏರ್ಪಾಟು ಮಾಡಿದ್ದೀವಿ" ಮುಖಗ ಮೇಲೊಡೆದಂತೆ ಹೇಳಿದ್ದರು. ಕರುಳ ಸಂಬಂಧ ವನ್ನು ಒಂದೇ ದಿನಕ್ಕೆ ಕಿತ್ತೆಸೆದುಬಿಟ್ಟಿದ್ದರು.

ಎದ್ದು ಅಡಿಗೆಗೆ ಇಟ್ಟರು ಸುನಂದಮ್ಮ. ಮದುವೆಯ ಸಂಭ್ರಮ ಅವರಲ್ಲಿ ಉಳಿಯಲೇ ಇಲ್ಲ. ಹೊರಟಾಗ 'ಇರೀ' ಎಂದಾಗಲೀ ಅಥವಾ 'ಬನ್ನಿ' ಎಂದಾಗಲೀ ವಿಶ್ವಾಸ ತೋರುವುದಿರಲಿ, ಕುಂಕುಮದ ಜೊತೆ ತಾಂಬೂಲ ಕೂಡ ಕೊಡಲಿಲ್ಲ.

ಊಟ ಮಾಡುವಾಗ ತಾನೇ ಸಂತೈಯಿಸಿ ವಿಕಾಸ್ "ನಿನ್ನಷ್ಟೇ ನೋವು ನಿಖಿಲಾಗೂ ಇರುತ್ತೆ. ಕೆನಡ ಹತ್ತಿರದ ಊರಲ್ಲ. ಅವರವ್ರ ತಾಪತ್ರಯ ವೇನಿರುತ್ತೋ! ಈ ಸಲ ಬಂದಾಗ ಒಂದೆರಡು ತಿಂಗ್ಳು ಇರ್ಸಿಕೊಂಡು ಕಳಿ ಸೋಣ. ಒಂದಿಷ್ಟು ಹಣ ಖರ್ಚಾದ್ರೂ ಪರ್ವಾಗಿಲ್ಲ ; ನಾನೇ ಕರ್ಕೊಂ ಡ್ಹೋಗಿ ಬಿಟ್ಟು ಬರ್ತೀನಿ."

ಮಧ್ಯದಲ್ಲಿ ರಜನಿಯ ವಿಷಯ ಬಂತು "ಜೊತೆಯಲ್ಲೇ ಕಳ್ಸಿಕೊಟ್ಟಿದ್ರೆ ಚೆನ್ನಾಗಿತ್ತು. ದೂರದ ನೆಂಟರ ಮದ್ವೆಗೆ ಹೋಗಿ ಬಂದಂಗಾಯ್ತು" ಸುನಂ ದಮ್ಮ ಮನದ ಇಂಗಿತವನ್ನು ತೋಡಿಕೊಂಡರು.

ನೀರು ಕುಡಿದು ಗಂಟಲಲ್ಲಿನ ತುತ್ತನ್ನು ಒಳಗೆ ತಳ್ಳಿದ ವಿಕಾಸ್ "ಇವ ತ್ತೊಂದು ದಿನ ಅಷ್ಟೆ. ನಾಳೆ ರಜನಿ ಇಲ್ಲೇ ಇರ್ತಾಳೆ" ದೃಢವಾಗಿ ಹೇಳಿದ.

ಕತ್ತೆತ್ತಿ ಮಗನನ್ನು ನೇರವಾಗಿ ನೋಡಿದರು "ಅವ್ರ ನಿರೀಕ್ಷನೇ ಬೇರೆ ಇತ್ತು ಅನ್ನಿಸುತ್ತೆ" ವಿಕಾಸ್‌ನಲ್ಲಿ ಕುತೂಹಲ ಮೂಡಿತು. "ಎಂಥ ನಿರೀಕ್ಷೆ ? ಏನು ಕತೆ ?" ವಿವರಿಸಲು ಹೋಗಲಿಲ್ಲ ಮಗನಿಗೆ.

ಒಂದು ರೀತಿಯ ಗೊಂದಲದಲ್ಲಿ ಬಿದ್ದ ವಿಕಾಸ್. ಅವನಲ್ಲಿ ಹೋರಾಟ ಷುರುವಾಗಿತ್ತು. ಅವನು ಇಷ್ಟಪಟ್ಟಿದ್ದರೇ ರಜನಿಗಿಂತ ರೂಪವಂತ, ವಿದ್ಯಾವಂತ ಯುವತಿಯನ್ನು ಮದುವೆಯಾಗಬಹುದಿತ್ತು. ಅವಳಲ್ಲಿ ಅತಿಶಯವಾದದ್ದು ಕಂಡಿದ್ದೇನು ? ಕೆಲವಕ್ಕೆ ಅರ್ಥ ಹುಡುಕುವುದು ಮೂರ್ಖತನವೆನಿಸಿತು.

ೲ ೲ ೲ ೲ

ಗುರುಮೂರ್ತಿಗಳ ಮನೆಯಲ್ಲಿ ಸಂಭ್ರಮದ ಕೂಟ. ತೀರಾ ಹತ್ತಿರದ ಆತ್ಮೀಯರಿಗೆ ಮಾತ್ರ ಆಹ್ವಾನ. ಆದರೆ ಅದೆಂಥ 'ಆತ್ಮೀಯತೆ' ಎನ್ನುವ ಬಗ್ಗೆ ವಿಶ್ಲೇಷಿಸಲಾಗದು.

ಆರು ಇಂಚು ಜರಿಯ ಸೀರೆಯುಟ್ಟರೂ ಪಂಕಜಮ್ಮ ಹದಿನಾರರ ತರುಣಿ ನಾಚುವಂತೆ ಬಳುಕುತ್ತ ಓಡಾಡುತ್ತಿದ್ದರು. ಆದರೆ ಇನ್ನು ಅಳಿಯ ಬರದ ಆತಂಕ ಅವರನ್ನು ಕಾಡುತ್ತಿತ್ತು.

ವಿಕಾಸ್ ಬಂದಾಗ ಸರಿಯಾಗಿ ಆರು ಗಂಟೆ. ಎಚ್.ಯಂ.ಟಿ. ವಾಚ್ ಆರಕ್ಕೆ ಒಂದು ಕ್ಷಣ ಕೂಡ ಮುಂದಿಲ್ಲವೆಂದು ತೋರಿಸುತ್ತಿತ್ತು. ನಗು, ಮಾತು ಗದ್ದಲವೋ ಗದ್ದಲ. ಅವನ ಪಾದಗಳು ನೆಲಕ್ಕಂಟಿದವು. ಮುಂದಕೆ ಎತ್ತಿಡಲಾರದಷ್ಟು ನಿಶ್ಶಕ್ತನಾದ.

ರಮಣಿಯ ಗಂಡ, ಗುರುಮೂರ್ತಿಗಳ ಎರಡನೇ ಅಳಿಯ ಉಮೇಶ್ ಬಂದು ಅವನ ಭುಜದ ಮೇಲೆ ಕೈ ಹಾಕಿದ. "ಟೂ ಲೇಟ್ ವಿಕಾಸ್" ಆಕ್ಷೇಪಿಸುವಂತೆ ಕಂಡ. "ನೋ.....ನೋ.....ನಂಗೇನು ಹಾಗೆ ಅನ್ನಿಸೋಲ್ಲ" ತಳ್ಳಿ ಹಾಕಿದ. ಅವನ ಕಣ್ಣುಗಳಲ್ಲಿ ಅಚ್ಚರಿ ಇಣುಕಿತು. ಕ್ಷಣ ತಬ್ಬಿಬ್ಬಾದ. ರೀಲುಗಳನ್ನು ಸುತ್ತಿದಂತೆ ಅವನ ಬಗ್ಗೆ ಯೋಚಿಸತೊಡಗಿದ.

ಪೆಚ್ಚುಪೆಚ್ಚಾಗಿ ಓಡಾಡಿಕೊಂಡಿದ್ದ ರಜನಿ ಬಂದಿದ್ದಳು. ಮೋಹಕವಾಗಿ

ನಕ್ಕ. ಆ ನಗುವನ್ನು ಬಹಳ ಹೊತ್ತು ಉಳ್ಸಿಕೊಳ್ಳಲಾಗಲಿಲ್ಲವಲ್ಲ ಅವನಿಗೆ. ಪರಿಚಯಿಸಿದವರ ಮುಂದೆ ಕೈಚಾಚುವುದು ಒಂದು ಬಲವಂತದ ಮುಗುಳ್ನಗು ಅಷ್ಟೆ. ಬಂದವರ ನಗುವಾಗಲಿ, ರಜನಿಯ ಪಿಸುಮಾತುಗಳಾಗಲಿ, ರಮಣಿ, ರಂಜಿತರ ಹಾಸ್ಯ ನುಡಿಗಳಾಗಲಿ ಅವನ ಮೇಲೆ ಯಾವುದೇ ಪರಿಣಾಮ ಬೀರ ಲಿಲ್ಲ.

"ಛೆ, ನೀವೇನು ಮಾತೇ ಆಡೋಲ್ಲ !" ಮೊಣಗೈನಿಂದ ಮೃದುವಾಗಿ ತಿವಿದ. ರಜನಿ ನಿಷ್ಠುರ ಮಾಡಿದಾಗ ತುಟಿ ಕೊಂಕಿಸಿದ "ಇದು ಬರೀ ನೋಡೋ ಕಾರ್ಯಕ್ರಮ. ಆಡೋಕೇನಿದೆ ? ಪ್ರೇಕ್ಷಕನ ಕೆಲ್ಸ ಒಂದೇ" ಸಹಜವಾಗಿ ಹೇಳಿದ. ರಜನಿ ಮನೆಯವರಿಗಿಂತ ಸ್ವಲ್ಪ ವಿಭಿನ್ನವಾಗಿ ಕಂಡರೂ ಚಂಚಲತೆ ಅವಳಲ್ಲಿ ಅಪಾರ.

ಬರೀ ಪ್ರೇಕ್ಷಕನಂತೆ ವಿಕಾಸ್ ಕೂತಿದ್ದರು, ಆಗಾಗ ರಜನಿ ಎದ್ದು ಹೋಗಿ ತನ್ನ ಗೆಳತಿಯರಲ್ಲಿ ಬೆರತು ಬಂದು ಕೂಡುತ್ತಿದ್ದಳು. ರಮಣಿ, ರಂಜಿತಾ ಪೈಪೋಟಿಯಿಂದ ಅಲಂಕರಿಸಿಕೊಂಡಿದ್ದರು. ತೆರೆಯ ಮೇಲೆ ಹಾದು ಹೋಗುವ ಚಕ್ರಗಳಂತೆ ಕಂಡಿತು ಅವನಿಗೆ. ಬೇಡದ ಚಲನ ಚಿತ್ರ ನೋಡಿ ದಂತಿತ್ತು.

"ಬನ್ನಿ, ನಿಮ್ಮ ಮ್ಯಾರೇಜ್‌ನ ಸೆಲಬ್ರೇಟ್ ಮಾಡೋದ್ಬೇಡ್ವಾ !" ರಮೇಶ ಅವನ ತೋಳಿಗೆ ಕೈ ಹಾಕಿದ. "ಈ ರೀತಿ ಸೆಲಬ್ರೇಟ್ ಮಾಡೋದು ನಂಗಿಷ್ಟವಿಲ್ಲ, ಅದು ಎಲ್ಲರಿಗೂ ಗೊತ್ತು" ರಜನಿಗೂ ಗೊತ್ತೆನ್ನುವುದನ್ನ ಸ್ಪಷ್ಟಪಡಿಸಿದ. ನಿಶ್ಚಯಕ್ಕೆ ಮುನ್ನವೇ ನನ್ನ ಹಾಬಿ, ಸ್ವಭಾವ, ದೌರ್ಬಲ್ಯ ಗಳನ್ನು ಮುಚ್ಚಿಡದೆ ರಜನಿಗೆ ಹೇಳಿದ್ದ. ನಗೆಯುತ್ತ ಒಪ್ಪಿಕೊಂಡಿದ್ದಳು. ಈಗ ಅವಳ 'ಒಪ್ಪಿಗೆ' ಬಗ್ಗೆ ಯೋಚಿಸುತ್ತಿದ್ದ.

ರಮೇಶ್‌ನ ರೆಪ್ಪೆಗಳು ಅಚಲವಾದವು. ಅಪರೂಪದ ಪ್ರಾಣಿಯನ್ನು ನೋಡುವಂತೆ ದಿಟ್ಟಿಸಿದ. ಮಧ್ಯಮ ದರ್ಜೆಯ ವ್ಯಕ್ತಿ. ಇವರ ಸಂಬಂಧವನ್ನು ಪರಮಪದವೆಂದು ತಿಳಿದಾನು. ಅತ್ತಿಗೆ ಸರ್ವೆಂಟ್ ಆದರೂ ಹೆಚ್ಚಲ್ಲ ಎಂದು ತಿಳಿದಿದ್ದ. ಇಲ್ಲಿ ಅವನ ನಂಬಿಕೆಯ ಬೆಲೂನು 'ಪುಸ್' ಎಂದಿತು,

"ನಂಗೆ ಆಶ್ಚರ್ಯ !" ರಮೇಶ್ ಅಂದಾಗ ನಕ್ಕುಬಿಟ್ಟ. "ಯಾವುದಕ್ಕೆ ಅನ್ನೋದು ಮಾತ್ರ ನಿರ್ಣಯವಾಗ್ಬೇಕು" ತೆಪ್ಪಗೆ ಹೋದ.

ನವೀನ ರೀತಿಯಲ್ಲಿ ಮಗಳ ವಿವಾಹವನ್ನು 'ಸೆಲಬ್ರೇಟ್' ಮಾಡಿದ್ದರು. ತಟ್ಟೆಗಳ ಸದ್ದು ನಿಂತು ಗ್ಲಾಸ್‌ಗಳ ಸದ್ದು ಶುರುವಾದ ನಂತರ ಬಹಳಷ್ಟು ಬದಲಾವಣೆಗಳಾದವು. ವ್ಯಕ್ತಿಗಳ ನಡುವೆ ತೇಲುವಂತೆ ವರ್ತಿಸತೊಡಗಿದರು.

ಅಳಿಯನ ಬಗ್ಗೆ ಪಂಕಜಮ್ಮ ಅಸಮಾಧಾನಗೊಂಡರು. ಇದೊಂದು ರೀತಿಯ ಅವಮಾನ ಆಕೆಗೆ. ಸೋಷಿಯಲ್ ವರ್ಕರ್ ಎನ್ನುವ ಹೆಸರಿನಲ್ಲಿ ಸ್ಟೇಜ್ ಹತ್ತಿ ಕಳಕಳಿಯ ಭಾಷಣ ಮಾಡುವ, ಸಂಘ ಸಂಸ್ಥೆಗಳಿಗೆ ಅವ್ಯಕ್ಷಿಣಿ· ಯಾಗಿ ಮೆರೆಯುವ ಆಕೆಯ ಇನ್ನೊಂದು ಮುಖ ಇದು.

'ತಾವೆಲ್ಲೋ ತಪ್ಪು ಮಾಡಿಬಿಟ್ವಿವು' — ನಿಂತಲ್ಲಿಯೇ ಹಲ್ಲು ಕಡಿದರು ಗುರುಮೂರ್ತಿಗಳು. ಮುಂದಿನ ಮಗಳ ಭವಿಷ್ಯದ ಘಟಗಳು ಅವರ ಮುಂದೆ ಮೊಗಚಿಬಿದ್ದವು. ಅವೇ ಸಾಕು ಸಾಲದ ಜೀವನ — ರೋಷದಿಂದ ಅದರ ಧಮನಿಯಲ್ಲಿನ ರಕ್ತ ಬಿಸಿಯಾಯಿತು. ಮುಷ್ಟಿ ಬಿಗಿ ಹಿಡಿದು ಗಾಳಿಯಲ್ಲಿ ಗುದ್ದಿದರು.

ಈಗಾಗಲೇ ಒಂದೆರಡು ಪೆಗ್ ಖಾಲಿ ಮಾಡಿದ ಪ್ರಕಾಶ್ ತುಟಿಗಳ ನಡುವೆ ಸಿಗರೇಟು ಹಚ್ಚಿ ಒಂಟಿಯಾಗಿ ನಿಂತಿದ್ದ ತಂದೆಯ ಬಳಿಗೆ ಬಂದ. ಬಾಯಿ ಮೂಗುಗಳಲ್ಲಿನ ಹೊಗೆ ತೂರಿ ಹಾರಾಡಿದ.

"ಬ್ಲಡಿ ಬೆಗ್ಗರ್ ! ಅವ್ನಿಗೆ ಹೈ ಸೊಸೈಟಿಯಲ್ಲಿ ಹೇಗೆ ಮೂವ್ ಆಗ ಬೇಕೆಂಬುದೇ ಗೊತ್ತಿಲ್ಲ. ಶುದ್ಧ ಗುಗ್ಗು.... ರಜನಿ ಲೈಫ್ ಹಾಳು ಮಾಡ್ಬಿಟ್ರಿ. ಅವ್ನು ಮೊನ್ನೆ ಸೆಂಟಿಮೆಂಟಲ್ ಫೂಲ್"

ಗುರುಮೂರ್ತಿಗಳು ಕಣ್ಣಲ್ಲಿಯೇ ಮಗನನ್ನು ಸಮಾಧಾನಿಸಲು ಪ್ರಯತ್ನಪಟ್ಟು ಸೋತರು.

" ಒಂದ್ನಾಲ್ಕು ದಿನ ಸುಮ್ಮನಿರು. ಇದೆಲ್ಲ ಸೋಗು, ತಾನಾಗಿ ಸರಿ ಹೋಗ್ತಾನೆ" ತಂದೆಯ ಮಾತಿಗೆ ಒರಟಾಗಿ ಕ್ರಾಪ್‌ತಳ್ಳಿ ಬಿರ ಬಿರನೆ ನಡೆದು ಹೋದ. 'ಫೂಲಿಷ್' ಎಂದರು. ಗಾಳಿಯಲ್ಲಿ ತೇಲಿ ಹೋಯಿತು ಆ ಬೈಗಳು.

ಎಲ್ಲರ ಬಾಯಿಂದ ಬಂದ ಮಾತುಗಳನ್ನು ಪ್ರತಿಭಟಿಸಲಾರದೆ ರಜನಿ ಸೋತುಹೋಗಿದ್ದಳು. ಕೋಣೆಗೆ ಬಂದ ವಿಕಾಸ್‌ನ ಹರವಾದ ಎದೆಯ ಮೇಲೆ

ತಲೆ ಇಟ್ಟು ಕಣ್ಣೀರು ಸುರಿಸಿದಳು. ನೊಂದುಕೊಂಡ. ವೈವಿಧ್ಯತೆಯು ಏಕತೆಯನ್ನ ಕಂಡುಕೊಳ್ಳಬೇಕಿತ್ತು.

"ಅಳೋಕೆ ಇದಾ ಸಮಯ ?" ಅವಳ ಕೆನ್ನೆ ಸವರಿದ. ರಜನಿ ನೋಟವೆತ್ತಿ ಅವನನ್ನೇ ನೋಡಿದಳು. ಆ ಕಣ್ಣುಗಳಲ್ಲಿನ ಪೂರ್ಣ ರಸಿಕತೆಗೆ ಕರಗಿಹೋದಳು. ಭಾವನೆಗಳನ್ನ ನವಿರಾಗಿ ವ್ಯಕ್ತಪಡಿಸಲು ಬಾಯಿಗಿಂತ, ಕಣ್ಣುಗಳು ಸಮರ್ಥವೆನಿಸಿತು. "ವಿಕಾಸ್, ನಂಗೆ ನೀವಿದ್ರೆ.... ಸಾಕು" ಎಂದು ಅವನ ತೋಳಲ್ಲಿ ಹುದುಗಿಹೋದಳು.

ಕಣ್ಣೀರು, ನೋವು ಎಲ್ಲಿ ಹೋಯಿತೋ. ಅವನ ಸನಿಹದಲ್ಲಿ ಅತ್ಯಂತ ಮಧುರವಾದ ರಾತ್ರಿ. ಇಡೀ ರಾತ್ರಿ ಒಂದಿಂಚು ಸರಿಯದೇ ಅವನನ್ನ ಅಪ್ಪಿಯೇ ಕನವರಿಸಿದಳು.

ಆದರೆ ಮಧ್ಯರಾತ್ರಿಯಲ್ಲಿ ಎಚ್ಚರಗೊಂಡ ವಿಕಾಸ್ ಮತ್ತೆ ನಿದ್ರಿಸಲಿಲ್ಲ. ಮುಗ್ಧ ಮುಖ ದಿಟ್ಟಿಸಿದಾಗ ಚೆಲುವಿನಲ್ಲಿ ಏನೋ ಕೊರತೆ ಇದೆಯೆನಿಸಿತು. ಅದನ್ನ ತುಂಬಬಲ್ಲ ಆತ್ಮ ವಿಶ್ವಾಸ ಅವನದು.

"ರಜನಿ ..." ತೋಳನ್ನ ತಟ್ಟಿದ. ಸ್ವಪ್ನಲೋಕದಲ್ಲಿಯೇ ಹುಬ್ಬುಗಂಟಿಕ್ಕಿದಳು.. ಪ್ರೇಮದಿಂದ ಚುಂಬಿಸಿದ. ರಾತ್ರಿಯ ಬಿಸಿ ಇರಲಿಲ್ಲ, ಬೆಳದಿಂಗಳಿನಂಥ ಚುಂಬನ. "ಬೇಗ ಸ್ನಾನ ಮುಗ್ಸು, ಅಮ್ಮ ಕಾಯ್ತಾ ಇರ್ತಾಳೆ" ಬಲವಂತದಿಂದ ಎದ್ದು ಕೂತಳು, ಕಾಲೇಜು ಬಿಟ್ಟ ಮೇಲೆ ಅವಳಿಗೆ ಇಷ್ಟ ಬಂದಾಗ ಎದ್ದೇ ಅಭ್ಯಾಸ. ಬೆಳಕು ಹರಿದ ಮೇಲಿನ ನಿದ್ದೆ ಅವಳಿಗೆ ಹೆಚ್ಚು ಇಷ್ಟ. ವಿಕಾಸ್ ಇಲ್ಲಿಯೇ ತಪ್ಪಿರಬೇಕು.

"ವಿಕಾಸ್... ...." ಅವಳ ತೋಳು ವಿಕಾಸ್‌ಗೆ ಹಾರವಾದಾಗ ಬಾಯಿ ಮುಚ್ಚಿದ "ಇಲ್ಲಿರೋ, ಇನ್ನೊಂದ್ಮಾತು ಬೇಡ. ಮದ್ವೆ ಆಗಿದ್ದು ಈ ಉದ್ದೇಶದಿಂದಲ್ಲ. ಮಾವ ಅಳಿಯನ ಮನೆಯಲ್ಲಿರೋ ಸಂಪ್ರದಾಯ ನಮ್ಮದಲ್ಲ. ಒಂದೇ ಊರು, ಯಾವಾಗ್ಬೇಕಾದ್ರೂ.... ಬರ್ಬಹುದ್ದು. ಅಷ್ಟನ್ನ ನಿಮ್ಮಪ್ಪ, ಅಮ್ಮನಿಗೆ ಹೇಳು" ಕ್ರಾಪನ್ನ ಹಿಂದಕ್ಕೆ ತಳ್ಳುತ್ತ ಮೇಲೆದ್ದ. ತಂದೆಯ 'ನಿರೀಕ್ಷೆ' ಪೂರ್ತಿಯಾಗಿ ಅಲ್ಲದಿದ್ದರೂ ಸ್ವಲ್ಪವಾದರೂ ಅರ್ಥವಾಗಿತ್ತು.

ಕುಣಿಯುತ್ತ ಹೋದ ರಜನಿಗೆ ವಿಕಾಸ್‌ನ ಪ್ರೀತಿ ಪ್ರೇಮ ಮುಖ್ಯ

ವಾಗಿತ್ತೇ ವಿನಃ ಅಪ್ಪ, ಅಮ್ಮನ ಗೊಣಗಾಟ ಕೋಪ ಅಲ್ಲ. ಅವಳೀಗ ಆಕಾಶದಲ್ಲಿ ಹಾರಾಡುವ ಪಕ್ಷಿ.

ವಿಷಯ ತಿಳಿದಾಗ ಪಂಕಜಮ್ಮ ಹಾರಾಡದಿದ್ದರೂ ಆಕ್ಷೇಪಿಸಿದರು. "ಇಲ್ಲಿದ್ರೇನು, ಅಲ್ಲಿದ್ರೇನು ? ಕಾಲೇಜಿಗೆ ಇಲ್ಲಿಂದ್ಲೇ ಹತ್ತಿರವಾಗ್ತಾ ಇತ್ತು. ಕಾರಿನಲ್ಲೇ ಓಡಾಡ್ಬಹುದಿತ್ತು. ದಿನ ಸಂಜೆ ಅವ್ರ ಮನೆಗೆ ಹೋಗ್ಬಂದಿದ್ರಾಗ್ತಿತ್ತು" ಗೊಣಗಿದರು. ರಜನಿ ಲಕ್ಷಿಸಲಿಲ್ಲ.

"ಅವ್ರಿಗೆ ಇಷ್ಟ ಇಲ್ಲ ಅಂದ್ಮೇಲೆ ಹೋದರಾಯ್ತು" ಸೆರಗು ಬೀಸಿಕೊಂಡು ಹೋದ ಮಗಳನ್ನು ನೋಡಿ ಹಣೆ ಚಿಚ್ಚಿಕೊಂಡರು "ಮುಗಿದೋಯ್ತು ! ಇವಳಿಗೆ ಗಂಡನೇ ಸರ್ವಸ್ವವಾಗಿಬಿಟ್ಟ ! ಈ ಬಿಸಿ ಸ್ವಲ್ಪ ಕಮ್ಮಿ ಆಗ್ಲಿ ಆಮೇಲೆ ಗೊತ್ತಾಗುತ್ತೆ" ಕದಲಿದರು. ಗುರುಮೂರ್ತಿಗಳು ತುಟಿಯಂಚಿನಲ್ಲಿ ನಕ್ಕರು.

ಸಭ್ಯತೆ, ಪ್ರಾಮಾಣಿಕತೆ, ನಿಷ್ಠೆಯ ಹಿಂದೆ ಬಿದ್ದಿರುವ ವ್ಯಕ್ತಿಗಳನ್ನ ಕಂಡರೆ ಗುರುಮೂರ್ತಿಗಳಿಗೆ ಉರಿ. ಈ ಜಗತ್ತಿನಲ್ಲಿ ಅವರು ಬದುಕಲು ನಾಲಾಯಕ್ ! ಅಂಥ ಜನರನ್ನು ನೋಡಿ ನಗುತ್ತಿದ್ದರು. ಹಂಗಿಸುತ್ತಿದ್ದರು. ಅವನ ಹಣೆಬರಹ ಎಂದುಬಿಟ್ಟರಾಗುತ್ತಿತ್ತು. ಮಗಳ ಕತ್ತಿಗೆ ಮಧ್ಯಮ ದರ್ಜೆಯ ಸಾಮಾನ್ಯ ಬದುಕಿನ ಉರುಳು ಬೀಳುವುದು ಅವರಿಗೆ ಸಾಧ್ಯವಿಲ್ಲ.

ಎಲ್ಲಾ ಜನರು ಮುಖ ತಿರುಗಿಸಿಕೊಂಡೇ ವರ್ತಿಸಿದರು. ಸಂಪ್ರದಾಯದ ಬಗ್ಗೆ ಒಲವಿಲ್ಲದಿದ್ದರೂ ದೂರದ ಸೋದರತ್ತೆಯ ವಾರಿಗೆ ಹೆಣ್ಣು ರಜನಿಯನ್ನು ಕೂಡಿಸಿ ಮಡಿಲು ತುಂಬಿದಳು.

"ಹೋಗೋಣ........" ಎಂದ ವಿಕಾಸ್, ಇಷ್ಟೊತ್ತು ಮೌನವಹಿಸಿದ ಗುರುಮೂರ್ತಿ ದರ್ಪದಿಂದ ಹೇಳಿದರು "ಪ್ರಕಾಶ್ ಕಾರು ಎಲ್ಲಿಗೊ ತಗೊಂಡ್ಹೋಗಿದ್ದಾನೆ." ಅವರ ಅಲಕ್ಷ್ಯಕ್ಕೆ ಕೋಪಗೊಳ್ಳದಿದ್ದರೂ ಉದಾಸೀನ ಮಾಡಿದ. "ಬೇರೆ ಅನ್ಕೂಲವಿದೆ. ಕಾಯೋದ್ರಲ್ಲಿ ಅರ್ಥವಿಲ್ಲ."

ಗುರುಮೂರ್ತಿಗಳು ಪೆಚ್ಚಾಗಿದ್ದರೂ ಅವರ ಅಭಿಮಾನಕ್ಕೆ ಛಾರಿ ಹೊಡೆತವೇ ಬಿದ್ದಿತ್ತು. ಸೊಪ್ಪು ಹಾಕದ ಅವನ ಸ್ವಭಾವಕ್ಕೆ ಸ್ವಲ್ಪ ಬೆದರಿದರು. ನಿಂತಲ್ಲೇ ಅಲುಗಾಡುವಂತಾಯಿತು ಅವರಿಗೆ.

ಪ್ರಕಾಶ್ ಕಾರು ಒಯ್ಯುವ ಮುನ್ನ ಅಂದ ಮಾತುಗಳು ವಿಕಾಸ್‌ನ

ಕಿವಿಗೆ ಬಿದ್ದಿತ್ತು. "ಅವ್ನಿಗೆ ಅಷ್ಟು ಧಿಮಾಕು ಇರಬೇಕಾದ್ರೆ.........ಕಾದು ಬಿದ್ದಿರಲಿ" ಎಂಥ ಕೊಬ್ಬಿದ ಜನರೆಂದು ಅವನಿಗೆ ಅರ್ಥವಾಗಿತ್ತು. 'ಅಹಂಕಾರಕ್ಕೆ ಉದಾಸೀನವೇ ಮದ್ದು' ಅವರ ದಾಳಕ್ಕೆ ಪ್ರತಿ ದಾಳ ಉರುಳಿಸಲು ಸಿದ್ಧನಾದ.

ವಿಕಾಸ್ ಹೊರಗೆ ಬಂದು ಉದ್ದಕ್ಕೂ ನೋಟ ಹರಿಸಿದ. ಬರುವ ಆಟೋಗಳ ಸುಳಿವಿರಲಿಲ್ಲ. ಗೇಟು ತೆಗೆದು ರೋಡಿಗೆ ಇಳಿದ.

ಪಂಕಜಮ್ಮ ಮಗಳನ್ನ ತರಾಟೆಗೆ ತಗೊಂಡರು. "ನೀನಾದ್ರೂ ಹೇಳ ಬಾರ್ದಿತ್ತಾ ! ಏನು ಕೊಳ್ಳೆಹೋಗ್ತಾ ಇದೇಂಥ ಇಂಥ ಅಹಂಕಾರ ! ಬೀದಿಯಲ್ಲಿ ಯಾಕೆ ಕಾಯಬೇಕಿತ್ತು ? ಇದು ನಮ್ಮ ಪ್ರತಿಷ್ಠೆಯ ಪ್ರಶ್ನೆ. ಪ್ರಕಾಶ್ ಬರೋವರ್ಗೂ ಕಾದಿದ್ರೆ ಅವರಪ್ಪನ ಮನೆಯು ಗಂಟೇನು ಹೋಗುತ್ತಿತ್ತು ?"

ಯಾವುದೋ ಗುಂಗಿನಲ್ಲಿದ್ದ ರಜನಿ ಅರ್ಭಟಿಸಿದಳು. "ಈಗ ನಿಮ್ಮ ಗಂಟು ಕೂಡ ಹೋಗೋಲ್ಲ. ಸುಮ್ಮನಿದ್ಬಿಡಿ. ಬರೀ ಕಂಠಶೋಷಣೆ ಮಾಡಿ ಬೇರೆಯವ್ರ ಪ್ರಾಣ ಯಾಕೆ ಹಿಂಡುತ್ತೀಯಾ ?" ಮಗಳ ಧೈರ್ಯಕ್ಕೆ ಗುರುಮೂರ್ತಿಗಳು ಶಭಾಷ್‌ಗಿರಿ ಕೊಟ್ಟರು. "ಭೇಷ್, ನಿನ್ನ ಡೇರ್‌ನೆಸ್ ನಂಗೆ ಇಷ್ಟವಾಯ್ತು. ಐ ಯಾಮ್ ಪ್ರೌಡಾಫ್ ಯು. ಇದೇ ಧೈರ್ಯದಿಂದ ವಿಕಾಸ್‌ನ ಪ್ರತಿಭಟಿಸೋದು ಕಲೀ."

ಆಟೋ ಸದ್ದು ರಜನಿಯನ್ನು ವಿಮುಖಳನ್ನಾಗಿ ಮಾಡಿತು. ಒಳಗೆ ಬಂದ ವಿಕಾಸ್ ಎಲ್ಲರಿಗೂ ಸಹಜವಾಗಿಯೇ ಹೇಳಿದ. ಆದರೆ ಅಷ್ಟೇ ಸ್ವಾಭಾವಿಕವಾಗಿ ಮಾತಾಡಲು ಇವರುಗಳಿಂದಾಗಲಿಲ್ಲ. ಬರೀ ಒಳಗೊಳಗೆ ಗೊಣಗಿದರು.

ಅವರಿಬ್ಬರ ಜೊತೆ ಆಟೋ ಒಂದು ಸೂಟುಕೇಸ್ ಮಾತ್ರ ಒಯ್ದಿತು. ಎಲ್ಲ ನಿಬ್ಬೆರಗಾಗಿ ನಿಂತರು. ಅವಳಿಗಾಗಿಯೇ ತಂದ ಬೆಲೆಬಾಳುವ ಮಂಚ, ಫೋಮ್ ಬೆಡ್, ಒಡವೆ, ಸೀರೆಗಳು—ತಮಗೆ ಬೆಲೆ ಸಿಗಲಿಲ್ಲವೆಂದೇನೋ ಅನಾಥವಾಗಿ ರೋಧಿಸಿದವು.

"ಭೇಷ್...." ಎಂದು ರಂಜಿತಾಳ ಗಂಡ ಸಿಗರೇಟು ಹಚ್ಚಿದ., ದೊಡ್ಡ ಸಾಹಸಿಯಾಗಿ ಕಂಡ ವಿಕಾಸ್ ಅವನ ಕಣ್ಣಿಗೆ. ಅಭಿಮಾನದ ಜೊತೆ ಗೌರವವೂ ಮೂಡಿತು.

ರಮಣಿಯ ಗಂಡನ ದೃಷ್ಟಿಯಲ್ಲಿ ವಿಕಾಸ್ 'ಮಹಾ ಮೂರ್ಖ.' ಈಗಿನ ಸ್ಥಿತಿಯ ಜಗತ್ತಿನಲ್ಲಿ ಬಾಳಲು ತಿಳಿಯದವನು. ಅದನ್ನು ಮಾತ್ರ ವಿಕಾಸ್ ಮುಂದೆ ಹೇಳುವಷ್ಟು ಧೈರ್ಯ ಅವನಿಗಿರಲಿಲ್ಲ.

ಇಂಥ ಮಾವ, ಅತ್ತೆಗೆ ಬಹಳವಾಗಿ ಹೊಂದಿಕೊಂಡ ಅಳಿಯಂದಿರು. ಎಷ್ಟೇ ಅವರಿಂದ ಪಡೆದರೂ ಗುಲಾಮಗಿರಿ ತಪ್ಪಿರಲಿಲ್ಲ. ಅತ್ತೆ, ಮಾವನಿಂದ ಒಂದು ತುರ್ತು ಕರೆ ಬಂದರೇ 'ಸತ್ತೆನೋ, ಕೆಟ್ಟೆನೋ' ಎಂದು ಧಾವಿಸುವ ಜನ. ರಂಜಿತಾ ಗಂಡನಿಗೆ ಸ್ವಲ್ಪ ತುಡಿತವಿದ್ದರೂ ರಮೇಶ ಹಣದ ಮುಂದೆ ಯಾವುದನ್ನೂ ಕೇರ್ ಮಾಡುತ್ತಿರಲಿಲ್ಲ.

೦ ೦ ೦ ೦

ಆಟೋದಿಂದ ಗಂಡನ ಜೊತೆ ಇಳಿದ ರಜನಿ ಖುಷಿಯಾಗಿಯೇ ಇದ್ದಳು. ಹೊಸಲಿನಿಂದ ಹೊರಗೆ ನಿಂತೇ ಕೂಗಿದ ವಿಕಾಸ್ "ಅಮ್ಮ...." ಅವನಿಗೆ ಒತ್ತಿಯೇ ನಿಂತ ರಜನಿ ಉದ್ದಕ್ಕೂ ಕಣ್ಣು ಹಾಯಿಸಿದಳು. "ಬರೀ ಆರತಿ ಅಷ್ಟೆ" ಕಣ್ಣೊಡೆದ. ಅಚ್ಚರಿ ಮಿನುಗಿತು ರಜನಿಯ ಕಣ್ಣುಗಳಲ್ಲಿ. ತೀರಾ ಗಂಭೀರವಾಗಿ ಕಾಣುವ ವಿಕಾಸ್‌ನ ರಸಿಕತೆ ಬೇರೆಯವರಿಗೆ ತಿಳಿಯುವಂತಿರಲಿಲ್ಲ.

ಬಂದ ವಿಶ್ವನಾಥಯ್ಯನವರ ಮುಖದಲ್ಲಿ ಮೆಚ್ಚಿಗೆ ಮೂಡಿತು. "ವಿಕಾಸ್....ಬಂದಿದ್ದಾನೆ...." ದನಿಯೇರಿಸಿ ಹೇಳಿದರು. ಸಂಭ್ರಮವಿತ್ತು ಅವರಲ್ಲಿ.

ಬಂದ ಸುನಂದಮ್ಮ ಕಣ್ಣರಳಿಸಿದರು. ಆಕೆಗೆ ಈಗಲೂ ನಂಬಲು ಕಷ್ಟವಾಗುತ್ತಿತ್ತು. ಪಂಕಜಮ್ಮ ಕೇಳುವಂತೆ ಹೇಳಿದ್ದರು.

"ಒಂದೇ ಊರು....ರಜನೀನ ಕಳ್ಸೋ ಮಾತೇ ಇಲ್ಲ. ವಿಕಾಸ್ ಬೇಕಾದ್ರೆ ಅಲ್ಲಿಗೂ ....ಇಲ್ಲಿಗೂ ಓಡಾಡಿಕೊಂಡಿರ್ಲಿ." ಆಗ ಆಕೆಯ ಹೊಟ್ಟೆಗೆ ಬೆಂಕಿ ಬಿದ್ದಿತ್ತು. ಈಗ ತಣ್ಣನೆಯ ಹಾಲು ಕುಡಿದಂತಾಯಿತು. ಅವರ ಸಂತೋಷ ವರ್ಣಿಸಲು ಅಸಾಧ್ಯವಾಯಿತು.

ಆರತಿ ಮಾಡಿ ಒಳಗೆ ಬರಮಾಡಿಕೊಂಡರು. ಮಗಳ ಮದುವೆ ಮಾಡಿ ಆರ್ಥಿಕವಾಗಿ ಸೋತಿದ್ದ ಅವರಿಗೆ ಯಾವುದೇ ದುಂದುವೆಚ್ಚ ಬೇಡವೆಂದು

ವಿಕಾಸ್ ಹೇಳಿದ್ದ. ಒಂದಿಷ್ಟು ಆಸೆ ಇತ್ತು. ಅದಕ್ಕೆ ಬೇಗರು ತಣ್ಣೀರು ಹುಯ್ದಿದ್ದರು.

ಬಟ್ಟೆ ಬದಲಾಯಿಸಿ ಕೂತಲ್ಲಿಂದಲೇ ಕೂಗಿದ. "ತುಂಬ ಹೊಟ್ಟೆ ಹಸಿವು. ಏನಿದ್ರೂ....ಅದೇ ಸಾಕು" ಅವಳನ್ನು ಬರಸೆಳೆದು "ಏನೂ ಇಲ್ದಿದ್ರೆ. ನಿನ್ನ ಸೊಸೆನೇ ಸಾಕು" ಮೂಗು ಹಿಂಡಿದ. ಅವನ ಕೈಯನ್ನು ರಜನಿ ಹಿಂದಕ್ಕೆ ತಳ್ಳಿದಳು.

ತನ್ನ ಅಕ್ಕ, ಭಾವಂದಿರ ಜೊತೆ ಸ್ನೇಹ, ಸಲಿಗೆಯಿಂದ ಬೆರೆಯದ ವಿಕಾಸ್ ಮೇಲೆ ಅವಳಿಗೆಷ್ಟು ಕೋಪವಿತ್ತು. ಅವರೆಲ್ಲ ಬಾಯಿಗೆ ಬಂದಂತೆ ಆಡಿಕೊಂಡು ನಕ್ಕಿದ್ದರು. ಆದರೂ ವಿಕಾಸ್‌ನ ಅರ್ಥಮಾಡಿಕೊಳ್ಳುವುದು ಅವಳಿಂದಾಗಿರಲಿಲ್ಲ.

"ನೀವು ತುಂಬ ಸಿಡುಕು, ಸದಾ ಗಂಭೀರವಾಗಿರೋ ನಿಮ್ಮನ್ನು ನೋಡಿ ಸೋಷಿಯಲ್ ಅಲ್ಲಾಂದ್ರು, ನಮ್ಮಕ್ಕಂದಿರು" ನಿಧಾನವಾಗಿ ಹೇಳಿದಾಗ ಕ್ರಾಪ್ ಹಾರಿಸಿ ನಕ್ಕ. "ಇದು ಒಂದು ರೀತಿಯಲ್ಲಿ ನಿಜ. ಇನ್ನೊಂದು ರೀತಿಯಲ್ಲಿ ಸುಳ್ಳು. ಎಲ್ಲಾ ಜನರನ್ನು ಹೀಗೆಯೇ ಇರಬೇಕೂಂತ ನಿರ್ದೇಶಿಸೋಕೆ ಸಾಧ್ಯವೇ ? ಅವ್ರ ಅನಿಸಿಕೆಗೆ ನನ್ನದೇನೂ ವಿರೋಧವಿಲ್ಲ" ಆ ಸೋಗಿನ ಮುಖಗಳನ್ನು ಕಣ್ಮುಂದೆ ತಂದುಕೊಂಡಾಗ ಅವನಿಗೆ ಜಿಗುಪ್ಸೆಯಾಯಿತು. ಅವರ ಸ್ವಭಾವಗಳು ಅವನಿಗೆ ಹಿಡಿಸದಿದ್ದರೂ ದೂಷಿಸಲು ಹೋಗಲಾರ.

ಅದನ್ನು ಮರೆತಂತೆ ಮೇಲಕ್ಕೆದ್ದ. "ತಿಂಡಿ ತಗೊಳೋಣ ಬಾ" ಕೈ ಹಿಡಿದೇ ಅಡಿಗೆಯ ಮನೆಗೆ ಕರೆದೊಯ್ದ. ಆ ಜನರ ಬಗ್ಗೆ ಬೇಸರವಿದ್ದರೂ ಒಂದು ಮಾತಾಡಿ ಕೂಡ ರಜನಿಯನ್ನು ನೋಯಿಸಲಾರ.

ಕಾಯಿ ತುರಿಯುತ್ತಿದ್ದ ವಿಶ್ವನಾಥಯ್ಯ ತಲೆಯೆತ್ತಿದರು. ಜೋಡಿ ಚೆನ್ನಾಗಿತ್ತು. ಆದರೆ ಅವರಲ್ಲಿ ವಿಷಾದ ಮೂಡಿ ಮರೆಯಾಯಿತು. ತಾವು ಮೋಸಹೋದೆವೆಂಬ ಭಾವ ಅವರಲ್ಲಿ ಮೂಡಿಹೋಗಿತ್ತು.

"ಏನಣ್ಣ, ನಿಮ್ಮ ಸರ್ಕಸ್ ! ನಂಗೂ ಸ್ವಲ್ಪ ಬಿಡಿ" ಈಳಿಗೆ ಮಣೆಯನ್ನೆಳೆದುಕೊಂಡ. ರೇಗಿಕೊಂಡರು ಮಗನ ಮೇಲೆ ವಿಶ್ವನಾಥಯ್ಯ "ಕಾಯಿ ತುರಿಯೋದು ಪ್ರಮಾದವೇನಯ್ಯ! ಇದ್ರಲ್ಲಿ ನಿನ್ನ ಪಾಲು ಯಾಕೆ ಬೇಕಿತ್ತು?" ಕಣ್ಣುಗಳು ಮಗನ ಮೇಲೆ ಅಭಿಮಾನದ ವರ್ಷವನ್ನು ಸುರಿಸುತ್ತಿತ್ತು.

"ಸ್ವಲ್ಪ ಕೂಡಿ....." ತಂದೆಗೆ ಸಂಗೀತಮಯವಾದ ಭಾಷೆಯಲ್ಲಿ ಹೇಳಿ ಕಾಯಿ ತುರಿದು ತಾನೇ ಉಪ್ಪಿಟ್ಟಿನ ಪಾತ್ರೆಗೆ ಸುರಿದು ಕೆದಕಿದ. ಇಂಥ ಕೆಲಸಗಳಲ್ಲಿ ಅವನಿಗೆ ಆಸಕ್ತಿಯೇ.

ಎಷ್ಟೋ ಭಾನುವಾರಗಳು ಅವನದೇ ಅಡುಗೆ. ಅಪ್ಪ, ಅಮ್ಮನ ಕೈ ಕಟ್ಟಿ ಒಂದೆಡೆ ಕೂಡಿಸಿ ತಾನೇ ಮಾಡಿ ಬಡಿಸುತ್ತಿದ್ದ. ಪ್ರೀತಿ ಅಭಿಮಾನದ ಜೊತೆ ಅವನಿಗೆ ಕರ್ತವ್ಯಪ್ರಜ್ಞೆ. ಹೆತ್ತವರನ್ನು ನಿರಾಶೆಗೊಳಿಸಿದ, ನೋಯಿಸಿದ ವ್ಯಕ್ತಿ ಭವಿಷ್ಯದಲ್ಲಿ ಏನೂ ಸಾಧಿಸಲಾರನೆಂದು ಅವನ ನಿರ್ಣಯ.

ಮಗ, ಸೊಸೆಯನ್ನು ಕೂಡಿಸಿ ತುಂಬುಪ್ರೀತಿಯಿಂದ ಬಡಿಸಿದರು ಸುನಂದಮ್ಮ. ಅಷ್ಟು ರುಚಿಯಾದ ಉಪ್ಪಿಟ್ಟು, ಸನ್ನಿವೇಶಗಳು ಅವರ ಮನೆಯಲ್ಲಿ ನಿರ್ಮಾಣವಾಗುತ್ತಲೇ ಇರಲಿಲ್ಲ. ಪಂಕಜಮ್ಮ ಪಾತ್ರೆ, ಸೌಟುಗಳನ್ನು ಮುಟ್ಟಿದ್ದೇ ಅವಳು ಕಂಡಿರಲಿಲ್ಲ. ಅದಕ್ಕೆ ಅವರಿಗೆ ಪುರಸತ್ತು ಇರಲಿಲ್ಲ.

ಇನ್ನಷ್ಟು ಸಜ್ಜಿಗೆ ಬಡಿಸಿದರು ಸೊಸೆಗೆ. "ಏನು ತಿನ್ಲೇಯಿಲ್ಲ" ಎರಡು ಮಿಳ್ಳೆ ತುಪ್ಪ ಸುರಿದರು. ಕಣ್ಣಲ್ಲೇ ನಕ್ಕ ವಿಕಾಸ್. ಸುಂದರ ಬದುಕಿಗೆ ಇಂಥ ಅನ್ಯೋನ್ಯತೆ ಭಾವನಾತ್ಮಕ ಕೊಡುಗೆ.

ಹೊರ ಬರುವಾಗ ರಜನಿಯತ್ತ ನೋಡಿದ. "ಅಮ್ಮಂಗೆ ಮಗ್ಳು ಮೇಲೆ ಪ್ರೀತಿ ಜಾಸ್ತಿ. ನಿನ್ನ ಸೊಸೇಂತ ತಿಳ್ದುಕೊಂಡಿಲ್ಲ" ಅರ್ಥಗರ್ಭಿತವಾಗಿ ಹೇಳಿದ. ತುಟಿಯಂಚಿನಲ್ಲಿ ರಜನಿ ಗಾಢವಾಗಿ ನಕ್ಕಳು. ಅವನ ಮಾತುಗಳನ್ನು ಅರ್ಥಮಾಡಿಕೊಂಡಳೋ, ಬಿಟ್ಟಳೋ.

ಂ ಂ ಂ ಂ

ನಾಲ್ಕಾರು ದಿನ ಜೀವ ಬಿಗಿಹಿಡಿದಿದ್ದ ಪಂಕಜಮ್ಮ ಬಂದವರೆ ಮಗಳನ್ನ ತಬ್ಬಿ ಕಣ್ಣೀರು ಮಿಡಿದರು. ಇಂಥ ಅನ್ಯೋನ್ಯತೆಯೇನು ತಾಯಿ ಮಕ್ಕಳ ನಡುವೆ ಇರಲಿಲ್ಲ. ಕಂಡರೂ ಇದೊಂದು ನಾಟಕದ ದೃಶ್ಯವೆಂದು ಭಾವಿಸಿಯಾರು.

"ನೀನು ಇಲ್ದ ಮನೆ ನರ್ಕ ಆಗಿಹೋಗಿದೆ. ಸದಾ ನಂಗೆ ನಿನ್ದೇ ಯೋಚ್ನೇ. ಬಿ.ಪಿ. ಹೆಚ್ಚಾಗಿ ನೀನು ಬಂದ ದಿನದಿಂದ ಮಂಚ ಬಿಟ್ಟು

ಮೇಲೇಳಲಿಲ್ಲ" ಧಾರಾಳವಾಗಿ ಕಣ್ಣೀರು ಹರಿಸಿದರು. ಇಂಥ ಕಣ್ಣೀರು ಸುರಿಸುವ ಜನಕ್ಕೆ ಗ್ಲಿಸರಿನ್ ಅಗತ್ಯವಿರಲಾರದೆಂದು ಕೆಲವರಾದರೂ ಯೋಚಿಸಿಯಾರು.

ಅಮ್ಮನ ಅಂತಃಕರಣಕ್ಕೆ ರಜನಿ ಕರಗಿ ನಿಂತಲ್ಲಿಯೇ ನೀರಾಗಿ ಹೋದಳು. ಇಲ್ಲಿನದು ತೀರಾ ಬದಲಾದ ಬದುಕು. ಇಷ್ಟ ಬಂದಾಗ ಪರ್ಸ್ ಹಿಡಿದು ಹೋಗಿ ಗೆಳತಿಯರ ಜೊತೆ ಸುತ್ತಾಡಿ ಬರುತ್ತಿದ್ದಳು. ಮನೆಯ ಆಕ್ಷೇಪಣೆಯೇನು, ಆಸಕ್ತಿಯಿಂದ ಕೇಳುತ್ತಲೂ ಇರಲಿಲ್ಲ. ಇಡೀ ದಿನ ಮನೆ ಯಲ್ಲಿದ್ದರೂ ಸಂಜೆ ಬಂದು ವಿಕಾಸ್ ಹೊರಗೆ ಕರೆದೊಯ್ಯುತ್ತಿದ್ದ. ಸುನಂ ದಮ್ಮ ಜೊತೆಯಲ್ಲಿ ದೇವಸ್ಥಾನಕ್ಕೆ ಕರೆದೊಯ್ಯುತ್ತಿದ್ದರು. ಪಂಕಜಮ್ಮ ಬರುವುದಕ್ಕೆ ಕ್ಷಣ ಮೊದಲು ಇದು ಅವಳ ಪಾಲಿಗೆ ರಮ್ಯ ಜೀವನ.

ಸ್ವಲ್ಪ ಸಮಾಧಾನಕ್ಕೆ ಬಂದ ಮೇಲೆ ಪಂಕಜಮ್ಮ ಮಗಳನ್ನು ತರಾಟೆಗೆ ತೆಗೆದುಕೊಂಡರು. "ದಿನಕ್ಕೊಂದು ಸಲವಾದ್ರೂ ಬರೋದ್ಬೇಡ್ವಾ! ಹೆತ್ತವ ರನ್ನು ಮರ್‍ಯೋಷ್ಟು ಪ್ರೀತಿ ತುಂಬಿಕೊಡ್ತಾ ಇದ್ದಾರ, ಈ ಮನೆಯವ್ರು!" ಮೂಗು, ಮುಖ ಕೆಂಪಗೆ ಮಾಡಿಕೊಂಡರು.

"ಅವ್ರು ಕಾಲೇಜಿಗೆ ಹೋದ್ರೆ ಸಂಜೆನೇ ಬರೋದು ? ನಾನು ಹ್ಯಾಗೆ.... ಬರ್ಲಿ ?" ಎಳೆಯ ಮಗುವಿನಂತೆ ಗೋಗರೆದಾಗ ಆಕೆ ವಿಸ್ಮಿತರಾದರು. ಆರಾಮಾಗಿ ಹಕ್ಕಿಯಂತೆ ಸುತ್ತಾಡುತ್ತಿದ್ದ ಹೆಣ್ಣು ಇವಳೇನಾ ? ರೇಗಿದರು. "ನಿಂಗೆ ನಾಚ್ಕೇ ಆಗೋಲ್ಲ ! ಒಟ್ನಲ್ಲಿ ನಮ್ಮ ಕರ್ಮವೇನೋ !" ಆಕೆ ಹಣೆ ಚಚ್ಚಿಕೊಂಡರು. ಕಲಿತ ಮಗಳಿಂದ ಇಂಥ ಮುಗ್ಧ ಮಾತುಗಳು !

ಕಡೆಗೆ ನಯವಾಗಿ ಮಗಳನ್ನು ಒಲಿಸಿಕೊಳ್ಳಬೇಕೆಂಬ ತೀರ್ಮಾನಕ್ಕೆ ಬಂದರು. "ಅದೆಲ್ಲ....ಹಾಗಿರ್ಲಿ ! ಹೇಗೂ ನಾಳೆ ಭಾನುವಾರ. ಬೆಳಗೆದ್ದು ಬೇಗ ಬಂದ್ಬಿಡಿ. ಇಡೀ ದಿನ ಅಲ್ಲೇ ಇರ್ಬಹುದು !" ತಾಯಿಯ ಮಾತಿಗೆ ಅವಳ ಮುಖ ತಾವರೆಯಂತೆ ಅರಳಿತು.

ಪಂಕಜಮ್ಮ ಮಗಳ ಕೋಣೆಯಿಂದ ಹೊರಗೆ ಬರಲೇ ಇಲ್ಲ. ತಿಂಡಿ, ಕಾಫೀ ಎಲ್ಲಾ ಅಲ್ಲಿಗೇ ಒಯ್ದು ಕೊಟ್ಟರು. ಸುನಂದಮ್ಮನೊಂದಿಗೆ ಬೇಕಾ ಬಿಟ್ಟಿ ಮಾತು. ಆಕೆಗೆ ಮುಜುಗರ. 'ಒಂದು ರೀತಿಯ ಜನ. ಸೊಸೆ

ತಮ್ಮ ಪಾಲಿಗೆ ಇದ್ದರೇ ಸಾಕು' ತಮಗೇ ತಾವೇ ಸಮಾಧಾನ ಮಾಡಿಕೊಂಡರು.

ವಿಕಾಸ್ ಮನೆಗೆ ಬಂದಾಗ ಮನೆಯ ವಾತಾವರಣದಲ್ಲಿ ಒಂದು ರೀತಿಯ ಬದಲಾವಣೆ ಕಂಡುಬಂತು. ಮ್ಲಾನವದನರಾಗಿ ಸುನಂದಮ್ಮ ಮಲ್ಲಿಗೆ ಮೊಗ್ಗು ಪೋಣಿಸುತ್ತಿದ್ದರು.

"ಯಾರು ಬಂದಿರೋದು ?" ಕುಚೋದ್ಯಕ್ಕೆ ಪ್ರಶ್ನಿಸಿದ.

"ಬೀಗಿತ್ತಿ ..." ಚುಟುಕಾಗಿ ಉತ್ತರಿಸಿದರು.

ಮುಖ ಉಜ್ಜಿದ "ತಲೆ ನೋವಿನ ಸಮಾಚಾರ...." ಅವನ ಉತ್ಸಾಹ ಉಡುಗಿತು. ಅಲ್ಲೇ ಕೂತ. ಮೊಗ್ಗನ್ನೆಲ್ಲ ಬಟ್ಟಲಿಗೆ ಹಾಕಿದ ಸುನಂದಮ್ಮ ಮೇಲೆದ್ದರು. "ಬಟ್ಟೆ ಬದಲಾಯಿಸಿ ಕೈ ಕಾಲು ತೊಳೀ. ಬಿಸಿಯಾಗಿ ದೋಸೆ ಹಾಕಿಕೊಡ್ತೀನಿ" ಅತ್ತ ಹೋದಾಗ ಸೆಕೆಯೆನಿಸಿತು ಅವನಿಗೆ. ಫ್ಯಾನ್ ಸ್ವಿಚ್ ಒತ್ತಿ ಷರಟಿನ ಮೇಲಿನ ಗುಂಡಿ ಬಿಚ್ಚಿದ.

ನಿರಂತರ ಗುಂಡಿನ ಮಳೆಯಂತೆ ಆಕೆಯ ಮಾತುಗಳು ಗಾಳಿಯಲ್ಲಿ ತೇಲಿಕೊಂಡು ಬರುತ್ತಿತ್ತು. ಸ್ವಪ್ರತಿಷ್ಠೆಯ ಮಾತುಗಳು 'ಮೂಕ ಹೆಣ್ಣು' ಎಂದುಕೊಂಡು ಕೆಮ್ಮಿ ಸೂಚನೆ ಕೊಟ್ಟೇ ಕೋಣೆಯೊಳಕ್ಕೆ ಹೋದ.

ಪಂಕಜಮ್ಮ ಅರ್ಧ ಕೂತಂತೇ ಮಂಚದ ಮೇಲೆ ಮಲಗಿದ್ದರು. ಅವರ ಪಕ್ಕ ಕೂತಿದ್ದ ರಜನಿ ಮೇಲೆದ್ದಳು.

"ಅಮ್ಮ ...ಬಂದಿದ್ದಾರೆ......." ಆಕೆಯ ಭಂಗಿಯೇನು ಬದಲಾಗಲಿಲ್ಲ. "ಗೊತ್ತಾಯ್ತು...." ನೋಟ ಅತ್ತ ಹರಿಸದೆಯೇ "ನಮಸ್ಕಾರ...." ಎಂದ.

"ನಿಮ್ಹತ್ರ ಜಗ್ಳ ಆಡ್ಬೇಕೂಂತ್ಲೇ ಬಂದಿದ್ದು" ಗತ್ತಿನಿಂದ ಆಕೆ ನುಡಿದಳು. ಅಂತಹ ಮಾತುಗಳಿಗೆ ಪ್ರತಿಕ್ರಿಯೆ ತೋರಿಸುವುದು ಮೂರ್ಖತನವೆನಿಸಿತು.

ಲುಂಗಿ ಹೊರಗೆ ಹಿಡಿದು ಬಂದು ಬಟ್ಟೆ ಬದಲಾಯಿಸಿದ. ವಿಶ್ವನಾಥಯ್ಯನವರು ಬಂದರು. ಕ್ಷಣ, ನಿಮಿಷಗಳು ಸರಿದು ಗಂಟೆಗಳಾದರೂ ತಾಯಿಮಗಳಿಬ್ಬರೂ ಕೋಣೆಯಿಂದ ಹೊರಗೆ ಬರಲಿಲ್ಲ. ಮಾತುಗಳು ನಿಲ್ಲುವ ಹಾಗೆ ಕಾಣಲಿಲ್ಲ.

ಗೋಡೆಯ ಗಡಿಯಾರ ಹತ್ತು ಬಾರಿಸಿದಾಗ ವಿಕಾಸ್ ಮೇಲೆದ್ದ. ತಾನು

ಮಾಡಿದ ತಪ್ಪು ಎಷ್ಟು ದೊಡ್ಡದೆಂದೂ, ಅದಕ್ಕೆ ಅನುಭವಿಸಬೇಕಾದ ಶಿಕ್ಷೆ ಎಷ್ಟು ಅಗಾಧವೆಂದು ಆವನಿಗೆ ಅರ್ಥವಾಗಿತ್ತು.

ಕಡೆಗೆ ಸುನಂದಮ್ಮ ತಟ್ಟೆ ಹಾಕಿ ಎಲ್ಲರನ್ನು ಊಟಕ್ಕೆ ಎಬ್ಬಿಸಿದರು. ಹರಟುತ್ತ, ಛೇಡಿಸುತ್ತ ಊಟ ಮಾಡುವುದು ವಿಕಾಸ್‌ಗೆ ಇಷ್ಟ. ಇವತ್ತು ತುಟಿ ಬಿಚ್ಚಲಿಲ್ಲ.

ಕೋಣೆಯ ಬಾಗಿಲಿಗೆ ಬಂದ ಸುನಂದಮ್ಮ "ರಜನಿ ನಿಮ್ಮಮ್ಮನನ್ನು ಊಟಕ್ಕೆ ಎಬ್ಸು" ಎಂದರು. ಆಗ ಆಕೆ ಮಂಚದಿಂದ ಕೆಳಗಿಳಿದರು "ಅಯ್ಯೋ ನಂಗೆ ಹೊತ್ತು ಸರಿದಿದ್ದೇ ಗೊತ್ತಾಗ್ಲಿಲ್ಲ. ಇದು ಕರುಳಿನ ಸಂಬಂಧ. ರಜನಿನ ಕಳ್ಸಿಕೊಟ್ಮೇಲೆ ನಾಲ್ಕು ತುತ್ತು ಊಟ ಮಾಡಿದ್ದೇ ಇಲ್ಲ" ಇವು ಬಣ್ಣದ ಮಾತುಗಳೆಂದು ಎಲ್ಲರಿಗೂ ಗೊತ್ತು. ಹೆತ್ತ ಮಕ್ಕಳಿಗಾಗಿ ಆಕೆ ಎಂದೂ ಒದ್ದಾಡಿರಲಿಲ್ಲ.

ಹೆಚ್ಚು ಬಲವಂತದ ನಂತರವೇ ಆಕೆ ತಟ್ಟೆಯ ಮುಂದೆ ಕೂತಿದ್ದು. ಆಗಲೂ ಮಾತೇ. ಈಕೆ ನಿಮಿಷಕ್ಕೆ ಎಷ್ಟು ಮಾತಾಡಬಹುದು ? ವಿಕಾಸ್ ಯೋಚಿಸತೊಡಗಿದ.

"ನಮ್ಮತ್ತೆ ಕೈ ಅಡ್ಗೆ ಅಮೃತ" ರಜನಿ ಹೊಗಳಿಕೊಂಡಾಗ ದುರು ಗುಟ್ಟಿಕೊಂಡು ಮಗಳನ್ನು ನೋಡಿದರು, ಕಣ್ಣಲ್ಲೇ ಗದರಿದರು. "ನಮ್ಮ ರಜನಿದು ತುಂಬ ಒಗ್ಗಿಕೊಳ್ಳೋ ಸ್ವಭಾವ. ನಮ್ಮ ಅಡ್ಗೆಯೋನು ಎಷ್ಟೇ ಕೆಟ್ಟದಾಗಿ ಅಡ್ಗೇ ಮಾಡಿದ್ರೂ .. ಹೊಗಳಿಕೊಂಡು ಊಟ ಮಾಡ್ತಾ ಇದ್ಳು" ಎಂದಾಗ ಯಾರು ಪ್ರತಿಕ್ರಿಯೆ ವ್ಯಕ್ತಪಡಿಸಲಿಲ್ಲ. ಈಗ ಅಷ್ಟನ್ನು ಬಿಟ್ಟು ಬೇರೇನೂ ಮಾಡುವ ಹಾಗಿರಲಿಲ್ಲ.

ನಾಲ್ಕು ತುತ್ತಿಗೆ ಕೈ ತೊಳೆದ ಆಕೆ ಹೊರಟು ನಿಂತರು "ನಾನಿನ್ನು..... ಹೋಗ್ಬರ್ತೀನಿ" ಎಂದವರು ಮಗಳಿಗೆ ಕಣ್ಣಲ್ಲಿಯೇ ಹೇಳಿದರು. "ರಜನಿನ ಕರ್ಕೊಂಡ್ಹೋಗ್ತೀನಿ. ಅಪ್ಪ ತಂದೆ ಮಗಳನ್ನು ನೋಡ್ದೇ ಕಂಗೆಟ್ಟಿದ್ದಾರೆ" ಇದು ಸುಳ್ಳೆಂದು ಅವರಿಗೂ ಗೊತ್ತು. ಎಂಟು ದಿನ ಹೆಂಡತಿ ಮನೆಗೆ ಬರದಿದ್ದರೂ ವಿಚಾರಿಸುವುದು ಅವರ ಸ್ವಭಾವವಲ್ಲ. ಅನಿವಾರ್ಯ ಕೆಲಸಗಳಿದ್ದಾಗ ಮಾತ್ರ ಜನರ ಅಗತ್ಯ ಅಷ್ಟೆ.

ಆಕೆಯ ಕೇಳಿಕೆ ಕೇಳಿಸಲೇ ಇಲ್ಲವೆನ್ನುವಂತೆ ವಿಶ್ವನಾಥಯ್ಯ ಇನ್ನೊಂದು

ಸೌಟು ಹುಳಿ ಹಾಕಿಸಿಕೊಂಡರು. ಸುನಂದಮ್ಮ ಮಗನ ಕಡೆ ನೋಡಿದರು. *ಕೆಲವು ವಿಷಯಗಳಲ್ಲಿ ಎಂಟರ್ ಆಗುವುದು ಆಕೆಗೆ ಇಷ್ಟವಿಲ್ಲ.*

ರಜನಿ ಮೊಣಗೈನಿಂದ ವಿಕಾಸ್‌ನ ತಿವಿದಳು. "ಅಮ್ಮ, ಏನೋ ಕೇಳ್ತಾ ಇದ್ದಾರೆ". ಮಜ್ಜಿಗೆ ಕುಡಿದು ಮೇಲೆದ್ದ ವಿಕಾಸ್ "ನೀನೇ ಉತ್ತರ ಹೇಳು" ಅವನ ಸ್ವರ ಗುಡುಗಿತು. ರಜನಿ ದನಿ ಅಡಗಿತು.

ಕೈ ತೊಳೆದ ವಿಕಾಸ್ ತಣ್ಣನೆಯ ಗಾಳಿಗೆ ಮೈಯೊಡ್ಡಿ ಹೊರಗೆ ಬಂದು ನಿಂತ. ಪ್ರಶಾಂತವಾಗಿದ್ದ ಜನ. ಕೊಳದಲ್ಲಿ ಕಲ್ಲೆಸೆದಂತಾಗಿತ್ತು. ಈ ಸಂಬಂಧ ಹೇಗೆ ಸ್ವೈರಿಸಿಕೊಳ್ಳುವುದು ?

ಡ್ರೈವರ್‌ನ ಸಣ್ಣನೆಯ ಗೊರಕೆ ಕಾರಿನಿಂದ ಅವ್ಯಾಹತವಾಗಿ ಬರುತ್ತಿತ್ತು. ತಣ್ಣನೆಯ ಗಾಳಿ ಕೂಡ ವಿಕಾಸ್‌ನ ಸ್ಪರ್ಶಿಸಿದಾಗ ಬಿಸಿಯಾಗುತ್ತಿತ್ತು.

ಭುಜದ ಮೇಲೆ ರಜನಿಯ ಕೈ ಬಿದ್ದಾಗ ಅವಳತ್ತ ತಿರುಗಬೇಕೆನಿಸಲಿಲ್ಲ. "ನಿನ್ನಿಷ್ಟ, ನಿಂಗೆ ಹೋಗ್ಬೇಕೂಂತ ಅನ್ನಿಸಿದ್ರೆ ಹೋಗು. ನಾನು ನಾಳೆ ಬಂದು ಕರ್ಕೊಂಡ್ಬರ್ತೀನಿ. ಅಳು, ಗೋಳಾಟ, ರಂಪಾಟ ನಂಗೆ ಇಷ್ಟವಾಗೋಲ್ಲ" ಕಠಿಣವಾಗೇ ಮಾತಾಡಿದ. ಅವನೆದೆಯ ಮೃದುವಾದ ಭಾವನೆಗಳು ಕೂಡ ಪಂಕಜಮ್ಮನನ್ನು ಕಂಡರೆ ಕಲ್ಲಾಗಿಬಿಡುತ್ತಿತ್ತು.

ಅವನ ಮುಂದೆ ಬಂದು ನಿಂತಳು. "ನೀವೂ ಬನ್ನಿ" ಪುಟ್ಟ ಹುಡುಗಿ ಹಠ ಮಾಡಿದಂತಿತ್ತು. ವಿಕಾಸ್ ಬಿಗಿದ ಮುಖ ಸಡಿಲವಾಯಿತು. "ನಾಳೆ ನಮ್ಮ ಪ್ರೊಫೆಸರ್ ಬರ್ತಾರೆ. ನಾನು ಮನೆಯಲ್ಲಿ ಇರ್ಬೇಕಾದ ಅಗತ್ಯವಿದೆ" ತಿಳಿಹೇಳಿದ. ಕೈ ಹಿಡಿದು ಬಂದ ಮಾತ್ರಕ್ಕೆ ನಿರ್ಬಂಧಿಸಲಾರ. ಹಾಗೆಂದು ತನ್ನ ವ್ಯಕ್ತಿತ್ವ ಗಾಳಿಯಲ್ಲಿ ತೂರಲು ಇಷ್ಟವಿಲ್ಲ.

ಪೆಚ್ಚು ಪೆಚ್ಚಾದ ರಜನಿ ಅತ್ತೆಯ ಮುಂದೆ ಬಂದು ನಿಂತಳು. ಅವರೆಂದರೆ ಅವಳಿಗೆ ಪ್ರೀತಿ. ತಾಯ ಪ್ರೀತಿಯಲ್ಲಿ ಕಾಣದ ಅವ್ಯಕ್ತ ಆನಂದ ಅವರ ಮಾತುಗಳಲ್ಲಿ ಅವಳಿಗೆ ಸಿಗುತ್ತಿತ್ತು.

"ವಿಕಾಸ್...." ಅಂದವಳು ಗಾಬರಿಯಿಂದ ಬಾಯಿ ಮುಚ್ಚಿಕೊಂಡಳು. ಆಕೆ ನಕ್ಕುಬಿಟ್ಟರು. "ನಮ್ಮ ಮಕ್ಳ ರೀತಿ-ನೀತಿ, ಸಂತೋಷಗಳಿಗೆ ಹಿರಿಯರು ಬದಲಾದ್ರೆ ತಪ್ಪಿಲ್ಲ. ನಿನಗೆ ಹೇಗೆ ಬೇಕೋ, ಹಾಗೆ ಕರೆದುಕೋ.

ನೀವಿಬ್ರೂ ಅನ್ಯೋನ್ಯವಾಗಿದ್ರೆ ನಮ್ಗೆ ಸಾಕು." ಅವರ ತುಂಬು ಮನದ ಮಾತುಗಳು ರಜನಿಗೆ ಆಪ್ಯಾಯಮಾನವಾಗಿತ್ತು. 'ಅಮ್ಮ....' ಅಂದರೇ ನಮ್ಮಮ್ಮನ ಹಾಗಿರಬೇಕು' ವಿಕಾಸ್ ಅಭಿಮಾನದಿಂದ ಹೇಳಿಕೊಳ್ಳುತ್ತಿದ್ದ.

ಸುನಂದಮ್ಮ ಇಷ್ಟಪಡದ್ದು ಅವಳಿಗೆ ಬೇಕಿರಲಿಲ್ಲ. "ಪ್ಲೀಸ್, ಇವತ್ತು ಕ್ಷಮ್ಸಿಬಿಡಿ. ಇನ್ಮೇಲೆ ವಿಕಾಸ್ ಅಂತ ಕರ್ಯೋಲ್ಲ" ಎಂದವಳು ತುಟಿ ಕಚ್ಚಿ ಕೊಂಡು ಬಂದ ವಿಷಯವನ್ನೇ ಮರೆತುಬಿಟ್ಟಳು.

ಹೊರಗಿನಿಂದ ಪಂಕಜಮ್ಮ ಮಗಳನ್ನು ಕೂಗಿಕೊಂಡಾಗ ಓಡಿ ಹೋದಳು. ವಿಕಾಸ್‌ನ ಬೆಚ್ಚನೆಯ ಆಸರೆಯಲ್ಲಿ ನಿದ್ರಿಸಬಯಸುವ ಅವಳಿಗೆ ಒಂಟಿಯಾಗಿ ಹೋಗಲು ಇಷ್ಟವಾಗಲಿಲ್ಲ.

"ಇವತ್ತು ನಾನು ಬರೋಲ್ಲ" ಎಂದ ಕೂಡಲೇ ಪಂಕಜಮ್ಮ ಕೈಯಲ್ಲಿನ ತಾಂಬೂಲ ನೆಲಕ್ಕೆ ಕುಕ್ಕಿದರು. "ನಾನ್ಸೆನ್ಸ್... ನಿಂಗೆ ಸ್ವತಂತ್ರದ ಅರಿವೇ ಇಲ್ಲ" ಕಾಲು ಅಪ್ಪಳಿಸಿ ಹೋಗಿ ಕಾರಿನಲ್ಲಿ ಕೂತರು. ಅವರಿಗೆ ಮೂರನೆಯ ಕಣ್ಣು ಇದ್ದಿದ್ದರೇ ಮಗಳು ಎನ್ನುವ ಮಮತೆ ಮರೆತು ಸುಟ್ಟುಬಿಡುತ್ತಿದ್ದರು.

ಈ ಕಹಿ ಅವರ ಮನದಲ್ಲಿ ಉಳಿದುಹೋಯಿತು. ಅವಕಾಶಕ್ಕೆ ಕಾಯಲು ನಿರ್ಧರಿಸಿದರು.

ಹಾಲ್‌ಗೆ ಬಂದ ಸುನಂದಮ್ಮ ನೊಂದುಕೊಂಡರು. "ಕೊಟ್ಟ ತಾಂಬೂಲ ಬಿಸಾಡಿ ಹೋಗಿದ್ದಾರೆ. ಅವ್ರಿಗೆ ಮಗಳನ್ನ ಕಳುಹಿಸಿಕೊಡ್ಲಿಲ್ಲ ಅನ್ನೋ ಕೋಪ" ಮಗನ ಮುಂದೆ ತೋಡಿಕೊಂಡರು.

ವಿಕಾಸ್ ಭಾರವಾದ ಉಸಿರು ದಬ್ಬಿದ. ತನ್ನ ರೀತಿಯಿಂದ ಅವನಿಗೆ ಪಶ್ಚಾತ್ತಾಪವಾಗಿರಲಿಲ್ಲ. "ಬ್ಯಾಡ್ ಹ್ಯಾಬಿಟ್ಸ್ ಷುಡ್ ಬಿ ನಿಪ್ಡ್ ಇನ್ ದಿ ಬಡ್. ಕೆಟ್ಟ ಅಭ್ಯಾಸಗಳನ್ನು ಬುಡದಲ್ಲಿಯೆ ಚಿವುಟಿಹಾಕ್ಬೇಕು. ಇಲ್ದಿದ್ರೆ ಮುಂದೆ ವರೀ ಮಾಡ್ಬೇಕಾಗುತ್ತೆ. ತಮ್ಗೆ ಇಷ್ಟ ಬಂದಾಗಲೆಲ್ಲ ಮಗಳನ್ನು ಕರೆದೊಯ್ಯಬಾರ್ದು ಅಂತ ತಿಳ್ದುಕೊಂಡ್ರೆ ...ಸಾಕು" ಬಿಗುವಿನಿಂದ ಹೇಳಿದ. ಆಕೆ ಸುಮ್ಮನಾದರು.

ವಿಶ್ವನಾಥಯ್ಯ ತಮಗೆ ಸಂಬಂಧಪಟ್ಟ ವಿಷಯ ಅಲ್ಲವೆಂದು ರಾತ್ರಿಯ ವಾಕ್ ಹೋದರು.

o o o o

# ಮೈತ್ರಿ

ಎರಡು ದಿನದಿಂದ ಗುರುಮೂರ್ತಿಗಳಿಗೆ ಜ್ವರವಿತ್ತು. ಇದು ಪಂಕಜಮ್ಮನಿಗೆ ಗೊತ್ತಿಲ್ಲ. ಪ್ರಕಾಶ್ ತಲೆ ಕೆಡಿಸಿಕೊಳ್ಳಲಿಲ್ಲ.

ಪಂಕಜಮ್ಮ ಮನೆಗೆ ಬಂದಾಗ ಗುರುಮೂರ್ತಿಗಳು ಪೂರ್ತಿ ಮಲಗಿಬಿಟ್ಟಿದ್ದರು. "ಹುಷಾರಿಲ್ವಾ ?" ಎಂದವರು ಅವರ ಉತ್ತರಕ್ಕೂ ಕಾಯದೆ ಬಾತ್‌ರೂಮಿಗೆ ಹೋದರು. ಪ್ರತಿಷ್ಠಿತ 'ಮಹಿಳಾ ಜಾಗೃತಿ ಸಂಸ್ಥೆ'ಯ ಅಧ್ಯಕ್ಷರ ಎಲೆಕ್ಷನ್ ನಾಲ್ಕು, ಐದು ದಿನವಿತ್ತು ಸ್ಪರ್ಧಿಸಿದ್ದಾಗಿತ್ತು. ಆಕೆ ಅದೇ ಗುಂಗಿನಲ್ಲಿದ್ದರು.

ಡಾಕ್ಟರ್ ಬಂದಾಗಲೇ ಗಂಡನ ಜ್ವರದ ವಿಷಯ ಗೊತ್ತಾಗಿದ್ದು. ಆಕೆಯೇನು ಅವರ ಮಂಚದ ಬಳಿ ಕೂತು ಉಪಚರಿಸಬೇಕಿರಲಿಲ್ಲ. ಅದನ್ನ ಗುರುಮೂರ್ತಿಗಳು ಇಚ್ಛಿಸಲೂ ಇಲ್ಲ.

ತಕ್ಷಣ ಒಂದು ನಿರ್ಧಾರಕ್ಕೆ ಬಂದರು. "ಹೋಗಿ ರಜನೀನ *ಕರ್ಕೊಂಡ್ಬಾ" ಪ್ರಕಾಶ್ ಮೊದಲು ಒಪ್ಪದಿದ್ದರೂ ಆಮೇಲೆ ಸಮ್ಮತಿಸಿದ.* ಬೇರೆಯಾಗಿಯೇ ಉಳಿಯುವ ವಿಕಾಸ್‌ನ ವ್ಯಕ್ತಿತ್ವದ ಬಗ್ಗೆ ಅವನಿಗೆ ರೋಷ.

ಸೊಸೆಯ ಕೂದಲು ಸಿಕ್ಕು ಬಿಡಿಸುತ್ತಿದ್ದ ಸುನಂದಮ್ಮ ಸಿಗರೇಟನ್ನು ಬೆರಳುಗಳ ತುದಿಯಲ್ಲಿ ಹಿಡಿದೇ ಬಂದ ಪ್ರಕಾಶನ ಬಗ್ಗೆ ಬೇಸರವಾದರೂ ತೋರ್ಪಡಿಸಲಿಲ್ಲ.

"ರಜನಿ...." ಅವನ ಸ್ವರ ಗಡುಸಾಗಿತ್ತು. ಸೋದರನ ಸಂಬೋಧನೆಯ ಅಂತಃಕರಣ ಅಲ್ಲಿರಲಿಲ್ಲ. ಸುನಂದಮ್ಮನ ಕೈಯಲ್ಲಿನ ಬಾಚಣಿಗೆ ಕೆಳಗೆ ಬಿತ್ತು. "ಬಾಪ್ಪ, ಅಪರೂಪವಾಗಿ ಬಂದಿದ್ದೀಯ !" ಸಹಜವಾಗಿ ಸ್ವಾಗತಿಸಿದರು. ಅವನು ಅರ್ಧ ಉರಿದ ಸಿಗರೇಟನ್ನು ನಿಂತಲ್ಲಿಂದಲೇ ಕಾಂಪೌಂಡ್‌ನೊಳಕ್ಕೆಸೆದ.

"ಡ್ಯಾಡಿಗೆ ಹುಷಾರಿಲ್ಲ; ಬೇಗ ಹೊರಡು" ತಂಗಿಯನ್ನು ಅವಸರಿಸಿದನೇ ವಿನಃ ಆಕೆಯ ಮಾತಿನತ್ತ ಲಕ್ಷ್ಯ ಕೊಡಲಿಲ್ಲ. ಸುನಂದಮ್ಮನ ಮುಖ ಸಪ್ಪಗಾಯಿತು. "ಏನಾಗಿದೆ ?" ಅವರ ಪ್ರಶ್ನೆಗೆ ಉತ್ತರಿಸಲಿಲ್ಲ. ತಂಗಿಯನ್ನು ಅವಸರಿಸಿದ.

ಕಣ್ತುಂಬಿದ ಸೊಸೆಯನ್ನು ಸಮಾಧಾನಿಸಿ ಕಳಿಸಿದರು. ವಿಶ್ವಾಸ

ತೋರಿದ್ದರೇ ವಿಶ್ವನಾಥಯ್ಯ ಜೊತೆಯಲ್ಲೇ ಹೋಗುತ್ತಿದ್ದರು. ಈಗ ಪಕ್ಕದ ಮನೆಯಿಂದ ಮಗನಿಗೆ ಫೋನ್ ಮಾಡಿ ವಿಷಯ ತಿಳಿಸಿದಳು.

"ನೀನು ಮೊದ್ಲು ಹೋಗಿ ನೋಡು. ಬೇಸರ ಇಂಥ ಸಂದರ್ಭಗಳಲ್ಲಿ ಅಲ್ಲ. ಆ ಹುಡ್ಗ ಏನೂಂತ ವಿಷ್ಯ ತಿಳಿಸಲಿಲ್ಲ" ಮಗನಿಗೆ ಅಪ್ಪಣೆ ಮಾಡಿದರು.

ಅವರುಗಳ ಸ್ವಭಾವ ವಿಕಾಸ್‌ಗೆ ಹಿಡಿಸದಿದ್ದರೂ ಮಾನಸೆಂಬ ಪ್ರೀತಿ, ಗೌರವ ಎಲ್ಲಾ ಇತ್ತು. ಆಟೋ ಹಿಡಿದು ಧಾವಿಸಿದ. ಅವನ ಪ್ರಕಾರ ಆತಂಕದ ಛಾಯೆಯೇನು ಕಾಣಲಿಲ್ಲ. ಗುರುಮೂರ್ತಿಗಳ ಕೋಣೆಯಿಂದ ಮಾತು, ನಗು ಎಲ್ಲಾ ಕೇಳಿಬರುತಿತ್ತು. ಅವನ ಅವುಡುಗಳು ಬಿಗಿದುಕೊಂಡವು. ಬಲವಂತದಿಂದ ಉಗುಳು ನುಂಗಿದ.

"ರಜನಿ...." ಕೂಗಿದ. ಮಾತು, ನಗುವಿನ ನಡುವೆ ಅವನ ಕೂಗು ಗಾಳಿಯಲ್ಲಿ ತೂರಿಹೋಯಿತು. ಆ ಜನರ ಬಗ್ಗೆ ಅವನಿಗೆ ಯಾವುದೇ ಒಳ್ಳೆಯ ಭಾವನೆಗಳಿಲ್ಲದ ಕಾರಣ ಸಲಿಗೆಯಿಂದ ಮುನ್ನುಗ್ಗಲಾರ. "ರಜನಿ...." ಸ್ವರವೇರಿಸಿದ.

ಹೊರಗೆ ಬಂದ ಪ್ರಕಾಶ್ ಒಂದು ತರಹ ನೋಟ ಬೀರಿದ. "ಯಾಕೆ ಸಂಕೋಚ, ನೀವು ಈ ಮನೆಗೆ ಅಳಿಯ ಅನ್ನೋ ಸಂಗ್ತೀನೇ ಮರೆತಂಗೆ ಕಾಣುತ್ತೆ" ವ್ಯಂಗ್ಯದ ಚೂಪು ವಿಕಾಸ್‌ನ ಎದೆಯನ್ನು ತುಸು ಸವರಿ ನೋಡಿತು. ಪುಂಡನಂತೆ ಕಂಡ.

ಅಷ್ಟರಲ್ಲಿ ಹೊರ ಬಂದ ಪಂಕಜಮ್ಮ ಅವನನ್ನು ಕೋಣೆಯೊಳಕ್ಕೆ ಕರೆದೊಯ್ದರು. ಗುರುಮೂರ್ತಿಗಳ ಮುಖದ ಮೇಲೆ ಎರಡು ದಿನದ ಕಳೆ ಇದ್ದರೂ ಕಂಗೆಟ್ಟಂತೆ ಕಾಣಲಿಲ್ಲ. ಔಪಚಾರಿಕವಾಗಿ ಆರೋಗ್ಯ ವಿಚಾರಿಸಿದ ಮೇಲೆ ತನಗೇನು ಅಲ್ಲಿ ಕೆಲಸವಿಲ್ಲವೆನಿಸಿತು ವಿಕಾಸ್‌ಗೆ. ತಲೆಬುಡವಿಲ್ಲದ ಮಾತುಗಳು, ನಗು ವಾಕರಿಕೆಯನ್ನು ತರಿಸಿತು. ತಾನು ಮೋಸಹೋಗುವ ಅಗತ್ಯವಿತ್ತಾ ?

ವಾಚ್ ಕಡೆ ನೋಡಿ ಮೇಲೆದ್ದ. "ನಾನಿನ್ನು....ಬರ್ತೀನಿ" ಅವನಂತೂ ಇಲ್ಲಿ ನಿಲ್ಲಲು ಸಿದ್ಧನಿರಲಿಲ್ಲ.

"ಛೆ, ಎಲಾದ್ರೂ ಉಂಟೆ ? ರಜನಿ ಇಲ್ಲೇ ಇದ್ಮೇಲೆ ನೀವ್ಹೋಗಿ

ಅಲ್ಲೇನು ಮಾಡ್ತೀರಾ ? ನಾನು ಬೇಕಾದ್ರೆ ಡ್ರೈವರ್ ಕೈಯಲ್ಲಿ ಹೇಳಿ ಕಳಿಸ್ತೀನಿ" ಪಂಕಜಮ್ಮ ತಡೆಹಾಕಿದರು. 'ನನ್ನ ಮಗಳ ಹೊರತು ನಿನಗೆ ವ್ಯಕ್ತಿತ್ವವಿಲ್ಲ' ಎಂದು ಹೇಳಿದಂತಾಯಿತು. ಎಂಥ ಮೂರ್ಖ ಜನ ಇವರು !

"ಇಲ್ಲ, ನಾನ್ಹೋಗ್ಬೇಕು" ಇನ್ನಷ್ಟು ಕಠಿಣವಾಗಿ ಮಾತಾಡಬೇಕೆನಿಸಿದರೂ ವಿಕಾಸ್‌ಗೆ ಸಂದರ್ಭವಲ್ಲವೆನಿಸಿತು. "ಮತ್ತೆ ನಾಳೆ ಬಂದು ನೋಡ್ತೀನಿ" ಬಾಗಿಲು ದಾಟಿದ. ಮಿಕ್ಕವರೆಲ್ಲ ಬೆರಗಾದರು. 'ಈಡಿಯಟ್' ಪ್ರಕಾಶ್ ಗೊಣಗಿದ.

ಮುಂದೆ ಬಂದ ರಜನಿ ಅವನ ತೋಳಿಗೆ ಮೂಗುಜ್ಜಿದಳು. "ಇಲ್ಲೇ.... ಇರ್ಲಿ" ಅವನೆದೆಯಲ್ಲಿ ಅವಳ ಬಗ್ಗೆ ಸಹಾನುಭೂತಿ ಇಣಕಿತು. ಈ ಸಹಾನುಭೂತಿಯ ಹೊಂಡದಲ್ಲಿ ಪ್ರೀತಿಯೆಲ್ಲಿ ಹುದುಗಿಹೋಗುವುದೋ ಎಂದು ಹೆದರಿದ. "ಬೇಡ, ಈಗ ಬರೋದಾದ್ರೆ ಬಾ. ಬೆಳಗ್ಗೆ ಕಾಲೇಜಿಗೆ ಹೋಗೋವಾಗ ತಂದುಬಿಡ್ತೀನಿ."

ಪಂಕಜಮ್ಮನವರಿಗೆ ಒಂದು ಅವಕಾಶ ಸಿಕ್ಕಂತಾಯಿತು. "ಅವಳ ತಂದೆಗೆ ಹುಷಾರಾಗೋವರ್ಗೂ ಇಲ್ಲೇ ಇರ್ತಾಳೆ. ಇದು ಅವಳಿಗೆ ತಾಯಿ ಮನೆ ಅನ್ನೋ ವಿಷ್ಯಾನೇ ಮರ್ತುಬಿಟ್ಟಿದ್ದೀರಲ್ಲ. ಈ ಮಹಿಳಾ ಸಂಘಟನೆಯ ಕಾಲದಲ್ಲೂ ಹೆಂಡ್ತೀನ ಹದ್ದುಬಸ್ತಿನಲ್ಲಿಡೋ ಪ್ರಯತ್ನ ನಿಮ್ದು" ಅನಾವಶ್ಯಕವಾಗಿ ದೂರಿದರು. ಕ್ಷುಲ್ಲಕ ಬಡಬಡಿಕೆಯೆನಿಸಿತು. ಮಧುರವಾದ ಬಾಂಧವ್ಯದ ನಡುವೆ ಬಿರುಕು ತೋಡುವ ಪ್ರಯತ್ನ.

ವಿಕಾಶ್‌ಗೆ ರೇಗಿತು. ತಾನು ಯಾವ ಕ್ಷಣದಲ್ಲಿಯಾದರೂ ತಾಳ್ಮೆ ಕಳೆದುಕೊಳ್ಳಬಹುದು. ಅದು ವಿವೇಕವಲ್ಲವೆನ್ನುವ ತೀರ್ಮಾನಕ್ಕೆ ಬಂದ.

ಕಾಂಪೌಂಡ್‌ಗೆ ಇಳಿದಾಗ ರಜನಿ ಓಡಿ ಬಂದಳು. ಅವಳ ನಿಷ್ಕಲ್ಮಷ ಕಣ್ಣುಗಳಲ್ಲಿದ್ದಿದ್ದು ಬರೀ ಗೊಂದಲ. ಇಬ್ಬದಿಯ ಸಂಕಟ ವಿಕಾಸ್‌ಗೆ.

"ವಿಕಾಸ್, ನೀವು ಯಾಕೆ ಮಮ್ಮಿ ಹೇಳಿದಂಗೆ ಕೇಳೋಲ್ಲ? ಡ್ರೈವರ್ ಕೈಯಲ್ಲಿ ಹೇಳಿಕಳ್ಸೋಣ" ರಜನಿ ಪೂರ್ತಿಯಾಗಿ ಅತ್ತೆ, ಮಾವನನ್ನು ಮರೆತುಬಿಟ್ಟಳು ಪದೇಪದೇ ಮಗನಿಗಾಗಿ ಬಾಗಿಲಿಗೆ ಬರುವ ತಾಯಿ ಚಿತ್ರ ಮರೆಯಾಯಿತು. ಥೇಟ್ ಪಂಕಜಮ್ಮ ಮಗಳಂತೆ ಕಂಡಳು.

"ನೀನೇ ಯೋಚ್ನೆ ಮಾಡು" ತಣ್ಣಗೆ ಹೊರ ನಡೆದ.

ಬಿರುಗಾಳಿಯ ಮಧ್ಯದ ದಾಂಪತ್ಯದ ಬದುಕು ಕಡೆಗೆ ತೇಲುವುದೋ, ಮುಳುಗುವುದೋ !

ರಜನಿಗೆ ನಿಜವಾಗಿ ಕೋಪ ಬಂತು. ಬೆಂಕಿಗೆ ಆಜ್ಯ ಸುರಿಯಲು ಮಿಕ್ಕವರು ರೆಡಿಯಾಗಿದ್ದರು.

"ನೋಡಿದ್ಯಾ, ನಾವೇನು ಇಲ್ಲೇ ಇದ್ಬಿಡೂಂತ ಹೇಳಿದ್ವಾ ? ಹೆಣ್ಣು ಕೊಟ್ಟ ಮಾವನಿಗೆ ಹುಷಾರಿಲ್ಲ ಅನ್ನೋ ಕಾಳಜಿ ಇಲ್ದ ಮನುಷ್ಯ. ಒಟ್ನಲ್ಲಿ ನಮ್ಮ ಹಣೆಬರಹ ಖೊಟ್ಟಿ !" ಅಲೀಕಲ್ಲುಗಳನ್ನು ರಭಸದಿಂದ ನೆಲಕ್ಕೆ ಬೀಳು ವಂತೆ ಆಡಿಬಿಟ್ಟರು ಪಂಕಜಮ್ಮ. ರಜನಿಗೆ ತಲೆ ಕೆಟ್ಟುಹೋಯಿತು.

"ಸುಮ್ಮನಿರು, ಮಮ್ಮಿ" ಅಬ್ಬರಿಸಿದಳು.

ಅವಳು ಟೈಫಾಯಿಡ್ ಮಲಗಿದಾಗ ವಿಕಾಸ್‌ಗೆ ಆಕ್ಸಿಡೆಂಟ್ ಆದಾಗಲೂ ಕೂಡ ಪಂಕಜಮ್ಮ ಮನೆಯಲ್ಲಿ ಇರಲಿಲ್ಲ. ಐದು ನಿಮಿಷ ಅವರುಗಳ ಹಾಸಿಗೆಯ ಬಳಿ ಕೂತು ಚಿಂತಿಸಿದಾಕೆ ಅಲ್ಲ. ಗುರುಮೂರ್ತಿಗಳು ಮಲಗಿ ದಾಗ ಕೂಡ ಅಷ್ಟೆ. ಇಂಥ ಹೆಣ್ಣಿನ ಬಾಯಲ್ಲಿ ವಿಕಾಸ್‌ನ ಸ್ವಭಾವದ ಬಗ್ಗೆ ವ್ಯಾಖ್ಯಾನ.

ಗುರುಮೂರ್ತಿಗಳು ಮಗಳನ್ನು ಹತ್ತಿರ ಕೂಡಿಸಿಕೊಂಡು ಒಂದಿಷ್ಟು ಹೇಳಿದರು "ರಜ್ಜು, ನೀನು ತುಂಬ ತಪ್ಪು ಮಾಡ್ತಾ ಇದ್ದೀಯಾ ! ಗಂಡಿನ ಸ್ವಭಾವ ನಿಂಗೆ ಗೊತ್ತಿಲ್ಲ. ಈಗ್ಲೇ ನಿಂಗೆ ಪೈಸೆಯಷ್ಟು ಬೆಲೆ ಕೊಡದ ವಿಕಾಸ್ ಮುಂದೆ ಕೊಡ್ತಾನಾ ! ಇಷ್ಟು ತಾತ್ಸಾರವಾಗಿ ಕಾಣೋಕೆ ಕಾರಣ ವೇನು ? ಹೆಣ್ಣಾದವ್ಳು ಇದ್ನೆಲ್ಲ ಯೋಚ್ಸಬೇಕು" ಎಚ್ಚರಿಕೆಯ ಜೊತೆ ಶಾಂತವಾದ ಅವಳ ಮನದಲ್ಲಿ ಆಂದೋಳನದ ಕಲ್ಲೆಸೆದುಬಿಟ್ಟರು. ಒಬ್ಬ ತಂದೆ ಯಾಗಿ ಮಾಡಿದ ದೊಡ್ಡ ಕೆಲಸ.

ದಿಕ್ಕೇ ತೋಚದಂತಾಯಿತು ರಜನಿಗೆ. ಈಗಲೂ ಅವಳ ಭಾವೆದುರು ಕಣ್ಣು ಮಿಟುಕಿಸುವುದು, ಛೇಡಿಸುವುದು, ಸೆರಗಿಡಿದು ಹೆಂಡತಿಯನ್ನು ಎಳೆ ಯುವುದು, ಬಂದ ಕೂಡಲೇ ಹಿಂದೆ ಬಂದು ಇಳಿಯುವುದು ಇದೆಲ್ಲವನ್ನೂ ಚಿಂತಿಸುವಷ್ಟು ಅವಳ ಮನ ಚುರುಕಾಗಿತ್ತು.

ವಿಕಾಸ್ ಅವಳನ್ನು ಸುಖದ ಅಮಲಿನಲ್ಲಿ ತೇಲಿಸಿದರೂ ಮಂಗನಾಟ ಆಡುತ್ತಿರಲಿಲ್ಲ ಹೊರಗೆ, ಯಾಕೆ ?

o o o o

ಮಗ ಮನೆಗೆ ಬಂದ ಕೂಡಲೇ ಗಾಭರಿಯಿಂದ ವಿಚಾರಿಸಿದರು ವಿಶ್ವ ನಾಥಯ್ಯ "ಹೇಗಿದ್ದಾರೆ, ನಿಮ್ಮ ಮಾವನವ್ರು ? ನಾನು, ಸುನಂದ ಹೊರ ಟಿದ್ವಿ. ನೀನು ಬಂದ್ಮೇಲೆ ಹೋಗೋಣಾಂತ ಸುಮ್ಮನಾದ್ವಿ" ನಿಂತು ವಿಕಾಸ್ ತಂದೆಯ ಕಡೆ ನೋಡಿದ. ಸೋಗಿಲ್ಲವೆ ಸರಳವಾಗಿ ಬದುಕಿನ ಜನ. ಅಂಥ ಜನರಿಂದ ಬಹಳ ದೂರ ಇರಬೇಕಿತ್ತು.

"ಏನಿಲ್ಲ, ಎರ್ಡು ದಿನ ಜ್ವರ ಇತ್ತಂತೆ. ಈವತ್ತೇನು ಇಲ್ಲ. ನಾಳೆ ಹೊತ್ಗೇ ಸರಿಹೋಗ್ಬಹುದ್ದು" ಎಂದವ ಷೂ ಬಿಚ್ಚಿ ಬಟ್ಟೆ ಬದಲಾಯಿಸಲು ಹೋದ. ವಿಶ್ವನಾಥಯ್ಯನವರ ಹಣೆ ನೆರಿಗೆಕಟ್ಟಿತು. ಅನುಮಾನಿಸಿದರು. "ಆ ಹುಡ್ಗೀ ಅಲ್ಲೇ ಇರ್ತಾಳಾ ?" ಕೋಣೆಯಿಂದ ಹೊರಗೆ ಬಂದವನನ್ನು ಪ್ರಶ್ನಿಸಿದರು. "ಇರ್ಬಹುದ್ದು" ಎಂದವನು ಬಾತ್ ರೂಮಿಗೆ ನಡೆದ.

ಇದು ಒಳ್ಳೆಯ ಲಕ್ಷಣವಾಗಿ ಕಾಣಲಿಲ್ಲ. ಮದುವೆಯಾಗಿ ಇನ್ನ ತಿಂಗಳು ಪೂರ್ತಿ ಆಗಿರಲಿಲ್ಲ. ಈ ಹಂತದ ಬಿರುಕು ಅಪಾಯ — ಅವರ ಅನು ಭವಯುತ ಮನ ಒತ್ತಿ ಹೇಳಿತು. ಸೊಸೆಯ ಬಗ್ಗೆ ಎಷ್ಟು ಮಮತೆ ಇದೆಯೋ ಮಗನ ವಿಷಯದಲ್ಲಿಯೂ ಅಷ್ಟೇ ಅಭಿಮಾನವಿತ್ತು — ತಪ್ಪು ಮಾಡಿರಲಾರ.

ಅಡಿಗೆಯ ಮನೆಯ ಬಾಗಿಲಿಗೆ ಬಂದರು. "ಸುನಂದ, ವಿಕಾಸ್ ಯಾಕೋ ಒಂದು ತರಹ ಇದ್ದಾನೆ. ಬೀಗಿತ್ತಿ ನಾಲಿಗೆ ಹರಿತ, ಏನಾದ್ರೂ ಅಂದಿದ್ರೆ ಮನಸ್ಸಿಗೆ ಹಚ್ಕೋಬೇಡಾಂತ ತಿಳ್ಸು" ಫಿಲ್ಟರ್‌ನಿಂದ ಡಿಕಾಕ್ಷನ್ ಬಗ್ಗಿಸುತ್ತಿದ್ದ ಹೆಂಡತಿಗೆ ಹೇಳಿದರು.

ಹಾಲು ಪಾತ್ರೆ ಕೈಗೆತ್ತಿಕೊಂಡ ಆಕೆ ಅನಾಮತ್ತಾಗಿ ಕೆಳಗೆ ಹಾಕಿ ಬಿಟ್ಟರು. ನಡುಗಿಯೋ, ಜಾರಿಯೋ ಪಾತ್ರೆ ಜಾರಿ ಹಾಲಂತೂ ಸುರಿದು ಹೋಯಿತು. ರೆಡ್ ಆಕ್ಸೈಡ್ ನೆಲದ ಮೇಲೆ ಹಾಲು ಹರಡಿಕೊಂಡಾಗ ಆಕೆಯ ಮನ ನೊಂದಿತು.

"ಛೇ, ಹಾಲೆಲ್ಲ ಹೋಯ್ತು" ಬಗ್ಗಿದಾಗ ವಿಶ್ವನಾಥಯ್ಯ "ಬದ್ಕು ಕೂಡ ಅಷ್ಟೆ. ಹಾಲು ಪಾತ್ರೆಯಲ್ಲಿದ್ದಾಗ ಎಷ್ಟು ಪ್ರಯೋಜನವಾಗಿತ್ತು. ಈಗ ಚೆಲ್ಲಿದ ಹಾಲಿನಿಂದ ಯಾವ್ದೇ ಪ್ರಯೋಜನವಿಲ್ಲ. ಚೆಲ್ಲದಹಾಗೆ ಮೊದ್ಲೇ ಜಾಗ್ರತೆವಹಿಸ್ಬೇಕು" ಆ ಮಾತುಗಳು ಆಕೆಯ ಮನಸ್ಸಿನ ಒಳ ಪದರಕ್ಕೆ ಮುಟ್ಟಿತು.

ಸೊಸೆಯ ಸರಳತೆ, ಮುಗ್ಧತೆಯನ್ನು ಕಂಡು ಎಲ್ಲಿ ದುರುಪಯೋಗ ಪಡಿಸಿಕೊಳ್ಳುವರೋ ಎನ್ನುವ ಹೆದರಿಕೆ. ಮಗನ ದೃಢ ಸ್ವಭಾವ ಆಕೆಗೆ ಗೊತ್ತು. ಕೆಲವು ವಿಷಯಗಳಿಗೆ ಎಷ್ಟು ಬೇಗ ಕರಗುವನೋ, ಅಷ್ಟೇ ಕಠಿಣ. ಒಂದಿಂಚು ಕೂಡ ಅಲುಗಾಡಲಾರ.

ಪುಸ್ತಕ ಹಿಡಿದು ಕೂತ ಮಗನ ಮುಂದೆ ಬಂದು ನಿಂತರು. ಅವರ ಅಭಿಮಾನ, ಮಮತೆಗಳ ಉದ್ದಗಲಕ್ಕೂ ಬೆಳೆದ ವ್ಯಕ್ತಿ. ನಿಖಿಲಾ, ಅವನ ಅಣ್ಣ ತಂಗಿಯರ ಸಂಬಂಧ ಅತ್ಯಂತ ಮಧುರವಾಗಿತ್ತು. ಪ್ರತಿ ವಿಷಯದಲ್ಲೂ ಅವನದೇ ಛಾಪು.

"ವಿಕಾಸ್ ಈ ಪ್ರಶ್ನೆ ಅನಗತ್ಯವಿರಬಹುದ್ದು" ಮೆಲ್ಲಗೆ ಪ್ರಾರಂಭಿಸಿದಾಗ ನೋಟ ಕಿತ್ತು; ಅವರಲ್ಲಿ ನೆಟ್ಟ "ಯಾವ ಪ್ರಶ್ನೆ ? ಯಾವ ವಿಷ್ಯ ? ಅಂಥದ್ದೇನು ನಡೆದಿಲ್ಲಮ್ಮ. ಅಪ್ಪಿಗೆ ಮಗಳನ್ನ ಇನ್ನ ನಾಲ್ಕು ದಿನ ಇಟ್ಸಿಕೊಳ್ಳೋ ಆಸೆ ಯಾರು ಬೇಡಾಂದ್ರು. ಅಳಿಯನನ್ನು ಇಟ್ಸಿಕೊಳ್ಳಬೇಕಂದ್ರೆ........ ದುರಾಸೆ" ಅವನ ಮುಖ ಗಂಭೀರವಾಯಿತು. "ವ್ಯಕ್ತಿಯ ದುರ್ಬಲತೆ ಬೇರೆಯವ್ರ ಕಾಲಕಸವಾಗಿಬಿಡುತ್ತೆ. ಅದ್ನ ಕೂಡ ಯೋಚ್ನೆ ಮಾಡ್ಬೇಕು" ಪುಸ್ತಕ ಪಕ್ಕಕ್ಕಿಟ್ಟು ಎದ್ದು ಹೋದ. ಮದುವೆಗೆ ಮುನ್ನಿನಿಂದಲೇ "ಶೀತಲ ಯುದ್ಧ" ಷುರುವಾಗಿತ್ತು.

ಮಗನ ಮಾತನ್ನ ವಿಶ್ವನಾಥಯ್ಯ ಸುಲಭವಾಗಿ ಅರ್ಥಮಾಡಿಕೊಂಡರು. ಪಂಕಜಮ್ಮ ಭೂತವಾಗಿ ಕಂಡರು. ಈಕೆಯಿಂದ ಯಾರ ಉದ್ಧಾರವಾಗುತ್ತೋ ಇಲ್ಲವೊ, ಕೆಲವು ಕುಟುಂಬಗಳಂತೂ ನಾಶ ! ಛೀ........ ಜಿಗುಪ್ಸೆಗೊಂಡರು.

ಊಟ ಮಾಡಿ ಮಲಗಿದ ವಿಕಾಸ್- ನೆನಪಾಗಿ ಕಾಡಿದಳು ರಜನಿ. 'ಹನಿಮೂನ್ ಕ್ಯಾನ್ಸಲ್' ಮದುವೆಗೆ ಮುನ್ನವೇ ಹೇಳಿದ್ದ. ಅಖಿಲಾ ಮದುವೆಗೆ ಮಾಡಿದ ಖರ್ಚು ಇನ್ನ ಹೊರೆಯಾಗಿಯೇ ಉಳಿದಿತ್ತು. ಹೆಣ್ಣಿನ ಮುಗ್ಧತೆ, ರೂಪ ಕೆಲವು ಸಂದರ್ಭಗಳಲ್ಲಿ ಆಕರ್ಷಣೆಯಾಗಿ ಪ್ರಯೋಜನಕ್ಕೆ ಬರಬಹುದು. ತನ್ನ ರೂಪ, ಸೌಂದರ್ಯದಿಂದಲೇ ಗಂಡನ್ನ ಹಿಡಿತದಲ್ಲಿಟ್ಟುಕೊಳ್ಳಬಹುದೆನ್ನುವುದು ಮೂರ್ಖತನ!

ಎದ್ದು ವಿಕಾಸ್ ಲೈಟು ಹಾಕಿದ. ಜೋಡಿ ಫ್ರೇಮ್ ಫೋಟೋದಲ್ಲಿದ್ದ ರಜನಿ ಸುಂದರವಾಗಿ ನಗುತ್ತಿದ್ದಳು. ಕೈಗೆತ್ತಿಕೊಂಡ, 'ಇಲ್ಲೇ ಇರಿ........'

ಅವಳ ಎದೆಯಾಳದ ಮಾತಿಗೆ ಕರಗಬಹುದಾದರೂ ಮುಂದೆ ಇದನ್ನೇ ಪ್ರಬಲ ಅಸ್ತ್ರವನ್ನಾಗಿ ಮಾಡಿಕೊಂಡು ತನ್ನ ಸುತ್ತಲಿನ ರೆಂಬೆ ಕೊಂಬೆಗಳನ್ನ ನಿರಾಯಾಸವಾಗಿ ಕತ್ತರಿಸಿಬಿಡಬಲ್ಲರೆಂದು ಅವನಿಗೆ ಗೊತ್ತು.

ಇಡೀ ರಾತ್ರಿ ಕಣ್ಣಲ್ಲಿ ನಿದ್ದೆ ಹತ್ತಲಿಲ್ಲ ಅವನಿಗೆ. ಇಂಥ ದುರ್ಬಲತೆ ಗಂಡಿನಲ್ಲಿದೆಯೆಂದೇ ಹೆಣ್ಣು ಆಡಿಸಬಹುದೇ ? ತನ್ನಲ್ಲೇ ನಕ್ಕು ಸ್ನಾನ ಮಾಡಲು ಹೋದ.

ಇವನ ಸ್ನಾನ ಮುಗಿಯುವ ವೇಳೆಗೆ ವಿಶ್ವನಾಥಯ್ಯನವರ ಪೂಜೆ ಮುಗಿದುಹೋಗಿತ್ತು. ಕಾಫೀ ತಂದಿಟ್ಟರು ಸುನಂದಮ್ಮ. ದಂಪತಿಗಳು ಇಡೀ ರಾತ್ರಿ ಯೋಚಿಸಿ ಒದ್ದಾಡಿಹೋಗಿದ್ದರು. ಇಂಥದ್ದೇ ಪುನರಾವರ್ತನೆಯಾದರೆ ಹೇಗೆ ?

ಕಡೆಗೆ ಒಂದು ನಿಶ್ಚಯಕ್ಕೆ ಬಂದರು "ಅತ್ತೆ ಮಾವ ಬೇರೆ ಊರಿನಲ್ಲಿದ್ರೆ ಹೋಗಿ ನಾಲ್ಕು ದಿನ ಇದ್ದು ಬರ್‍ತಾ ಇರ್ಲಿಲ್ವಾ ! ಈಗ ಯಾಕೆ ಉದಾಸೀನ? ಈ ನೆಪದಲ್ಲಿಯಾದ್ರೂ ಒಂದೆರಡು ದಿನ ಇದ್ದು ಕರ್ಕೊಂಡ್ಬಾ. ಅವ್ರಿಗೂ ಸಮಾಧಾನ" ವಿಕಾಸ್ ಮಾತಾಡಲಿಲ್ಲ. ಕೆಲವು ವಿಷಯಗಳು ತರ್ಕಕ್ಕೆ ಸಿಗುವುದಿಲ್ಲ.

ಗುರುಮೂರ್ತಿಗಳ ಸಂಸಾರವನ್ನು ಕಂಡರೆ ಅವನಿಗೆ ಇಷ್ಟವಾಗುತ್ತಿರಲಿಲ್ಲ ಅಂದದ್ದರಿಂದ ವಿಮುಖವಾಗಿ ಅವರೊಡನೆ ಸ್ವಲ್ಪವಾದರೂ ರಜನಿಗಾಗಿ ಹೊಂದಿಕೊಳ್ಳಬೇಕು ಎನ್ನುವ ಪ್ರಯತ್ನಕ್ಕೆ ಕೈ ಹಾಕುತ್ತಿದ್ದ. ಅವರ ಸ್ವಪ್ರತಿಷ್ಠೆ ಕಂಡರೆ ಅವನಿಗೆ ಉರಿ.

ವಿಶ್ವನಾಥಯ್ಯನವರು ಒಂದು ಮಾತು ಸೇರಿಸಿದರು. "ಆ ಜನ ಸರಿಯಿಲ್ಲ. ಆಕೆ ಅನ್ಯೋನ್ಯತೆ, ಪ್ರೀತಿ, ವಿಶ್ವಾಸ, ಸಂಬಂಧಗಳ ಬಗ್ಗೆ ಯೋಚ್ಸೋಲ್ಲ. ಬರೀ ಘರ್ಷಣೆ, ಸಂಘಟನೆ, ದೌರ್ಜನ್ಯಗಳ ಬಗ್ಗೆ ಮಾತಾಡ್ತಾಳೆ. ರಜನಿ ತಿಳಿವಳಿಕೆ ಬೆಳೆಯೋವರ್ಗೂ......... ನಾವೇ ಹೊಂದಿಕೊಂಡು ಹೋಗ್ಬೇಕು" ಸೊಸೆಯನ್ನು ಸರಿಯಾಗಿ ಅರ್ಥಮಾಡಿಕೊಂಡಿದ್ದರು. ತಲೆದೂಗಿದ ವಿಕಾಸ್.

ದಿನಕ್ಕಿಂತ ಒಂದು ಗಂಟೆ ಮೊದಲೇ ಕಾಲೇಜಿಗೆ ಹೊರಟ. ಮೊದಲ

ಪಿರಿಯಡ್ ಇಲ್ಲದಿದ್ದರಿಂದ ಮಾವನ ಮನೆಯಲ್ಲಿ ಗಂಟೆಕಾಲವಾದರೂ ಉಳಿಯ ಬೇಕೆಂದುಕೊಂಡಿದ್ದ.

ಅವರ ಮನೆಯ ಗೇಟು ಸಮೀಪಿಸಿದ ಕೂಡಲೇ ಅವನ ಮನ ಹಿಮ್ಮುಖ ವಾಯಿತು. ಈಗ ರಜನಿಯನ್ನು ನೋಡಬಹುದಲ್ಲ ಎನ್ನುವ ಸಂತೋಷಕ್ಕಿಂತ ಆ ಜನರ ಬಳಿ ಗಂಟೆ ಹೇಗೆ ಕಳೆಯುವುದೆಂದು ಯೋಚಿಸತೊಡಗಿದ. ಅವನ ಪ್ರಕಾರ ಸಂದಿಗ್ಧ ಸ್ಥಿತಿ.

ಬಾಲ್ಕನಿ ತಲುಪಿದಾಗ ಪಂಕಜಮ್ಮನ ದೊಡ್ಡ ದನಿ ಕೇಳಿಸಿತು. "ಬಿಗೀ ಹೆಣ್ಣಿನಲ್ಲಿ ಇರ್ಬೇಕು. ಇಡೀ ರಾತ್ರಿ ಒದ್ದಾಡಿದವ್ನು ಹೇಗೆ ಓಡಿ ಬರ್ತಾನೆ ನೋಡು" ಅಟ್ಟಹಾಸ ಇಣಕಿತು. ಆಟಕ್ಕೆ ಒಂದು ಕಾಯಿಯಾಗಿ ಅವನನ್ನು ಉಪಯೋಗಿಸಿಕೊಳ್ಳಲು ನಿಶ್ಚಯಿಸಿಕೊಂಡಂತೆ ಕಂಡರು. ಚಲಿಸಿ ಹೋದ.

ನೆಲಕ್ಕೆ ಅಂಟಿದ ಪಾದವನ್ನು ಎತ್ತಿ ಮುಂದಕ್ಕೆ ಇಡಲು ಅವನಿಂದಾಗ ಲಿಲ್ಲ. ಪೆಟ್ಟು ಅವನ ಆತ್ಮಕ್ಕೆ ಬಿದ್ದಿತು. ನೇರವಾಗಿ ಅಲ್ಲಿಂದಲೇ ಸಂಘರ್ಷಣೆ ಷುರುವಾಯಿತು.

ಹೊರಗೆ ಬಂದ ವಿಕಾಸ್ ಅಡಿಯಿಂದ ಮುಡಿಯವರೆಗೂ ನೋಟ ಹರಿ ಸಿದ "ಹಲೋ........ನೀವು ಬಂದೇ ಬರ್ತೀರಾಂತ ನಂಗೆ ಗ್ಯಾರಂಟಿ ಇತ್ತು." ಒಂದು ತರಹ ನಕ್ಕ. ಈ ರೀತಿ ವ್ಯವಹರಿಸುವುದು ಇವರಿಗೆ ಯಾರು ಕಲಿಸಿದ ವರು ? 'ಹೌದಾ' ಎಂದು ಪ್ರಶ್ನಿಸುವಂತಿತ್ತು ವಿಕಾಸ್‌ನ ತೀಕ್ಷ್ಣನೋಟ.

ಅನುಮಾನಿಸುವುದಾಗಲಿ, ನಿಲ್ಲುವುದಾಗಲಿ, ಹಿಂದಿರುಗುವುದಾಗಲಿ ವಿಕಾಸ್‌ಗೆ ಸರಿಕಾಣಲಿಲ್ಲ. ನೋಡಿಯೇ ಬಿಡೋಣವೆನ್ನುವ ಹಟ. ನಾಲ್ಕು ಹೆಜ್ಜೆ ಮುಂದಕ್ಕೆ ಹೋಗಿ ಬಾಗಿಲು ದಾಟ ಸೋಫಾ ಮೇಲೆ ಕೂತ. ಪ್ರಕಾಶ್ ಅವನನ್ನ ಹಿಂಬಾಲಿಸಿದ.

"ಹೇಗಿದ್ದಾರೆ, ನಿಮ್ಮ ತಂದೆ ?" ಪ್ರಶ್ನಿಸಿದ. ಮಾವನವರೂ ಎಂದು ಸಂಬೋಧಿಸುವುದು ಕೂಡ ಅವನಿಗೆ ಇಷ್ಟವಾಗಲಿಲ್ಲ. ಎದುರು ಕೂತ ಪ್ರಕಾಶ್ ಉತ್ತರಿಸುವ ಬದಲು ಮುಖದ ಮುಂದೆ ಪೇಪರ್ ಹಿಡಿದವನು ಕೂತಲ್ಲಿಂದಲೇ ಕೂಗು ಹಾಕಿದ "ರಜನಿ........ಬೈ ದಿ ಬೈ ವಿಸಿಟ್ ಮಾಡೋಣ" ಎದ್ದು ಹೋದ.

ಅಣ್ಣ, ತಂಗಿಯರ ಸಂಬಂಧ ಎಷ್ಟು ನವಿರಾದದ್ದು, ಆಳವಾದದ್ದು

ಎಂದು ವಿಕಾಸ್‌ಗೆ ಗೊತ್ತು. ತಾಯ್ತಂದೆಯರ ಮುಂದೆ ತೋಡಿಕೊಳ್ಳದ ಎಷ್ಟೋ ಆಸೆಗಳನ್ನ ಅವನ ಮುಂದೆ ತೋಡಿಕೊಳ್ಳುತ್ತಿದ್ದಳು. ನಿಖಿಲಾ. ಮದುವೆಯಾಗುವವರೆಗೂ ಅವನ ಪೂರ್ತಿ ಕೆಲಸಗಳನ್ನು ಮಾಡುತ್ತಿದ್ದ ಅವಳು ಕೆಲವೊಮ್ಮೆ ತಲೆ ಕೆದರಿ, ಷರಟು ಸುಕ್ಕು ಮಾಡಿ ತುಂಟಾಟ ಮಾಡುತ್ತಿದ್ದಳು.

ಕೆಲವೊಮ್ಮೆ ಕಾಲೇಜಿನಿಂದ ಬರುವುದು ಲೇಟಾಗಿ ಬಂದ ಕೂಡಲೇ ನಿಮಿಷಗಳನ್ನು ಲೆಕ್ಕಹಾಕಿ ತಗಾದೆ ತೆಗೆಯುತ್ತಿದ್ದಳು. 'ನಿಖಿಲಾ........' ಎನ್ನುತಲೇ ಅವನು ಮನೆಯೊಳಗೆ ಅಡಿ ಇಡುತ್ತಿದ್ದ. ಎಂಥ ಪವಿತ್ರವಾದ ಅನುಬಂಧ. ತಂಗಿಯ ನೆನಪಿಂದ ಅವನೆದೆ ಭಾರವಾಯಿತು.

ಹೊರಗೆ ಬಂದ ರಜನಿ ಗೊಂಬೆಯಂತೆ ನಿಂತುಬಿಟ್ಟಳು. ತಾಯಿಯ ಮಾತು ಸತ್ಯವಾಯಿತೆನ್ನುವ ಹರ್ಷದ ಜೊತೆ ರಾತ್ರಿಯ ವಿರಹವೆಲ್ಲ ಒಮ್ಮೆಲೆ ಕರಗಿಹೋಯಿತು.

ಅವನ ತೋಳಿಗೆ ಮುಖ ಹಚ್ಚಿ ಕಣ್ಣೀರು ಸುರಿಸಿದಳು. ಇಡೀ ರಾತ್ರಿ ಅವಳು ನಿದ್ರಿಸಿರಲಾರಳು ! "ವಿಕಾಸ್........" ಕೆನ್ನೆ ಸವರಿದ. ತುಟಿಯವರೆಗೂ ಬಂದ ಮಾತುಗಳನ್ನು ನುಂಗಿದ "ಹೇಗಿದ್ದಾರೆ ?" ಮಾವನ ಸ್ವರ. ಅವನೆದೆಯ ರಾಗಗಳಿಗೆಲ್ಲ ಲಕ್ಷ್ಮಣರೇಖೆ ಎಳೆದಿದ್ದ.

"ಜ್ವರವೇನೂ ಇಲ್ಲ. ರೆಸ್ಟ್ ಬೇಕೂಂದ್ರು, ಡಾಕ್ಟ್ರು" ಮೆಲ್ಲನುಸುರಿದಳು. "ಇವತ್ತು ರಜ ಹಾಕಿದ್ದೀರಾ! ಒಂದು ಸಣ್ಣ ಪಿಕ್‌ನಿಕ್ ಹಾಕೋಣ. ಮಮ್ಮಿ, ಪ್ರಕಾಶ್ ಬರ್ತಾರೆ" ಅವನಿಗೆ ಏನು ಹೇಳಬೇಕೋ ತೋಚಲಿಲ್ಲ.

"ಇವತ್ತು ಬೇಡ. ಅಮ್ಮ ನಿನ್ನ ನೋಡ್ದೆ ಪರದಾಡ್ತಾ ಇದ್ದಾಳೆ. ನಿನ್ನಿಂದೆ ಹುಷಾರಾಗಿದ್ಮೇಲೆ........ನೀನು ಬರೋಕೆ ತೊಂದರೆಯೇನು ಇಲ್ವಲ್ಲ ?" ಆ ಕ್ಷಣ ರಜನಿ ಎಲ್ಲಾ ಮರೆತುಬಿಟ್ಟಳು.

"ಹೀಗೆ.. ....ಬೇಡ ! ಸೀರೆಯುಟ್ಟು ಬಂದ್ಬಿಡ್ತೀನಿ" ನೈಟಿಯನ್ನು ಕೊಡವುತ್ತ ಓಡಿದಳು. ಅವಳದು ಶಿಸ್ತಿಲ್ಲದ ನಿದ್ದೆಯೆಂದು ಅವನಿಗೆ ಗೊತ್ತು. ಕೆಲವು ಅಭ್ಯಾಸಗಳನ್ನು ರೂಢಿ ಮಾಡಲು ಪ್ರಯತ್ನಿಸಿದ್ದ.

ವಿಕಾಸ್ ಗುರುಮೂರ್ತಿಗಳ ಕೋಣೆಗೆ ನಡೆದ. ಕೈಯಲ್ಲಿದ್ದ ಪೇಪರನ್ನು

ಪಕ್ಕಕ್ಕೆ ಸರಿಸಿ ನಗು ಮುಖದಿಂದಲೇ ಬರಮಾಡಿಕೊಂಡರು. ಅದು ಇದು ಮಾತನಾಡಿ ಮನದಲ್ಲಿದ್ದುದನ್ನು ಮೆಲ್ಲಗೆ ಪ್ರಕಟಿಪಡಿಸಿದರು.

"ನಿನ್ನ ಕೆಲ್ಸದಿಂದ ಯಾವ ಸ್ಕೋಪ್ ಇಲ್ಲ. ಹುಡುಗರ ಮುಂದೆ ಪಾಠ ಮಾಡಿ ನಿನ್ನ ತಲೆ ನರೆತುಹೋಗುತ್ತೆ" ನೇರವಾಗಿ ಅವನ ವ್ಯಕ್ತಿತ್ವಕ್ಕೆ ಬಿತ್ತು ಪೆಟ್ಟು. ಬಹಳ ಇಷ್ಟಪಟ್ಟು ಆರಿಸಿಕೊಂಡ ಪ್ರೊಫೆಷನ್. ಅವನ ವೃತ್ತಿ ವಿಕಾಸ್‌ಗೆ ತೃಪ್ತಿ ಕೊಟ್ಟಿತ್ತು. "ಯಾವ ಕೆಟ್ಸದ ಬಗ್ಗೆ ನೀವು ಮಾತಾಡಿದ್ದು ?" ಅವನ ಹುಬ್ಬುಗಳು ಬಿಗಿದುಕೊಂಡವು. ನಿರ್ಲಕ್ಷ್ಯ ತೋರಿದರು ಗುರುಮೂರ್ತಿಗಳು. ಕಾದಾಗಲೇ ತಟ್ಟಬೇಕೆನ್ನುವ ಮನಸ್ಥಿತಿ ಅವರದು.

"ಈಗ ಸಂಬ್ಳ ಎಷ್ಟು ಬರುತ್ತೆ ?" ಎಂದ ಕೂಡಲೇ ಅವನ ಮೈಯುರಿದುಹೋಯಿತು. ವಿಶ್ವನಾಥಯ್ಯ ಚಾಚೂ ತಪ್ಪದೆ ಎಲ್ಲಾ ತಿಳಿಸಿ ಹೇಳಿದ್ದರು. "ಹೆಣ್ಣು ಕೊಡೋ ವೊದ್ಲು ನೀವೆಲ್ಲ ವಿಚಾರ್ಸಿಕೊಂಡೇ ಇರ್ಬೇಕು. ಇಲ್ಲದಿದ್ರೂ ನನ್ತಂದೆ ಹೇಳಿದ್ದಾರೆ. ಮತ್ತೆ ತಿಂಗಳಲ್ಲಿ ಅಂಥ ವ್ಯತ್ಯಾಸವೇನೂ ಆಗಿಲ್ಲ ಸಂಬ್ಳದಲ್ಲಿ" ಗುರುಮೂರ್ತಿಗಳು ನಗೆ ಬೀರಿದರು. ಆ ನಗೆಯನ್ನು ಅವನಿಂದ ನೋಡಲಾಗಲಿಲ್ಲ.

"ಐ ಲೈಕ್ ಯು. ನಿಮ್ಮ ನೇರವಾದ ಸ್ವಭಾವ ನಂಗೆ ಇಷ್ಟ. ಚಿಕ್ಕ ಸಂಬ್ಳದಲ್ಲಿ ಹೇಗೆ ಜೀವನಾ ಮಾಡ್ತೀರಾ ?" ನವಿರಾಗಿ ಎತ್ತಿದರೂ ದೊಡ್ಡ ಪ್ರಹಾರದಂತೆ ಕಂಡಿತು ವಿಕಾಸ್‌ಗೆ. ಅದನ್ನು ತಡೆಯಬಲ್ಲ ಶಕ್ತಿ ಕೂಡ ಅವನಿಗಿತ್ತು. "ನನ್ನ ಸಂಬ್ಳಕ್ಕಿಂತ ತೀರಾ ಕಡಿಮೆ ದುಡಿಯೋ ಸಂಸಾರಗಳು ಕೂಡ ನೆಮ್ಮದಿಯಿಂದ ಬದ್ಕಿದ್ದಾರೆ. ಅವರಿಗೆ ವಿಪರೀತ ಹಣವಿದೆ. ಅದರಿಂದ್ಲೇ ಸುಖವಾಗಿದ್ದಾರೆಂದು ತಿಳ್ಕೊಳ್ಳೋದು ತಪ್ಪು."

"ಪೂರ್ ಕ್ರೀಚರ್....ಅವರದೊಂದು ಲೈಫಾ ?" ಕೈ ಎತ್ತಿ ತಳ್ಳಿದರು ಗುರುಮೂರ್ತಿಗಳು "ನಾನ್ಸೆನ್ಸ್, ಅದೊಂದು ಬದ್ಕಾ!" ಅಸಹ್ಯಿಸಿಕೊಂಡರು. ವಿಕಾಸ್‌ನ ಮೈಯಲ್ಲಿ ಬೆಂಕಿ ಹರಿದಾಡಿತು ; ಮೇಲೆದ್ದ.

"ನೀವು ಚಿಂತಿಸೋ ದಿಕ್ಕೇ ಸರಿ ಇಲ್ಲ. ಪುರಸತ್ತಾದಾಗ ಚರ್ಚಿಸೋಣ. ಈಗ ನಂಗೆ ಅಪ್ಪಣೆ ಕೊಡಿ. ನಿಮ್ಮ ಮಗ್ಳ ಭವಿಷ್ಯದ ವಿಷ್ಯದಲ್ಲಿ ಆತಂಕ ಪಡ್ಬೇಕಾಗಿಲ್ಲ. ಅವ್ಳು ಅಲ್ಲಿ ಸುಖವಾಗಿದ್ದಾಳೆ. ಮುಂದೂ ಸುಖವಾಗಿ

ಇಟ್ಟುಕೊಳ್ಳೋ ಭರವಸೆ ನಾನು ಕೊಡ್ತೀನಿ. ಇಂಥ ಯೋಚ್ನೇ, ವಿಚಾರ ಗಳನ್ನು ನಿಮ್ಮ ಮೈಂಡ್‌ನಿಂದ ವಾಷ್‌ಔಟ್ ಮಾಡ್ಬಿಡಿ."

*'ಗುಡ್‌ಬೈ' ಹೇಳಿದಂತಿತ್ತು ಅವನ ಮಾತಿನ ಧಾಟಿ ಅದನ್ನ ಅರಗಿಸಿ ಕೊಳ್ಳಲು ಗುರುಮೂರ್ತಿಗಳು ಕಷ್ಟಪಡಬೇಕಾಯಿತು. ದೊಡ್ಡ ಅಳಿಯಂದಿರ* ರೀತಿ ಬೇರೆ. ಆದರೆ ವಿಕಾಸ್ ಸವಾಲ್ ಆಗಿದ್ದ.

ಒಳಗೆ ಬಂದ ರಜನಿ "ನಾನು ಹೋಗ್ತಾ ಇದ್ದೀನಿ ಸುಮ್ನೇ ಇಲ್ಲಿ ದ್ದೇನು ಮಾಡ್ಲಿ ?" ಎಂದವಳು ಜಿಂಕೆಯಂತೆ ಓಡಿಬಿಟ್ಟಳು. 'ಅವಿವೇಕಿ' ಮನದಲ್ಲಿಯೇ ಬೈದುಕೊಂಡರು. ಮಗಳ ಮೇಲಿನ ಅಭಿಮಾನ ಛಿದ್ರಛಿದ್ರ.

ಹೊರಗೆ ಹಾಲ್‌ನಲ್ಲಿ ಕೂತ ಅಳಿಯನಿಗೆ ಪಂಕಜಮ್ಮ ತಾವೇ ಕಾಫೀ ತಂದುಕೊಟ್ಟರು. ನಿಧಾನವಾಗಿ ಕುಡಿದ. ಆಕೆ ಆಡಿದ ಮಾತುಗಳನ್ನು ಶಾಂತವಾಗಿ ಕೇಳಿದ. ಆಕೆ ಇನ್ನಷ್ಟು ಸಲಿಗೆವಹಿಸಿದರು.

"ಈ ಮನೆ ನಿಮ್ಮ ಮನೆಗಿಂತ ನಾಲ್ಕು ಪಟ್ಟು ದೊಡ್ಡದಿದೆ. ಹೇಗೂ ಕಾರಿದೆ. ಡ್ರೈವರ್ ಇದ್ದಾನೆ. ತಿರುಗಾಡೋಕೆ ತೊಂದರೆ ಇಲ್ಲ" ಆಕೆಯ ಮಾತುಗಳನ್ನು ನಗುಮುಖದಿಂದಲೇ ಅರಗಿಸಿಕೊಂಡ. ಈಗಾಗಲೇ ಸೂಚನೆ ಸಿಕ್ಕಿತ್ತು.

"ಕ್ಷಮಿಸ್ಬಿಬಿಡಿ. ನೀವು ಹೇಳ್ದ ಮಾತ್ರಕ್ಕೆ ಈ ಮನೆ ನನ್ನದಾಗುತ್ತ ? ನಾನು ಅಂದರೆ ನಾನೊಬ್ಬನೇ ಅಲ್ಲ ; ನಂಗೆ ತಂದೆ, ತಾಯಿ ಇದ್ದಾರೆ. ಅವ ರಿಗೆಷ್ಟೋ ಆಶೋತ್ತರಗಳಿವೆ. ನಂದೇ ಕೆಲವು ಜವಾಬ್ದಾರಿಗಳಿವೆ. ನಿಮ್ಮ ಒಳ್ಳೆತನದ ನಾನು ದುರುಪಯೋಗಪಡ್ಸಿಕೊಳ್ತಾರೆ. ನಾನು ಈ ಮನೆಗೆ ಅಳಿಯ ಮಾತ್ರ" ಎಂದಾಗ ಆಕೆ ಧಗಧಗನೆ ಉರಿಯುವ ಬೆಂಕಿಯಾದರು. ಅವರ ಎಲ್ಲಾ ಆಸೆ ಆಮಿಷಗಳಿಗೂ ನಿರ್ದಾಕ್ಷಿಣ್ಯವಾಗಿ ತಣ್ಣೀರು ಸುರಿ ದಿದ್ದ.

ರಜನಿಯತ್ತ ತಿರುಗಿದ. "ಹೋಗೋಣ" ಎಂದ. ಒಂದೇ ಹಾರಿಗೆ ಅವನ ಜೊತೆ ಮಗಳು ನಡೆದಾಗ ಆಕೆ ನಿಂತಲ್ಲಿಯೇ ಶಿಲೆಯಾದರು. ಲಾವಾರಸ ಹರಿಸಿ ಹೋದಂಥ ಅನುಭವ.

ಕೋಣೆಗೆ ಬಂದ ಪಂಕಜಮ್ಮ ತೀವ್ರ ತರನಾದ ಅವಮಾನಕ್ಕೆ ಒಳಗಾದ ವರಂತೆ ಕೂದಲನ್ನು ಕಿತ್ತುಕೊಂಡು ಹಾರಾಡಿದರು. "ನೋಡಿದ್ರಾ....ನಿಮ್ಮ

ಮಗ್ನೂನ ! ಅವ್ವಿಗೆ ಮೊನ್ನೆ ಬಂದ ಗಂಡನೇ ಹೆಚ್ಚಾದ" ಆ ಕ್ಷಣ ಶೀರಾ ಅನನುಭವಿಯಂತೆ ಕಂಡಳು ಹೆಂಡತಿ. ಸಹಜವಾದ ವಿಷಯಕ್ಕೆ ಇಷ್ಟೊಂದು ಹಾರಾಟವೇ ? ಯಾವುದಕ್ಕೂ ಸ್ವಲ್ಪ ದಿನ ಕಾಯಬೇಕಾದ ಅಗತ್ಯವಿತ್ತು.

ಯಾವುದೇ ತಿಕ್ಕಾಟಗಳಿಲ್ಲದಿದ್ದರೂ ಮೊದಲಿನ ನೆಮ್ಮದಿ ಮನೆಯಲ್ಲಿರಲಿಲ್ಲ. ಬೆಂಕಿಯನ್ನು ಮನೆಯಲ್ಲಿ ತಂದಿಟ್ಟುಕೊಂಡು ಯಾವಾಗ ಸುಡಬಹುದೋ ಎಂದು ಎಚ್ಚರಿಕೆಯಿಂದ ಕಾಯುವ ಸ್ಥಿತಿ ಅವರದಾಗಿತ್ತು. ಇದೇನು ಮಾಡದು ಎನ್ನುವ ನಿಶ್ಚಿಂತೆಯಿಂದಿದ್ದ ವಿಕಾಸ್. ಆದರೆ ಸುನಂದಮ್ಮ. ವಿಶ್ವನಾಥಯ್ಯ ಹೆದರುತ್ತಲೇ ದಿನಗಳನ್ನು ಕಳೆಯುತ್ತಿದ್ದರು. ಬೇಗಿತ್ತ ಈ ಮನೆಯ ಮೆಟ್ಟಿಲುಗಳು ತುಳಿಯದಿದ್ದರೆ ಕ್ಷೇಮವೆಂದುಕೊಂಡರೂ ಹಾಗೆಂದು ಹೇಳುವುದು ಅವರಿಗೆ ಸಾಧ್ಯವಿಲ್ಲ. ಒಳಗೊಳಗೇ ಕೊರಗುತ್ತಿದ್ದರು.

ಮೂರು ದಿನದಿಂದ ಕಾಲೇಜು ವಿದ್ಯಾರ್ಥಿಗಳ ಸ್ಟ್ರೈಕ್. ಅವರುಗಳ ಮನವೊಲಿಸುವಲ್ಲಿ ಅಧ್ಯಾಪಕರು ಸೋತುಹೋಗಿದ್ದರು.

ಅಂದು ವಿಕಾಸ್ ಮನೆಗೆ ಬಂದಾಗ ಬೇಸರವಾಗಿಯೇ ಇದ್ದ. ಸ್ವಂತ ಯೋಚನೆಗಳೇ ಇಲ್ಲದ ವಿದ್ಯಾರ್ಥಿಗಳು ಯಾರೋ ಪುಣ್ಯಾತ್ಮರು ಊದಿದ ತುತ್ತೂರಿಯಿಂದಲೇ ತಮ್ಮ ಪ್ರತಿಭಟನೆ ಷುರು ಮಾಡಿದ್ದರು. ಅದು ತೀರಾ ಸಣ್ಣ ವಿಷಯ. ಕೂತು ಪರಿಹರಿಸಿಕೊಳ್ಳುವ ಇಚ್ಛೆ ಅವರಿಗಿಲ್ಲ. ತೀರಾ ತಲೆ ಕೆಟ್ಟಂತಾಗಿತ್ತು.

ಷೂ ಬಿಚ್ಚುವ ಮುನ್ನವೇ ರಜನಿ ಬಂದು ಅವನ ಕ್ರಾಪ್ ಕೆದರಿದಳು. "ಸ್ವಲ್ಪ....ಸ್ವಲ್ಪ .." ಅವಳ ಕೈಯನ್ನು ಪಕ್ಕಕ್ಕೆ ಸರಿಸಿ ಷೂ ಲೇಸ್ ಬಿಚ್ಚಲು ಬಗ್ಗಿದ.

"ಛೀ...." ಇನ್ನಷ್ಟು ಅವನ ಕ್ರಾಪ್ ಕೆದರಿದಳು. "ಇವತ್ತು ರಮಣಿ ಬಂದಿದ್ಲು. ಅವಳ ಮಗನ ಬರ್ತ್‌ಡೇ" ಷೂ ಪಕ್ಕಕ್ಕೆ ಸರಿಸಿ ಕತ್ತು ಮೇಲಕ್ಕೆ ಎತ್ತಿದ 'ಅಷ್ಟೇನಾ ?' ಎನ್ನುವಂತಿತ್ತು ಅವನ ಮುಖಭಾವ. ಸದಾ

ಬಂದು ಹೋಗುವ ಆ ಜನರ ಬಗ್ಗೆ ಅವನಿಗೆ ಇಂಟರೆಸ್ಟಿಲ್ಲ. ಅವರುಗಳು ಸಾಮಕಾನಸ್ತೆ ಗಂಡನ ಮನೆಗಳಲ್ಲಿ ಇರುತ್ತಿದ್ದುದು. ಸದಾ ಇಲ್ಲೇ ಠಿಕಾಣಿ. ಆದ್ದರಿಂದ ವಿಕಾಸ್‌ನ ಮನೆಯ ಖರ್ಚುವೆಚ್ಚಗಳು ಏರಿತ್ತು.

ಅದಕ್ಕೆ ಸರಿಯಾಗಿ ದಿನಕ್ಕೊಮ್ಮೆ ಎರಡು ದಿನಕ್ಕೊಮ್ಮೆ ಬಂದು ಹೋಗುವ ಪಂಕಜಮ್ಮ ತನ್ನ ಸೋಷಿಯಲ್ ವರ್ಕನ್ನ ಇಲ್ಲಿವರೆಗೂ ವಿಸ್ತರಿಸಿ ಬಿಟ್ಟಿದ್ದರು. ಮಗಳ ತಲೆಗೆ ಭೈರಿಗೆ ಹಾಕಿ ತೂತು ಮಾಡಿಬಿಟ್ಟಿದ್ದರು. ಅದು ಸದಾ ಸೋರುವಿಕೆ.

"ಸ್ವಲ್ಪ ಕೇಳಿ ವಿಕಾಸ್" ಅವನ ರೆಟ್ಟೆ ಹಿಡಿದಾಗ ಬಲವಂತದಿಂದ ಕೊಡ ವಿದ. *"ನಿಂಗೆ ತಲೆನೇ ಇಲ್ಲ. ಸದಾ ನಿಮ್ಮಮ್ಮನ ಭಾಷಣ ಬಿಟ್ಟು ಬೇರೆ ವಿಷ್ಯವಿಲ್ವಾ ! ಛೀ...."* ಮೊದಲ ಸಲ ರೇಗಿಬಿಟ್ಟ. ಅದರಿಂದ ಅವನಿಗೇನು ಪಶ್ಚಾತ್ತಾಪವಾಗಲಿಲ್ಲ.

ಮಂಕಾದಳು ರಜನಿ. ಈ ತರಹ ಎಂದೂ ಬೇಸರದ ಮಾತುಗಳನ್ನಾಡಿರ ಲಿಲ್ಲ. ಶಾಂತವಾಗಿ, ಹಸನ್ಮುಖವಾಗಿ ಮಡದಿಯ ಪ್ರೀತಿ, ಚೇಷ್ಟೆ ಸ್ವೀಕರಿಸು ತ್ತಿದ್ದವನ ತಾಳ್ಮೆ ಗಾಳಿಗೆ ತೂರಿಹೋಗಿತ್ತು.

ಬಟ್ಟೆ ಬದಲಾಯಿಸಿ ಮುಖ ತೊಳೆದು ಬಂದು ಮಂಚದ ಮೇಲೆ ಉರು ಳಿದ. "ತುಂಬ ತಲೆ ಸಿಡಿತ. ಬೇಗ ಒಂದ್ಲೋಟ ಕಾಫೀ" ಎಂದ. ನಾಜೂ ಕಾಗಿದ್ದ ಅವನ ಮಿದುಳಿನಲ್ಲಿ ಆಂದೋಳನ ಷುರುವಾಗಿದ್ದು ರಜನಿ ಬಂದ ನಂತ ರವೇ. ಬೌದ್ಧಿಕ ವಿಚಾರಗಳಿಗೆ ಮಿಸಲಾಗಿದ್ದ ಅವನ ಮಿದುಳು ಅವಳ ಬಗ್ಗೆಯೇ ಚಿಂತಿಸುವಂತೆ ಮಾಡಿತ್ತು.

ಕೋಪಗೊಂಡ ರಜನಿ ಕಾಫೀ ತರುವ ವಿಷಯ ಕೈ ಬಿಟ್ಟು ಅವನ ಮುಂದೆ ನಿಂತಳು. "ನಾನು ಹೋಗ್ತೀನಿ" ಅಡಿಯಿಂದ ಮುಡಿಯವರೆಗೂ ನೋಟ ಹರಿಸಿದ. "ಎಲ್ಲಿಗೆ ?" ಅವನ ಹುಬ್ಬುಗಳು ಬಿಗಿದುಕೊಂಡವು. "ಪದೇ ಪದೇ ಅವರುಗಳು ಬರೋದು ಅಥ್ವಾ ನೀನು ಹೋಗೋದು. ಇದಿಷ್ಟು ಬಿಟ್ಟು ನಿಂಗೆ ಬೇರೇನು ಕೆಲ್ಸ ಇಲ್ವಾ ! ಬಹಳ ತಪ್ಪು" ತಿಳಿಹೇಳಲು ನೋಡಿದ. ಅಷ್ಟರಲ್ಲಿ ಪಂಕಜಮ್ಮನ ಸ್ವರ ಹರಿದು ಬಂತು ಎರಡು ಕೈಯಲ್ಲಿ ತಲೆ ಗಟ್ಟಿಯಾಗಿ ಹಿಡಿದುಕೊಂಡ.

'ಇದು ಹೀಗೇ ಮುಂದುವರಿದರೆ ಪಾಠ ಮಾಡಲಾರ್ದೆ ಕೆಲ್ಸಕ್ಕೆ ರಾಜಿ ನಾಮೆ ಕೊಟ್ಟು ಬೇರೆ ಊರಿಗೆ ಹೋಗಿ ಟೀ ಸ್ಟಾಲ್ ಇಡ್ಬೇಕಾಗುತ್ತೆ' ಅವನ

ಮನ ರೋಸಿಹೋಯಿತು. ಅದೇ ಊರಿನಲ್ಲಿ ಅತ್ತೆಯ ಮನೆ ಇರುವವರಿಗೆ ಕಿವಿ ಮಾತು ಹೇಳಬೇಕೆನಿಸಿತು !

ನೇರವಾಗಿ ಪಂಕಜಮ್ಮ ಅವನ ಕೋಣೆಗೆ ಬಂದರು. ಆಕೆ ಮುಂದುವರಿದ ಮಹಿಳೆ. ಸಂಕೋಚ, ಹಿಂಜರಿಕೆ-ಆಕೆಯಂತವರಿಗಲ್ಲ.

"ರಜನಿನ ಕರ್ಕೊಂಡ್ಹೋಗ್ತಾ ಇದ್ದೀನಿ" ಎಂದಾಗ ಮುಚ್ಚಿದ ಕಣ್ಣುಗಳನ್ನು ತೆರೆದ "ರಮಣಿ, ರಂಜಿತ ಬಂದಿದ್ದಾರೆ. ಒಂದ್ನಾಲ್ಕು ದಿನ ಅಕ್ಕ ತಂಗಿರು ಒಟ್ಟಿಗೆ ಇರಲಿ" ಎದ್ದು ಕೂತ ವಿಕಾಸ್ ಕೆನ್ನೆಯುಜ್ಜಿದ. ಆ ಹೆಣ್ಣು ಮಕ್ಕಳು ತವರುಮನೆಗೆ ಬರುವುದು ಅಪರೂಪವಲ್ಲ. ಅವರೇನಾದರೂ ಗಂಡನ ಮನೆಯಲ್ಲಿದ್ದರೆ ಮಾತ್ರ ವಿಶೇಷ.

"ನಮ್ಮ ಸುಧಿ ಹುಟ್ಟಿದ ಹಬ್ಬ" ರಮಣಿ ಕೂಡ ಒಂದು ಮಾತು ಸೇರಿಸಿದಳು. ವಾರೆಗಣ್ಣಿಂದ ರಜನಿಯತ್ತ ನೋಡಿದ. "ಪದೇ ಪದೇ ಇದೇ ಪುನರಾವರ್ತನೆಗಳು ಬೇಡ. ರಜನಿ ಇಲ್ಲಿ ಪರ್ಮನೆಂಟ್ ಮೆಂಬರೇ ವಿನಃ ಆಗಾಗ ಬಂದು ಯೋಗಕ್ಷೇಮ ವಿಚಾರ್ಸಿಕೊಂಡು ಹೋಗೋ ಗೆಸ್ಟ್ ಅಲ್ಲ. ರಂಜಿತಾ, ರಮಣಿ ತಂಗಿಯ ಮನೆಯಲ್ಲಿ ನಾಲ್ಕು ದಿನ ಇರಲಿ. ಇಲ್ಲೇನು ಉಸಿರು ಕಟ್ಟೋ ವಾತಾವರಣವಿಲ್ಲ" ಖಾರವಾಗಿ ಅಂದ.

ಸಿಡಿಲು ಬಂದು ಅಪ್ಪಳಿಸಿದಂತಾಯಿತು ಪಂಕಜಮ್ಮನಿಗೆ. ರಮಣಿ, ರಂಜಿತ ಮುಖ ತಿರುಗಿಸಿಕೊಂಡು ಹೋಗಿದ್ದರು. ಕೌರವರ ನಡುವೆ ಇದ್ದು ಅವರ ನಾಶಕ್ಕೆ ಕಾರಣರಾದ ಶಕುನಿಯಂಥ ಹೆಣ್ಣು ಮಕ್ಕಳು.

"ನಾಚ್ಕೆ ಆಗ್ಬೇಕು ನಿಂಗೆ. ಸ್ವಲ್ಪವಾದ್ರೂ ಸ್ವಂತಿಕೆ ಬೇಡ್ವಾ! ಕೊಂಡುಕೊಂಡ ಧಣಿಯ ಹಾಗೆ ಮಾತಾಡ್ತಾ ಇದ್ದಾನಲ್ಲ. ಇಪ್ಪತ್ತನೇ ಶತಮಾನದಲ್ಲಿ ನಿನ್ನಂಥ ಹೆಣ್ಣುಗಳಿಂದ್ಲೇ ಗೆದ್ದಲು ಹಿಡಿದು ಹೋಗಿರೋದು" ಆಂಗ್ಲ ಭಾಷೆಯಲ್ಲಿ ಮಗಳನ್ನು ಮೂದಲಿಸತೊಡಗಿದರು. ಪೂರ್ತಿ ನಿಲ್ಲಿಸಿ ಹೋಗುವವರೆಗೂ ಸುಮ್ಮನಿದ್ದ.

"ನಿನ್ನಮ್ಮನದು ತಕ್ಕಡಿ ಲೆಕ್ಕಾಚಾರ. ಜೀವನದ ಸೂಕ್ಷ್ಮತೆ ಅರಿವು ಆಕೆಗಿಲ್ಲ. ಆಕೇನು ಸುಖವಾಗಿರೋಲ್ಲ, ನಮ್ಮನ್ನ ನೆಮ್ದಿಯಾಗಿರೋಕೆ ಬಿಡೋಲ್ಲ" ನಿಟ್ಟುಸಿರು ದಬ್ಬಿದ. ಎಲ್ಲೋ ಅಪಸ್ವರ, ವಸಂತದಲ್ಲಿ ಮಧುರವಾಗಿ ಹಾಡಬೇಕಾದ ಕೋಗಿಲೆಗಳೆಲ್ಲ ಅಪಸ್ವರದಿಂದ ಅರಚಿದಂತಾಯಿತು. ಮಾನವೀಯ

ಸಂಬಂಧಗಳು ಎಷ್ಟು ಅನನ್ಯ. ಬದುಕೆಲ್ಲ ಕ್ಷುಲ್ಲಕ ವಿಷಯಗಳ ಹೋರಾಟಕ್ಕಾಗಿ ಮೀಸಲು ಮಾಡಿದರೆ....ಕೊನೆಗೆ ಉಳಿಯುವುದಾದರೂ ಏನು ?

ರಜನಿಗೆ ಎಷ್ಟು ಅರ್ಥವಾಯಿತೋ "ನಾನು ಹೋಗ್ತೀನಿ" ಎಂದಳು. "ನಿಂಗೆ ಹೋಗೋಕೆ ಇಷ್ಟವಿಲ್ಲ!" ಕ್ಷಣ ಅಸಹನೆಯನ್ನು ಮರೆತ. ಅವನಿಗೆ ತೆಕ್ಕೆ ಬಿದ್ದು ಬಿಕ್ಕಿ ಬಿಕ್ಕಿ ಅತ್ತಳು. ಮೃದುವಾಗಿ ಕೆನ್ನೆಯನ್ನು ಕೆಂಪು ಮಾಡಿದ.

"ಹೋಗ್ಬಾ....ಸ್ವಲ್ಪ ಛೇಂಜ್ ಇರ್‍ಲಿ!" ಅವಳ ಇಬ್ಬದಿಯ ಸಂಕಟ ಅರ್ಥಮಾಡಿಕೊಂಡ. "ಹಾಗಾದ್ರೆ.... ಹೋಗ್ತೀನಿ" ಆಗ ಅವನ ಕಣ್ಣುಗಳಲ್ಲಿ ಹರಿದಾಡಿದ್ದು ಕರುಣೆ. ಕಣ್ಣಲ್ಲಿ ಕಣ್ಣಿಟ್ಟು ನೋಡಿದ. ಅವನ ಹೃದಯದ ಭಾಷೆ ಅವಳಿಗೆ ಅರ್ಥವಾಗಲಿಲ್ಲವೇನೋ, ಹೊರಗೆ ನಡೆದಳು.

ಸುನಂದಮ್ಮ ಬೀಗಿತ್ತಿಗೆ ಸಮಾಧಾನ ಮಾಡುತ್ತಿದ್ದರು.

"ನಮ್ಗೆ ಸಧ್ಯಕ್ಕೆ ಸೊಸೆ, ಮಗ್ಳು ಎಲ್ಲಾ ಅವ್ಳೇ. ಬಿಟ್ಟಿರಬೇಕಲ್ಲ ಅನ್ನೋ ಸಂಕಟಕ್ಕೆ ಅಂದಿರ್ತಾನೆ. ತಂಗಿ ಮನೆಯಲ್ಲಿ ಅಕ್ಕಂದಿರು ಇರಲಿ ಅನ್ನೋ ಆಸೆ ಕೂಡ ಇರುತ್ತೆ."

ಪಂಕಜಮ್ಮನ ಸಿಡಿಮಿಡಿ ತಣ್ಣಗಾಗಲಿಲ್ಲ. ಮಗಳು ಹೊರಟು ನಿಂತಾಗಲೇ ಸ್ವಲ್ಪ ಶಾಂತವಾದದ್ದು. ಇದು ಆಕೆಯ ಗೆಲುವು.

ಸುನಂದಮ್ಮ ಸೊಸೆಯನ್ನು ಕಾರಿನವರೆಗೂ ಬಂದು ಬೀಳ್ಕೊಟ್ಟರು. ವಿಕಾಸ್ ಕೋಣೆಯಿಂದ ಹೊರಬರಲಿಲ್ಲ. ಬೆಲೆ ಉಳಿಸಿಕೊಳ್ಳದ ಜನಕ್ಕೆ ಬೆಲೆ ಕೊಡುವಷ್ಟು ಮೂರ್ಖನಲ್ಲ ಅವನು. ಈ ದಿನ ಕರುಣೆ, ಸಹಾನುಭೂತಿ ಅಳಿಸಿಹೋಗಿ ರಜನಿಯ ಬಗ್ಗೆ ಜಿಗುಪ್ಸೆ ಮೂಡಿತು. ಆಸೆ, ಭರವಸೆಗಳು ಇಟ್ಟುಕೊಳ್ಳಬೇಕೆನಿಸಲಿಲ್ಲ.

"ಏನ್ಮಾಡೋಕಾಗುತ್ತೆ ! ಅವ್ಳು ಚಿನ್ನದಂಥ ಹುಡ್ಗೀ, ಆದ್ರೆ ನೆಮ್ಮದಿಯಾಗಿ ಇರೋಕೆ ಆಕೆ ಬಿಡ್ತಾ ಇಲ್ಲ. ಬೀಗಿತ್ತಿ ಮನಸ್ಸಿನಲ್ಲಿ ಏನಿದ್ಯೋ, ಒಂದೂ ಅರ್ಥವಾಗೊಲ್ಲ" ಸುನಂದಮ್ಮ ನಿಟ್ಟುಸಿರು ಚೆಲ್ಲಿದರು.

ಕಾಫಿಯ ಲೋಟ ಕೈಗೆತ್ತಿಕೊಂಡ ಪಂಕಜಮ್ಮ ಪೂರ್ತಿ ಅವನಿಗೆ ಅರ್ಥವಾಗಿದ್ದರು. ಈ ಸಾಧಾರಣ ಮನೆಯಲ್ಲಿ ಮಗಳು ನಗುನಗುತ್ತಾ ಬಾಳ್ವೆ ಮಾಡುವುದು ಆಕೆಗೆ ಇಷ್ಟವಿರಲಿಲ್ಲ ! ಅದಕ್ಕಾಗಿ ಶತಾಯಃ ಗತಾಯಃ

ಪ್ರಯತ್ನ ಮಾಡುತ್ತಾರೆ. ಕಡೆಗೆ ಅಳಿಯನ ವ್ಯಕ್ತಿತ್ವದ ಮೇಲೆ ಬಂಡೆ ಎಳೆದು ಅವನಲ್ಲಿನ ಮೌಲ್ಯಗಳನ್ನು ಕೊಂದು ಎಳೆದೊಯ್ಯಲು ಆಕೆ ಸಿದ್ಧ. ಅದರಲ್ಲಿ ಜಯವೆಂದೇ ತಿಳಿದಿದ್ದರೆ ಅವನಿಗೆ ಭ್ರಮೆಯೆನಿಸಿತು. ಹೆಣ್ಣಿಗಾಗಿ ಇಷ್ಟೆಲ್ಲಾ ಕಳೆದುಕೊಳ್ಳಲಾರ !?

ನಿಧಾನವಾಗಿ ಗುಟುಕರಿಸಿದ ಕಾಫೀ ಕೊನೆಯಲ್ಲಿ ಕಹಿ ಕಹಿಯೆನಿಸಿತು. ಗಂಟಲಲ್ಲಿ ಕಷಾಯ ಇಳಿದಂತಾಯಿತು. "ಅಮ್ಮ ಸಕ್ರೆ ಹಾಕೋದೇ ಮರೆತಿದ್ದೀಯಾ" ಕೊನೆಯ ಗುಟುಕು ಕುಡಿದು ಲೋಟ ಕೆಳಗಿಟ್ಟ.

"ಮೊದ್ಲೇ ಹೇಳ್ಬಾರ್ದಾಗಿತ್ತಾ ! ಕಹೀ ಅಂದ್ಕೊಂಡೇ ಕುಡಿದು ಮುಗಿಸಿದ್ದೀಯಾ" *ಗೊಣಗಾಡುತ್ತಲೇ ಲೋಟವನ್ನೊಯ್ದರು. ಅವನ ಸ್ಥಿತಿ ಆ ಕ್ಷಣ* ಅಷ್ಟು ಅಧ್ವಾನವಾಗಿತ್ತು.

ಎರಡು ದಿನ ಕಳೆಯುವ ವೇಳೆಗೆ ಮನೆ ಬಣಗುಟ್ಟತೊಡಗಿತು. ಆ ನೋವು ಎಷ್ಟು ದಾರುಣವೆಂದು ಅನುಭವಿಸಿದವರಿಗೆ ಗೊತ್ತು. ಹೆಣ್ಣು ಎಷ್ಟು ಸುಖ ಕೊಡಬಲ್ಲಳೋ, ಅಷ್ಟೇ ನೋವನ್ನೂ ಕೊಡಬಲ್ಲಳು ಎನ್ನುವ ಅರಿವು ಅವನಿಗಾಯಿತು. ಕಾರಿನ ಸದ್ದಾದರೆ ನೋಟ ಬಾಗಿಲ ಬಳಿ ಓಡುತ್ತಿತ್ತು. ಕೆಲವೊಮ್ಮೆ ಕೆಟ್ಟ ಹಟ ಮೂಡುತ್ತಿತ್ತು. ತುಂಬ ನೊಂದ.

ಕಾಲೇಜಿಗಾದರೂ ಫೋನ್ ಮಾಡಬಹುದೆಂದು ಆಗಾಗ ಪ್ರಿನ್ಸಿಪಾಲರ ಕೋಣೆಗೆ ಹೋಗುತ್ತಿದ್ದ. ಫೋನ್ ಸದ್ದಾದರೇ ತನಗೇ ಇರಬಹುದೆಂಬ ದೌರ್ಬಲ್ಯಕ್ಕೆ ಒಳಗಾಗುತ್ತಿದ್ದ. ಒಂದು ರೀತಿಯ ವಿಕ್ಷುಬ್ಧತೆ.

ಅಂದು ತಾನೇ ಫೋನ್ ಮಾಡಿದ. "ಹಲೋ...." ರಿಸೀವರ್ ಎತ್ತಿಕೊಂಡವನು ಪ್ರಕಾಶ್. ಸಿಗರೇಟಿನ ಘಾಟು ಕುಡಿದು ಉಗ್ಗುವಂತಾಯಿತು. "ಹಲೋ........" ಎಂದ. "ಏನ್ಸಮಾಚಾರ ?" ಪ್ರಕಾಶ್‌ನಲ್ಲಿನ ಸೌಜನ್ಯ ಕೂಡ ಸತ್ತುಹೋಗಿದ್ದು ಅವನ ಅರಿವಿಗೆ ಬಂತು. ಮೌತ್‌ಪೀಸ್‌ಗೆ ಕೈ ಅಡ್ಡ ಹಿಡಿದು ಭಾರವಾದ ಉಸಿರೆಳೆದು ದಬ್ಬಿದ "ಸ್ವಲ್ಪ ರಜನಿನ ಕರೆಯಿರಿ" ವಿವೇಕದಿಂದ ಹೇಳಿದ. "ಅವ್ಳು ಇಲ್ಲ. ಎಲ್ಲಿಗೋ ಹೋಗಿದ್ದಾಳೆ." ರಿಸೀವರ್ ಇಟ್ಟ. ಸದ್ದು ಕೇಳಿಸಿದಾಗ ಅವನ ದುರಹಂಕಾರವನ್ನು ಪುಡಿಪುಡಿ ಮಾಡಬೇಕೆನಿಸಿತು. ರಜನಿಗೆ ಹೇಗೆ ಗೊತ್ತಾಗಬೇಕು. ನಿಧಾನವಾಗಿ ರಿಸೀವರ್‌ನ ಹುಕ್ ಮೇಲಿಟ್ಟ.

ಮತ್ತೆರಡು ದಿನ ಕಳೆದರೂ ರಜನಿಯ ಸುದ್ದಿ ಗೊತ್ತಾಗಲಿಲ್ಲ ದಿನ

ಗಂಟೆ ಗಂಟೆಗೂ ಕೂಡ ಅಂತರವಿದೆಯೆನಿಸಿತು. ಯೋಚನೆ ಇದ್ದರೂ ಮೊದಲಿನಷ್ಟು ಕಷ್ಟವಾಗಿ ತೋರಲಿಲ್ಲ. ಕಾಲ ಸುಲಭವಾಗಿ ಮರೆಸುತ್ತೆ ಅನ್ನೋದಿಕ್ಕೆ ಇದೊಂದು ಸ್ಪಷ್ಟ ನಿದರ್ಶನವೆನಿಸಿತು.

ಭಾನುವಾರ ಬೆಳಗ್ಗೆಯೇ ಸುನಂದಮ್ಮ ಮರಾತ ಹಚ್ಚಲು ಶುರು ಮಾಡಿದರು.

"ಹೀಗಾದ್ರೆ....... ಹೇಗಪ್ಪ ! ಇವತ್ತು ಭಾನುವಾರ. ಇಂದಾದ್ರೂ ಹೋಗಿದ್ದು ಬಾ. ಆ ಜನ ಏನಂದುಕೊಳ್ಳೊಲ್ಲ. ರಜನಿ ಕೂಡ ನೊಂದ್ಕೋತಾಳೆ. ಎಂದೋ ಏನೋ ಹುಟ್ಟಿದ ಹಬ್ಬ !"

ಓದುತ್ತಿದ್ದ ಪೇಪರನ್ನ ಪಕ್ಕಕ್ಕಿಟ್ಟು ಎದ್ದು ಹೋಗಿ ಹೊರಗೆ ನಿಂತ. ಅವನೆದೆ ಕುದಿಯುವ ಹೊಂಡವಾಗಿತ್ತು. ಪ್ರೀತಿಯ ಹೊಂಡದಲ್ಲಿ ಅವನನ್ನು ತೇಲಿಸಿದ ರಜನಿ ದೂರದಲ್ಲಿ ನಿಂತು ನಗುತ್ತಿದ್ದಳು. ಅರ್ಧ ಗಂಟೆ ಲೇಟಾದರೆ ಕಣ್ಣಲ್ಲಿ ನೀರಿನ ಕೋಡಿಯನ್ನೇ ಹರಿಸುತ್ತಿದ್ದ ಹೆಣ್ಣಿಗೆ ದಿನಗಳು ಕಳೆದರೂ *ತನ್ನ ನೆನಪಾಗಲಿಲ್ಲವೇ ? ಮಿದುಳಿನಲ್ಲಿ ಸಿಡಿತ ಶುರುವಾಯಿತು.*

ಮತ್ತೆ ಒಳಗೆ ಬಂದಾಗ ವಿಶ್ವನಾಥಯ್ಯ ಕೂಡ ಒಂದು ಮಾತು ಹೇಳಿದರು.

"ಅವ್ರಿಗೆ ಹೇಗೆ ಬೇಕೋ ಹಾಗೆಂದುಕೊಂಡಿದ್ದಾರೆ. ನಮ್ಗೇ ಆ ಜನರ ಉಸಾಬರಿ ಬೇಡ. ನಮ್ಮ ರಜನಿ ಅಲ್ಲಿದ್ದಾಳೆ. ಅದಷ್ಟು ನೆನಪಿನಲ್ಲಿ ಟ್ಕೊಂಡು ಹೋಗಿದ್ದು ಬಾ"

ವಿಕಾಸ್ ಗೊಣಗುತ್ತಲೇ ಹೊರಟ. ತಾಯಿ ತಂದೆಯರ ಒತ್ತಾಯವಿಲ್ಲದಿದ್ದರೆ ಅವನು ಖಂಡಿತ ಹೋಗುತ್ತಿರಲಿಲ್ಲ.

ಗುರುಮೂರ್ತಿಗಳ ಮನೆಗೆ ಬಂದಾಗ ಹನ್ನೆರಡು ಮೂವತ್ತು ಆಗಿತ್ತು. ಕೆಲವು ಏಜನ್ಸಿಗಳ ವಹಿವಾಟಿನ ಜೊತೆ ಏನೇನೋ ಹಮ್ಮಿಕೊಂಡಿದ್ದರಿಂದ ಫೋನ್ ಬಳಿ ಕೂತೇ ವ್ಯವಹಾರ ನಡೆಸುತ್ತಿದ್ದರು ಗುರುಮೂರ್ತಿಗಳು. ಒಟ್ಟಿನಲ್ಲಿ ಹಣವಿದ್ದ ಜನ 'ಫೈವ್‌ಸ್ಟಾರ್ ಪೀಪಲ್' ಗುಂಪಿಗೆ ಸೇರುವಂಥವರು.

ಪೇಪರ್ ನೋಡುತ್ತಿದ್ದ ರಮಣಿಯ ಗಂಡ ರಮೇಶ್ ಮೂತಿ ಸೊಟ್ಟಗೆ ಮಾಡಿ ನಕ್ಕರು. "ಬನ್ನಿ . ಬನ್ನಿ....ಕೆಲವರದು ಇದೇ ಹಣೆಬರಹ! ನಂಗಂತೂ ಈ ಮನೆ ಮಾವನ ಮನೆ ಅನ್ನಿಸಿಯೇ ಇಲ್ಲ. ಎಷ್ಟೋ ಜವಾಬ್ದಾರಿಗಳು ಕಡ್ಮೆ." ತನಗೆ ತಾನೇ ಅವಮಾನ ಮಾಡಿಕೊಳ್ಳುವ ಜೊತೆ ಸಾಕಷ್ಟು

ಜನರೆನ್ನು ಸೇರಿಸಿಕೊಂಡ. ವಿಕಾಸ್ ಆ ಮಾತುಗಳಿಗೆ ತಲೆಕೆಡಿಸಿಕೊಳ್ಳಲಿಲ್ಲ. ಅವನ ನೋಟ ಅತ್ತಿತ್ತ ಆಡಿತು.

ಮೌನವಾಗಿ ಕೈಯಲ್ಲಿ ಪೇಪರ್ ಹಿಡಿದು ಕೂತ ವಿಕಾಸ್ ನಿಮಿಷಗಳನ್ನು ಲೆಕ್ಕ ಹಾಕಿದ. ಗುರುಮೂರ್ತಿ, ರಜನಿ ವಿನಃ ಎಲ್ಲಾ ಬಂದು ಮುಖ ತೋರಿಸಿ ಹೋದರು.

"ರಜನಿ ಎಲ್ಲಿ ?" ತಾಳ್ಮೆವಹಿಸಿದ.

ರಮೇಶ್ ಕೆಟ್ಟದಾಗಿ ನಕ್ಕ. "ಮಾರ್ನಿಂಗ್ ಷೋಗೆ ಹೋಗಿದ್ದಾಳೆ. ನಮ್ಮ ಪ್ರಕಾಶ್ ಫ್ರೆಂಡ್ ಅಖಿಲೇಶ್ ಬಂದಿದ್ದ. "ಕೈಯಲ್ಲಿ ಪತ್ರಿಕೆ ಹಿಡಿದೇ ಹೇಳಿದರು. ವಿಕಾಸ್‌ನ ಎದೆಗೆ ಹಾರಿ ಹಾಕಿ ಎಳೆದಂತಾಯಿತು. ಈ ರೀತಿ ಅವಮಾನಿಸುವುದು ಅವರ ಉದ್ದೇಶವೆಂದು ಅವರಿಗೆ ಗೊತ್ತು.

ಸುಂದರ ಭವಿಷ್ಯ ರೂಪುಗೊಳ್ಳಬೇಕಾದ ಮಗಳನ್ನು ತಮಗೆ ಇಷ್ಟ ಬಂದಂತೆ ಚಿತ್ರಿಸಲು ತೊಡಗಿದ್ದರು. ಆಕೆಗೆ ಮಾತ್ರ ಇಲ್ಲಿ ಪ್ರಾಧಾನ್ಯತೆ.

"ಆಯ್ತು, ಬಂದ್ಮೇಲೆ ತಿಳ್ಸಿ" ಕೂಡುವುದಕ್ಕೆ ಇಷ್ಟಪಡಲಿಲ್ಲ. 'ರಜನಿ ಒಂದು ಸಮಸ್ಯೆ' ಮೊದಲ ಬಾರಿಗೆ ನಿರ್ಣಯಕ್ಕೆ ಬಂದ. ಬದುಕೆಲ್ಲ ಈ ಸಮಸ್ಯೆಯ ಅಡಿಯಲ್ಲಿ ಹೂತುಬಿಡಬಹುದೇನೋ !

ಬಂದ ಪ್ರಕಾಶ್ ಅಡ್ಡ ನಿಂತ. "ಯಾಕೆ ಹೊರಟ್ರಿ ? ಇನ್ನೇನು ಬಂದ್ಬಿಡ್ತಾರೆ. ಒಂದೆರಡು ಗಂಟೆ ತಡವಾಗ್ಬಹುದು" ಅವನದೇ ಧಾಟಿಯಲ್ಲಿ ಹೇಳಿದ. ಕತ್ತಿನ ಪಟ್ಟಿ ಹಿಡಿದು ನಾಲ್ಕು ಬಾರಿಸಿ ಬುದ್ಧಿ ಹೇಳಬೇಕೆನಿಸಿತು. 'ಶುದ್ಧ ರೋಗ್' ಹಲ್ಲು ಕಡಿದ.

"ಇಲ್ಲ, ನನ್ನ ಫ್ರೆಂಡ್‌ನ ನೋಡ್ಬೇಕು" ಸಂಯಮದಿಂದ ನುಡಿದು ಅವನನ್ನು ದಾಟಿಕೊಂಡು ಹೊರಗೆ ನಡೆದ. ಇಂಥ ಜನರ ಮಧ್ಯೆ ರಜನಿ ಹೇಗೆ ಬೆಳೆದಿರಬಹುದು ? ಈಗ ಪಾತ್ರಗೆ ತಕ್ಕಂತೆ ಹೊಂದಿಕೊಂಡರೂ ತನ್ನ ಮಾಮೂಲಿ ಜಾಡಿನಲ್ಲಿ ಸಾಗಿದರೂ ಹೆಚ್ಚಲ್ಲ.

ತಾಯಿ, ತಂದೆಯರ ಮುಖದಲ್ಲಿ ಮೂಡುವ ಹತ್ತು ಪ್ರಶ್ನೆಗಳಿಗೆ ಉತ್ತರಿಸಲಾರದೆ ತಿರುಗಾಡಿ ಸಂಜೆ ಮನೆಗೆ ಬಂದ.

ಮಗನ ಮುಖ ನೋಡಿದ ಕೂಡಲೇ ಸುನಂದಮ್ಮನ ಮುಖದ ಗೆಲುವು ಹಿಂಗಿತು. "ಯಾವಾಗಂತೆ ಹುಟ್ಟಿದ ಹಬ್ಬ ?" ಕೇಳಿದಾಗ ಉದಾಸೀನ

ಕೋರಿದ. "ನಂಗೆ ಗೊತ್ತಿಲ್ಲ. ನಾನು ಕೇಳ್ಲಿಲ್ಲ" ಮಗನ ಮುಖದ ವಿಷಾದದ ಗೆರೆಗಳನ್ನು ಲೆಕ್ಕಹಾಕುವಲ್ಲಿ ಸಮರ್ಥರಾದರು. ಆದರೆ ತುಟಿ ತೆರೆಯಲಿಲ್ಲ.

ಮತ್ತೆ ನಾಲ್ಕು ದಿನ ಕಳೆದರೂ ಸೊಸೆ ಬರುವ ಸೂಚನೆ ಕಾಣದಾಗ ಸುನಂದಮ್ಮ ಹೌಹಾರಿದರು. ದಾಂಪತ್ಯದ ಸುಂದರ ಕಲ್ಪನೆ ಸರಿಯಾಗಿ ಮೂಡುವ ಮುನ್ನವೇ ಇಂಥ ವಿಪರ್ಯಾಸ ಒಳಗೆ ವಿಪರೀತ ಚಡಪಡಿಕೆ. ಮಗ ಸಹಜವಾಗಿ ನಡೆದುಕೊಳ್ಳುತ್ತಿದರೂ ಆದರ ಹಿಂದಿನ ನೋವು ಅವರಿಗೆ ಗೊತ್ತು.

ಒಂದು ತೀರ್ಮಾನಕ್ಕೆ ಬಂದರು. "ಸಂಜೆ ಮುಂದು ಬೀಗರ ಮನೆಗೆ ಹೋಗ್ಬರ್ತೀನಿ" ಕಾಲೇಜಿಗೆ ಹೊರಟ ಮಗನ ಮುಂದೆ ಉಸುರಿದರು. "ಆಯ್ತು...." ಎಂದ. ಅವನು ಅನುಭವಿಸಿದ ವೇದನೆ ಅಪಾರ. ಆದರೆ ಯಾರ ಮುಂದೂ ಬಾಯಿ ಬಿಡಲು ಅಶಕ್ತ. ಅವನ ಚೇತನವೇ ಹಿಂಗಿ ಹೋಗಿತ್ತು

ಹೋಗುತ್ತಿದ್ದ ಮಗನನ್ನೇ ನೋಡುತ್ತಿದ್ದ ಸುನಂದಮ್ಮನ ಕಣ್ಣುಗಳು ಒದ್ದೆಯಾದವು. ಒಂದು ಗಳಿಗೆ ಅತ್ತೇಬಿಟ್ಟರು. ಮದುವೆಗೆ ಮುನ್ನ ಮಗನ ಮುಖದ ಹಸನ್ಮುಖತೆ ಬಾಡಿದ್ದೇ ಆಕೆ ಕಂಡಿರಲಿಲ್ಲ. ಕೆಲವೊಮ್ಮೆ ಗಂಭೀರವಾಗಿ ಓದುತ್ತಾ ಕೂಡುತ್ತಿದ್ದವನು ಕೆಲವು ವೇಳೆ ಅಡಿಗೆಯ ಮನೆಗೆ ಬಂದು ಗೋಳುಹುಯ್ಯುದ್ಕೊಳ್ಳುತ್ತಿದ್ದ. ವಿರಾಮ ಬಿದ್ದಾಗ ತಾನೇ ಕೆಲಸಕ್ಕೆ ಮುಂದಾಗುತ್ತಿದ್ದ. ಅವರ ಪ್ರಕಾರ ವಿಕಾಸ್ 'ಚಿನ್ನದಂಥವನು' ಅಂಥವನಿಗೆ ಇಂಥ ಸಂಬಂಧ

ಸಂಜೆ ಬಲವಂತವಾಗಿ ವಿಶ್ವನಾಥಯ್ಯನವರನ್ನು ಹೊರಡಿಸಿದರು. ಅವರದು ಅತಿ ಮನಸ್ಸು.

"ನಂಗೆ ಆ ಮನೆಗೆ ಹೋಗ್ಬೇಕೂಂದ್ರೆ ಮನಸ್ಸು ಮುದುಡುತ್ತೆ. ಗುರುಮೂರ್ತಿಗಳ ಸಂಬಂಧ ಬೆಳೆಸಿದ್ದೇ ದೊಡ್ಡ ತಪ್ಪು ಈಗ ಅನುಭವಿಸ್ಬೇಕು" ಹೆಂಡತಿಯ ಸ್ವರದಲ್ಲಿ ಬೇಸರಕ್ಕಿಂತ ಹೆಚ್ಚು ಆತಂಕವಿದ್ದುದು ವಿಶ್ವನಾಥಯ್ಯನವರ ಗಮನಕ್ಕೆ ಬಂತು. ಆದರೂ ಚಕಾರವೆತ್ತಲಿಲ್ಲ.

ಇವರುಗಳನ್ನು ಸ್ವಾಗತಿಸಿದ್ದು ಕಿವಿಗಡಚಿಕ್ಕುವ ಫಾರಿನ್ ಮ್ಯೂಜಿಕ್. ಅವರುಗಳ ಕಾಲುಗಳಿಗೆ ಸರಪಣಿಯನ್ನು ತೊಡಿಸಿದಂತಾಯಿತು.

"ಬೇರೆ ರೀತಿ ಜನ!" ಮುಖ ಸಿಂಡರಿಸಿದರು. ಮೊದಲು ತಮ್ಮ ಅರಿವಿಗೆ ಇದೆಲ್ಲ ಯಾಕೆ ಬರಲಿಲ್ಲ ? ಸುನಂದಮ್ಮ ಒಂದಿಂಚು ಕದಲಿಲ್ಲ "ನಂಗ್ಯಾಕೋ ಒಂದು ತರಹ. ಹೊರಟುಬಿಡೋಣ" ಹೆಂಡತಿಯ ಭಯಕ್ಕೆ ತೆರೆ ಹಾಕಿದರು. "ಇದೇನು ಭೂತ ಬಂಗ್ಲೇನಾ ? 'ಫಾರ್ವರ್ಡ್' ನ್ನೋ ಭಾವಣೆಯ ಕೆಳ್ಗೇ ಜನ ಬದಲಾಗಿದ್ದಾರೆ. ಇದ್ಕೊಳ್ಳಿ ನಮ್ಮನ್ನೇನು ಮಾಡೋಲ್ಲ" ಆತ್ಮವಿಶ್ವಾಸ ದಿಂದ ಹೆಜ್ಜೆ ಹಾಕಿದರು.

ಸಿಗಾರ್ ಹಿಡಿದಿದ್ದ ಗುರುಮೂರ್ತಿಗಳು ಕಣ್ಣಲ್ಲಿಯೇ ಸ್ವಾಗತಿಸಿ ನಕ್ಕರೇ, ಸಿಗರೇಟಿಗೆ ಲೈಟರ್ ಸೋಕಿಸುತ್ತಿದ್ದ ಪ್ರಕಾಶ್ ಸೊಟ್ಟಗೆ ನಕ್ಕ, ಕೂತಿದ್ದ ರಜನಿ ಒಳಕ್ಕೆ ಓಡಿದಳು ಬೆಕ್ಕಸ ಬೆರಗಾದರು. ರಜನಿ ಕೂದಲನ್ನು ಕತ್ತರಿಸಿ ನವೀನ ಮಾದರಿಯಲ್ಲಿ ಜೋಡಿಸಿದ್ದರು.

'ಅಯ್ಯೋ... ....' ಸುನಂದಮ್ಮನ ಮನ ಚಡಪಡಿಸಿತು ಅವರಿಗೆ ಉದ್ದ ಕೂದಲಿಲ್ಲದಿದ್ದರೂ ಸೊಂಪಾಗಿತ್ತು. ಜಡೆ ಹಾಕಿದಾಗ ಮುದ್ದಾಗಿ ಕಾಣು ತ್ತಿದ್ದಳು. ಆಕೆಯ ಸಂಪ್ರದಾಯಸ್ಥ ಮನಕ್ಕೆ, ಕಣ್ಣುಗಳಿಗೆ ಅವಳೀಗ ಕುರೂಪಿ. ಅವರಲ್ಲಿನ ಉತ್ಸಾಹವೇ ಸತ್ತುಹೋಯಿತು.

"ಕೂತ್ಕೊಳ್ಳಿ... ...." ಸೋಫಾದತ್ತ ಕೈ ತೋರಿಸಿದರು ಗುರುಮೂರ್ತಿ ಗಳು. ಪ್ರಕಾಶ್ ಸಿಗರೇಟನ್ನು ಆಷ್‌ಟ್ರೇನೊಳಕ್ಕೆ ಒತ್ತಿ ಎದ್ದು ಹೋದ. ಅವನು 'ಗುಗ್ಗು' ಎಂದು ತಿಳಿದಿರುವ ಜನರ ಜೊತೆ ಕೂಡಲು ಅವನಿಗಿಷ್ಟ ವಿಲ್ಲ.

ಮುಜುಗರದಿಂದಲೇ ಕೂತರು ದಂಪತಿಗಳು. ಗುರುಮೂರ್ತಿಗಳು ತಮ್ಮ ವ್ಯವಹಾರಗಳ ಬಗ್ಗೆ ಸಂಕ್ಷಿಪ್ತವಾದ ವಿಷಯವನ್ನು ಹೆಚ್ಚು ಅಗಲಿಸಿ ಹೇಳಿ ಅಳಿಯನ ವಿಷಯಕ್ಕೆ ಬಂದರು.

"ಸ್ವಲ್ಪವಾದ್ರೂ ಕಾಮನ್‌ಸೆನ್ಸ್ ಇಲ್ಲ, ನಿಮ್ಮ ಮಗನಿಗೆ ! ನನ್ನ ಅಳಿಯನಾದ್ಮೇಲೂ ಬುದ್ಧಿವಂತನಾಗ್ದಿದ್ರೆ .. ....ಯೂಸ್‌ಲೆಸ್ ಅಂತ್ಲೇ ಅರ್ಥ" ಎಂದಾಗ ವಿಶ್ವನಾಥಯ್ಯನವರು ಬೆವತುಬಿಟ್ಟರು. ಬೇರೆಯವರು ಮಗನನ್ನು ಹೊಗಳುವುದನ್ನು ಕೇಳಿ ಹೆಮ್ಮೆಪಟ್ಟ ಹೃದಯ ದೊಡ್ಡಶಬ್ದದಿಂದ

ಸಿಡಿಯುವಂತಾದರೂ ಹೊರಗಿನ ಶಾಂತತೆಯನ್ನ ಕಾಯ್ದು ಕೊಂಡಿತು. "ನಂಗೆ ಅರ್ಥವಾಗ್ಲಿಲ್ಲ !" ಎದೆಯಲ್ಲಿ ಸಿಡಿದ ಬೆಂಕಿಯನ್ನ ಮುಚ್ಚಿಟ್ಟರು.

ಗುರುಮೂರ್ತಿಗಳು ಜೋರಾಗಿ ನಕ್ಕವರು ಗಂಭೀರವಾದರು "ನಿಮ್ಮ ಮಗನಿಗೆ ಬುದ್ಧಿ ಹೇಳಿ. ಇಡೀ ಬದ್ಕು ಕೊರಗೋದ್ರಲ್ಲಿ ಕಳ್ಯೋದ್ಬೇಡ. ಕೆಲ್ಸಕ್ಕೆ ರಾಜೀನಾಮೆ ಕೊಟ್ಟು ಮಿಕ್ಕಿದ್ದು ನಂಗೆ ಬಿಡ್ಲಿ."

ಈಗ ನಗುವ ಸರದಿ ವಿಶ್ವನಾಥಯ್ಯನವರದಾಯಿತು. "ಮಿಸ್ಟರ್ ಗುರುಮೂರ್ತಿ, ಈ ವಿಶ್ವನಾಥಯ್ಯನ ಏನಂತ ತಿಳಿದಿದ್ದೀಯಾ ! ನನ್ಮಗನನ್ನು ನನ್ಮುಂದೆನೆ ಕ್ಷುಲ್ಲಕವಾಗಿ ಮಾತಾಡ್ತೀರಲ್ಲ. ನಿಮ್ಮ ಧೈರ್ಯಕ್ಕೆ ಶಭಾಷ್‌ಗಿರಿ ಕೊಡ್ಬೇಕು. ಖಬರ್‌ದಾರ್...." ಕೋಪದಿಂದ ಅವರ ದನಿ ನಡುಗುತಿತ್ತು. ಕೆಲಸ ಕೆಡುತ್ತದೆಯೆಂದು ಅರ್ಥವಾದ ಕೂಡಲೇ ಗುರುಮೂರ್ತಿಗಳು ಮೆತ್ತಗಾದರು.

ತೀರಾ ವಿಶ್ವಾಸದಿಂದ ವಿಶ್ವನಾಥಯ್ಯನವರ ಕೈ ಹಿಡಿದುಕೊಂಡರು. "ಕೋಪ ಮಾಡ್ಕೋಂಥ ವಿಷ್ಯವಲ್ಲ. ವಿಕಾಸ್ ನಂಗೆ ಅಳಿಯ ಕೂಡ. ಹೊಟ್ಟೆ ಸಂಕಟದಿಂದ ಆಡಿದ ಮಾತುಗಳವು. ಬದಲಾವಣೆಗಳಿಗೆ ಮನುಷ್ಯ ಒಗ್ಗಿಕೋಬೇಕು. ಸತ್ಯ, ಧರ್ಮ, ಪ್ರಾಮಾಣಿಕತೆ ಅನ್ನೋದು ಸವಕಲು ನಾಣ್ಯಗಳು. ಈಗ ಕೆಲ್ಸಕ್ಕೆ ಬರೋಲ್ಲ. ಈಗ ಹಣ, ಪ್ರತಿಷ್ಠೆ ಮುಖ್ಯ. ಆಫ್‌ಟ್ರಾಲ್ ನಿಮ್ಮ ಮಗನ ಸಂಬ್ಳವೆಷ್ಟು ?" ಕಣ್ಣನೆಯ ಪ್ರಶ್ನೆ ಕೂಡ ಅವರನ್ನ ರೊಚ್ಚಿಗೆಬ್ಬಿಸಿತು.

"ನಿಮ್ಮ ಪುರಾಣ ಕೇಳೋಕೆ ಬಂದಿಲ್ಲ. ನಿಮ್ಮಂಥವರದೇ ಒಂದು ಸಭೆ ಸೇರ್ಸಿ ಭಾಷಣ ಮಾಡಿ. ಅಲ್ಲಿ ಚಪ್ಪಾಳೆಯಾದ್ರೂ ಬಿದ್ದೀತು" ದನಿಯೇರಿಸಿದರು. ಸುನಂದಮ್ಮನವರಿಗೆ ಪರಿಸ್ಥಿತಿ ಬಿಗಡಾಯಿಸುವುದು ಬೇಕಿರಲಿಲ್ಲ. "ಛೆ, ಅವರವ್ರು ಹಿಡಿದ ದಾರಿಗಳೇ ಬೇರೆ, ನಮಗ್ಯಾಕೆ ಬೇಕು, ಆ ಉಸಾಬರಿ" ಸಮಾಧಾನಿಸಿದರು.

ಗುರುಮೂರ್ತಿಗಳು ಕಾಲು ಮೇಲೆ ಕಾಲು ಹಾಕಿ ಸೋಫಾಗೆ ಒರಗಿದರು. "ಈ ಅಪ್ಪನ ಮಗನೇ ವಿಕಾಸ್. ಅದೇ ಸ್ವಾಭಿಮಾನ, ಮೆಚ್ಚಿಗೆ ಇಣುಕಬೇಕಾದ ಕಣ್ಣುಗಳಲ್ಲಿ ಇಣಕಿದ್ದು ತಿರಸ್ಕಾರ."

"ಡೋಂಟ್ ಬಿ ಎಕ್ಸೈಟೆಡ್. ಅವ್ನು ನಿಮ್ಗೇ ಮಗ, ನಂಗೆ ಅಳಿಯ.

ಅವ್ನ ಒಳಿತು–ಕೆಡಕುಗಳು ನಂಗೂ ಸೇರಿದ್ದೆ. ಹಟಮಾರಿತನ ನಂಗೆ ಇಷ್ಟ ವಾಗೋಲ್ಲ. ನನ್ನ ಮಗ್ಳಿಗೆ ಮಧ್ಯಮ ದರ್ಜೆಯ ಲೈಫ್ ಬೇಡ" ಸ್ಪಷ್ಟ ವಾಗಿತ್ತು.

ವಿಶ್ವನಾಥಯ್ಯನವರಿಗೆ ಅವರ ಮೂರ್ಖತನ ನೋಡಿ ನಗಬೇಕೆನಿಸಿತು. "ಬಹಳ ದೊಡ್ಡ ತಪ್ಪು ಮಾಡಿದ್ರಿ. ನಮ್ಮಲ್ಲಿ ಏನು ನೋಡಿ ಹೈಕ್ಲಾಸ್ ಲೀವಿಂಗ್, ಫೈವ್‌ಸ್ಟಾರ್ ಕಲ್ಚರಿನ ಕಲ್ಪನೆ ಮಾಡ್ಕೊಂಡ್ರಿ?" ಸ್ವರದಲ್ಲಿ ಅಲುಗಿನ ಚೂಪಿತ್ತು. ಗುರುಮೂರ್ತಿಗಳು ಟೀಪಾಯಿಯನ್ನು ಕಾಲಿಂದ ಸರಿಸಿ ಮೇಲಕ್ಕೆದ್ದರು.

"ಈಗ್ಲೂ ಅಂಥ ಪ್ರಮಾದವೇನು ಆಗಿಲ್ಲ. ತಾಳಿ ಕಟ್ಟಿದಷ್ಟೇ ಸುಲಭ ವಾಗಿ ಕಿತ್ತೆಸೆಯಬಲ್ಲೆ. ಸಮಾಜದ ಸಹಾನುಭೂತಿ ಮೇಲ್ಮುಖಕ್ಯಾದ್ರೂ ಹೆಣ್ಣಿನ ಕಡೆಗೆ" ಗುರುಮೂರ್ತಿಗಳ ಕಣ್ಣುಗಳಲ್ಲಿ ರೋಷ ಹೊಗೆಯಾಡು ತ್ತಿತ್ತು. ಮಗಳ ಕುತ್ತಿಗೆಯಲ್ಲಿನ ತಾಳಿ ತಮ್ಮ ಕೈಯಲ್ಲಿರುವ ಪೈಪ್‌ನಂತೆ ಭಾವಿಸಿದರು.

ಇನ್ನೇನು ಉಳಿದಿಲ್ಲವೆನಿಸಿತು ವಿಶ್ವನಾಥಯ್ಯನವರಿಗೆ "ನಿಮ್ಗೇ ಹೇಗೆ ಮನಸ್ಸಿಗೆ ಬರುತ್ತೋ, ಹಾಗೆ ಮಾಡಿ. ಕಡೆಗೆ ಪಶ್ಚಾತ್ತಾಪ ಪಡ್ಬೇಕಾದವ್ರು.. ನೀವೇ" ಹೆಂಡತಿಯನ್ನು ಕರೆದುಕೊಂಡು ಹೊರಟುಬಿಟ್ಟರು.

"ಪೂರ್ ಪೀಪಲ್ಸ್, ಎಂಥ ಜನರ ಸಹವಾಸ ಮಾಡಿದಂತಾಯ್ತು" ಹೋಗುತ್ತಿದ್ದವರಿಗೆ ಕೇಳುವಂತೆಯೇ ಗೊಣಗಿದರು.

ಕೋಣೆಯಲ್ಲಿದ್ದ ರಂಜನಿ ದಿಂಬನ್ನ ಕಚ್ಚಿ ಬಿಕ್ಕಿ ಬಿಕ್ಕಿ ಅತ್ತಳು. ಸುಂದರವಾದ ಕನಸ್ಸನ್ನ ಕಾಣುತ್ತಿದ್ದ ಅವಳನ್ನ ಪ್ರಾರಂಭದಲ್ಲಿಯೇ ಎಬ್ಬಿಸಿ ತಂದು ಅಂಧಕಾರದಲ್ಲಿ ನೂಕಿದ್ದರು, ವಿಕಾಸ್‌ನಿಂದ ಬಹಳ ದೂರ.

ಒಳಗೆ ಬಂದ ಗುರುಮೂರ್ತಿಗಳು ಮಗಳನ್ನು ನೋಡಿ ನಕ್ಕರು. ವಿಜಯದ ಮೊದಲ ಮೆಟ್ಟಿಲಿನ ಮೇಲೆ ಕಾಲಿಟ್ಟ ಅನುಭವ ಇನ್ನು ಮಿಕ್ಕದ್ದು ಸುಲಭ. ಸಂಪ್ರದಾಯ ಮುಸುಕಿನಲ್ಲಿ ಒದ್ದಾಡೋ ಜನ ಬೇಗ ಶರಣಾಗ್ತಾರೆ ಇದು ಅವರ ಅನಿಸಿಕೆ.

"ಸಿಲ್ಲಿ ಗರ್ಲ್ ಯಾಕೆ ಅಳ್ತೀಯಾ? ಅರ್ಧ ತಣ್ಣಗಾಗಿದ್ದಾರೆ, ಇನ್ನು ಸ್ವಲ್ಪ ಬಾಕಿ. ನೀನು ಹುಚ್ಚುಚ್ಚಾಗಿ ಆಡಿ ನನ್ನ ಪ್ಲಾನ್‌ನ ಹಾಳು

*ಮಾಡ್ತೀಯ" ಮಗಳ ಬೆನ್ನ ಸವರಿದರು. "ನನ್ನ ಹಾಳು ಮಾಡ್ಬಿಟ್ರಿ!*
ವಿಕಾಸ್‌ಗೆ ಇದೆಲ್ಲ ಇಷ್ಟವಿಲ್ಲ. ಈಗ ಹೇಗೆ ಮುಖ ತೋರಿಸ್ಲಿ?" ವಿಕಾಸ್ ಅವನ ಇಷ್ಟಗಳನ್ನು ಪ್ರಬಲವಾಗಿ ಅವಳ ಮೇಲೆಂದು ಏರಲು ಇಷ್ಟಪಡದಿದ್ದರು "ವಿಚಿತ್ರ ಕಟ್‌ಗಿಂತ, ಮಾಮೂಲಿ ಜಡೆನೆ ನಿಂಗೆ ಚೆನ್ನಾಗಿ ಕಾಣುತ್ತೆ" ಎಂದಿದ್ದ. ಇದು ಅವಳ ಮನದಲ್ಲಿ ಅಚ್ಚಾಗಿತ್ತು.

ಜೋರಾಗಿ ನಕ್ಕುಬಿಟ್ಟರು. ಹೆಣಗಾಟದ ಮಧ್ಯೆ ಸ್ವಲ್ಪ ನೊಂದಂತೆ ಕಾಣಿಸಿದಳು. ಮೊದಲಿನಿಂದ ಸ್ವಲ್ಪ ಭಿನ್ನವೇ. ಈಗ ಅವಳಿಗೆ ಸುನಂದಮ್ಮನ ಮನೆಯ ಕಲ್ಚರೇ ಅವಳಿಗಿಷ್ಟ. ಹಿಂದೆ ತನ್ನ ಸ್ವಂತಿಕೆ ಕಾಪಾಡಿಕೊಳ್ಳ ಅಲ್ಪ ಸ್ವಲ್ಪ ಹೋರಾಟ ನಡೆಸಿದ್ದು ಅವರಿಗೆ ನೆನಪಿತ್ತು.

"ಏನಾಯ್ತುಂತ ಗೋಳಾಡ್ತ ಇದ್ದೀಯಾ? ಇಬ್ಬರ ಮುದಿಯರ ನಡುವೆ ಸಿಕ್ಕಿ ಒದ್ದಾಡ್ತಾ ಇರೋ ವಿಕಾಸ್‌ನ ನಾನು ಹೊರ ತರೋ ಪ್ರಯತ್ನ ಮಾಡ್ತಾ ಇದ್ದೀನಿ. ನಿನ್ನ ಬೆಂಬಲ ಈ ಕಡೆಗಿರ್ಲಿ. ಹುಚ್ಚುಚ್ಚಾಗಿ ಆಡ್ಬೇಡ. ನಾನೇ ವಿಕಾಸ್‌ಗೆ ಫೋನ್ ಮಾಡ್ತೀನಿ" ಅವಳ ಪಾಡಿಗೆ ಅವಳನ್ನು ಬಿಟ್ಟು ಹೊರ ನಡೆದರು.

ಕೋಣೆಯೊಳಗೆ ಬಂದ ಪಂಕಜಮ್ಮ ಸುಸ್ತಾಗಿದ್ದರು ರೇಗಿದರು "ಇಲ್ಲಿ ನಿಂಗೇನು ಕಡ್ಮೆ ಆಗಿದೆ. ಅವ್ನು ಎಲ್ಲೋ ಮಾಟಾನೋ ಮಂತ್ರಾನೋ ಮಾಡ್ಸಿದ್ದಾನೆ. ಇಲ್ದಿದ್ರೆ ಮೂರ್ಹೊತ್ತು ಯಾಕೆ ಒದ್ದಾಡ್ತಾ ಇದ್ದೆ?" ವೈಚಾರಿಕೆಯ ಬಗ್ಗೆ ಮಾತಾಡುವ ಆಕೆಯ ಬಾಯಲ್ಲಿ ಇಂಥ ಅನುಮಾನದ ನುಡಿಗಳು ಏನೇನು ಅರ್ಥವಾಗಿರದ ತಾಯಿ !

ದಿಂಬಿನಿಂದ ಮುಖವೆತ್ತಿ ತಾಯಿಯತ್ತ ನೋಡಿದಳು ರಜನಿ. ಬೆವರಿನಿಂದ ಮುಖದ ಮೇಕಪ್ ಕದಡಿಹೋಗಿತ್ತು. ಮುಖದ ಸುಕ್ಕುಗಳು ಎದ್ದು ಕಾಣುತಿತ್ತು. ವಯಸಿಗಿಂತ ಹತ್ತು ವರ್ಷ ಹಿರಿಯಳಂತೆ ಕಂಡಳು. ಫ್ರಿಜ್‌ನಲ್ಲಿದ್ದ ನೀರನ್ನು ಲೋಟಕ್ಕೆ ಬಗ್ಗಿಸಿಕೊಂಡು ಬಂದು ಅವರ ಮುಂದಿಟ್ಟಳು. ಗಟಗಟನೆ ಕುಡಿದು ಸೋಫಾಗೆ ಒರಗಿ ಕಣ್ಮುಚ್ಚಿದರು.

ತುಟಿಯ ಬಣ್ಣದ ಏರುಪೇರಿನ ಜೊತೆ ಮೈಯಿನ ಆಲಸ್ಯದಿಂದ ತುಟಿಗಳು ಒಣಗಿದ್ದವು. "ಮಮ್ಮಿ, ಯಾಕೆ ಒಂದು ತರಹ ಇದ್ದೀ?" ಅವಳಲ್ಲಿ ಆತಂಕ ಇಣಕಿತು. ಇವನ್ನೆಲ್ಲ ಯೋಚಿಸುವಷ್ಟು ಬೆಳೆದಿದ್ದಳು. ಪಂಕಜಮ್ಮ

ನಿಧಾನವಾಗಿ ಕಣ್ತೆರೆದು ಒಣಗಿದ ತುಟಿಯ ಮೇಲೆ ನಾಲಿಗೆಯಾಡಿಸಿದರು. ಸಾಯುವಷ್ಟು ಸುಸ್ತು. "ಇವತ್ತು ಚೆಕಪ್‌ಗೆ ಹೋಗಿದ್ದೆ. ಮೊದ್ಲೇ ಬಿ.ಪಿ. ಯಿಂದ ನರಳ್ತಾ ಇದ್ದೀನಿ. ಈಗ ಯೂರಿನ್‌ನಲ್ಲಿ ಸಕ್ಕರೇನು ಇದೇಂದ್ರು. ಇದೊಂದು ಸೇರ್ಕೊಂಡ್ರೆ ಮುಗೀತು" ಸ್ವರ ಒದ್ದೆಯಾಯಿತು. ಕಣ್ಮುಚ್ಚಿ ಅದೇ ಸ್ಥಿತಿಗೆ ಇಳಿದರು. ನೀರವತೆ ಆವರಿಸಿತು ಅವರನ್ನು.

ತಕ್ಷಣ ರಜನಿಗೆ ಸುನಂದಮ್ಮನ ನೆನಪಾಯಿತು. ಎಷ್ಟು ನಿರಾತಂಕ, ನಿಶ್ಚಿಂತೆಯಿಂದ ಇದ್ದರು. ಅಂಥ ಸಂತೃಪ್ತಿ ಬದುಕನ್ನು ಗಂಟೆ ಕೂಡ ತನ್ನ ತಾಯಿ ಅನುಭವಿಸಿರಲಾರರು. ಹಳೆಯ ಸಂಪ್ರದಾಯಗಳಿಗೆ ಬಂಧಿಯಲ್ಲ ಆಕೆ. ಹೊಸದನ್ನು ವಿವೇಕದಿಂದ ಆಯ್ದು ರೂಢಿಸಿಕೊಳ್ಳುವಂಥ ವಿವೇಕ. ಪ್ರತಿಯೊಂದರಲ್ಲೂ ಉತ್ಸಾಹ, ಅಚ್ಚುಕಟ್ಟು. ಅಲ್ಲಲ್ಲಿ ಒಂದೊಂದು ಬಿಳಿ ಕೂದಲು ಇಣುಕಿದರೂ ಮುಖದ ವರ್ಚಸ್ಸು ಮಾಸಿರಲಿಲ್ಲ. ವಿಕಾಸ್‌ನಂಥ ಹಿರಿಯ ಮಗ ಇದ್ದಾನೆಂದರೆ ನೋಡಿದವರು ನಂಬುತ್ತಿರಲಿಲ್ಲ. ಮುಗ್ಧತೆ, ಯೌವನ, ಎಳೆತನ ಎಲ್ಲಾ ಉಳಿಸಿಕೊಂಡಿದ್ದರು. ಅಂಥ ಕಾಳಜಿ ಆಕೆಗೆ ಇಲ್ಲದಿದ್ದರೂ, ತಾನಾಗಿ ಉಳಿದಿತ್ತು.

ಕೆಲವೊಮ್ಮೆ ವಿಶ್ವನಾಥಯ್ಯನವರು ಹೆಂಡತಿಯ ಬಗ್ಗೆ ಮೆಚ್ಚುಗೆಯ ಮಾತುಗಳನ್ನಾಡುತ್ತಿದ್ದರು. "ಎಲ್ಲರಿಗೂ ಮನಸ್ಸು ಮುಂದಕ್ಕೆ ಹೋದ್ರೆ, ನಿಂಗೆ ಹಿಂದಕ್ಕೆ ಹೋಗ್ತಾಯಿದೆ, ಸುನಂದ. ನಮ್ಮ ವಿಕಾಸ್‌ಗೆ ಗರ್ಭಿಣಿಯಾಗಿದ್ದಾಗಿನ ಕೆನ್ನೆಗಳ ಹೊಳಪು ಇವತ್ತಿಗೂ ಒಂಚೂರು ಕಮ್ಮಿ ಆಗಿಲ್ಲ" ಅಂಥ ಸಂದರ್ಭದಲ್ಲಿನ ಮುಖದ ಮೇಲಿನ ಲಜ್ಜೆಯನ್ನು ಅವಳೇ ಗಮನಿಸಿದ್ದಳು. ಅವೇನು ಉತ್ಪ್ರೇಕ್ಷೆಯ ಮಾತುಗಳಾಗಿರಲಿಲ್ಲ. ಆಕೆಯ ಮುಖದ ಉತ್ಸಾಹ, ಸಂಭ್ರಮಕ್ಕೆ ಹೋಲಿಸಿಕೊಂಡರೆ ತಾನೇ ಸಪ್ಪೆ ಎಂಬ ನಿರ್ಧಾರಕ್ಕೆ ಬರುತ್ತಿದ್ದಳು.

ದೀರ್ಘವಾಗಿ, ಆಳವಾಗಿ ತಾಯಿಯತ್ತ ನೋಡಿದಳು ಕೃಶಕ ಗೆಲುವಿನ ತೋರ್ಪಡೆ ಮಾಡಿದರೂ ಆಕೆ ತೀರಾ ಬಳಲಿದ್ದಾಳೆಂದುಕೊಂಡಳು. ಈಕೆಯ ಓಡಾಟದಿಂದ ಸಮಾಜಕ್ಕೆ, ಬೇರೆಯವರಿಗೆ ಎಷ್ಟು ಒಳಿತಾಗಿದೆಯೋ, ಬಿಟ್ಟಿದೆಯೋ ಇವರಿಗಂತೂ ಅನುಕೂಲವಾಗಿತ್ತು. ಇದೊಂದು ರೀತಿಯ ನೆಪದ ದುಡಿಮೆ ! ಇನ್ನು ಸಾಕೆನಿಸಿತು ಅವಳಿಗೆ.

"ಇನ್ಮೇಲೆ ಎಲ್ಲೂ ಹೋಗ್ಬೇಡ. ಕಟ್ಟಿಕೊಂಡ ಸಂಘ ಸಂಸ್ಥೆಗಳಿಗೆ ರಾಜಿ ನಾಮೆ ಕೊಟ್ಬಿಡು ಸಾರ್ವಜನಿಕ ಜೀವನದಿಂದ ನಿವೃತ್ತಿ ಘೋಷಿಸಿಬಿಡು" ಮನಸ್ಸಿಗೆ ಬಂದಿದ್ದು ಹೇಳಿದಳು

ಪಂಕಜಮ್ಮ ದಡಬಡಿಸಿಕೊಂಡು ಮೇಲಕ್ಕೆದ್ದರು. "ಡ್ಯಾಮ್ ಇಟ್, ನಾನ್ಸೆನ್ಸ್ " ಕೈಗೆ ಸಿಕ್ಕಿದ್ದೆಲ್ಲ ಎರಚಾಡಿದರು. "ಎಂಥ ಸಿಲ್ಲಿ ಮಾತುಗಳ್ನ ಆಡ್ತಿಯೋ ಸೆರಗೊದ್ದು ಅಕ್ಕಿ, ಬೇಳೆ ಆರ್ಸ್ಕೊಂಡು ಕೂರೋಕೆ ನಾನು ವಿಶ್ವ ನಾಥಯ್ಯನ ಹೆಂಡ್ತಿಯಲ್ಲ" ಅಬ್ಬರಿಸಿದರು. ಒಳಗಿನ ಬದುಕಿನ ಬಗ್ಗೆ ಅವ ರಗಿದ್ದ ಅಸಹ್ಯ, ಹೊರಗಿನ ಜೀವನದ ಮೇಲಿದ್ದ ವಾಂಛೆ ಅವಳಿಗರ್ಥ ವಾಯಿತು,

ಸುಸ್ತಾದವಳಂತೆ ಕೂತಳು ರಜನಿ. ಇನ್ನು ಕೆರಳಿಸಬೇಕಾದರೆ ಡಾಕ್ಟರಿಗೆ ಫೋನ್ ಮಾಡಬೇಕೆಂದು ಅವಳಿಗೆ ಗೊತ್ತು. ಅವಳಲ್ಲಿ ದ್ವಂದ್ವ. ವಿಕಾಸ್‌ಗೆ ತನ್ನಲ್ಲಿ ಸ್ವಲ್ಪವಾದರೂ ಪ್ರೀತಿ, ಪ್ರೇಮವಿಲ್ಲವೇ ? ಒಂದು ಸಲವಾಗರೂ ತನ್ನನ್ನು ನೋಡಲು ಬರಲಿಲ್ಲ.

"ಈಗ ಬಗ್ಗಿಸಿದರೇ ಸರಿ. ಇಲ್ದಿದ್ರೆ ಎಂದಿಗೂ ಬಗ್ಗೊಲ್ಲ!" ರಮಣಿ ಕಿವಿಯಲ್ಲಿ ಉಸುರಿ ಕಣ್ಣೊಡೆದಿದ್ದಳು. "ಸಿಂಪಲ್ ವಿಷ್ಯ ಹೆಣ್ಣಾದವ್ಳಿಗೆ ಇಷ್ಟು ಅರ್ಥವಾಗಿಲ್ಲಾಂದ್ರೆ........ ಹೇಗೆ ? ಮನಸ್ಸು ಗಟ್ಟಿ ಮಾಡ್ಕೊ." ಕಣ್ಣಲ್ಲಿ ನೋಟ ನೆಟ್ಟು ಭುಜ ತಟ್ಟಿದಳು.

ಬರಿ ಆಂದೋಲನ. ತಲೆಯ ಮೇಲೆ ಕೈಯೊತ್ತಿ ಕೂತಳು.

ಮತ್ತೆ ಮಾಮೂಲಾಗಿ ನಾಲ್ಕು ದಿನ ಕಳೆದರೂ ರಜನಿಯ ಸುಳಿವಿಲ್ಲ. ವಿಕಾಸ್‌ನ ಸಹನೆ ಪೂರ್ತಿ ಸತ್ತುಹೋಯಿತು. ಇದು ತನ್ನ ಸೋಲೆಂದು ಒಪ್ಪಿ ಕೊಳ್ಳಲು ಅವನು ಸಿದ್ಧವಿರಲಿಲ್ಲ

ಹಿಂದಿರುಗಿದ ದಿನ ವಿಶ್ವನಾಥಯ್ಯ ನಿರಾಸೆಯಿಂದ ಕೈ ಚೆಲ್ಲಿದರು. "ಅವ್ರು ಅಡ್ವಾನ್ಸ್ ಬಿಸಾಕುವಷ್ಟು ಹಗುರವಾಗಿ ಮಗಳು, ಅಳಿಯನ ಮಧ್ಯದ ಸಂಬಂಧ ಕಡಿದೊಗೆಯುವ ಮಾತಾಡ್ತಾರೆ. ನಾವು ಯಾವ್ದೆ

ಪ್ರಯತ್ನ ಮಾಡೋದ್ರಿಂದ ಪ್ರಯೋಜನವಿಲ್ಲ" ಪೂರ್ತಿ ಅವನಿಗೆ ಬಿಟ್ಟಿದ್ದರು.

ಯೋಚಿಸಿ ಯೋಚಿಸಿ ಅವನ ತಲೆ ಕೆಟ್ಟಿತೇ ವಿನಃ ಪ್ರಯೋಜನವಾಗ ಲಿಲ್ಲ. ರಜನಿಯ ಬಗ್ಗೆಯೂ ಅವನ ಮುಗ ತೂಗುಯ್ಯಾಲೆ. ಡಿಗ್ರಿ ಪಡೆದ ಯುವತಿಯನ್ನು ಅವಳ ಇಚ್ಛೆಗೆ ವಿರುದ್ಧವಾಗಿ ಕಟ್ಟಿಹಾಕಲು ಸಾಧ್ಯವೇ ? ಒಂದು ತೀರ್ಮಾನಕ್ಕೆ ಬಂದ.

ಸ್ನಾನ ಮುಗಿಸಿ ಉಡುಪು ತೊಟ್ಟು ಅಡಿಗೆಯ ಮನೆ ಬಾಗಿಲಿಗೆ ಬಂದ ಚಪಾತಿ ಹಿಟ್ಟು ಕಲೆಸುತ್ತಿದ್ದ ಸುನಂದಮ್ಮ ತಲೆಯೆತ್ತಿದರು "ಹೋಗಿ ರಜನಿನ ಕರ್ಕೊಂಡ್ಬರ್ತೀನಿ" ಆಕೆಯ ಕಣ್ಣುಗಳಲ್ಲಿ ಆತಂಕ ಇಣುಕಿತು.

"ನಂಗ್ಯಾಕೋ ಭಯ ಕಣೋ! ಸದಾ ಹಿಂದು ಮುಂದುನೇ ಓಡಾಡಿ ಕೊಂಡಿದ್ದ ಹುಡ್ಗೀ ಪೂರ್ತಿ ಮರೆತವಳಂತೆ ಇದ್ದಾಳೆ. ನಮ್ಮನ್ನ ನೋಡಿ ದೋಳು ಭೂತ ದರ್ಶನವಾದಂತೆ ಓಡಿಹೋದ್ಳು. ಅವ್ಳ ಇಚ್ಛೆಗೆ ವಿರುದ್ಧವಾಗಿ ಅವರುಗಳು ಹಾರಾಡೋಕೆ ಸಾಧ್ಯವೇ ? ವಿಕಾಸ್ ಅನುಮಾನವನ್ನು ಸ್ಪಷ್ಟ ವಾಗಿ ಗುರ್ತಿಸಿದ, ತಳ್ಳಿ ಹಾಕಲಿಲ್ಲ.

ವಿಕಾಸ್‌ನ ತುಟಿಯಂಚಿನಲ್ಲಿ ಕಿರುನಗೆ ಹಾದುಹೋಯಿತು. ಶಂಕ ಚಮ್ಮನ ತುಂಬು ನಂಬಿಗೆಯ ದಾಷ್ಟೀಕದ ಮಾತುಗಳು ಇನ್ನೂ ಅವನ ನೆನಪಿ ನಲ್ಲಿತ್ತು. ಇನ್ನೊಂದು ಮಾತಾಡದೇ ಹೊರಗೆ ಬಂದ.

ವಿಕಾಸ್ ಗಟ್ಟಿ ನಿರ್ಧಾರಕ್ಕೆ ಬಂದಿದ್ದ 'ರಜನಿ ಇನ್ನೆಂದೂ ಆ ಮನೆಯ ಹೊಸಲು ತುಳಿಯಲು ಬಿಡಬಾರದು'.

ಮಾವನ ಮನೆಗೆ ಹೊರಟಿದ್ದು ಶತ್ರುಗಳ ಗುಹೆಯ ಕಲ್ಪನೆಯನಿಸಿತು ಅವನಿಗೆ. ಅರಿವಿಲ್ಲದೆ ಅವಳನ್ನು ಮದುವೆಯಾಗಿದ್ದು ಮೊದಲ ತಪ್ಪು. ಈಗ ಮತ್ತೊಂದು ತಪ್ಪಾಗಿ ಅವನ ಜೀವನದಲ್ಲಿ ಕಪ್ಪು ಚುಕ್ಕೆ ಉಳಿಯುವುದು ಅವನಿಗೆ ಬೇಕಿರಲಿಲ್ಲ.

ಇವನು ಗುರುಮೂರ್ತಿಗಳ ಮನೆಯೊಳಗೆ ಕಾಲಿಟ್ಟಾಗ ಕೆಲವರಿಗಿನ್ನೂ ಸುಪ್ರಭಾತವಾಗಿರಲಿಲ್ಲ. ಅದರಲ್ಲಿ ರಜನಿಯೂ ಕೂಡ ಒಬ್ಬಳು. ಇದೇನೂ ಅವನಿಗೆ ಹೊಸದಲ್ಲ. ಸುಂದರವಾದ ಉದ್ಯಾನದ ನಡುವೆ ಬೆಳೆಸಿದ ಗಿಡಕ್ಕೆ ಗೊಬ್ಬರ, ನೀರು ಹಾಕಿದರೆ ಸಾಲದು. ಅತ್ತಿತ್ತ ಯದ್ವಾತದ್ವಾ ಹರಡಿ ಕೊಳ್ಳುವ ಕೊಂಬೆಗಳನ್ನು ಕತ್ತರಿಸಿ ಅದಕ್ಕೊಂದು ರೂಪು ಕೊಟ್ಟರೇನೇ

ನೋಡುವವರನ್ನು ಆಕರ್ಷಿಸೋದು. ಇಲ್ಲದಿದ್ದರೆ ಪ್ರಯೋಜನವಿಲ್ಲ. ಮಾನವನ ಬದುಕೂ ಕೂಡ ಹಾಗೇ.

ಸ್ವಲ್ಪ ಸ್ವತಂತ್ರವಹಿಸಿ ರಜನಿಯ ಕೋಣೆಯ ಬಾಗಿಲನ್ನು ತಳ್ಳಿಕೊಂಡು ಒಳನಡೆದ. ತಟ್ಟನೇ ಗಾಬರಿಯಾದ. ಹೊಳಪು ಜೊಂಪು ಕೂದಲು ಹೊಸ ಸ್ಟೈಯಲ್‌ನಲ್ಲಿ ಗುಂಗುರು ಕೂದಲಾಗಿ ಮಾರ್ಪಟ್ಟಿತ್ತು.

ದೀರ್ಘವಾಗಿ ಉಸಿರೆಳೆದು ದಬ್ಬಿದ. ಅವನಲ್ಲಿ ಕುಸಿತ. "ರಜನಿ .." ತೋಳಿಡಿದು ಅಲುಗಾಡಿಸಿದ. ತಟ್ಟನೆ ಎದ್ದು ಕೂತಳು. ಕಣ್ಣಲ್ಲಿ ಕಣ್ಣಿಟ್ಟು ನೋಡಿದ. ಬಿಸಿಲಿಗೆ ಸೋಂಕಿದ ಮಂಜಿನಂತೆ ಕರಗಿಹೋದಳು. ಬಾಯಿಗೆ ಕೈ ಅಡ್ಡ ಹಿಡಿದು ಬಿಕ್ಕಿದಳು. ಚಿಕ್ಕ ಹುಡುಗಿಯಂತೆ ಕಂಡಳು. ತನ್ನ ನಿರ್ಧಾರ, ಆಯ್ಕೆಗಳನ್ನು ಸಮರ್ಥಿಸಿಕೊಳ್ಳಲಾರದಷ್ಟು ಪುಟ್ಟವಳೆನಿಸಿತು.

"ನನ್ಮೇಲೆ ನಿಮ್ಗೆ ಪ್ರೀತಿ ಇಲ್ಲ !" ದೂರಿದಳು ಅದಕ್ಕೆ ಪ್ರತಿಕ್ರಿಯಿಸುವ ಸ್ಥಿತಿಯಲ್ಲಿರಲಿಲ್ಲ "ಅದ್ನ ಆಮೇಲೆ ತೀರ್ಮಾನಿಸೋಣ. ಒಂದಿಷ್ಟು ಮುಖ ತೊಳ್ದು ಬಟ್ಟೆ ಬದಲಾಯಿಸು. ಈಗ್ಲೇ ಬಹಳ ತಡ ಮಾಡ್ದೇ. ಮುಂದೆ ಅಂಥ ತಪ್ಪು ಆಗೋದ್ಬೇಡ" ಕೆನ್ನೆ ತಟ್ಟಿದ.

ಪುಟಿದ ಚೆಂಡಿನಂತೆ ಅವನೆದೆಗೆ ಒರಗಿದಾಗ ಮನದಲ್ಲಿ ಮೂಡಿದ ಪ್ರಶ್ನೆ ಹೊರಬರಲಿಲ್ಲ. "ಬೇಗ ..." ಕಣ್ಣಲ್ಲೇ ಮುದ್ದಿಸಿದ

ಅವಳು ಹೊರ ನಡೆದಾಗ ಸೋತವನಂತೆ ಕೂತ. ರಜನಿ ತೀರಾ ಮುಗ್ಧೆ ಎನ್ನುವುದು ಅವನು ಒಪ್ಪದಿದ್ದರೂ ಅವಳಲ್ಲಿ ಆಳವಾದ ಭಾವನೆಗಳು, ಆಲೋಚನೆಗಳು ಇಲ್ಲವೆನಿಸಿತು. ಅದಕ್ಕೆ ಯಾರೇ ಕಾರಣವಾಗಿದ್ದರೂ ತನ್ನ ದುರಾದೃಷ್ಟವೆನಿಸಿತು. ಈಗ ತಾಯಿ, ತಂದೆಯ ಬಗ್ಗೆ ಯೋಚಿಸಿದ ಹೆಚ್ಚು ನೋಯುವವರು ಅವರೇ.

ಪ್ರಕಾಶ್ ಒಳಗೆ ಬಂದ. "ಓ .. ವಿಕಾಸ್....ಅಪರೂಪದ ದರ್ಶನ" ಬಾಯಿ ಅಗಲಿಸಿ ಹುಬ್ಬುಗಳನ್ನು ಕುಣಿಸಿದ. ಮಾತುಗಳ ಜೊತೆ ಇಂಥ ವಕ್ರಗಳನ್ನೂ ಅಭ್ಯಾಸ ಮಾಡಿಕೊಂಡಿದ್ದ. ವಿಕಾಸ್ ಅಲಕ್ಷ್ಯದಿಂದ ಓದಿ ಎಸೆದ ಮ್ಯಾಗಜೀನ್ ಕೈಗೆತ್ತಿಕೊಂಡ. "ನಮ್ಮಂಥ ನಾರ್ಮಲ್ ಜನ ಅಪರೂಪವಾಗೋಕೆ ಸಾಧ್ಯವೇ ಇಲ್ಲ. ಒಂದೇ ಕೆಲ್ಸ, ಒಂದೇ ನೀತಿ, ಆಸೆ

ಗಳಿಗೂ ಚೌಕಟ್ಟು !" ಅವನು ಅರ್ಥಪೂರ್ಣವಾಗಿ ಹೇಳಿದರೂ ಪ್ರಕಾಶ್‌ಗೆ ಒಗಟಿನಂತೆ ಕಂಡಿತು, ಲೈಟರ್ ಬೆಳಗಿಸಿ ಸಿಗರೇಟು ಹಚ್ಚಿದ

"ಐ ನೋ....ಯೂ ಆರ್ ಕ್ಲೆವರ್. ಅದ್ನ ಸರಿಯಾಗಿ ಉಪಯೋಗ್ಸಿ ಕೊಂಡ್ರೆ .. " ಹುಬ್ಬು ಕುಣಿಸಿ ಸ್ವಲ್ಪ ಬಗ್ಗಿದ. "ಸುಮ್ನೇ ಡ್ಯಾಡ್ ಹೇಳ್ದಂಗೆ ಕೇಳಿ. ನಿಮ್ಮ ಬುದ್ಧಿಗೆ ಸರ್ಯಾದ ರೀತಿಯಲ್ಲಿ ಸಾಣೆ ಹಿಡೀತಾರೆ. ಆಗ ಹೇಗೆ ಫಳಫಳ ಅಂತ ಹೊಳೆಯುತ್ತೆ. ಜುಜುಬಿ ಕೆಲ್ಸದಿಂದ ನೀವೆಂದೂ ಉದ್ಧಾರವಾಗೋಲ್ಲ. ನಿಮ್ಮ ಕ್ವಾಲಿಫಿಕೇಷನ್‌ಗೆ ಸರ್ಯಾದ ಕೆಲ್ಸವಲ್ಲ, ನೀವು ಮಾಡ್ತಾ ಇರೋದು" ಸಾಮಾನ್ಯ ಜ್ಞಾನ ಕೂಡ ಇಲ್ಲದಂತೆ ಮಾತಾಡಿದ.

ಪ್ರಕಾಶ್ ಆಡಿದ ತಿರಸ್ಕಾರದ ಮಾತುಗಳಿಂದ ಅವನ ಮೈಮೇಲೆ ಮುಳ್ಳುಗಳು ಎದ್ದರೂ ತಣ್ಣಗೆ ಕೂತಿದ್ದ. ವಿಚಾರಹೀನ, ಅಯೋಗ್ಯ ವ್ಯಕ್ತಿಗಳ ಮಾತುಗಳಿಗೆ ಬೆಲೆ ಕೊಡುವುದು ಬೇಡವೆನಿಸಿತು. ಪತ್ರಿಕೆಯಲ್ಲಿ ಮಗ್ನನಾದ.

"ವಿಕಾಸ್......." ರಜನಿಯ ಸ್ವರ. ತಲೆಯೆತ್ತಿ ಮುಗುಳ್ನಕ್ಕ. "ಹೋಗೋಣ್ವಾ ?" ಮೇಲೆದ್ದ. "ಬರ್ತೀವಿ ಪ್ರಕಾಶ್" ಅವನ ಕೊರಡಾಗಿದ್ದ ಕೈ ಕುಲುಕಿ ಹೊರಗೆ ಬಂದ.

ಅವಮಾನದಿಂದ ಕುದಿದ ಪ್ರಕಾಶ್. ರಜನಿ ಅವನಿಗೆ ಏನೇನು ಅರ್ಥವಾಗಿರಲಿಲ್ಲ. ಹಿಂದೆ ಅರ್ಥಮಾಡಿಕೊಳ್ಳುವಂಥ ಸಂದರ್ಭಗಳು ಬಂದಿರಲಿಲ್ಲ. ಎಷ್ಟೋ ದಿನ ಒಬ್ಬರಿಗೊಬ್ಬರು ಮಾತ್ ಆಗುತ್ತಿರಲಿಲ್ಲ. ಒಂದೇ ಮನೆಯಲ್ಲಿದ್ದರೂ ಅಂಥ ಅನುಬಂಧವೇನು ಬೆಳದಿರಲಿಲ್ಲ. ಇಲ್ಲಿ ರಕ್ತದ ನೆಂಟಿಗೂ ಪ್ರಾಧಾನ್ಯತೆ ಸಿಕ್ಕಿರಲಿಲ್ಲ.

ಮುಷ್ಟಿ ಹಿಡಿದ ಪ್ರಕಾಶ್ ಟೀಪಾಯ ಮೇಲೆ ಗುದ್ದಿ ಕೈ ನೋಯಿಸಿ ಕೊಂಡ. "ಬ್ಲಡಿ ಬಾಸ್ಟರ್ಡ್....ಇವ್ನ ಸೊಕ್ಕು ಇಳಿಸ್ಲೇಬೇಕು" ಪ್ರತಿಜ್ಞೆ ಮಾಡಿದ.

ವಿಕಾಸ್‌ನೊಂದಿಗೆ ಹೊರಡಲು ಸಿದ್ಧವಾದ ರಜನಿ ಅರೆ ಮಂಪರಿನಲ್ಲೇ ಇದ್ದ ಪಂಕಜಮ್ಮನಿಗೆ ಉಸುರಿದಾಗ ರೇಗಿದರು. ಅವರಿನ್ನು ಸೆಡೆಟಿವ್ ಮತ್ತಿನಲ್ಲೇ ಇದ್ದರು.

"ಈಗೇನು ಅರ್ಜೆಂಟ್ ! ಬಂದಿರೋ ವಿಕಾಸ್‌ನ ಕಳಿಸ್ಬೇಡ. ಇಲ್ಲೇ

ಇರಿಸ್ಕೋ ಮಾತಾಡೋಣ” ಪಕ್ಕಕ್ಕೆ ಹೊರಳಿದರು. ಗುರುಮೂರ್ತಿಗಳು ಕೇಳಿದರೂ ಕೇಳದಂತಿದ್ದರು. ರಜನಿಯ ಬಗ್ಗೆ ಅವರಿಗೆ ಯಾವುದೇ ಭರವಸೆ ಇಲ್ಲ.

ಆಟೋ ಹತ್ತಿ ಮನೆ ತಲುಪುವವರೆಗೂ ವಿಕಾಸ್ ಮಾತಾಡಲಿಲ್ಲ. ಕೋಪ, ಅಸಹನೆಯಿಂದ ಕುದಿಯುತ್ತಿದ್ದರೂ ಒಗಟಾಗಿ ಕಾಣುವ ಹೆಣ್ಣನ್ನು ನೋಯಿಸುವ ಇಚ್ಛೆ ಅವನಿಗಿಲ್ಲ.

ಗೇಟು ತೆರೆದರೂ ಒಳಗೆ ಹೋಗದೇ ನಿಂತಳು ರಜನಿ “ನನ್ನ ಕೂದಲು ನೋಡಿ ಅತ್ತೆ ಬೇಜಾರು ಮಾಡ್ಕೋತಾರೆ” ಪಕ್ಕಕ್ಕೆ ತಿರುಗಿಸಿ ಮೆಲ್ಲಗೆ ಉಸುರಿದ. “ಬೇಜಾರಾಗಿದ್ರೂ ನಿಮ್ಮಂದೆ ತೋರ್ಸ್ಕೊಳ್ಳೋಲ್ಲ” ಭರವಸೆ ಇತ್ತು. ಅವಳ ಕಿವಿಯಲ್ಲಿ ಪಂಕಜಮ್ಮನ ಮಾತುಗಳು ಗುಯ್‌ಗುಟ್ಟಿತು. ‘ಅವ್ನಿಗೆ ಸ್ವಂತ ತಾಯಿ ಮೇಲಿರೋ ಅಭಿಮಾನ, ಪ್ರೀತಿ, ಗೌರವದಲ್ಲಿ ಹತ್ತು ಪಾಲಾದ್ರೂ ಅತ್ತೆ ಅನ್ನಿಸ್ಕೊಂಡ ನನ್ಮೇಲೆ ಇರ್ಬಾರ್ದಾ ರಜನಿಯ ಮುಖದ ಗೆಲುವು ತಗ್ಗಿತು.

“ನಮ್ಮಮ್ಮನ ಕಂಡ್ರೆ ನಿಮ್ಗೇ ಆಗೋಲ್ಲ!” ಗೇಟಿನಲ್ಲೇ ಪಂಚಾಯಿತಿ ಷುರು ಮಾಡಿದರೂ ಅದರ ಹಿಂದಿನ ದುಗುಡ ಗುರ್ತಿಸಿದ “ಅದ್ರಿಂದ ನಿಂಗೇನು *ತೊಂದರೆ ಇಲ್ಲ. ಹೆಣ್ಣು ಕೊಟ್ಟ ಅತ್ತೆಯೆಂಬ ಗೌರವ ಇದ್ದೇ ಇದೆ. ಅದ್ನ* ಅವರೇನು ಸಂಪಾದಿಸಬೇಕಿಲ್ಲ”.

ಅಷ್ಟರಲ್ಲಿ ಬಾಗಿಲಿಗೆ ಬಂದ ವಿಶ್ವನಾಥಯ್ಯ ಬಲವಂತದ ಮುಗುಳ್ನಗು ಬೀರಿದರು. ತಮ್ಮ ಮನೆಯ ಅಶಾಂತಿಗೆ ಕಾರಣಳಾದ ಹೆಣ್ಣಿನ ಬಗ್ಗೆ ಅಭಿಮಾನ ಹೇಗೆ ಮೂಡಿತು ?”

“ಬಾಮ್ಮ .. ... ” ಸ್ವರ ತೊಡರಿದರೂ ಮನಃಪೂರ್ವಕ ಆಹ್ವಾನವಿತ್ತು. ವಿಮುಖತೆ ಮಗನ ಬದುಕಿನಲ್ಲಿ ನುಸುಳುವುದು ಬೇಡವಾಗಿತ್ತು.

ಕೋಣೆ ಸೇರಿದ ರಜನಿ ಹೊರಗೆ ಬರಲೇ ಇಲ್ಲ. ಆದರೆ ಸುನಂದಮ್ಮ ಮೊದಲಿನ ಪ್ರೀತಿ, ಅಕ್ಕರೆಯಿಂದ ಕಂಡರು. ದ್ವೇಷಿಸಲು ಏನಿಲ್ಲ. ತಮ್ಮ ಕಣ್ಣನ್ನ ತಾವು ತಿವಿದುಕೊಳ್ಳುವುದು ಮೂರ್ಖತನ

“ಯಾಕಮ್ಮ ಮಂಕಾಗಿದ್ದೀಯಾ ?” ಸೊಸೆಯ ಮುಂದೆ ಕೂತಾಗ “ಅಮ್ಮ, ರಜನಿಗೆ ತಿಂಡಿ ಕೊಡು. ನಂಗೆ ಅಷ್ಟೇ ಆಗಿದ್ರೆ ಬಡ್ಸು”

ಎದ್ದು ಹೊರಗೆ ಹೋದ ವಿಕಾಸ್. ಏನೇನೋ ಸಬೂಬುಗಳು ಕೊಟ್ಟು ಕೊಂಡರೂ ರಜನಿಯದು ತಪ್ಪೆ ಇಲ್ಲವೆನ್ನು ತರ್ಕಬದ್ಧವಾಗಿ ಕಾಣುತ್ತಿರಲಿಲ್ಲ. ಅವಳಿಗೂ ಇಂಥ ಬದುಕು ಇಷ್ಟವಿಲ್ಲ. ಮುಂದೇನು ?

"ಅತ್ತೆ ನನ್ನ ಕ್ಷಮಿಸ್ಬಿಡಿ. ನನ್ನ ಕೂದ್ಲು ಕತ್ತರಿಸಿದ್ದು ರಂಜಿತಾ. ನಂಗೆ ಇಷ್ಟವೇ ಇರ್ಲಿಲ್ಲ" ಸುನಂದಮ್ಮನಿಗೆ ತೆಕ್ಕೆ ಬಿದ್ದು ಅಳತೊಡಗಿದಳು. ಸುನಂದಮ್ಮನ ಮುಖ ಚಿಕ್ಕದಾಯಿತು. "ಹೋಗ್ಲಿ ಬಿಡಮ್ಮ. ನಿನ್ನ ಇಷ್ಟಕ್ಕೆ ವಿರುದ್ಧವಾಗಿ ನಿಬಂದಿಸೋರು ಯಾರಿದ್ದಾರೆ ? ಹೇಗೆ ಇಷ್ಟವೋ ಹಾಗೆ ಇದ್ಕೋ" ಎಂದವರೇ ಎದ್ದು ಹೋದರು.

ಇದೆಲ್ಲ ನಂಬಿಬಿಡುವಂಥ ಮುಗ್ಧೆಯೇ ಆಕೆ? ರಜನಿಯ ಇಷ್ಟದ ವಿರುದ್ಧ ಕೂದಲಿನ ಅವತಾರ ಬದಲಾಗಲು ಸಾಧ್ಯವೇ ?

ಆಕೆಗಂತೂ ಕೂದಲು ಕತ್ತರಿಸಿಕೊಂಡಿದ್ದು ಸಹಿಸಲಾರದ ವಿಷಯ. ವಾರಕ್ಕೊಮ್ಮೆ ಎಣ್ಣೆ ಹಚ್ಚಿ ಎರೆಯುವುದು ಮಾತ್ರವಲ್ಲ, ಮುಂದೆ ಕೂಡಿಸಿ ಕೊಂಡು ಸಿಕ್ಕು ಬಿಡಿಸಿ ಇರುವ ಕೂದಲಲ್ಲೇ ಬಗೆಬಗೆಯ ಗಂಟು ಹಾಕು ತ್ತಿದ್ದರು.

"ಯಾರೋ ಕಾರಣಾಂತ ಗೊಣಗೋಕೆ ಇವಳೇನು ಎಳೆ ಮಗೂನೇ?" ಗಂಡನ ಮುಂದೆ ಒದರಿಯೇಬಿಟ್ಟರು. ವಿಶ್ವನಾಥಯ್ಯ ಕಣ್ಣಲ್ಲಿಯೆ ಸುಮ್ಮ ನಾಗಿಸಿದರು "ಮಾತೇ ಬೇಡ. ಹೇಗಾದ್ರೂ ಇದ್ಕೊಳ್ಳಿ. ವಿಕಾಸ್ ಚೆನ್ನಾ ಗಿದ್ರೆ ಸಾಕು"

ಆದರೂ ಅವರಿಗೆ ಭಯ. ತಮ್ಮ ಮನದ ಹೋರಾಟ ಮೆಟ್ಟಿ ಸಮಾ ಧಾನ ಹೇಳಿದರು "ಸ್ವಲ್ಪ ತಡೀ. ರಜನಿ ಒಳ್ಳೆ ಹುಡ್ಗೀನೇ. ಆ ಜನ ಅವ್ಳ ತಲೆಯಲ್ಲಿ ಏನೇನೋ ತುಂಬ್ತಾರೆ. ಪುಟವಿಟ್ಟ ಹೊರತು ಒಳ್ಳೆ ಬಂಗಾರ ಸಿಗಲಾರ್ದು. ತಾನಾಗಿ ಸರಿ ಹೋಗೋವರ್ಗೂ ಕಾಯೋಣ" ಆಸೆ ತುಂಬಿ ಕೊಂಡರು. ಆದರೆ ಸಂಜೆ ನಡೆದುಹೋದ ಪ್ರಕರಣಕ್ಕೆ ಚಾಲನೆ ಸಿಗಬಹು ದೆಂದುಕೊಂಡಿರಲಿಲ್ಲ.

ಸಂಜೆ ಆರರ ಸಮಯ. ಇಂದು ಸ್ವಲ್ಪ ನಿರಾಳವಾಗಿದ್ದ ವಿಕಾಸ್. ಶುಭ್ರ ಆಕಾಶದಲ್ಲಿ ಕಪ್ಪು ಮೋಡಗಳು ಇಣುಕಬಹುದೆಂಬ ಕಲ್ಪನೆ ಕೂಡ ಅವ ನಿಗಿರಲಿಲ್ಲ.

ಪಂಕಜಮ್ಮ ತಮ್ಮ ನಾಲ್ಕು ಜನ ಸ್ನೇಹಿತೆಯರೊಂದಿಗೆ ಬಂದರು. ಅದೇ ವಯಸ್ಸು, ವಿಚಾರಧಾರೆಗಳಲ್ಲೂ ಸಾಮ್ಯತೆ ಇರಬಹುದು.

ಬಂದ ಕೂಡಲೇ ಬಡಬಡಿಸತೊಡಗಿದರು. ಸತಿಯಾದ ರೂಪಾ ಕನ್ವರ್, ಕೊಲೆಗೀಡಾಗಿ ಸತಿಯ ಪಟ್ಟ ಕಟ್ಟಿಸಿಕೊಂಡ ಶಕುಂತಲಾ, ಗಂಡನ ದೌರ್ಜನ್ಯಕ್ಕೆ ಗುರಿಯಾದ ತಿಪಟೂರಿನ ಶಶಿಕಲಾ ಅವರುಗಳೆಲ್ಲಾ ಆಕೆಯ ಕೂಗಾಟದ ನಡುವೆ ಬಂದು ಹೋದರು. ಅಂಥ ಹೆಣ್ಣುಗಳ ಬಗ್ಗೆ ಆಕೆಗೆ ಕಳಕಳಿ ಇದೆಯೇ ? ಇಲ್ಲವೆನ್ನುತ್ತಿದ್ದ ವಿಕಾಸ್. ಅದನ್ನು ಆಕೆಯು ಅಂತ ರಾತ್ರಿ ಅಲ್ಲಗಳೆಯುತ್ತಿರಲಿಲ್ಲ.

ತಣ್ಣಗೆ ಕೇಳಿಸಿಕೊಳ್ಳುತ್ತ ಕೂತ. ಇನ್ನಷ್ಟು ಕೆರಳಿದರು ಆಕೆ. "ರಜನೀನ ಯಾಕೆ ಕರ್ಕೊಂಡ್ಬಂದ್ರಿ ?" ಕೋಪವನ್ನು ನುಂಗಿದ ವಿಕಾಸ್ "ನೀವು ಎಲ್ಲಿದ್ದೀರಾ ? ಗುರುಮೂರ್ತಿಗಳು ಯಾರು ?" ಪ್ರಶ್ನಿಸಿದ. ಆಕೆಯ ಗಂಟಲು ಆರಿತು. "ಗುರುಮೂರ್ತಿಗಳು ನನ್ನಂಡ. ಅಲ್ಲೇ ಇದ್ದೀನಿ" ಕೋಪಾವೇಶದಿಂದ ನುಡಿದರು.

"ಈಗ ರಜನಿನೂ ಅಷ್ಟೆ. ಅವ್ಳು ಗಂಡನ ಮನೆಯಲ್ಲಿ ಇದ್ದಾಳೆ. ಮದ್ವೆ ಮಾಡಿ ಕೊಟ್ಮೇಲೆ ಮತ್ತೆ ಮತ್ತೆ ನಿಮ್ಮ ಪರ್ಮಿಷನ್ ಅಗತ್ಯವಾಗೋಲ್ಲ. ತಾವಿನ್ನ ಹೋಗ್ಬಹುದು" ಮುಖ ಬಿಗಿದು ಹೇಳಿದ. ಆ ಹೆಣ್ಣು ಬಗ್ಗಿಯಾಳೇ?

"ನಾನು ಎಲ್ಲಾ ತಾಯಂದಿರಂತೆ ಕೈ ಕಟ್ಟಿ ಕೂಡೋ ಹೆಣ್ಣಲ್ಲ. ನನ್ಮಗ್ಳಿಗೆ ಅನ್ಯಾಯ ಆಗಿದೆ. ನಾನು ಇದ್ನ ಪ್ರತಿಭಟಿಸ್ತೀನಿ."

ಇಷ್ಟೊತ್ತಿಗೆ ವಿಶ್ವನಾಥಯ್ಯ, ಸುನಂದಮ್ಮ ಬೆಳ್ಳಗಾಗಿದ್ದರು. ಗೌರವ ಯುತವಾದ ಸಂಬಂಧಗಳು ಬೀದಿಗೆ ಬಂದು ನಗೆಪಾಟಲಾಗಬೇಕೇ ? ಅವರ ಚಿಂತನೆ ಅತ್ತ ಸಾಗುತ್ತಿತ್ತು.

ಎಷ್ಟೋ ರೀತಿಯಲ್ಲಿ ಆಕೆಗೆ ತಿಳಿಸಿ ಹೇಳಲು ಪ್ರಯತ್ನಿಸಿದ. ಉದ್ದೇಶ ವೇನಾದರೂ ಇರಲಿ ಅವಮಾನ ಮಾಡಬೇಕೆಂದೇ ಬಂದ ಹಾಗಿತ್ತು. ವಿಕಾಸ್‌ನ ತಾಳ್ಮೆ ಕುಸಿದು, ವಿವೇಕ ಸತ್ತಿತು.

"ಐ ಸೇ ಯೂ ಗೆಟ್ ಔಟ್ ! ಇನ್ನೊಂದು ಕ್ಷಣ ನಿಂತರೂ ಕುತ್ತಿಗೆ ಹಿಡ್ದು ಹೊರ್ಗೆ ತಳ್ಳಿಬಿಡ್ತೀನಿ. ಗೆಟ್‌ಔಟ್" ಬಾಗಿಲತ್ತ ಬೆರಳು ತೋರಿದ.

ಅವನ ಮೂಗು, ಮುಖ ಕೆಂಪಗಾಗಿ ತುಟಿಗಳು ನಡುಗುತ್ತಿದ್ದವು. ಇಂಥ ಕೆಟ್ಟ ಕೋಪ ಹಿಂದೆ ಎಂದಾದರೂ ಬಂದಿದ್ದು ಅವನಿಗೆ ನೆನಪಿರಲಿಲ್ಲ.

ತಟ್ಟನೆ ಬಂದ ರಜನಿ ಮುಖ ಮೇಲೆತ್ತಿ ಪ್ರತಿಭಟಿಸುವ ರೀತಿಯಲ್ಲಿ ನಿಂತಳು. ಇದಕ್ಕೆ ಮೊದಲೇ ಅವಳನ್ನು ಸಂತೈಯಿಸುವಂತೆ ಕೇಳಿದ್ದ. ಅವಳು ಮುಖ ತಿರುಗಿಸಿಕೊಂಡಿದ್ದಳು.

"ನಾನು ನಿಮ್ಮನ್ನು ಕ್ಷಮಿಸೋಲ್ಲ !" ತಿರಸ್ಕಾರ, ಜಿಗುಪ್ಸೆ ತುಂಬಿಕೊಂಡು ಹೇಳಿದಾಗ ಕನಲಿದ. "ಅಂಥ ಅಗತ್ಯ ನಂಗಿಲ್ಲ. ನೀನು ಒಳಗಡೆ ಹೋಗು" ಸಹನೆಯಿಂದಲೇ ಹೇಳಿದ.

"ನಾನು ಹೋಗೋಲ್ಲ !" ಸೆಟೆದು ನಿಂತಾಗ ಕೆನ್ನೆಗೆ ಬಾರಿಸಿದ. ಅವನ ಅರಿವಿಗೆ ಮುನ್ನ ಪಂಕಜಮ್ಮ ದೊಡ್ಡ ದನಿಯಲ್ಲಿ ರೋಧಿಸತೊಡಗಿದರು. 'ಮಹಿಳಾ ಜಾಗೃತಿ ಹೋರಾಟವೇ' ತನ್ನ ಮುಖ್ಯ ಸಮಾಜ ಸೇವೆಯೆಂದು ಹೇಳಿಕೊಳ್ಳುವ ಆಕೆ ತೀರಾ ಸಾಮಾನ್ಯ ಅವಿದ್ಯಾವಂತೆಯಂತೆ ವರ್ತಿಸಿದ್ದಳು.

ಎರಡು ನಿಮಿಷದಲ್ಲಿ ಏನೇನೋ ನಡೆದು ಹೋಯಿತು. ಇದು ವಿವೇಕದ ಲಕ್ಷಣವಲ್ಲ.

ಬಾಗಿಲವರೆಗೂ ಹೋಗಿದ್ದ ರಜನಿಯನ್ನು ಹಿಂದಕ್ಕೆ ಕರೆದ ವಿಕಾಸ್ ನೊಂದ ದನಿಯಲ್ಲಿ,

"ನೀನು ಹೋಗ್ಬೇಡ ರಜನಿ. ಕೋಪದಲ್ಲಿ ಏನೇನೋ ನಡ್ದುಹೋಯ್ತು. ಅಗತ್ಯವೆನಿಸಿದ್ರೆ ನಾನು ಅವರನ್ನು ಕ್ಷಮಾಪಣೆ ಕೇಳ್ತೀನಿ."

ನಿಂತು ಹಿಂದಿರುಗಿದ ರಜನಿಯ ಕಣ್ಣುಗಳಲ್ಲಿದಿದ್ದೇನೋ, ವಿಕಾಸ್‌ಗೆ ಸ್ಪಷ್ಟವಾಗಲಿಲ್ಲ. ಮುಖ ತಿರುಗಿಸಿಕೊಂಡು ಹೋಗಿಬಿಟ್ಟಳು.

ಆದರೆ ಮರುದಿನ ಅವನು ಕಾಲೇಜಿಗೆ ಹೊರಡುವ ವೇಳೆಗೆ 'ಮಹಿಳಾ ವಿಮೋಚನ' ದಳದವರಿಂದ ಕಪ್ಪು ಬಾವುಟ ಪ್ರದರ್ಶನ, ಘೋಷಣೆ. ಸುನಂದಮ್ಮ ಅಡಗಿ ಕೂತರು.

ಬಾಗಿಲು ತೆರೆದು ಹೋದವನು ತಾನೇ ಗೇಟನ್ನು ದೂಡಿ ಆಹ್ವಾನಿಸಿದ. "ಕಮಿನ್. ಬನ್ನಿ. ಅನ್ಯಾಯ ನಡೆದಿದೆಯೊ ಇಲ್ಲವಾ ಎನ್ನುವುದನ್ನು ತಿಳಿಯದೇ ಪ್ರತಿಭಟನೆಗೆ ಇಳಿಯುವುದು ನಿಮ್ಮಂಥ ಪ್ರಬುದ್ಧ ಮಹಿಳೆಯರಿಗೆ ಸಲ್ಲದು" ಸ್ವಲ್ಪ ಬದಲಾದ. ಅಂತಹ ಅಗತ್ಯವೂ ಇತ್ತು. ಏಟಿಗೆ ಏಟು

ಕೊಟ್ಟ ಹೊರತು ಆ ವ್ಯಕ್ತಿಗಳು ಬಗ್ಗಲಾರರೆಂದು ಅವನಿಗೆ ಮನವರಿಕೆಯಾಗಿತ್ತು. ಅದಕ್ಕೆ ಸಿದ್ಧನಾದ. ನೇರ ದಾರಿಗಿಂತ ಕೆಲವೊಮ್ಮೆ ಬಳಸು ದಾರಿಗಳೇ ಉತ್ತಮ.

ಅವರಲ್ಲಿದ್ದ ಮಹಿಳಾ ವಿಮೋಚನಾ ರಂಗದ ಕಾರ್ಯದರ್ಶಿ ಊರ್ಮಿಳಾ ದೇವಿಯ ಮಗಳು ಅವನ ಸ್ಟೂಡೆಂಟ್. ಅವನನ್ನು ಸುಮಾರಾಗಿ ಬಲ್ಲ ಮಹಿಳೆ ಆಕೆ.

"ಕೂತ್ಕೊಳ್ಳಿ...." ಎಂದವನು ನಿಧಾನವಾಗಿ ಕಾರಣ ಕೇಳಿದ. "ನಿಮ್ಮ ಸಂಘಟನೆ, ತತ್ವಗಳ ಉದ್ದೇಶ ಒಳ್ಳೆದೇ. ಇಲ್ಲಿ ಯಾರಿಗೆ ಅನ್ಯಾಯವಾಗಿದೆ?" ಬಂದವರೆಲ್ಲ ಮುಖ ಮುಖ ನೋಡಿಕೊಂಡರು. ರಜನಿಯನ್ನು ಹೊಡೆದ ವಿಷಯ ಊರ್ಮಿಳಾದೇವಿಯೇ ತಿಳಿಸಿದರು.

ಅವನು ಇನ್ನಷ್ಟು ವಿಷಯ ತಿಳಿಸಿದ. "ಈಗ ನ್ಯಾಯವಾಗಿ ಅನ್ಯಾಯವಾಗಿರೋದು ನನ್ನ ತಾಯಿಗೆ. ಆಕೆಗೆ ನಿಮ್ಮ ಸಹಾನುಭೂತಿಯೇನು ?" ಎಲ್ಲರೂ ತಮ್ಮ ತಮ್ಮಲ್ಲೇ ಚರ್ಚಿಸಿಕೊಂಡರು. ಪಂಕಜಮ್ಮನ ಸಮಾಜ ಸೇವೆಯ ವಿಧಿ ವಿಧಾನಗಳು ಕೆಲವರಿಗಾದರೂ ಗೊತ್ತಿತ್ತು. ಬಂದ ಬಾಣವನ್ನು ಅವರಿಗೇ ಹಿಂದಿರುಗಿಸಿದ್ದ.

"ಸಾರಿ...." ಕೇಳಿದ ಅವರುಗಳು "ನೀವು ಮಾನಸಿಕವಾಗಿ ಎಷ್ಟು ನೊಂದಿದ್ದೀರೆಂತ ನಮ್ಗೆ ಅರ್ಥವಾಗಿದೆ. ಸ್ವಲ್ಪವಾದ್ರೂ ನ್ಯಾಯ ದೊರಕಿಸಿ ಕೊಡ್ತೀವಿ" ಎಂದವರು ಪಂಕಜಮ್ಮನ ಸದಸ್ಯತ್ವವನ್ನೇ ವಜಾ ಮಾಡಿದ್ದು ಮಾತ್ರವಲ್ಲ, ಆಕೆಯ ಕೆಲವು ಚಟುವಟಿಕೆಗಳನ್ನು ವಿರೋಧಿಸುವ ಪತ್ರ ಕಳಿಸಿದರು.

ಅದೊಂದು ಕಪ್ಪು ಚುಕ್ಕೆಯಾಗಿ ಅವನ ಮನದಲ್ಲಿ ನಿಂತರೂ ಬದಲಾದ. ಅವನಲ್ಲಿ ಹಟ ಮೂಡಿತು. ಶಾಂತವಾಗಿದ್ದ ತನ್ನ ಸಂಸಾರವನ್ನು ಹಾಳು ಮಾಡಿದ ಅವರ ಮೇಲೆ ಹಟ ತೊಟ್ಟ. 'ಛಲ' ಎನ್ನುವುದು ಮೂಡಲು ಪ್ರೇರಕರಾದರು.

೦ ೦ ೦ ೦

ರಜನಿ ಫೋನ್ ಎತ್ತಿಕೊಂಡಾಗ ಅಡ್ವೋಕೇಟ್ ಸೀತಾರಾಮ್ ಶುಭಾಶಯ ಕೋರಿದರು "ಕಂಗ್ರ್ಯಾಜುಲೇಷನ್, ವಿಕಾಸ್ ಡೈವೋರ್ಸ್ ಪೇಪರ್‌ಗೆ ಸಹಿ ಹಾಕಿಕೊಟ್ಟಿದ್ದಾನೆ. ಇನ್ನು ನಿಶ್ಚಿಂತೆ. ನಿನ್ನ ಮದ್ವೆಗೆ ಅವ್ನು ಅಡ್ಡಿ ಬರಲಾರ." ಅವಳ ಕೈಯಲ್ಲಿನ ರಿಸೀವರ್ ಜಾರಿತು.

ನಿಂತ ಜಾಗದಲ್ಲಿಯೇ ಕುಸಿದಳು. ನಂಬಲು ಅವಳಿಗೆ ಇನ್ನೂ ಕಷ್ಟ. ಕೆಟ್ಟ ಹಟ, ಸ್ವಾಭಿಮಾನವಿದ್ದರೂ ಅವನ ಮೇಲಿನ ಪ್ರೇಮವೇನೂ ಕಮ್ಮಿಯಾಗಿರಲಿಲ್ಲ. ಸಪ್ತ ಸಾಗರಗಳು ಒಮ್ಮೆಲೇ ಅಪ್ಪಳಿಸಿದಂತಾಯಿತು. 'ವಿಕಾಸ್....ವಿಕಾಸ್.....ನೀವು ಒಪ್ಪಬಾರದಿತ್ತು' ಎರಡು ಕಿವಿಗಳನ್ನು ಕೈಗಳಿಂದ ಮುಚ್ಚಿಕೊಂಡಳು. ಹಟವೆಲ್ಲ ಒಮ್ಮೆಲೆ ನಿರ್ನಾಮವಾಯಿತು.

ಹೆಚ್ಚು ಖುಷಿಪಟ್ಟವನು ಪ್ರಕಾಶ್ ಮಾತ್ರ. ಗೆದ್ದ ಅನುಭವದಲ್ಲಿ ಅವನು ಆಕಾಶಕ್ಕೆ ಹಾರಿದರೇ, ಸೋಲನ್ನು ಭರಿಸಲಾರದೆ ಕಂಪಿಸಿದಳು ರಜನಿ.

ಗುರುಮೂರ್ತಿಗಳು ಮಾತ್ರ ಬಹಳ ವಿವೇಕದಿಂದ ಯೋಚಿಸಿದರು. ಅವರದು ಇಂಥ ನಿರೀಕ್ಷಣೆಯಲ್ಲ. ಮಧ್ಯಮ ದರ್ಜೆಯ ಜನ ಸಮಾಜಕ್ಕೆ ತೀರಾ ಹೆದರುತ್ತಾರೆಂದು ಅವರಿಗೆ ಗೊತ್ತು. ಶರಣಾಗತಿಗೆ ಒತ್ತಾಯವೇರಿದರು. ವಿಕಾಸ್ ಕೈಯೆತ್ತಿ ನಿವಾರಿಸಿಕೊಂಡಿದ್ದ. ಅವರ ಬುದ್ಧಿಗೆ ಗೆದ್ದಲು ಹಿಡಿದಂತಾಗಿತ್ತು.

"ಮಮ್ಮಿ ದೊಡ್ಡ ತಪ್ಪು ನಡ್ದುಹೋಯ್ತು ! ನೀವೆಲ್ಲ ನನ್ನ ಕೊರಳಿಗೆ ನೇಣು ಹಾಕ್ಬಿಟ್ರಿ" ಪಂಕಜಮ್ಮನ ತೋಳಿಗೆ ಮುಖ ಹಚ್ಚಿ ಕಣ್ಣೀರು ಸುರಿಸಿದಳು. ಆಕೆಗೂ ಈ ವಿಷಯ ಕೇಳಿ ಸಂತೋಷವೇನೂ ಆಗಿರಲಿಲ್ಲ. ಆದರೂ ತೋರ್ಪಡಿಸಿಕೊಳ್ಳಲಿಲ್ಲ. "ನಿಂಗೆ ತಲೆ ನೆಟ್ಟಗಿಲ್ಲ. ನನ್ನೆದುರಿಗೆ ಕೈಯೆತ್ತಿ ಬಾರಿಸಿದನ್ನ ಜೊತೆ ಸಂಸಾರ ಮಾಡ್ತೀಯಾ ! ನಾಳೆ ಆ ಜನನೇ ಸೀಮೆಎಣ್ಣೆ ಹಾಕಿ ಸುಟ್ಟುಬಿಡ್ತಾರೆ" ಈ ಬೆದರಿಕೆಗಳೇನೂ ಅವಳನ್ನು ಮಾಡುವಂತಿರಲಿಲ್ಲ.

"ನೋ....ನೋ... ಅವರಾರೂ ಅಂಥವರಲ್ಲ !" ಎಂದಾಗ ಅವಳ ಮುಖವನ್ನ ಒರಟಾಗಿ ಪಕ್ಕಕ್ಕೆ ತಳ್ಳಿದರು. ಕೇಸ್ ಒಂದು ಹಂತದವರೆಗೇನಾದರೂ ಹೋಗಿದ್ದರೇ ನಿಶ್ಚಿಂತೆಯಿಂದ ಇವರತ್ತ ಕೈ ಬೆರಳು ತೋರಿಸಿಬಿಡುತ್ತಿದ್ದರೇನೋ ! ಆಕೆ ಭಯಪಟ್ಟರು. "ಸಿಲ್ಲಿ ಹಾಗೆ ಮಾತಾಡ್ಬೇಡ. ಅದು ಮುಗ್ದುಹೋದ ಕತೆ. ನೀನಾಗಿ ಹೋದ್ರೂ....ಬಾಗಿಲ ಬಳಿ ಸೇರಿಸೋಲ್ಲ.

ಅವ್ನು. ಮುಗ್ಧ ಘಟಗಳನ್ನು ಮೊಗಚೋದ್ರಿಂದ ಪ್ರಯೋಜನವಿಲ್ಲ. ನಮಗಾದ್ರೂ ಡೈವೋರ್ಸ್ ಇಷ್ಟವಿತ್ತಾ ? ತಾನಾಗಿ ಬಂದು ರಾಜಿ ಆಗ್ತಾನೆ ಅಂದ್ಕೊಂಡಿದ್ವಿ. ಅವನದು ಕೆಟ್ಟ ಹಟ. ಜಾತ್ಕ ಹಿಡಕೊಂಡು ಅವನಪ್ಪ, ಅಮ್ಮ ಓಡಾಡ್ಲಿ. ಅವ್ನ ಮದ್ವೆಗೆ ಮೊದ್ಲು ನಿನ್ನ ಕುತ್ತಿಗೆಗೆ ತಾಳಿ ಕಟ್ಟಿಸ್ತೀನಿ" ಮೇಲ್ಮುಖದ ಸವಾಲ್. ಒಳಗೆ ಮೊದಲಿನ ಸಾಹಸ ಪ್ರವೃತ್ತಿ ಇಲ್ಲ.

*ಮೀಟಿಂಗ್ ಕರೆದ ಮಹಿಳಾ ವಿಮೋಚನಾರಂಗದ ಕಾರ್ಯದರ್ಶಿ* ಊರ್ಮಿಳಾದೇವಿ. ಸಿಕ್ಕಾಪಟ್ಟೆ ಪ್ರಶ್ನೆಗಳನ್ನು ಕೇಳಿ ಆಕೆಯ ಮುಖದ ನೀರಿಳಿಸಿ ಕಳಿಸಿದ್ದರು. ಬಂದ ಒಂದಿಷ್ಟು ಕಾಲೇಜು ವಿದ್ಯಾರ್ಥಿನಿಯರು ವಿರುದವಾಗಿ ಘೋಷಣೆಗಳನ್ನು ಕೂಗಿದ್ದರು.

ಆ ಚೇತಂಕೆಯ ಮುನ್ನವೇ ಅನಾಥಾಶ್ರಮದ ಲೆಕ್ಕಪತ್ರಗಳ ತನಿಖೆಯಾಗಿ ಬದಲಿ ವ್ಯವಸ್ಥೆಯೊಂದಿಗೆ ಈಕೆಯ ಮೇಲೆ ಛಾರ್ಜ್‌ಷೀಟ್ ಹಾಕಿದ್ದರು. ಇದರ ಹಿಂದೆ ತೀರಾ ಸಾಧಾರಣವಾಗಿ ಸಾಮಾನ್ಯವಾಗಿ ಕಾಣುವ ವಿಕಾಸ್‌ನ ಕೈವಾಡವಿದೆಯೆಂದು ಆಕೆ ಊಹಿಸಲು ಕೂಡ ಸಾಧ್ಯವಿರಲಿಲ್ಲ.

ರಜನಿ ಕೋಣೆಯೊಳಗೆ ಬಂದು ಬಿದ್ದುಕೊಂಡಳು. 'ಡೈವೋರ್ಸ್, ಡೈವೋರ್ಸ್' ಆ ಮೂರು ಅಕ್ಷರದ ನಡುವೆ ನಮ್ಮ ಅನುಬಂಧ ಸತ್ತು ಹೋದೀತಾ ? ನೀರವತೆಯ ನಡುವೆ ಯೋಚಿಸತೊಡಗಿದಳು.

ಬಾಗಿಲು ತಟ್ಟಿದ ಆಳು ಇಣುಕಿ ಉಸುರಿದ "ಯಾರೋ ಬಂದಿದ್ದಾರೆ" ನಿರ್ಲಕ್ಷ್ಯದಿಂದ ಮುಖ ತಿರುಗಿಸಿದಳು "ನನ್ನ ಯಾರು ಹುಡ್ಕೀಕೊಂಡು ಬರೋಲ್ಲ. ಯಾರೀಂದ್ರೆ ಅವ್ರಿಗೆ........ ಹೇಳು" ಹೋದವನು ಮತ್ತೆ ಹಿಂದಿರುಗಿದ. "ನಿಮ್ಮನ್ನ ನೋಡೋಕೆ ಬಂದಿದ್ದಾರೆ" ಅಲ್ಲೇ ನಿಂತ. ಹೋಗುವಂತೆ ಸನ್ನೆ ಮಾಡಿದಳು.

ಬಲವಂತದಿಂದಲೇ ಎದ್ದು ಬಂದಳು. "ಈ ಸಾಮಾನು ಕಳ್ಸಿದ್ದಾರೆ" ಸ್ಟೂಡೆಂಟ್ ಅಂತ ಕಾಣುವ ಯುವಕ ಅವಳ ಮುಂದೆ ಎರಡು ಸ್ಲಿಪ್ ಹಿಡಿದ "ಒಂದ್ಸಲ ಸಾಮಾನು ಚೆಕ್ ಮಾಡ್ಕೊಂಡ್ ಸಹಿ ಹಾಕ್ಕೊಡಿ" ವಿಕಾಸ್‌ನದೇ ಅಕ್ಷರಗಳು, ಎರಡರಲ್ಲೂ ಸಾಮಾನುಗಳ ಲಿಸ್ಟ್ ಇತ್ತು. ಪಡೆದುಕೊಂಡಿದ್ದಕ್ಕೆ ಒಂದಕ್ಕೆ ಸಹಿಗಾಗಿ ಜಾಗ ಬಿಡಲಾಗಿತ್ತು ತೀರಾ ವ್ಯವಹಾರಿಕ ಮೌನವಾಗಿ

ಸಹಿ ಹಾಕಿ ಇನ್ನೊಂದು ಸ್ಲಿಪ್ ಹಿಂದಿರುಗಿಸಿದಳು. "ಥ್ಯಾಂಕ್ಯೂ ಮೇಡಮ್ ... ...." ಹೊರಟು ಹೋದ.

ಆಳು ಪ್ಯಾಕೆಟ್ ತಂದು ಅವಳ ಕೋಣೆಯಲ್ಲಿಟ್ಟ. ಬಿಡಿಸಿದಳು ಇವಳ ಬೆಲೆ ಬಾಳುವ ಒಡವೆಗಳಿಂದ ಹಿಡಿದು ಬ್ರಾ, ತಲೆ ಪಿನ್ನು, ಪರ್ಫ್ಯೂಮ್ ವರೆಗೂ ಎಲ್ಲಾ ಇತ್ತು. ಜೋಡಿ ಫ್ರೇಂನಲ್ಲಿದ್ದ ಅವಳ ಭಾವಚಿತ್ರವನ್ನು ಕೂಡ ಹಿಂದಿರುಗಿಸಿದ್ದ. ಶ್ರಮವಿಲ್ಲದೆ ಕಡಿದುಹೋಗಿತ್ತು ಸಂಬಂಧ.

ಸ್ಲಿಪ್‌ನ ಕೈಯಲ್ಲಿಡಿದು ಅಕ್ಷರಗಳನ್ನು ಮೃದುವಾಗಿ ಸವರಿದಳು. ಮನಸ್ಸಿಗೆ ಹಿತವೆನಿಸಿತು. ವಿಕಾಸ್‌ನ ಗಂಭೀರವಾದ ಮುಖ ಕಣ್ಮುಂದೆ ತೇಲಿತು. ಹಿಂದಿನ ಹಾಗೆ ಕಣ್ಣುಗಳಲ್ಲಿ ತುಂಟತನವಿರಲಿಲ್ಲ. ಅದಕ್ಕೆ ಬದಲಾಗಿ ಕೋಪ, ನಿರಾಸಕ್ತಿ. ಗುಂಗಿನಲ್ಲಿ ಮುಳುಗಿದಳು.

ಕಡೆಯ ಸಲ ಅಡ್ವೋಕೇಟ್ ಸೀತಾರಾಮ್ ಒಟ್ಟಿಗೆ ಇಬ್ಬರನ್ನು ಕರೆಸಿದ್ದರು. ವೈಯಕ್ತಿಕವಾದ ಬಂಧನದಲ್ಲಿ ಕಾನೂನು ಇನ್ವಾಲ್ ಆದಾಗಲೇ ಅದರ ಪವಿತ್ರತೆಯ ಬಗ್ಗೆ ಬೇಸರಿಸಿದ್ದ ವಿಕಾಸ್.

ಪಂಕಜಮ್ಮ ಮಾತ್ರವಲ್ಲ, ಅವಳ ಮನೆಯವರೆಲ್ಲ ಕೊರೆದು ಕೊರೆದು ರಜನಿನ ಮಿದುಳನ್ನು ನಿಷ್ಕ್ರಿಯಗೊಳಿಸಿಬಿಟ್ಟಿದ್ದರು. ಅವಳಲ್ಲಿನ ಯೋಚನಾ ಶಕ್ತಿ, ವಿವೇಕ ಸತ್ತುಹೋಗಿತ್ತು.

"ಸ್ವಲ್ಪ ಯೋಚ್ಸಿ ! ನೀವಿಬ್ರೂ ಮುಂದೆ ಒಟ್ಟಿಗೆ ಸಂಸಾರ ಮಾಡೋಕೆ ಸಾಧ್ಯವಿಲ್ಲವೇ ?" ಸೀತಾರಾಮ್ ಪ್ರಶ್ನಿಸಿದಾಗ ಸುಮ್ಮನೆ ಕೂತಿದ್ದ ವಿಕಾಸ್ ಅವಳತ್ತ ಕೂಡ ತಿರುಗಲಿಲ್ಲ. ಡೈವೋರ್ಸ್ ಒಪ್ಪದೆ ಮತ್ತಷ್ಟು ತಕರಾರುಗಳನ್ನೊಡ್ಡಿ ಗೋಳಾಡಿಸಬಲ್ಲ.

ವಿಕಾಸ್‌ನ ಮೌನ ಅವಳನ್ನು ಮತ್ತಷ್ಟು ಹಟಮಾರಿಯನ್ನಾಗಿ ಮಾಡಿತು "ಯೋಚ್ಸೋಕೆ ಏನಿಲ್ಲ. ಇಷ್ಟವಿಲ್ಲದೋರ ಜೊತೆ ನಾನು ಬಾಳ್ವೆ ಮಾಡ್ಲಾರೆ ! ಇದು ನನ್ನ ತೀರ್ಮಾನ" ಏನಾದರೂ ಪ್ರತಿಕ್ರಿಯೆ ವ್ಯಕ್ತಪಡಿಸಬಹುದು ಎಂದು ಆಸೆಯಿಂದ ಅವನತ್ತ ನೋಡಿದಳು. ವಿಕಾಸ್‌ನ ನೋಟ ಎಲ್ಲೋ. ತಿಂಗಳುಗಟ್ಟಲೇ ಎಳೆದಿದ್ದಾಗಿತ್ತು. ಮನೆಯಲ್ಲಿ ಅಶಾಂತಿಯ ಅಲೆಗಳು. ವಿಶ್ವನಾಥಯ್ಯ, ಸುನಂದಮ್ಮ ನಕ್ಕು ಎಷ್ಟೋ ದಿನಗಳಾಗಿದ್ದವು.

ಶಾಂತವಾಗಿ ಎದೆಯ ಮೇಲೆ ಕೈ ಕಟ್ಟಿಕೊಂಡು ಕೂತವನು ನಾರಾ

ಯಣಮೂರ್ತಿಗಳ ಮಾತುಗಳನ್ನು ನೆನೆಪು ಮಾಡಿಕೊಂಡ. 'ನಿನ್ನ ಹೆಂಡ್ತಿ ಅಖಿಲೇಶ್ ಜೊತೆ ಓಡಾಡಿಕೊಂಡಿದ್ದಾಳೆ. ಅವ್ನ ಕೈಯಲ್ಲೇ ಇನ್ನೊಮ್ಮೆ ತಾಳಿ ಕಟ್ಟಿಸಿಕೊಳ್ಳುತ್ತಾಳಂತೆ. ಸಣ್ಣ, ಪುಟ್ಟ ವಿಷ್ಯಗಳಿಗೆ ಕಿತ್ತು ಹಾಕೋ ಜನಕ್ಕೆ ತಾಳಿ ಯಾಕೆ ಬೇಕು ?' ಎಂದಿದ್ದರು. ಅವರು ಹೇಳಿದ್ದು ಉಡಾಫೆಯ ಮಾತಲ್ಲ. ಅಖಿಲೇಶ್ ಬೈಕ್ ಮೇಲೆ ಹೋಗಿದ್ದು ತಾನೇ ನೋಡಿದ್ದ.

ಬಹಳ ಯೋಚಿಸಿ ತೀರ್ಮಾನಕ್ಕೆ ಬಂದ. ಮೂರು ಹೊತ್ತು ಹೆತ್ತ ತಾಯಿ ಕಣ್ಣೀರು ಹಾಕುವುದು ಅವನಿಗೆ ಇಷ್ಟವಿರಲಿಲ್ಲ.

"ಕಡೆ ತನ್ಕ ಈ ನೋವು ನನ್ಗೆ ! ಬೇಡ, ವಿಕಾಸ್. ಸ್ವಲ್ಪ ಸುಳಿವು ಸಿಕ್ಕಾಗ್ಲೇ ಎಚ್ಚೆತ್ತುಕೊಂಡಿದ್ರೆ.. .... ಇಷ್ಟೆಲ್ಲ ರಾಮಾಯಣ ಇರ್‍ತಾ ಇರ್‍ಲಿಲ್ಲ. ಆ ಹೆಣ್ಣು ಎಲ್ಲಾದ್ರೂ ಸುಖವಾಗಿದ್ಕೊಳ್ಳಿ. ಸುಮ್ನೆ ಡೈವೋರ್ಸ್‌ಗೆ ಒಪ್ಕೊಂಡ್ಬಿಡು" ಕಣ್ಣೀರು ಮಿಡಿದಿದ್ದರು. ಇಡೀ ಮನೆಯ ಸುಖ, ಶಾಂತಿ ಗಳನ್ನ ಬಲಿಗೊಟ್ಟು ಅವನೇನು ಸಾಧಿಸುವಂತಿರಲಿಲ್ಲ.

ಅಂದು ಮಹಿಳಾ ವಿಮೋಚನಾ ರಂಗದವರು ಬಂದು ಘೋಷಣೆಗಳನ್ನು ಕೂಗಿದಾಗ ಹಿಡಿಯಾಗಿದ್ದರು. ಆ ಕ್ಷಣ ಸಾಯಲು ಕೂಡ ಸಿದ್ಧರಾಗಿದ್ದರು ಮತ್ತೆ ಮತ್ತೆ ಅದೇ ಕಂಟಕದಲ್ಲಿ ನೋಯುವುದು ಬೇಡವಾಗಿತು.

ಎರಡು ದಿನದ ಹಿಂದೆ ಸೀತಾರಾಮ್ ವಿಶ್ಲೇಷಿಸಿದ್ದರು. "ಈ ಡೈವೋರ್ಸ್ ನಿಂದ ನಿಂಗೆ ಒಳ್ಳೆದೇ ಆಗುತ್ತೆ. ಸೀರಿಯಸ್ ಮೈಂಡ್ ಇಲ್ಲದ ರಜನಿಯಿಂದ ಸುಖವಿಲ್ಲ ಹಣ ಇದೆ ಕೆಲ್ಸವಿಲ್ಲದ ಜನ ಅವ್ರ ಸುತ್ತ ಓಡಾಡುತ್ತಾರೆ. ಹಾದಿ ರಂಪ, ಬೀದಿ ರಂಪ ಮಾಡೋಂಥ ಹೆಣ್ಣು ಪಂಕಜಮ್ಮ. ಹೆಣ್ಣಿನ ಕಡೆಗಿರುವ ಸಮಾಜ, ಕಾನೂನ ಸಿಂಪತಿಯನ್ನು ಕಟ್ಟದಾಗಿ ಬಳಸಿಕೊಳ್ಳೋಕೆ ಹಿಂಜರಿ ಯೋಲ್ಲ ಆ ಜನ. ಯಾವ್ದು ಏನಾದ್ರೂ ಆಗ್ಲಿ ಇಲ್ಲಿ ನಿನ್ನ ಸಮಯ ಹಣದ ಜೊತೆ ನೆಮ್ದಿನು ಹಾಳು." ತಿಳುವಳಿಕೆಯ ಜೊತೆ ಎಚ್ಚರಿಕೆಯು ಇತ್ತು. ಹಿಂದೆ ಕಾಲೇಜಿಗೆ ಹೋಗೋವಾಗಿನ ಹುಮ್ಮಸ್ಸು ಈಗ ಇಲ್ಲ. ಜಡತೆ, ಏನೋ ಗುಂಗು, ನೋವು. ಅದರಿಂದ ಹೊರ ಬರಲಾರದೆ ಒದ್ದಾಡುತ್ತಿದ್ದ.

ಅದು ಸುಮ್ಮನೆ ಎದ್ದು ಹೋಗಿದ್ದರೂ ಆಳವಾಗಿ ಯೋಚಿಸಿದ್ದ. ಎದೆಯಾಳದ ಸೂಕ್ಷ್ಮ ಸಂವೇದನೆಯನ್ನು ಮೆಟ್ಟಿ ಕಲ್ಲಾಗಿದ್ದ.

ಸೀತಾರಾಮ್ ಇಬ್ಬರು ಮುಖವನ್ನು ಬದಲಿಸಿ ಬದಲಿಸಿ ನೋಡಿದರು.

ಬಹಳ ಪ್ರಸನ್ನವಾಗಿದ್ದ ವಿಕಾಸ್. ಉದ್ವೇಗ, ಆಂದೋಳನದಿಂದ ಒದ್ದಾಡು ತ್ತಿದ್ದಳು ರಜನಿ.

"ಏನಮ್ಮ ?" ಮತ್ತೆ ಅವಳತ್ತಲೇ ನೋಡಿದರು. ಮೆಲ್ಲಗೆ ತಲೆಯೆತ್ತಿ ದಳು. ತುಟಿಗಳು ಕಂಪಿಸುತ್ತಿದ್ದವು. ಮರೆತ ಪಾಠ ನೆನಪು ಮಾಡಿಕೊಳ್ಳು ವಂಥ ಸ್ಥಿತಿ ಅವಳದು "ವಿಕಾಸ್ ನಮ್ಮಲ್ಲೇ ಉಳೀಬೇಕು. ಕೆಲ್ಸಕ್ಕೆ ರಾಜಿನಾಮೆ ಕೊಟ್ಮೇಲೆ ಅವ್ರ ಜೊತೆ ಜೀವನ...." ಒಳಗೆ ತುರುಕಿದ ಮಾತುಗಳು ಒಂದೊಂ ದಾಗಿ ಉದುರಿದವು. ಪೂರ್ತಿ ಕೇಳಿಸಿಕೊಳ್ಳುವ ಮುನ್ನ ಕೈ ಚಾಚಿದ "ಆ ಪೇಪರ್ಸ್ ಕೊಡಿ" ಇನ್ನೊಂದು ಮಾತು ಕೇಳುವುದಾಗಲಿ, ಹೇಳುವುದಾಗಲಿ ಅವನಿಗೆ ಬೇಕಿರಲಿಲ್ಲ. "ನನ್ನ ಒಪ್ಗೇ ಇದೆ. ನಿಮ್ಮ ಅಸಿಸ್ಟೆಂಟ್ ಕೈಯಲ್ಲಿ ಪೇಪರ್ಸ್ ಕಳಿಸಿ" ಹೊರಗೆ ನಡೆದಿದ್ದ.

ಅವನ ನೋಟ ಇತ್ತ ತಿರುಗಿದ್ದರೇ ಕರಗಿಹೋಗುತ್ತಿದ್ದಳೇನೋ, ಇಂತಹ ಕರಗುವಿಕೆ ಅವನಿಗೆ ಬೇಕಿರಲಿಲ್ಲ.

ಕಾರಿನಲ್ಲಿ ಕೂತು ಪೇಪರ್ ತಿರುವುತ್ತಿದ್ದ ಪಂಕಜಮ್ಮ ತೀಕ್ಷ್ಣವಾಗಿ ಅವನತ್ತ ನೋಡಿದರು. ಸೋಲನ್ನ ನಿರೀಕ್ಷಿಸಿ ಕೇಕೆ ಹಾಕಿದ್ದರು. ಆದರೆ ವಿಕಾಸ್ ತಲೆಯೆತ್ತಿ ನಡೆದಿದ್ದ.

ವಿಕಾಸ್ ಕಾಲೇಜಿನಲ್ಲೆಲ್ಲ ಇದೇ ಗಲಾಟೆ. ಅವನ ಸುಸ್ವಭಾವ ತಿಳಿದ ವರು ನೊಂದುಕೊಂಡರೇ, ಆಗದವರೆಂದುಕೊಳ್ಳುವ ಜನ ವ್ಯಂಗ್ಯ, ಮೊನಚು ನೋಟಗಳನ್ನು ಬೀರಿದರು. ಇದೆಲ್ಲ ಅವನ ದಿಟ್ಟತನದ ಮುಂದೆ ಕರಗಿ ಹೋಗುತ್ತಿತ್ತು.

ಮೃದುವಾದ ಹೃದಯಕ್ಕೆ ಬಿದ್ದ ಪೆಟ್ಟು ಮಾಯಲು ಸ್ವಲ್ಪ ಕಾಲವೇ ಬೇಕಾಗಿತ್ತು.

o o o o

ಟೆಲಿಫೋನ್ ಎಕ್ಸ್‌ಛೇಂಜ್‌ನವರು ಅಡ್ರಸ್ ಹಿಡಿದು ಬಂದಾಗ ವಿಶ್ವ ನಾಥಯ್ಯನವರಿಗೆ ಆಶ್ಚರ್ಯವಾಯಿತು. ತಮ್ಮ ಮನೆಗೆ ಫೋನ್ ಅಗತ್ಯವೆಂದು ಇಷ್ಟು ದಿನ ಅವರಿಗೆ ಅನ್ನಿಸಿರಲೇ ಇಲ್ಲ.

ಕೋರ್ಟ್ ಬಿಡುಗಡೆ ಘೋಷಿಸಿತ್ತು. ಒಳಗೆ ಜ್ವಾಲಾಮುಖಿಯಾಗಿದ್ದರೂ ಹೊರಗೆ ಮಾಮೂಲಿಯಾಗೇ ಇದ್ದ. ಊಟ, ತಿಂಡಿಯಲ್ಲು ವ್ಯತ್ಯಾಸವಿಲ್ಲ. ಮೊದಲಿಗಿಂತ ಹೆಚ್ಚು ಮಾತಾಡುತ್ತಿದ್ದ. ಮದುವೆಗೆ ಬರದ ನಿಖಿಲಾಗೆ ಇದು ಯಾವುದಗ ಅರಿವು ತಟ್ಟಿರಲಿಲ್ಲ.

ಸುನಂದಮ್ಮ ಮಗನ ಉಸಿರುಗಟ್ಟಿದ ಪರಿಸ್ಥಿತಿ ಊಹಿಸಿ ಒಂದು ಸಲಹೆ ಅವನ ಮುಂದಿಟ್ಟರು. "ಒಂದ್ನಾಲ್ಕು ದಿನ ಎಲ್ಲಾದ್ರೂ .. ಹೋಗಿದ್ದು ಬಾ" ತಾಯಿಯತ್ತ ಆಚ್ಚರಿಯ ನೋಟ ಹರಿಸಿದ. ವಿಷಣ್ಣತೆ ಇಣುಕಲು ಅವಕಾಶ ಮಾಡಿಕೊಡಲಿಲ್ಲ. "ಯಾಕಮ್ಮ ? ಈಗೇನಾದ್ರೂ ಕಾಲೇಜಿಗೆ ರಜಾನಾ ? ನಿನ್ಮಗ ತಲೆ ಮರೆಸಿಕೊಂಡು ಹೋಗೋಂಥ ತಪ್ಪು ಮಾಡಿಲ್ಲ" ಆಕೆಯ ಕಣ್ಣಲ್ಲಿ ನೀರಾಡಿತು. ಈಗ ಅವರ ಮುಂದೆ ರಜನಿ ದೊಡ್ಡ ಅಪರಾಧಿ ! ಎಂದೂ ಕ್ಷಮಾರ್ಹವಲ್ಲದ ನಡತೆ. ನಿರಪರಾಧಿಗಳಿಗೆ ಭಯಂಕರ ಶಿಕ್ಷೆ ವಿಧಿಸಿದ್ದಳು.

"ಹಾಗಲ್ಲ ವಿಕಾಸ್, ಕಿತ್ತು ತಿನ್ನೋ ದುಗುಡದಿಂದ ಪಾರಾಗ್ಬೇಕಾದ್ರೆ.. ಸ್ಥಳ ಬದಲಾವಣೆಯ ಅಗತ್ಯವಿದೆ. ಒಂದಷ್ಟು ಓಡಾಡಿ ಬಾ" ಸಹಾನುಭೂತಿಯಿಂದ ತಾಯಿಯ ಕಡೆ ನೋಡಿದ. ಸೊಸೆಯನ್ನು ಮನೆ ತುಂಬಿಸಿಕೊಂಡಾಗ ಸಂಭ್ರಮಗೊಂಡಿದ್ದ ಕಣ್ಣುಗಳು ಈಗ ಮಂಕಾಗಿದ್ದವು.

"ಅಂಥದೇನಿಲ್ಲ ! ನಾನು ಅಷ್ಟು ತಲೆ ಕೆಡ್ಸಿಕೊಂಡಿಲ್ಲ. ರಜನಿ ಇಲ್ದೇ ಬದ್ಕಿಲ್ಲ ಎಂದೂ ನಾನು ಯಾವಾಗ್ಲೂ ಭಾವಿಸಿಲ್ಲ. ಸುಮ್ನೇ ತಲೆ ಕೆಡಿಸ್ಕೋಬೇಡಮ್ಮ" ಸಂತೈಯಿಸಿದ್ದ. ನಿಖಿಲಾ ಮದುವೆಯ ನಂತರ ಕೆನಡಾಕ್ಕೆ ಹೋದವಳು ಬಂದೇ ಇರಲಿಲ್ಲ. ಅದೊಂದು ಕೊರಗು ಆಕೆಗೆ.

ದಿನಗಳು ಸ್ವಲ್ಪ ಪ್ರಯಾಸವಾಗಿ, ನಿಧಾನವಾಗಿ ಉರುಳಿ ಹೋಗುತ್ತಿತ್ತು. ಈಗ ವಿಕಾಸ್ ಸ್ವಲ್ಪ ಚುರುಕಾಗಿದ್ದ. ಇದ್ದ ಸ್ಕೂಟರ್ ಮಾರಿ ಕಮಲ ಸಂಸ್ಥೆಯ ಊದುಕಡ್ಡಿಯ ಏಜೆನ್ಸಿಯನ್ನು ತಂದೆಯ ಹೆಸರಿಗೆ ಮಾಡಿಸಿದ್ದ. ಅದು ಮೊದಲು ಗುರುಮೂರ್ತಿಗಳ ಹೆಸರಿನಲ್ಲಿತ್ತು. ಸಣ್ಣದೆಂದು ಸ್ವಲ್ಪ ನಿರ್ಲಕ್ಷ್ಯವಹಿಸಿದಕ್ಕೆ ದೊಡ್ಡ ದಂಡ.

ಗುರುಮೂರ್ತಿಗಳು ಫೋನಿಟ್ಟವರೇ ದಿಗ್ಭ್ರಮೆಯಿಂದ ಕೂತರು. ಕಲ್ಪನೆಗೂ ಸಿಗದ ವಿಷಯ. ಪೆಟ್ಟು ಸಣ್ಣದಾದರೂ ಏಟು ಬಲವಾಗಿತ್ತು.

ರಿಸೀವರ್ ಇಟ್ಟವರು ಪಂಕಜಮ್ಮನಿಗೆ ಹೇಳಿ ಕಳಿಸಿದರು. ಈಗ ಅವರಿಗೆ ತಮ್ಮ ತಪ್ಪಿನ ಅರಿವಾಗಿತ್ತು. ಆದರೂ ಲಕ್ಷಿಸುವಂಥದಲ್ಲ.

ಹೆಂಡತಿ ಬಂದ ಕೂಡಲೇ ಪರಿಹಾಸ್ಯದ ನಗು ನಕ್ಕರು "ವಿಷ್ಯ ತಿಳೀತಾ? ಕಮಲ ಪರ್‌ಫ್ಯೂಮ್ ಇಂಡಸ್ಟ್ರಿಯವ್ರು ನಮ್ಮ ಏಜನ್ಸಿಯನ್ನು ಕ್ಯಾನ್ಸಲ್ ಮಾಡಿದ್ದಾರೆ. ಅದು ಈಗ ಯಾರ ಹೆಸರಿನಲ್ಲಿದೆ ಗೊತ್ತಾ !" ಮೇಲೆ ಕುಹಕ ವಾಡಿದರೂ ಯಾವುದೋ ಭಯ ಅವರನ್ನು ಕಾಡುತ್ತಿತ್ತು. ಮೊದಲ ನೋಟ ದಲ್ಲಿಯೇ ಅವನ ಕಣ್ಣುಗಳನ್ನ ನೋಡಿಯೇ ವಿಕಾಸ್‌ನ ಬುದ್ಧಿಯ ಮಟ್ಟವನ್ನು ಅಳೆದಿದ್ದರು.

"ಹಾಳಾಗ್ಲಿ ಬಿಡಿ, ಯಾರು ನೋಡಿಕೊಳ್ಳೋರು ಇದ್ದಾರೆ. ಮಗನಿಗೆ ಸಿಗರೇಟು, ಸೇದೋ ಬಿಜಿನೆಸ್, ಮಗ್ಳಿಗೆ ಗತವೈಭವವನ್ನು ನೆನೆದು ಅಳೋ ಕೆಲ್ಸ. ಅವ್ರುಗಳ ಮಧ್ಯೆ ಸಾಯೋದು ಬಂದಿದೆ" ಬೇಸರದಿಂದ ನುಡಿದರು. ಮಹಿಳಾ ವಿಮೋಚನಾ ರಂಗದವರು ಆಕೆಯ ಸದಸ್ಯತ್ವ ರದ್ದುಮಾಡಿ ಒಂದು ಕೈಯೇ ಮುರಿದುಬಿಟ್ಟಿದ್ದರು. ಅದರಿಂದ ಇನ್ನು ಚೇತರಿಸಿಕೊಂಡಿರಲಿಲ್ಲ. ರಭಸದಿಂದ ಓಡುತ್ತಿದ್ದ ವಾಹನಕ್ಕೆ ಒಂದು ಸಣ್ಣ ತಡೆಯಾದರೂ ಅಪಘಾತ ಖಂಡಿತ.

ಗುರುಮೂರ್ತಿಗಳು ಹೆಂಡತಿಯನ್ನೇ ನೋಡಿದರು. ಸದಾ ಮೇಕಪ್‌ನಲ್ಲಿ ರುತ್ತಿದ್ದ ಆಕೆ 'ರಹಿತ'ವಾದ ಮುಖದಲ್ಲಿ ಅಷ್ಟೇನು ಸುಂದರವಲ್ಲದೇ, ವಯ ಸ್ಸಾದ ಹಿರಿಯಾಕೆಯಂತೆ ಕಂಡರು.

ಕಠಿದ ವಿಷಯ ಮರೆತವರಂತೆ ಬೇರೆ ವಿಷಯ ಎತ್ತಿಕೊಂಡರು "ನಿನ್ನ ಆಕ್ಟಿವಿಟೀಸ್ ಯಾಕೆ ಕಮ್ಮಿಯಾಗಿದೆ ? ಮನೆ ಮುಂದಿಯ ಯೋಚನೇನಾ ?" ಹಾಸ್ಯ ಮಾಡಿದರು.

"ಗೋ ಟು ಹೆಲ್. ನಾನು ಯಾರು ವಿಷ್ಯನೂ ಯೋಚ್ಸೋಲ್ಲ. ನನ್ನ ಸ್ಥಿತಿನೇ ಸರಿಯಿಲ್ಲ. ಹತ್ತಾರು ಸಲ ಹೋಗಿ ಕಾದ್ರೂ ಹೋಂ ಮಿನಿಸ್ಟ್ರು ಇಂಟರ್‌ವ್ಯೂ ಕೊಡ್ಲಿಲ್ಲ" ತುಮುಲವನ್ನು ತೋಡಿಕೊಂಡರು. ಇಂಥ ಅವ ಮಾನಗಳನ್ನು ಬಹಳ ಅನುಭವಿಸಿದ್ದರು. ಸಂದರ್ಶನಕ್ಕೆ ಬಂದಿದ್ದ ಪತ್ರಿಕೆಯವರು. ಅನಾಥಾಶ್ರಮದ ಹಣದ ದುರುಪಯೋಗದ ಬಗ್ಗೆ ಪ್ರಶ್ನಿಸುತ್ತಿದ್ದರು. 'ಅಪರಾಧ ಸ್ಥಿರವಾದ್ರೂ ಯಾಕೆ

ನಿಮ್ಮ ಮೇಲೆ ಆಕ್ಷನ್ ತಗೊಂಡಿಲ್ಲ' ಇಂಥ ಕೇಳಿಕೆಯನ್ನು ಎದುರಿಸಬೇಕಾಗಿತ್ತು.

ಗುರುಮೂರ್ತಿಗಳು ಸ್ವಲ್ಪ ಚುರುಕಾದ ಪ್ರಶ್ನೆ ಹೆಂಡತಿಗೆ ಹಾಕಿದರು. "ಈಚಿಗೆ ಕವಿದುಕೊಂಡು ಬರ್‍ತಾ ಇರೋ ಕಪ್ಪು ಮೋಡಗಳು ಯಾರ ಮುಖಾಂತರ ? ಆಕೆ ತಲೆ ಅಡ್ಡಡ್ಡ ಆಡಿಸಿದರು. "ನಮ್ಮ ಗ್ರಹಚಾರ ಅಷ್ಟೆ !" ಈ ಉತ್ತರಕ್ಕೆ ಸುಮ್ಮನಾಗಲಿಲ್ಲ. ಮನದಲ್ಲಿ ಮೂಡಿದ ಅನುಮಾನ ತಿಳಿಸಿ ಎಚ್ಚರಿಸಲು ಇಚ್ಛಿಸಿದರು. "ಇವೆಲ್ಲದರ ಹಿಂದೆ ವಿಕಾಸ್ ಕೈವಾಡವಿದೆ" ಪಂಕಜಮ್ಮ ಚಕಿತರಾದರು. ಅವರ ಪ್ರಕಾರ ಸಭ್ಯ, ಸುಸಂಸ್ಕೃತ ಆದರ್ಶವಾದಿ, ಮೂರ್ಖ ಲೆಕ್ಚರರ್.

ಹೆಂಡತಿಯ ಮುಖಭಾವ ಗುರ್ತಿಸಿ ಸೀರಿಯಸ್ಸಾದರು. "ಷೂರ್, ಕಮಲ ಪರ್‌ಫ್ಯೂಮ್ ಏಜನ್ಸಿ ಕ್ಯಾನ್ಸಲ್ ಆದದ್ದು ದೊಡ್ಡ ವಿಷ್ಯವಲ್ಲ. ಅದು ಯಾರ ಹೆಸರಿಗೆ ಆಗಿದೆ ಗೊತ್ತಾ ? ಹಳೇ ಬೀಗ ವಿಶ್ವನಾಥಯ್ಯನ ಹೆಸರಿಗೆ."

ಆ ಸ್ಥಿತಿಯಲ್ಲು ಪಂಕಜಮ್ಮ ನಕ್ಕುಬಿಟ್ಟರು. ಮೂಗಿಡಿದು ಸಂಧ್ಯಾವಂದನೆ ಮಾಡೋಕೆ ಲಾಯಕ್ಕಾದ ಮನುಷ್ಯ ಎನ್ನುವುದು ಆಕೆಯ ನಿರ್ಣಯ.

"ನಿಮಗೆಲ್ಲೋ ಫಾಲ್ಸ್ ನ್ಯೂಸ್ ಬಂದಿದೆ. ಅಂಥ ಬದಲಾವಣೆ ಮಗನಿಂದ್ಲೇ ನಿರೀಕ್ಷಿಸೋಕಾಗ್ಲಿಲ್ಲ, ಇನ್ನು ತಂದೆ ಬಗ್ಗಿಕೊಳ್ತಾನಾ" ಅಸಡ್ಡೆ ತೋರಿದರು. ಗುರುಮೂರ್ತಿಗಳು ರೇಗಿ ನಿಜ ಸಂಗತಿ ತಿಳಿಸಿದರು.

ಸಭ್ಯ, ಸುಸಂಸ್ಕೃತ ವ್ಯಕ್ತಿ ಸಮಾಜಕ್ಕೆ ಒಳಿತು ಮಾಡುತ್ತಾನೆಯೇ ವಿನಃ ಬೇರೆಯವರಿಗೆ ಅನ್ಯಾಯ ದೊರಕಿಸಲು ಹೋಗುವುದಿಲ್ಲ. ಅಂಥವರಲ್ಲಿ ವಿಕಾಸ್ ಕೂಡ ಒಬ್ಬ. ಅದನೇನು ಅಲ್ಲಗಳೆಯಲಾರರು.

ಅಷ್ಟರಲ್ಲಿ ಮೆಕ್ಯಾನಿಕ್ ರಾಜುಯಿಂದ ಫೋನ್ ಬಂತು. "ಮೊನ್ನೆ ಮಾರ್ದ ಫಿಯೆಟ್ ಗಾಡಿಯವ್ರು ಬಂದು ತಕರಾರು ತೆಗೆದಿದ್ದಾರೆ. ತಗೊಂಡ್ ನಾಲ್ಕು ದಿನಕ್ಕೆ ಗ್ಯಾರೇಜ್‌ಗೆ ಹೋಯಿತಂತೆ. ಅದ್ರಲ್ಲಿ ಏನೂ ಬಂಡವಾಳ ಇಲ್ಲ. ಈಗ ಹೆಸರು ಕಾಪಾಡ್ಕೋಬೇಕಾದ್ರೆ....ಅವ್ರ ಹಣನ ಅವ್ರಿಗೆ ವಾಪ್ಸು ಕೊಡಿ. "ಮೆಟ್ಟಬಿದ್ದರು ಗುರುಮೂರ್ತಿಗಳು. ಹಳೆ ಕಾರುಗಳನ್ನು ಏಜಂಟರ ಮೂಲಕ ಕೊಂಡು ಅಷ್ಟಿಷ್ಟು ರಿಪೇರಿ ಮಾಡಿಸಿ ಮಾರಿಬಿಡುತ್ತಿದ್ದರು. ಇದು

ಕೂತ ಕಡೆಯಿಂದಲೇ ಏಜಂಟರುಗಳ ಮೂಲಕ ನಡೆಯುತ್ತಿದ್ದ ವಹಿವಾಟು.

ಕ್ಷಣ ಯೋಚಿಸಿದರು "ಹಣ ಹಿಂದಿರುಗಿಸೋಕಾಗೋಲ್ಲ. ರಿಪೇರಿ ಹಣ ಕೊಟ್ಟು ಕಳಿಸು" ಹೇಳಿದರು. ಮೆಕ್ಯಾನಿಕ್ ರಾಜು ಪಕ್ಕದಲ್ಲಿ ನಿಂತಿದ್ದ ವಿಕಾಸ್. ಅವನು ಮೌತ್ ಪೀಸ್‌ಗೆ ಕೈ ಅಡ್ಡ ಹಿಡಿದು ವಿಷಯ ತಿಳಿಸಿದ. "ಆಗೋಲ್ಲ ಅನ್ನು. ಪೊಲೀಸ್ ಸ್ಟೇಷನ್‌ಗೆ ಹೋಗ್ತಾರೇಂತ ತಿಳ್ಸು" ತಲೆದೂಗಿ ಅದೇ ಮಾತುಗಳನ್ನು ಹೇಳಿದ. "ಪಾರ್ಟಿ ಜೋರಾಗಿದ್ದಾರೆ. ಸುಮ್ನೇ ಅವರ ಹಣ ಕೊಟ್ಬಿಡಿ ಯಜಮಾನ್ರೆ ನನ್ನ ಲಾಕಪ್‌ಗೆ ಹಾಕಿ ಒದೆಸಿದರೇ ಗತಿ ಏನು ?" ಬಡಬಡಿಸಿದ. ಅತ್ತ ರಿಸೀವರ್ ಹಿಡಿದ ಗುರುಮೂರ್ತಿಗಳಿಗೆ ಜಾಡಿಸಿ ಒದ್ದುಬಿಡಬೇಕೆನಿಸಿತು.

"ನೀನೇ ನಾಲ್ಕು ಒದೆಸಿ ಕಳ್ಸು" ಫೋನ್ ಕುಕ್ಕಿದರು. ಪಂಕಜಮ್ಮ ಮೌನವಾಗಿ ಗಂಡನ ಮುಖ ನೋಡುತ್ತಿದ್ದರು. "ಏನು ವಿಷ್ಯ?" ಅನ್ನುವಷ್ಟರಲ್ಲಿ ಮತ್ತೆ ರಿಂಗಾಯಿತು. ಎತ್ತಲಾರದೆ ಎತ್ತಿದರು. "ಬೇಗ ಅರೇಂಜ್ ಮಾಡಿ ಸಾಬ್, ಇಲ್ಲಿ ಅಂಗ್ಡಿ ಮುಂದೆ ಗಲಾಟೆ ಆಗೋದ್ಬೇಡ. ಅಲ್ಲಿಗೇ ಕಳಿಸ್ಲಾ ?" ಅವನ ದಾಷ್ಟಿಕಕ್ಕೆ ಸಿಡಿಮಿಡಿಗೊಂಡರು. ಇದು ಹಿಂದೆ ನಿಂತು ಮಾಡಾಡುತ್ತಿದ್ದ ವ್ಯಾಪಾರ. ಬೇರೆಯವರಿಗೆ ಗೊತ್ತಾಗುವುದು ಅವರಿಗೆ ಬೇಕಿರಲಿಲ್ಲ.

"ಯೂ ಸ್ಟುಪಿಡ್, ನಿನ್ನ ವೈನ ಮೂಳೆಗಳನ್ನು ನಾನು ಮುರ್ಸಿಬಿಡ್ತೀನಿ. ರೋಪ್ ಹಾಕಿ ಕಳ್ಸು" ಮತ್ತೆ ಫೋನಿಟ್ಟರು. ವಿಕಾಸ್‌ಗೂ ಅಷ್ಟು ಸಾಕಾಗಿತ್ತು.

ಮರುದಿನ ಮುಖ್ಯ ಕಾಲಂನಲ್ಲಿ ಈ ವಿಷಯ ಪ್ರಕಟವಾಗಿತ್ತು. ರಾಜು ಮೆಕ್ಯಾನಿಕ್ ಮಾರುವ ಹಳೇ ಕಾರುಗಳಲ್ಲಿ ಹಲವರಿಗೆ ಮೋಸವಾಗಿದೆ. ಅದರ ಮೂಲಕ ಕೊಂಡವರ ಗಲಾಟೆ. ಏಜೆಂಟ್‌ನಾದವನು ಸತ್ಯ ಸುದ್ದಿಯನ್ನು ತಿಳಿಸಿದ್ದಾನೆ. ಸಮಾಜ ಸೇವಕಿ ಪಂಕಜಮ್ಮನ ಗಂಡ ಗುರುಮೂರ್ತಿಗಳು ಮೋಸದ ಕಾರುಬಾರು ನಡೆಸುತ್ತಿದ್ದರೆಂದು ಗೊತ್ತಾಗಿದೆ. ಇದರ ಬಗ್ಗೆ ತನಿಖೆ ನಡೆಯುತ್ತಿದೆ.

ಎಷ್ಟೋ ಇಂಥ ವಿಷಯಗಳಲ್ಲಿ ಇದೊಂದಾದರೂ ಗುರುಮೂರ್ತಿಗಳ ಮನೆಯವರ ಪ್ರತಿಷ್ಠೆ, ಅಂತಸ್ತು ನೂರರಿಂದ ಸಡನ್ನಾಗಿ ಇಪ್ಪತ್ತೈದಕ್ಕಿಂತ

ಕಡಿಮೆಯಾಯಿತು. ಇಡೀ ದಿನ ಡಾಕ್ಟರ್ ಅಲ್ಲೇ ಇರಬೇಕಾಯಿತು. ವಿಕಾಸ್ ಎರಡು ಸಾವಿರ ಮಾತ್ರ ಕಳೆದುಕೊಂಡಿದ್ದ.

o o o o

ಬಸ್ಸು ಇಳಿದ ಕೂಡಲೇ ರಜನಿ ಕಣ್ಣಿಗೆ ಬಿದ್ದಳು. ವಿಕಾಸ್ ಏನೂ ವಿಚಲಿತನಾಗಲಿಲ್ಲ. ತನ್ನ ಪಾಡಿಗೆ ತಾನು ನಡೆದ. ಎದೆಗೆ ಕೊಳ್ಳಿ ಇಟ್ಟು ಹೋದ ಹೆಣ್ಣು. ಅಲ್ಲಿ ನಿರಂತರ ಉರಿ.

"ವಿಕಾಸ್...." ಕಾಲಿಗೆ ಬೇಡಿ ತೊಡಿಸಿದಂತೆ ನಿಂತ. ಅವಳತ್ತ ತಿರುಗಿದವನು "ಹಲೋ....ಮಿಸ್...." ಎಂದ. ಪರಿಚಿತರನ್ನು ಮಾತಾಡಿಸುವಂತೆ. ಯಾವುದೋ ಏರುಪೇರಿಲ್ಲ ಅವನಲ್ಲಿ. ಮಾಮೂಲಿಯಾಗಿದ್ದ. ರಜನಿಯ ದನಿಯಡಗಿತು. ಬಲವಂತವಾಗಿ ಉಗುಳು ನುಂಗಿದ.

"ನಿಮ್ಹತ್ರ ಸ್ವಲ್ಪ ಮಾತಾಡ್ಬೇಕಿತ್ತು" ಎಂದಾಗ ಕಣ್ಣಗಲಿಸಿ ಕಿರುನಕ್ಕ. "ಎಕ್ಸ್‌ಕ್ಯೂಜ್ ಮಿ, ಈಗಂತೂ ಸಾಧ್ಯವಿಲ್ಲ. ರೋಡ್‌ನಲ್ಲಿ ನಿಂತು ಮಾತಾಡೋಕೆ ಸಿದ್ಧವಿಲ್ಲ. ಪಂಕಜಮ್ಮನ ಒರಲಿಕೆಯಲ್ಲಿ ಇನ್ನೆಷ್ಟು ಆಯುಧಗಳಿದ್ಯೋ! ನಮ್ಮ ಹುಷಾರಿನಲ್ಲಿ ನಾವಿರೋದು ಒಳ್ಳೇದು. ಏನಂತೀ ?" ಅವಳತ್ತ ನೇರವಾಗಿ ನೋಡಿದ. ಮಹಿಳಾ ವಿಮೋಚನಾ ರಂಗದವರು ಅವನ ಮನೆಯ ಬಳಿ ಹೋಗಿ ಗಲಾಟೆ ಮಾಡಿದ್ದು ಅವಳಿಗೆ ಗೊತ್ತು.

ಮುಖ ಪಕ್ಕಕ್ಕೆ ತಿರುಗಿಸಿ ಕಣ್ಣೀರು ತೊಡೆದುಕೊಂಡಳು "ನಿಮ್ಹತ್ರ ಮಾತಾಡ್ಬೇಕು .. " ಪಟ್ಟು ಹಿಡಿದಂತೆ ಕಂಡಳು. "ಓ.ಕೆ., ಇನ್ನೊಂದು ದಿನ ಮಾತಾಡ್ಬಹುದ್ದು. ಅಥ್ವಾ ಇಂದೇ ಮಾತಾಡ್ಬೇಕೂಂದ್ರೆ....ಮನೆಗೆ ಬನ್ನಿ" ಬಹುವಚನ ಪ್ರಯೋಗದಿಂದ ಆವಳೆದೆಯಲ್ಲಿ ತುಮುಲವೆದ್ದಿತು.

ವಿಕಾಸ್‌ನ ಅಡಿಯಿಂದ ಮುಡಿಯವರೆಗೂ ನೋಡಿದಳು. ಅವಳ ನಿರೀಕ್ಷೆ ಇಲ್ಲಿ ತಲೆಕೆಳಗಾಗಿತ್ತು. ಮೂರಿಂಚು ಗಡ್ಡ, ಗುಳಿ ಬಿದ್ದ ಕೆನ್ನೆಗಳು ಒಳಕ್ಕೆ ಹೋಗಿದ್ದ ಕಣ್ಣು ಗುಡ್ಡೆಗಳ ಬದಲಾಗಿ ಮತ್ತಷ್ಟು ಆತ್ಮವಿಶ್ವಾಸದಿಂದ ಗೆಲುವಾದ ಮುಖ ಕಂಡಾಗ ಎಲ್ಲರ ನಂಬಿಕೆಗಳು ತಲೆ ಕೆಳಗಾಗಿ ಗೋರಿ ಸೇರಿದ್ದವು.

"ಅವ್ನು ನಿನ್ನ ಪ್ರೀತಿಸಿರಲೇ ಇಲ್ಲ. ಏನೋ ಬೂಟಾಟಿಕೆ" ಒಂದು ನೂರು ಸಲವಾದರೂ ಮನೆಯವರೆಲ್ಲ ಇಂಥಹ ಮಾತುಗಳನ್ನೇ ಆಡಿದ್ದರು.

ಮಾರ್ದವತೆ ಮಿನುಗುತ್ತಿದ್ದ ಮುಖ ಒರಟಾಯಿತು. "ಇಂದೇ ಮುಗೀ ಬೇಕಾ" ಎಂದಾಗ ವಿಕಾಸ್ ಕೈಯಲ್ಲಿನ ಬುಕ್‌ನ ಬೆರಳಿನಿಂದ ಸವರಿದ. "ನಿಮ್ಮ ಇಷ್ಟ ಮನೆಗೆ ಬರಬಹುದು" ಹೆಜ್ಜೆ ಹಾಕತೊಡಗಿದ. ಅವನನ್ನು ಮೌನವಾಗಿ ಹಿಂಬಾಲಿಸಿದಳು.

ಸಪ್ತಪದಿಗಳನ್ನು ತುಳಿದು ಜೀವನ ಪೂರ್ತಿ ಹೆಜ್ಜೆ ಹಾಕಬೇಕಾದವರು ಏನು ಅಲ್ಲವಾಗಿದ್ದರು. ಆದರೆ ಆ ಹೃದಯಗಳ ಮಿಡಿತ ಅನುರಾಗಮಯ.

ನಿಂತ ವಿಕಾಸ್ ದೂರದವರೆಗೂ ನೋಟ ಹಾಯಿಸಿ "ರಜನಿ ಆಟೋ ಹತ್ತು. ಕಾರಿನಲ್ಲಿ ಓಡಾಡೋ ಜನಕ್ಕೆ ನಡಿಗೆ ಕಷ್ಟ. ಅಂಥ ಕಷ್ಟ ಬೇಡ" ಮೃದುವಾಗಿ ಚುಚ್ಚಿದ. ಕನಲಿದಳು. "ನಂಗೇ ನಡ್ದು ಬರೋದೇ ಇಷ್ಟ" ಅವಳ ಮಾತಿನತ್ತ ಗಮನ ಕೊಡದೆ ಆಟೋನ ಕೈ ಬೀಸಿ ಕರೆದ "ಈಗ್ಲಾದ್ರೂ ಬುದ್ಧಿವಂತಿಕೆಯಿಂದ ವರ್ತಿಸೋದು ಕಲೀ. ಮತ್ತೆ ಕೆಡಕು ಮಾಡ್ಕೋ ಬೇಡ. ಆಟೋ ಹತ್ತು" ಅಧಿಕಾರ ಅವನ ದನಿಯಲ್ಲಿ ಮಿನುಗಿದಾಗ ಪುಂಗಿಯ ನಾದಕ್ಕೆ ಸೋತ ಹಾವಿನಂತಾದಳು.

ಹತ್ತಿ ಕೂತಾಗ ಆಟೋದವನಿಗೆ ಹೋಗುವಂತೆ ಸನ್ನೆ ಮಾಡಿದ. ಆ ಜನರ ಕುಟಿಲ ನೀತಿಯ ಪರಿಚಯವಿತ್ತು. ಅವರು ಬೀಸುವ ಗಾಳಕ್ಕೆ ಅವನು ಸಿಕ್ಕಿಕೊಳ್ಳಲಾರ. ಅವರುಗಳಿಗೆ ಅಹಂಕಾರ, ಅದೃಷ್ಟವಿತ್ತೇ ವಿನಃ ಬುದ್ಧಿ, ವಿವೇಕ ಇಲ್ಲವೆಂದು ಅವನಿಗೆ ಗೊತ್ತು. ಅದೃಷ್ಟವಿದ್ದರೆ ಮಾತ್ರ ಅಹಂಕಾರ ಉಳಿಸಿಕೊಳ್ಳಬಹುದು. ಅದೊಂದು ಕೈ ಕೊಟ್ಟರೆ ನೇರವಾಗಿ ಪಾತಾಳಕ್ಕೆ.

ಹೆಜ್ಜೆಯ ವೇಗವೇನು ಹೆಚ್ಚಿಸಲಿಲ್ಲ. ನಿಧಾನವಾಗಿ ನಡೆದೇ ಹೊರಟ. ಡೈವೋರ್ಸ್ ಸಿಕ್ಕ ಮೇಲೆ ಎರಡನೆ ಸಲ ಇಂದು ನೋಡಿದ್ದ. ಒಮ್ಮೆ ಅಖಿಲೇಶ್‌ನ ಜೊತೆ ಬೈಕ್ ಮೇಲೆ ನೋಡಿದ್ದ. ಅವನೆದೆಯ ನವಿರಾದ ಭಾವನೆಗಳಿಗೆ ಕಿಚ್ಚು ಹಚ್ಚಿದವಳು ಆರಾಮಾಗಿದ್ದಳು.

ಇವನು ಮನೆಗೆ ಬರುವ ವೇಳೆಗೆ ಕಾಂಪೌಂಡಿನಲ್ಲೇ ನಿಂತಿದ್ದಳು. ಒಂದೆರಡು ಸಲ ಅತ್ತು ಕಣ್ಣೀರು ತೊಡೆದುಕೊಂಡ ಛಾಯೆ ಕೆನ್ನೆಯ ಮೇಲಿತ್ತು. ಬಹಳ ಖುಷಿಯಾಗಿ ಓಡಾಡುತ್ತಿದ್ದವಳು ಇಂದು ಅಳುತ್ತ ನಿಂತಿದ್ದೇಕೆ ? ಇನ್ನಷ್ಟು ವಿಚಿತ್ರ ಹೆಣ್ಣಾಗಿ ಕಂಡಳು

ಒಳಗೆ ನಡೆದವನು "ಕಮಿನ್....ಒಳ್ಗಡೆ ಬನ್ನಿ" ವರಾಂಡದೊಳಕ್ಕೆ

ಆಹ್ವಾನಿಸಿದ. ಹೊರ ಬಂದ ವಿಶ್ವನಾಥಯ್ಯನವರ ಮುಖದಲ್ಲಿ ಆತಂಕವೊಡೆ ಯಿತು. ಮತ್ತೆ ಎಲ್ಲಿಯೂ ಗ್ರಹಚಾರ ? "ಒಂದ್ನಿಮಿಷ....ಬರ್ತೀನಿ" ಹೊರಗೆ ನಡೆವರು. ಯಾವೊಂದು ಸಣ್ಣ ಘಟನೆ ನಡೆಯುವುದು ಅವರಿಗೆ ಬೇಕಿರಲಿಲ್ಲ. ಮಗನ ಬುದ್ಧಿವಂತಿಕೆ, ಸಂಯಮದ ಪರಿಚಯವಿತ್ತು. ಸ್ವತಃ ನಿಭಾಯಿಸಿ ಕೊಳ್ಳಲಿ ಎನ್ನುವುದು ಅವರ ಅಭಿಪ್ರಾಯ.

ವರಾಂಡದಲ್ಲಿದ್ದ ಛೇರ್‌ನತ್ತ ಕೈ ತೋರಿಸಿದ ವಿಕಾಸ್ ಹೊರ್‍ಟ. ಒಳಗೆ ನಡೆದ. ನಿಶ್ಶಬ್ದವಾಗಿತ್ತು. ಸುನಂದಮ್ಮ ಇರಲಿಲ್ಲ. ಬಟ್ಟೆ ಬದಲಾಯಿಸಿ ಫ್ಲಾಸ್ಕ್‌ನಲ್ಲಿದ್ದ ಕಾಫಿಯನ್ನು ಎರಡು ಕಪ್‌ಗಳಿಗೆ ಬಗ್ಗಿಸಿಕೊಂಡು ಬಂದ.

"ತಗೊಳ್ಳಿ...." ಅವಳ ಮುಂದೊಂದು ಕಪ್ ಇಟ್ಟ. "ಸದ್ಯಕ್ಕೆ ಇನ್ನು ಹೆಚ್ಚಿನ ಟ್ರೀಟ್ ಸಿಕ್ಕೋಲ್ಲ. ನಮ್ಮಮ್ಮ ಮನೆಯಲ್ಲಿಲ್ಲ" ಸಹಜವಾಗಿ ಹೇಳಿ ತುಟಿಗೆ ಕಪ್ ಹಚ್ಚಿದ.

ಕಾಫಿ ಹೆಚ್ಚು ರುಚಿಯೆನಿಸಿತು ರಜನಿಗೆ. ಮಗನಿಗಾಗಿ ತಯಾರಿಸುವಲ್ಲಿ ಸುನಂದಮ್ಮನಿಗೆ ಹೆಚ್ಚು ಆಸ್ಥೆ. ವಿಕಾಸ್ ಇಷ್ಟ ಇಷ್ಟಗಳನ್ನು ನೋಡಿಯೇ ಮಾಡುತ್ತಿದ್ದರು.

ಖಾಲಿಯಾದ ಎರಡು ಕಪ್‌ಗಳನ್ನು ಒಯ್ದು ಇಟ್ಟು ಬಂದ. ಅಷ್ಟರಲ್ಲಿ ಫೋನ್ ಸದ್ದಾದಾಗ ಅವಳಿಗೆ ಆಶ್ಚರ್ಯವಾಯಿತು. ರಿಸೀವರ್ ತೆಗೆದಿಟ್ಟು ಬಂದವ ಮತ್ತೆ ಹುಕ್ ಮೇಲಿಟ್ಟ. ಸದ್ದು ಮಾಡಿ ಸದ್ದು ಮಾಡಿ ಸುಮ್ಮ ನಾಯಿತು.

"ವಿಷ್ಯ ಏನೂಂತ ತಿಳ್ಯಬಹುದ್ದು" ಎದುರಿಗೆ ಬಂದು ಕೂತ ಮರು ಮೂರ್ತಿಯ ಮನೆಯವರು ಬೆಂಕಿಯಷ್ಟೆ ಅಪಾಯವೆಂದು ಅವನಿಗೆ ಗೊತ್ತು. "ಬೇಗ ಹೇಳಿ ಮುಗ್ಸಿ" ದಾಕ್ಷಿಣ್ಯವಿಲ್ಲದೆ ಹೇಳಿದ. 'ಸಿಲ್ಲು .. ' ಎಂದಾಗ ಹೃದ ಯಕ್ಕೆ ಪೆಟ್ಟು ಕೊಟ್ಟು ಹೋಗಿದ್ದಳು. ಈಗಂಥ ನಯವಾದ ವರ್ತನೆ ?

ಪರ್ಸ್‌ನ ಜಿಪ್ ಎಳೆದು ಒಂದು ಹಳದಿ ಪೇಪರ್‌ನಲ್ಲಿ ಸುತ್ತಿದ ಪೊಟ್ಟಣ ಹೊರಗೆ ತೆಗೆದಳು. ಕ್ಷಣ ಅವನೆತೆಯ ಬಡಿತ ಏರಿತು, ರಜನಿ ಕೈ ನಡುಗು ತ್ತಿದ್ದುದ್ದನ್ನು ಗಮನಿಸಿದ.

ಅಂಗೈಯನ್ನು ಅವನ ಮುಂದಿಡಿದಳು. "ನನ್ನ ಎಲ್ಲಾ ಸಾಮಾನು ಗಳನ್ನು ಪ್ರಾಮಾಣಿಕವಾಗಿ ಹಿಂದಿರುಗಿಸಿದ್ದೀರಿ. ಅದರ ಅರ್ಥದಷ್ಟು

ಪ್ರಾಮಾಣಿಕತೆಯಾದ್ರೂ ನನ್ನಲ್ಲಿ ಇರ್ಬೇಕು. ಇದ್ನ ಕೊಟ್ಟು ಹೋಗೋಣಾಂತ ಬಂದೆ" ಅವಳ ಅಂಗೈನಲ್ಲಿನ ಪೊಟ್ಟಣವನ್ನು ಕೈಗೊತ್ತಿಕೊಂಡು ಬಿಡಿಸಿದ. ಚಿನ್ನದ ಕರೀ ಮಣಿ ಸರದ ಮಧ್ಯೆ ಬೀಗುತ್ತಿದ್ದ ಮಾಂಗಲ್ಯ. ಮದುವೆಯಲ್ಲಿ ರಜನಿಗೆ ಕೊಟ್ಟದ್ದು. ಇದೊಂದೇ ಒಡವೆ. ಮಗಳ ಮದುವೆ ಮಾಡಿ ಆರ್ಥಿಕ ಸಂಕಟಕ್ಕೆ ಸಿಕ್ಕಿಕೊಂಡಿದ್ದ ವಿಶ್ವನಾಥಯ್ಯ ಕೈ ಚೆಲ್ಲಿದಾಗ, ಸುನಂದಮ್ಮ ತಮ್ಮ ಸವೆದ ಒಂದು ಜೊತೆ ಬಳೆ, ಉಂಗುರದ ಜೊತೆ ಚೂರು ಪಾರು ಬಂಗಾರ ಸೇರಿಸಿ ಐವತ್ತು ಗ್ರಾಂ ತೂಕದ ಕರೀಮಣಿ ಸರ ಮಾಡಿಸಿದ್ದರು.

"ಶಾಶ್ವತವಾಗಿ ಕೊರಳಿನಲ್ಲಿ ಇರೋದು ಮಜಬೂತಾಗೆ ಇರ್ಬೇಕು" ಕೈಯಲ್ಲಿನ ಬಳೆಗಳನ್ನು ತೆಗೆದಾಗ ವಿರೋಧ ವ್ಯಕ್ತಪಡಿಸಿದ ಮಗ, ಗಂಡನಿಗೆ ಹೇಳಿದ್ದರು. "ನಂಗೆ ಇನ್ನೇನಾಗ್ಬೇಕು, ಬರೋ ಹೆಣ್ಣಿನ ಕತ್ತಿನಲ್ಲಿ ಇರಲಿ. ನಿಖಿಲಾಗೆ ಸಾಲ, ಸೋಲ ಮಾಡಿ ಅಷ್ಟು ಮಾಡಿದ್ದೀನಿ. ಸೊಸೆಯಾಗಿ ಬರೋ ಹೆಣ್ಣಿಗೆ ಇಷ್ಟಾದ್ರೂ ಮಾಡೋದ್ಬೇಡ್ವಾ!" ಅವರಿಬ್ಬರ ಬಾಯಿ ಮುಚ್ಚಿಸಿದ್ದರು.

ನೆನಪಾದಾಗ ವಿಕಾಸ್‌ನ ಮನ ತೂಫಾನ್‌ಗೆ ಸಿಕ್ಕಿದ ಎಲೆಯಾಯಿತು.

"ಬದ್ಕಿಗೆ ಅರ್ಥಪೂರ್ಣವಾದಾಗ್ಲೇ ಯಾವ್ದೇ ವಸ್ತುಗೆ ಬೆಲೆ. ಪೂರ್ತಿ ಅರ್ಥ ಕಳೆದುಕೊಂಡಾಗ ಅಂಥ ಮಹತ್ವಕೊಡ್ಬೇಕಾಗಿಲ್ಲ. ಯಾರ್ಗೆತ್ರನಾದ್ರೂ ಕಳ್ಸಿದ್ರಾಗಿತ್ತು" ನೇರವಾಗಿ ಹೇಳಿದ. ಅವಳಿಗೆ ನಿರ್ದಾಕ್ಷಿಣ್ಯವಾಗಿ ಮುಖದ ಮೇಲೊಡೆದಂತಾಯಿತು.

ವಿಕಾಸ್‌ನ ಕಣ್ಣುಗಳಲ್ಲಿ ಗಾಂಭೀರ್ಯ ಮೂಡಿತು. ಅಡ್ವೋಕೇಟ್ ಸೀತಾರಾಮ್ ಅಂದು ಇನ್ನಷ್ಟು ಮಾತಾಡ ಬಯಸಿದಾಗ ತಡೆದಿದ್ದ. 'ಆ ಹೆಣ್ಣಿಗೆ ಬೇಕಾಗಿರೋದು ಬಿಡುಗಡೆ, ದಟ್ಸ್ ಎನಫ್' ಎದ್ದಿದ್ದ.

ಅವನ ಕೈಯಲ್ಲಿನ ಸರ ಕೆಳಗೆ ಬಿತ್ತು. ಬಗ್ಗಿ ಟೇಬಲ್ಲು ಮೇಲಿಟ್ಟ. ಅವನಲ್ಲಿ ತೀವ್ರ ಅನಾಸಕ್ತಿ ಮೂಡಿತು.

"ರಜನಿ, ವಿಶ್ ಯು ಆಲ್ ದಿ ಬೆಸ್ಟ್. ಬಂದ ಕೆಲ್ಸ ಮುಗಿದಿರಬಹುದ್ದು. ವೇಳೆ ಅಮೂಲ್ಯ. ಅಪವ್ಯಯವಾಗೋದ್ಬೇಡ" ನಗುಮುಖದಿಂದಲೇ ಹೇಳಿದ. ದುರದುರನೆ ಅವನತ್ತ ನೋಡಿದಳು. ರಜನಿಯ ಕಣ್ಣುಗಳಲ್ಲಿ ನೀರು ತುಂಬಿಕೊಂಡಿತು.

ಅಷ್ಟರಲ್ಲಿ ಮತ್ತೆ ಫೋನ್ ಸದ್ದಾಯಿತು. ಅನಾಸಕ್ತಿಯಿಂದ ಎತ್ತಿದ. "ಹಲೋ...." ಮೆಕ್ಯಾನಿಕ್ ರಾಜು "ಸೆವೆನ್ ಟೀ ಸೆವನ್‌ದು ಒಂದು ಅಂಬ್ಯಾಸಿಡರ್ ಬಂದಿದೆ. ಸಿಂಗಲ್ ಓನರ್ ಗಾಡಿ ಚೆನ್ನಾಗಿದೆ. ಇಂಜಿನ್ ಕೆಲ್ಸವೇನು ಇಲ್ಲ. ಒಂದಿಷ್ಟು ಟಿಂಕರ್ ಮಾಡ್ಸಿದ್ರೆ ಸಾಕು. ಅದಕ್ಕೂ ಗಿರಾಕಿನ ಹುಡ್ಕಿ ಇಟ್ಟಿದ್ದೀನಿ" ಎಂದ. ಅವನ ಕೆಲಸ ಫಲಿಸಿತ್ತು. ಮೆಕ್ಯಾನಿಕ್ ರಾಜು ಇವನ ಏಜೆಂಟ್. ಕೈಯಿಂದ ಕೈಗೆ ಕಾರು ಬದಲಾವಣೆ. ಸಾವಿರ ಗಟ್ಟಲೇ ಲಾಭದ ಜೊತೆ ಪ್ರಾಮಾಣಿಕತೆಯ ಬಗ್ಗೆ ಯೋಚಿಸಿದ್ದ. ಬಂದ ಲಾಭದಲ್ಲಿ ಅವನಿಗೆ ಮೂವತ್ತು ಪರ್ಸೆಂಟ್. ಇವ್ನಿಗೆ ಎಪ್ಪತ್ತು. ಮೊದಲು ಗುರುಮೂರ್ತಿಗಳು ಕೂಲಿಯಂತೇ ಏನೋ ಒಂದಿಷ್ಟು ಕೊಡುತ್ತಿದ್ದರು. ಇವನಷ್ಟು ನಿಖರವಾಗಿರಲಿಲ್ಲ. ಅಲ್ಲಿ ಕೈ ತೊಳೆದುಕೊಂಡು ಇವನಿಗೆ ಇಷ್ಟವಾಗಿದ್ದ.

"ಎಲ್ಲಾ ನೀನೇ ಮಾತಾಡಿ ಮುಗ್ಸು. ನಾನು ಬೆಳಿಗ್ಗೆ ಬಂದು ನೋಡ್ತೀನಿ" ಫೋನಿಟ್ಟ. ರಜನಿಗೆ ಯಾಕೋ ಅನುಮಾನ. ಕಮಲ ಪರ್ಫ್ಯೂಮ್ ಏಜನ್ಸಿ ಕ್ಯಾನ್ಸಲ್ ಆದ ಜೊತೆಗೆ ಈಗ ವಿಶ್ವನಾಥಯ್ಯನವರ ಹೆಸರಿಗಿದೆ ಎನ್ನುವ ವಿಷಯ ಅವಳ ಕಿವಿಗೆ ಬಿದ್ದಿತ್ತು.

ಬಾಗಿಲಿಗೊರಗಿ ಹೇಳಿದಳು. "ಬರ್ತೀನಿ ವಿಕಾಸ್....." ರಿಸೀವರ್ ಇಟ್ಟು ಅವಳತ್ತ ನೋಡಿ ಮುಗುಳ್ನಕ್ಕ. "ಓ.....ಕೆ, ಆಲ್ ದಿ ಬೆಸ್ಟ್" ಮತ್ತೊಮ್ಮೆ ಶುಭ ಹಾರೈಸಿದ. ವಿಷಣ್ಣತೆಯ ನಗು ಅವನ ತುಟಿಯಂಚನ್ನ ಸವರಿತು. ಕೈಯೆತ್ತಿದ. ಸರಸರ ನಡೆದುಹೋದಳು.

ಕ್ಷಣ ಅವನ ಮನ ಬಿರುಗಾಳಿಯಾದರೂ ನಿಧಾನವಾಗಿ ಶಾಂತವಾಯಿತು. ಪವಿತ್ರತೆಯಿಂದಲೇ ಮದುವೆಯನ್ನು ಬಂಧನವಾಗಿ ಸ್ವೀಕರಿಸಿದ್ದ. ಯಾವುದೇ ಬೆಲೆ ಇಲ್ಲದೆ ತರಗಲೆಯಂತೆ ಗಾಳಿಯಲ್ಲಿ ಹಾರಾಡಿ ತಲೆ ಮರೆಸಿಕೊಂಡಿತು.

ಬೇಸರವಿದ್ದರೂ ಅವಳ ಮೇಲಿನ ಪ್ರೀತಿ ಒಂದಿಂಚು ಕಡಿಮೆಯಾಗಿರಲಿಲ್ಲ. ಅವನ ಮೈನ ರಕ್ತದ ಕಣಕಣದಲ್ಲಿ ಒಂದಾಗಿಸಿಕೊಂಡಿದ. ಬಾಳಿನುದ್ದಕ್ಕೂ ಕಳೆದ ಮಧುರ ಕ್ಷಣಗಳು ಉಳಿದುಹೋಗುವಂಥದ್ದು.

'ಪಂಕಜಮ್ಮ ಎಂದೂ ಮಗಳನ್ನ ಸುಖವಾಗಿರಲಿಕ್ಕೆ ಇಲ್ಲಿ ಬಿಡುತ್ತಿರಲಿಲ್ಲ. ಈಗ ಹೇಗೆಯೋ ಇದ್ದುಕೊಳ್ಳಿ' ಶುಭ ಹಾರೈಸಿದ. ಆದರೂ ಮನ ಏನೇನೋ ಲೆಕ್ಕಹಾಕುತ್ತಿತ್ತು.

"ಏನೋ ಇದು ?" ಒಳಗೆ ಬಂದ ಸುನಂದಮ್ಮ ಕಣ್ಣರಳಿಸಿದರು. ನೋಟವೆತ್ತಿದ. "ರಜನಿ ಕೊಟ್ಟು ಹೋದ್ಲು" ಆಕೆ ಕೈಯಲ್ಲಿಟ್ಟು ಹೊರ ನಡೆದ.

ದೂರದಲ್ಲಿ ಬರುತ್ತಿದ್ದ ಆಕಾರ ಸ್ಪಷ್ಟವಾದಾಗ ಮುಗುಳ್ನಕ್ಕ. "ನಮಸ್ತೆ ಸರ್" ಕೋಮಲ ನಿಂತಿದ್ದಳು. ತೀರಾ ಸೊರಗಿದಂತೆ ಕಂಡಳು. "ನಮಸ್ತೆ, ಇದೇನು ಹೀಗಾಗಿದ್ದೀರ ?" ವ್ಯಾಕುಲಗೊಂಡ. ಅವನ ನೆಚ್ಚಿನ ವಿದ್ಯಾರ್ಥಿ ಅವಳು. ಅಸೂಯೆಪಡುವವರು ಕೂಡ ಅವಳ ಬುದ್ಧಿ, ಶ್ರದ್ಧೆಯನ್ನು ಬೇಕಿತ್ತು.

ಕೋಮಲ ಬರೀ ನಕ್ಕಳು. ಆ ನಗುವಿನಲ್ಲಿ ಅವಳೆದೆಯ ವೇದನೆಯೆಲ್ಲ ಪುಟಿಯುವಂತಾಯಿತು.

"ಬನ್ನಿ...." ಒಳಗೆ ಕರೆದೊಯ್ದ. ನಾಲ್ಕಾರು ಬಾರಿ ಮನೆಗೆ ಬಂದಿದ್ದಳು. ತನಗೆ ಡೌಟ್ ಇರುವ ಕಡೆ ಅಂಡರ್‌ಲೈನ್ ಮಾಡಿಕೊಂಡು ತಿಳಿಯಲು ಬರುತ್ತಿದ್ದಳು. ಒಂದು ರೀತಿ ಹೆಚ್ಚೆನಿಸುವ ಅಭಿಮಾನ ವಿಕಾಸ್‌ಗೆ.

ನಾಲ್ಕಾರು ಮ್ಯಾಗಜಿಯನ್‌ಗಳನ್ನು ಅವಳ ಮುಂದೆ ಹಾಕಿ ಒಳಗೆ ಬಂದ. ಸುನಂದಮ್ಮ ಆ ಷಾಕ್‌ನಿಂದ ಇನ್ನು ಚೇತರಿಸಿಕೊಂಡಿರಲಿಲ್ಲ ಸರ ವಿನ್ನೂ ಆಕೆಯ ಕೈಯಲ್ಲೇ ಇತ್ತು. ವಿಕಾಸ್ ಹಗುರವಾಗಿ ತೆಗೆದುಕೊಂಡರೂ ಆಕೆ ಅಪಶಕುನ ಊಹಿಸಿ ನಡುಗುತ್ತಿದ್ದರು.

ಅರ್ಥ ಮಾಡಿಕೊಂಡ ವಿಕಾಸ್ ಆ ಸರವನ್ನು ತೆಗೆದು ಟೇಬಲಿನ ಡ್ರಾಯರ್‌ನೊಳಕ್ಕೆ ಹಾಕಿದ. "ಏನೇನೋ ಊಹಿಸ್ಕೋಬೇಡ. ನಾವು ಗಂಡ, ಹೆಂಡ್ತಿ ಅಲ್ಲಾಂತ ಕೋರ್ಟ್ ತೀರ್ಮಾನ ಮಾಡಿರೋವಾಗ ಈ ಸರಕ್ಕೇನು ಅರ್ಥ. ಸ್ವಲ್ಪ ಬೇರೆ ತರಹ ಯೋಚ್ಸಿ" ಭುಜದ ಮೇಲೆ ಕೈ ಹಾಕಿ ಸಂತೈಸಿದ. ಕೆನ್ನೆಯ ಮೇಲೆ ಉರುಳಿದ ಕಣ್ಣೀರಿನ ಬಿಂದುಗಳನ್ನು ತೋರು ಬೆರಳಿನಿಂದ ತೊಡೆದ.

"ಯಾರು ಯಾರಿಗೋ ಕಣ್ಣೀರು ಸುರಿಸಿ ವ್ಯರ್ಥ ಮಾಡ್ಬೇಡ. ಆ ಜನಕ್ಕೆ ಸುರಿಸಬೇಕಾದ್ದು.. ಕಣ್ಣೀರಲ್ಲ" ಹಲ್ಲುಗಳನ್ನು ಕಚ್ಚಿಡಿಸಿದ. "ಈಗ ಬದುಕುತಿರೋ ಬದುಕಿಗಿಂತ ವಿಭಿನ್ನವಾದ ಜೀವನವೊಂದಿದೆ ಅನ್ನೋದು ತೋರಿಸ್ಬೇಕು" ಎತ್ತಲೋ ನೋಡುತ್ತ ಹೇಳಿದ. ಅವನ ಕಣ್ಣುಗಳಲ್ಲಿ ಹಟ ಕಾಣಿಸಿಕೊಂಡಿತು.

ತಾಯಿಯೊಡನೆ ಹೊರಗೆ ಬಂದ. ಕೋಮಲು ಎರಡು ಕೈ ಜೋಡಿಸಿದಳು. "ನಮಸ್ಕಾರ, ಅಮ್ಮ" ಆಕೆ ಕಣ್ಣೀರಿನಲ್ಲಿ ನಕ್ಕರು. "ಮಾತಾಡಿ.... ಬರ್ತೀನಿ" ಒಳಗೆ ಹೋದರು. ಗೆಲುವಿನಿಂದಲೇ ಕೂತ.

"ಯಾಕೆ ಹೀಗಾಗಿದ್ದೀರಿ, ಕೋಮಲ ? ಏನು ವಿಷ್ಯ ?" ಕೇಳಬೋದು ತಾನೆ ?" ಎಂದಾಗ ಕೋಮಲ ಅತ್ತುಬಿಟ್ಟಳು. ಅವಳು ಅತ್ತಳೇದರೆ ಅವನಿಗೆ ನಂಬುವುದಕ್ಕಾಗಲಿಲ್ಲ. "ನಿಮ್ಗೆ ಅಳೋಕು ಬರುತ್ತೆ ಅಂತ ಆಯ್ತು! ನಾನು ನಿಮ್ಮನ್ನ ವಿಚಾರ್ಸಿಕೊಳ್ಳೋಕೆ ಸಂಕೋಚಪಡ್ಬೇಕಿಲ್ಲ. ಅಳು, ವೇದನೆ ಉಕ್ಕುವುದು ಆತ್ಮೀಯರೇ ಮುಂದೆ ಮಾತ್ರ ನೀರಾಳವಾಗಿ ಹೇಳಿದ. ತಕ್ಷಣ ಮುಖವೆತ್ತಿ ಅವನತ್ತ ನೋಡಿದಳು. ಏನೋ ಹೇಳುವ ಹಂಬಲಿಕೆ ಇದೆಯೆನಿಸಿತು ಅವನಿಗೆ.

ಅಷ್ಟರಲ್ಲಿ ಸುನಂದಮ್ಮ ನಾಲ್ಕಾರು ಕೋಡುಬಳೆಗಳನ್ನು ಒಂದು ತಟ್ಟೆಯಲ್ಲಿ ಹಾಕಿಕೊಂಡು ಕೋಮಲ ಮುಂದಿಟ್ಟರು. "ತಗೋಮ್ಮ, ಬಹಳ ಅಪರೂಪವಾಗಿ ಬಂದಿದ್ದೀಯಾ" ಆಗಾಗ ವಿದ್ಯಾರ್ಥಿಗಳು, ವಿದ್ಯಾರ್ಥಿನಿಯರು ಬರುತ್ತಿದ್ದುದು ಆಕೆಗೆ ಅಪರೂಪವಲ್ಲ. ತನ್ನ ಮಗ ಬಹಳ ಬುದ್ಧಿವಂತ ಎನ್ನುವ ಹೆಮ್ಮೆ.

ಸುನಂದಮ್ಮ ನಾಲ್ಕಾರು ಮಾತಾಡಿ ಎದ್ದು ಹೋದಾಗ ಕೋಮಲ "ಐ ಯಾಮ್ ಸಾರಿ ಸರ್, ನಂಗೆ ವಿಷ್ಯ ತಿಳ್ದಾಗ ನಂಬೋಕೆ ಆಗ್ಲಿಲ್ಲ. ನಿಮ್ಮಂಥವ್ರು ಬದ್ಕಿನಲ್ಲಿ ಇಂಥ ಅಘಾತ ಎದುರಾಗ್ಬಾರ್ದಿತ್ತು !" ನೋವಿನಿಂದ ಹೇಳಿದಳು. ವ್ಯಂಗ್ಯವಾಗಲಿ, ಅಣಕವಾಗಲಿ ಇರಲಿಲ್ಲ- ವ್ಯಥೆಯ ನೆರಳಿತ್ತು.

ಒಂದೆರಡು ನಿಮಿಷ ಸುಮ್ಮನೆ ಕೂತುಬಿಟ್ಟ ವಿಕಾಸ್. ಇಂಥ ಸಂದರ್ಭ ಎದುರಾದಾಗ ಹಗುರವಾಗಿ ತೇಲಿಸುತ್ತಿದ್ದ. "ಅದೇನು ಅಂತ ಆತಂಕದ ವಿಷ್ಯ! ಜೊತೆಯಾಗಿ ಹಾವು, ಮುಂಗಸಿಯಂತೆ ಕಾದಾಡಿ ಬದುಕೋಕ್ಕಿಂತ ಇಷ್ಟವಿಲ್ಲದಾಗ ಬೇರೆಯಾಗೋದು ಉತ್ತಮ. ಒಂದು ರೀತಿ ಛೇಂಜ್!" ಕಣ್ಣೊಡೆದು ಬಾಯಿ ತೆರೆದವರ ಬಾಯಿಗೆ ಪ್ಲಾಸ್ಟರ್ ಹಾಕಿದ್ದ. ಹಾಗೆ ಇಂದು ಮಾಡಲಾಗಲಿಲ್ಲ ಅವನಿಗೆ.

ನಿಧಾನವಾಗಿ ತಲೆಯೆತ್ತಿದವನು ಕೋಮಲ ಕಡೆ ನೋಡಿದ. "ನಿಮ್ದು ಸಿಂಪತಿನಾ ? ಪ್ರತಿಭಟನೆಯಾ ? ಇಲ್ಲು ಕೂಡ ಸ್ಪೋರ್ಟಿವ್ ಆಗಿ ತಗೋ

ತೀನಿ. ಅದು ಅನಿವಾರ್ಯ ಕೂಡ. ಡೈವೋರ್ಸ್ ವಿಷ್ಯದ ಯಾವುದೇ ಮಾತು ಗಳು ನನ್ಮೇಲೆ ಪರಿಣಾಮ ಬೀರಲಾಗದು. ನಾನು ಕೂಡ ನಿಮ್ಮ ಜೊತೆ ನಕ್ಕು ಬಿಡಬಲ್ಲೆ" ಅವನ ವಾದಸರಣಿಗೆ ಚಕಿತಳಾದಳು. ವಿಕಾಸ್‌ನ ಇಂಥ ವ್ಯಕ್ತಿತ ವನ್ನು ನೋಡಿಯೇ ಅವಳು ಮೆಚ್ಚಿಕೊಂಡಿದ್ದು. ಹಣೆಯ ಮೇಲಿನ ಬೆವರನು ಕರ್ಚಿಫ್‌ನಿಂದೊತ್ತಿದಳು.

"ಬಂದೆ..." ಎದ್ದು ಒಳಗೆ ಹೋದ ಸುನಂದಮ್ಮ ದೇವರ ಮುಂದೆ ಕಣ್ಮುಚ್ಚಿ ಕೂತಿದ್ದರು. ಕರೀಮಣಿ ಸರ ಮಂದಾಸನದ ಮುಂದಿನ ತಟ್ಟೆಯ ಲ್ಲಿತ್ತು. 'ತನ್ನ ಮಗನಿಗೆ ಕೇಡಾಗದಿರಲಿ ಎಂಬ ಪ್ರಾರ್ಥನೆ ಸಲ್ಲಿಸುತ್ತಿರಬಹುದು' ಈಗ ಪಂಕಜಮ್ಮ, ರಮಣಿ, ರಂಜಿತಾ, ರಜನಿಯ ವ್ಯಕ್ತಿತ್ವ ಕರಗಿ ತಾಯಿ ಯೊಬ್ಬಳು ಮಾತ್ರ ಹೆಣ್ಣಾಗಿ ಕಂಡಳು. "ಅಮ್ಮ....ಭುಜದ ಮೇಲೆ ಕೈ ಇಟ್ಟ" ಅವ್ಳು ನನ್ನ ಹೆಂಡ್ತೀನೆ ಅಲ್ವೇ ಇರೋವಾಗ....ಅವ್ಳು ತಾಳಿ ತೆಗ್ದ ಮಾತ್ರಕ್ಕೆ ನಂಗೇನು ಆಗುತ್ತೆ ? ಹೃದಯಕ್ಕೆ ಬೆಲೆ ಇಲ್ದೇ ಹೋದಾಗ ಇಂಥ ಲಾಂಛನಗಳಿಂದ ಪ್ರಯೋಜನವೇನು ?" ಆಕೆ ತಲೆ ದೂಗಿದರು. ಮಗ ಹೇಳಿದ್ದು ಆಕೆಗೆ ಸರಿಯೆನಿಸಿರಬಹುದು.

ವಿಕಾಸ್ ಹೊರಗೆ ಬಂದಾಗಲೂ ಕೋಮಲ ಮೌನವಾಗಿ ಕೂತಿದ್ದಳು. ಅವಳಿಗೆ ಇನ್ನು ಅನುಮಾನ. ವಿಕಾಸ್ ಅಂಥ ವ್ಯಕ್ತಿ ಬದುಕನ್ನು ಅಷ್ಟೊಂದು ಹಗುರವಾಗಿ ನೋಡಲಾರ.

"ಅರೆ, ಸುಮ್ನೇ ಕೂತಿದ್ದೀರಲ್ಲ, ರುಚಿ ನೋಡಿ" ತಾನೊಂದು ಕೈಗೆ ತಗೊಂಡು ಅವಳ ಸಂಕೋಚವನ್ನು ಸ್ವಲ್ಪ ಕಡಿಮೆ ಮಾಡಿದ. "ಧೈರ್ಯವಾಗಿ ಮಾತಾಡಿ. ನಿಮ್ಮ ವಕಾಲತ್ತು ಕೂಡ ಹೆಣ್ಣಿನ ಪರವೇ ? ಷೂರ್ ತಾನೆ" ಸದಾ ಆ ವಿಷಯದ ಬಗ್ಗೆ ಮಾತಾಡಿ ಕಾಡುವ ಜನರ ಬಗ್ಗೆ ಅವನಿಗೆ ರೋಷ. ಆದರೆ ಕೋಮಲ ಬಗ್ಗೆ ಅವನು ಬಲ್ಲ. ಉತ್ತಮ ವಿದ್ಯಾರ್ಥಿನಿಯಾಗಿದ್ದ ಅವಳ ವಿವೇಚನೆಯ ಮಟ್ಟವು ಮೇಲ್ಮುಖವಾಗಿಯೇ ಇತ್ತು.

"ಡೈವೋರ್ಸ್ ವಿಷ್ಯ ನಿಜ್ವಾ ?" ಅವಳ ಸ್ವರದಲ್ಲಿ ಇನ್ನು ಅನುಮಾನ ಇಣಕಿದಾಗ ಸಣ್ಣಗೆ ನಕ್ಕ. ಒರಟಾಗಿ ಹೇಳಬಲ್ಲವನಾಗಿದ್ದ. ಆದರೆ ಹೇಳ ಲಾರ !

ಮುಂದಿದ್ದ ಪೇಪರ್ ಮಡಚಿ ಪಕ್ಕಕ್ಕಿಟ್ಟ "ಯಾಕೆ ಅನುಮಾನ ?

ಕಾನೂನಿನ ಪ್ರಕಾರ ನಾವೀಗ ಗಂಡ, ಹೆಂಡ್ತಿ ಅಲ್ಲ." ಕಹಿಯನ್ನು ಬದಿಗೊತ್ತಿ ಸ್ವರಕ್ಕೆ ಸಿಹಿ ಬೆರೆಸಿದ. ಈಚೆಗೆ ಅಭ್ಯಾಸವಾಗಿತ್ತು ಈ ತರಹ.

ಕೋಮಲ ತಲೆ ತಗ್ಗಿತು. ವಿಕಾಸ್ ಬದುಕಿನಲ್ಲಿ ಇಂಥ ಆಘಾತವಾಗುವುದು ಅವಳಿಗೆ ಬೇಕಿರಲಿಲ್ಲ. "ಈಗ್ಲೂ ನಂಗೆ ನಂಬಿಕೆ ಬರ್ತಾ ಇಲ್ಲ. ನಿಮ್ಮಂಥ ಗಂಡಿನ ಜೊತೆ ಬಾಳಲಾರದ್ದು ರಜನಿ ದುರಾದೃಷ್ಟ. ಷಿ ಈಸ್ ಅನ್‌ಲಕ್ಕೀ" ವೇದನೆ ಪುಟಿದಾಗ ಚಕಿತನಾದ ವಿಕಾಸ್. ವ್ಯಂಗ್ಯ, ಸಹಾನುಭೂತಿಯಲ್ಲದ ಯಾವುದೋ ಭಾವ.

ಮೌನವಾಗಿ ಕೂತ ವಿಕಾಸ್ ತುಟಿ ಬಿಚ್ಚಿದ. "ಇದು ಬರೀ ನಿಮ್ಮ ಅನಿಸಿಕೆ. ರಜನಿಯ ಬದ್ಕಿನ ದೃಷ್ಟಿಯೆ ಬೇರೆ. ಅದ್ರಲ್ಲೂ ಮಧ್ಯಮ ದರ್ಜೆಯ ಜನರ ಬದ್ಕಿನ ಬಗ್ಗೆ ಅವ್ಳ ಮನೆಯವ್ರಿಗೆಲ್ಲ ಜಿಗುಪ್ಸೆ. ಕಾರು, ಬಂಗ್ಲೆ, ಪಾರ್ಟಿಗಳು ಇಲ್ದ ಜೀವನ ಅವರುಗಳ ದೃಷ್ಟಿಯಲ್ಲಿ ನೀರಸ. ಅದು ತಪ್ಪೆಂತ ವಾದಿಸೋದು ನಂಗಿಷ್ಟವಿಲ್ಲ. ಬೇರೊಬ್ಬರ ಬದ್ಕನ್ನು ಶಾಸಿಸೋದು ಪ್ರಜಾಪ್ರಭುತ್ವದ ಲಕ್ಷಣವಲ್ಲ ಈಗ ನಂಗೂ ಆರಾಮ, ಅವ್ಳು ತನಗೇ ಇಷ್ಟ ಬಂದ ರೀತಿಯಲ್ಲಿ ಲೈಫ್‌ನ ರೂಪಿಸಿಕೊಳ್ಳೋಕು ಅನ್ಕೂಲ. ನಂಗೇನು ಸಂಕಟವಿಲ್ಲ" ಇದಿಷ್ಟು ದೀರ್ಘವಾಗಿ ಹೇಳಿಕೊಳ್ಳುವಷ್ಟು ಸಮರ್ಥನಾದೆ. ಮನ ಬಿಚ್ಚಿ ಯಾರೊಂದಿಗೂ ಹೀಗೆ ಮಾತಾಡಿರಲಿಲ್ಲ.

ಕೋಮಲ ಮೌನವಾಗಿ ಕೂತಿದ್ದಳು. ಅವಳ ಕಣ್ಮುಂದೆ ಸುಳಿದಿದ್ದು ರಜನಿಯ ಮುಖ. ವಿಷಣ್ಣತೆಯ ನಗು ಅವಳ ತುಟಿಯಂಚನ್ನು ಸವರಿತು.

ವಿಕಾಸ್ ತನ್ನ ವಿಷಯದಿಂದ ಹೊರಗೆ ಬಂದ. "ಈಗ ನಿಮ್ಮ ವಿಷಯ ಹೇಳಿ ? ಯಾಕೆ ಎಂ.ಎಸ್‌ಗೆ ಸೇರ್ಕೊಳ್ಳಿಲ್ಲ. ನಿಮ್ಮಂದ ಇಂಟಲಿಜೆಂಟ್ ಸ್ಟೂಡೆಂಟ್ಸ್ ಓದು ಮುಂದು ವರಿಸಿಲ್ಲಾಂದೆ ಹೇಗೆ ?" ಸ್ವಲ್ಪ ಸೀರಿಯಸ್ಸಾಗಿಯೇ ಕೇಳಿದ. ಅವಳಿಗೆ ಫಿಜಿಕ್ಸ್ ಮೇಲಿದ್ದ ಇಂಟರೆಸ್ಟ್, ಜ್ಞಾನ ನೋಡಿ ಕೆಲವೊಮ್ಮೆ ಅವನೇ ಮುಗ್ಧನಾಗಿ ಚಿಡುತ್ತಿದ್ದ.

"ಇಷ್ಟ ಆಗ್ಲಿಲ್ಲ" ಚುಟುಕಾಗಿ ಹೇಳಿದಳು.

ವಿಕಾಸ್ ಚಕಿತನಾದ. ಅವಳ ವಿದ್ಯಾಭ್ಯಾಸ ಮುಂದುವರಿಯದಿದ್ದಕ್ಕೆ ಅವಳ ಮನೆಯವರು ಕಾರಣವೆಂದುಕೊಂಡಿದ್ದ ಅಥವಾ ಆರ್ಥಿಕ ಅಭದ್ರತೆ ಇರಬಹುದೆಂದು ಊಹಿಸಿದ್ದ. ಇಲ್ಲಿ ಎರಡು ತಲೆಕೆಳಕು.

"ಐ ಡೋಂಟ್ ಬಿಲೀವ್" ಎಂದಾಗ ಮೇಲೆದ್ದಳು. "ಷೂರ್ ಸರ್, ಮುಂದೆ ನನ್ಕೈಯಲ್ಲಿ ಓದೋಕಾಗೋಲ್ಲ ಅನ್ನಿಸ್ತು, ಸುಮ್ಮನಾದೆ" ವಿಕಾಸ್ ನಕ್ಕುಬಿಟ್ಟ. ಹೆಣ್ಣು ಯಾರಿಗೂ ಅರ್ಥವಾಗದವಳು ಅನ್ನಿಸಿತು.

ಕೋಮಲ ಸ್ವಲ್ಪ ಧೈರ್ಯವಹಿಸಿದಳು. "ನಂಗೇನು ಹಣದ ಅಗತ್ಯ ವಿಲ್ಲ. ಆದ್ರೂ ಟೈಮ್ ಪಾಸ್ ಮಾಡೋಕೆ ಯಾವುದಾದ್ರು ಕೆಲ್ಸ ಬೇಕು. ಲೈಬ್ರರಿಯಲ್ಲಿರೋ ಬುಕ್ಸ್‌ನೆಲ್ಲ ಹೆಚ್ಚು ಕಡ್ಮೆ ಓದಿಬಿಟ್ಟಿದ್ದೀನಿ. ಹೀಗೆ ಸುಮ್ನೆ ಕೂತು ಓದಿದ್ರೆ ನನ್ನ ಕಣ್ಣುಗಳಿಗೆ ಯಾವ ಗ್ಲಾಸ್‌ಗಳೂ ಆಗೋಲ್ಲ, ಅಥ್ವಾ ಮೆಂಟಲ್ ಆಸ್ಪತ್ರೆಯಲ್ಲಿ ಒಂದು ಸೀಟು ರಿಸರ್ವ್ ಮಾಡ್ಸಬೇಕು, ಅಡ್ವಾನ್ಸಾಗಿ ಈಗ್ಲೇ. ನಂಗೆ ಈಗ್ಲೇ ಊಟ, ತಿಂಡಿ ಜ್ಞಾಪಕವೇ ಇಲ್ಲದಂಗಾಗಿದೆ. ಹೊಟ್ಟೆ ಹಸಿದ್ರೆ ಮಾತ್ರ ಊಟ" ಅವಳ ಕಣ್ಣಂಚಿನಲ್ಲಿ ಜಿನುಗಿದ ಕಂಬನಿಯ ಬಿಂದುಗಳು ಕೆನ್ನೆಯ ಮೇಲೆ ಹರಿಯಿತು. ಎಷ್ಟು ಗೆಲುವಾಗಿ ಕಾಣುತ್ತಿರುವ ಹೆಣ್ಣಿನ ಹೃದಯದಲ್ಲಿ ಇಷ್ಟೊಂದು ದುಃಖವಿದೆಯೇ ? ಕ್ಷಣ ದಿಗ್ಮೂಢನಾದ.

ಕೋಮಲ ಹೋದ ಎಷ್ಟೋ ಹೊತ್ತಿನವರೆಗೂ ಅವಳ ಬಗ್ಗೆಯೇ ಯೋಚಿಸುತ್ತಿದ್ದ. ಎದ್ದು ಒಳಗೆ ಹೋದವನು ತಾಯಿಯ ಮುಂದೆ ವಿಷ್ಯ ಇಟ್ಟ.

"ಅಮ್ಮ, ಅಣ್ಣನಿಗೆ ಸಹಾಯಕಳಾಗಿ ಕೋಮಲನ ಯಾಕೆ ನೇಮಿಸ್ಕೋಬಾರ್ದು. ನಾನಂತೂ ಪೂರ್ತಿಯಾಗಿ ಏಜನ್ಸೀ ಬಗ್ಗೆ ತಲೆ ಕೆಡ್ಸಿಕೊಳ್ಳೋಕಾಗೋಲ್ಲ. ಅವ್ಳಿಗೆ ಇಂಟರೆಸ್ಟ್ ಇದೆ. ಅಂಥ ದೊಡ್ಡ ಸಂಬ್ಳವೇನು ಕೋಮಲ ನಿರೀಕ್ಷಿಸೋಲ್ಲ."

ಈ ವಿಚಾರ ಸುನಂದಮ್ಮನಿಗೆ ಇಷ್ಟವಾಗದಿದ್ದರೂ ಆಮೇಲೆ ಸರಿಯೆನಿಸಿತು. ಮೊದಲು ಮಂಕಾಗಿ ಕೂಡುತ್ತಿದ್ದ ವಿಶ್ವನಾಥಯ್ಯನವರು ಓಡಾಡುತ್ತಿದ್ದರು. ಈ ಏಜನ್ಸಿಯಿಂದ ಅವರಲ್ಲಿ ಉತ್ಸಾಹ ಮೂಡಿದ್ದು ಮಾತ್ರವಲ್ಲ ಹಟ ಹುಟ್ಟಿಕೊಂಡಂತಾಗಿತ್ತು.

"ನೀನು ಸರೀಂದ್ರೆ....ಸರಿ, ನಂಗೆ ಇವೆಲ್ಲ ಗೊತ್ತಾಗೋಲ್ಲ" ಮಗನಿಗೆ ಬಿಟ್ಟು ಒಳಗಿನ ಕೆಲಸ ನೋಡಲು ಹೋದರು.

ರಿಸೀವರ್ ಎತ್ತಿ ಡಯಲ್ ತಿರುಗಿಸಿದ "ಹಲೋ...." ಅವನೇ ಎತ್ತಿದ್ದು

ರಿಸೀವರ್. ಅವನ ಮೇಲೆ ಬೇಕಾದಷ್ಟು ಪತ್ರಗಳನ್ನು ಕಾಲೇಜು ಕಮಿಟಿಗೆ ಬರೆಸಿ ವಿಕಾಸ್‌ನ ಕೆಲಸದಿಂದ ವಜಾ ಮಾಡಲು ಬಹಳ ಪ್ರಯತ್ನಪಟ್ಟಿದ್ದರು ಗುರುಮೂರ್ತಿಗಳು. ಅದೆಲ್ಲ ಅವರಿಗೆ ಗೊತ್ತು. "ನಾನು ಹೇಳಿದ್ದು ಏನ್ಮಾಡ್ದೆ?" ಮೆಕ್ಯಾನಿಕ್ ರಾಜು ಜೋರಾಗಿ ನಕ್ಕ. "ನೀವ್ಗೇ ಯೋಚ್ನೇನೇ ಬೇಡ. ನಾಳೆ ಹೊತ್ಗೇ ಇನ್‌ಫರ್‌ಮೇಷನ್ ಸಿಕ್ಕುತ್ತೆ."

ವಿಕಾಸ್ ನಿಧಾನವಾಗಿ ಫೋನನ್ನ ಕ್ರೇಡಲ್ ಮೇಲಿಟ್ಟ. ಅವನು ಬಯಸಿದ್ದು ಶಾಂತವಾದ ಬದುಕು. ಪೂರ್ತಿ ತನ್ನ ವೃತ್ತಿಯಲ್ಲೇ ಮಗ್ನನಾಗ ಬೇಕೆಂಬ ಆಸೆ. ರಜನಿ ಬದಲಾವಣೆ ತಂದಳು. ಇದು ತಾತ್ಕಾಲಿಕ.

○ ○ ○ ○

ಬ್ರೇಕ್‌ಫಾಸ್ಟ್ ಮುಗಿಸಿದ ಗುರುಮೂರ್ತಿಗಳು ಬಂದು ತಮ್ಮ ಸಿಟ್ಟಿಂಗ್ ರೂಮಿನಲ್ಲಿ ಕೂತರು. ಸಿಗರೇಟು ಸೇದುತ್ತಿದ್ದ ಪ್ರಕಾಶ್ ಎದ್ದು ಆಷ್‌ಟ್ರೇನೊಳಕ್ಕೆ ಬೂದಿ ಕೊಡವಿದ.

"ಎಲ್ಲಿ ಸತ್ರು ಅವರೆಲ್ಲಿ ! ವ್ಯಾಪಾರ ಇಷ್ಟೊಂದು ಡಲ್ಲಾಂದ್ರೆ....ಬೀದಿ ಯಲ್ಲಿ ಬಿಕ್ಷೆ ಬೇಡೋಕೆ ಹೋಗ್ಬೇಕಾಗುತ್ತೆ" ಮಗನ ಮೇಲೆ ರೇಗಿದರು. ಪ್ರಕಾಶ್ ಬೇಸರದಿಂದ ಉರಿಯುತ್ತಿದ್ದ ಸಿಗರೇಟನ್ನು ಒರಟಾಗಿ ಆಷ್‌ಟ್ರೇ ನೊಳಕ್ಕೆ ಅಮುಕಿದ ಇಂಥ ಸಿಡಿಮಿಡಿ ಅವನಿಗೆ ಇಷ್ಟವಾಗೋಲ್ಲ.

ಫೋನ್ ರಿಂಗಾಯಿತು. ಪ್ರಕಾಶ' ತಾನೇ ಎತ್ತಿದ. "ಇವತ್ತು ಏನೇನು ವ್ಯಾಪಾರ ಇಲ್ಲ. ನಮ್ಗಿಂತ ಕಡ್ಮೇ ಬೆಲೆಗೆ ಯಾರೋ ಮಾರಿಸ್ತಾ ಇದ್ದಾರೆ. ಫುಲ್....ಡಲ್.....ಇದು ಬಿಟ್ಟು ಆರಾಮಾಗಿ ನನ್ನ ಪಾನ್, ಸುಫಾರಿ ಅಂಗ್ಡೀ ನೋಡ್ಕೋತೀನಿ" ಪ್ರಕಾಶ್ ಹಲ್ಮುಡಿ ಕಚ್ಚಿ ರಿಸಿವರನ್ನು ಕುಕ್ಕಿದ. ಅವನಿಗೆ ರಿಸ್ಕ್ ತಗೊಂಡೇ ಅಭ್ಯಾಸವಿಲ್ಲ. ಆರಾಮಾಗಿ ಸಿಗರೇಟು ಸೇದಿಕೊಂಡು ಕಾಲ ಕಳೆದುಬಿಡುತ್ತಿದ್ದ.

ಅವರು ನಡೆಸುತ್ತಿದ್ದ ಪ್ರಾಮಾಣಿಕ ವಹಿವಾಟಿನಿಂದ ಬರುತ್ತಿದ್ದ ಲಾಭ ಕಡಿಮೆ ಮಾತ್ರವಲ್ಲ, ಸರ್ಕಾರಕ್ಕೆ ಸಮಾಜಕ್ಕೆ ಕಣ್ಣೊರೆಸಲು ಇದೊಂದು ದಾರಿ. ಇವುಗಳ ನಡುವೆ ಹಳೇ ಕಾರುಗಳನ್ನ ತೀರಾ ಕಡಿಮೆ

ಬೆಲೆಗೆ ಬ್ರೋಕರ್‌ಗಳ ಮುಖಾಂತರ ಕೊಂಡು, ಅಲ್ಪ ಸ್ವಲ್ಪ ರಿಪೇರಿ ಮಾಡಿಸಿ ಮಾರಿಸಿ ತಾವು ಹಿಂದೆ ಉಳಿಯುವುದು. ಕಾಲೇಜು ಸ್ಟೂಡೆಂಟ್ಸ್‌ನಿಂದ ಶೀರಾ ಬಡವರವರೆಗೂ ಹೆರಾಯಿನ್‌ನಿಂದ ಬ್ರೌನ್ ಷುಗರ್‌ವರೆಗೂ ಮಾರಿಸುವುದು. ಹಲವಾರು ವರ್ಷಗಳಿಂದ ಇವನ್ನು ನಡೆಸಿಕೊಂಡು ಬರುತ್ತಿದ್ದರು.

ಮಗನ ಭುಜದ ಮೇಲೆ ಕೈ ಹಾಕಿದರು ಗುರುಮೂರ್ತಿಗಳು. "ಆ ಪಾನ್ ಮಸಾಲ ಏನೋ ನಾಟ್ಕ ಆಡ್ತಾ ಇದ್ದಾನೆ. ಇನ್ನಷ್ಟು ಲಾಭದ ಆಸೆಗೆ ಅನ್ನೇ ಈ ಕೆಲ್ಸ ಬೇರೆಯವ್ರಿಗಾಗಿ ಮಾಡ್ತಾ ಇರ್ಬೇಕು. ಸ್ವಲ್ಪ ಹೋಗಿ ನೋಡು" ನಯವಾಗಿ ಹೇಳಿದರು. ಅವನು ಮೈ ನೋಯಿಸಿಕೊಳ್ಳುವ ವ್ಯಕ್ತಿಯಲ್ಲವೆಂದು ಅವರಿಗೆ ಗೊತ್ತು. ಸೋಮಾರಿತನಕ್ಕೆ ಹಲವಾರು ಕಾರಣ ಗಳು ಇರಬಹುದು, ಅದರಲ್ಲಿ ತಮ್ಮ ಮೂರ್ಖತನವು ಒಂದೆಂದು ಅವರಿಗೆ ಗೊತ್ತು.

ಪ್ರಕಾಶ್ ಮೊದಲು ಕೊಡವಿದ. "ಬೇಕಾಪ್ರೆ ಫೋನ್ ಮಾಡ್ತೀನಿ. ಇಲ್ಲಾ ಯಾರಿಗಾದ್ರೂ ಹೇಳಿ....ಕೈಕಾಲು ಮುರುಸ್ತೀನಿ" ಜೋರು ಮಾಡಿದ. ಇದುವರೆಗೂ ಗುರುಮೂರ್ತಿಗಳು ಮಾಡದ ಕೆಲಸ ಇದೊಂದೇ. "ಪೂಲಿಷ್, ಹೋಗಿ ಕಂಬಿ ಎಣಿಸ್ಬೇಕಾಗುತ್ತೆ. ಉಪಾಯದಿಂದ ಮಾಡೋ ಕೆಲ್ಸಕ್ಕೆ ಕೊಡ್ಲೀ ತಗೋಳೋದು ಮೂರ್ಖತನ. ಅವನನ್ನು ಹೋಗಿ ಭೇಟಿ ಮಾಡು. ನೀನೇ ಅಂಗ್ಡಿ ಹತ್ರ ಹೋಗ್ಬೇಡ" ಎಚ್ಚರಿಕೆಯ ಜೊತೆ ಮಗನನ್ನು ಪುಸ ಲಾಯಿಸಿ ಕಳಿಸಿದರು.

ಇತ್ತೀಚಿಗೆ ಷುರುವಾದ ಈ ತೊಂದರೆಗಳ ಹಿಂದೆ ಯಾರಾದರೂ ಇರ ಬಹುದ ? ಕಮಲ ಪರ್‌ಫ್ಯೂಮ್ ಕಂಪನಿಯ ಏಜನ್ಸಿಯನ್ನು ಪಡೆದುಕೊಂಡಿ ದ್ದವರ ಹಿನ್ನೆಲೆಯಲ್ಲಿ ವಿಶ್ಲೇಷಿಸಿ ನೋಡಿದರು.

ವಿಕಾಸ್ ಮಾಮೂಲಿಯಾಗಿ ಕಾಲೇಜಿಗೆ ಹೋಗಲು ಆಗಾಗ ಸ್ಕೂಟರ್ ಏರುತ್ತಿದ್ದ. ಅದು ಮಾರಿಯಾಗಿದೆ ಎನ್ನುವ ಸಮಾಚಾರ ಅವರಿಗೆ ಸಿಕ್ಕಿತ್ತು. 'ಪೂರ್ ಫೆಲೋ' ಎಂದು ನಕ್ಕಿದ್ದರು. ಅವರ ಬೆಟಾಲಿಯನ್‌ನಲ್ಲಿ ಬುದ್ಧಿವಂತಿಕೆ ಕಡಿಮೆ. ರಾಘವನ್‌ಗೆ ಸ್ವಲ್ಪ ಯೋಚಿಸುವ ಶಕ್ತಿ ಇದ್ದರೂ ಯೋಚಿಸಲಾರ. ರಮೇಶ್ ಹೇಳಿದಕ್ಕೆ ತಲೆಯಾಡಿಸಿದರೂ ತನಗಾಗುವ ಆರ್ಥಿಕ ಲಾಭದ ಬಗ್ಗೆಯೆ ಯೋಚನೆ. ಇನ್ನು ಪ್ರಕಾಶ್ ಹುಟ್ಟು ಸೋಮಾರಿ.

ಸಿಗರೇಟು ಸೇದೋದು, ಜೋರು ಮಾತುಗಳು ಆಡೋದು ಇವೆರಡೇ ಅವನಿಗೆ ಗೊತ್ತಿರೋದು. ಇನ್ನು ಪಂಕಜಮ್ಮ ಕಾರುಭಾರು ನಾನಾ ಕಡೆ ವ್ಯಾಪಿಸಿ ಕೊಂಡಿದ್ದರೂ, ಈಚೆಗೆ ಮೂಲೆಯಲ್ಲಿ ಕೂಡಿಸಿದಂತಾಗಿತ್ತು. ತನಿಖೆಯಿಂದ ಅನಾಥಾಶ್ರಮದ ಹಣದ ದುರುಪಯೋಗ ಸಾಬೀತಾಗಿತ್ತು. ಈಗ ಕೋರ್ಟು ಕಛೇರಿಯ ಓಡಾಟ.

ಬೈಕ್ ಹೊರಟಾಗ ಅದರ ವೇಗವನ್ನು ಲೆಕ್ಕ ಹಾಕಿಯೇ ಪ್ರಕಾಶ್‌ನ ಪರಿಸ್ಥಿತಿಯನ್ನು ಅರಿತುಕೊಂಡರು. 'ಯೂಸ್‌ಲೆಸ್ ಫೆಲೋ' ಕೆಲಸಕ್ಕೆ ಬಾರ ದವ. ಈ ವಿಷಯವಾಗಿಯಾದರೂ ಮಗನ ಬಗ್ಗೆ ಪ್ರಾಮಾಣಿಕ ಅಭಿಪ್ರಾಯ ವನ್ನು ಹೊಂದಿದ್ದರು.

ವರಾಂಡದಲ್ಲಿ ಕೂತ ಅವರು ಆಗಾಗ ಎದ್ದು ಶತಪಥ ಹಾಕತೊಡಗಿ ದರು. ಕಾರಿನ ಸದ್ದು ಕೇಳಿ ಬಾಲ್ಕನಿಗೆ ಬಂದರು. ತೂರಾಡುತ್ತಲೇ ಬಂದ ಪಂಕಜಮ್ಮ ತೀರಾ ಸುಸ್ತಾಗಿದ್ದರು.

"ಹಾಳು ಬಿ.ಪಿ. ನನ್ನ ಜೀವ ತಿಂತಾ ಇದೆ" ತೊದಲುತ್ತಲೇ ಕುಕ್ಕರಿಸಿ ದರು. "ಅವ್ರು ಹೊರಗ್ಗಿನ ಆಕ್ಟಿವಿಟೀಸ್‌ನ ಕಮ್ಮಿ ಮಾಡಿ ರೆಸ್ಟ್ ತಗೊಳ್ಳಿ. ಉದ್ವೇಗ ಒಳ್ಳೇದಲ್ಲ" ಡಾಕ್ಟರ್ ಸಾಕಷ್ಟು ಸಲ ಹೇಳಿದ್ದರು. ಅದು ಸಾಧ್ಯವೇ ? ಉರುಳು ಹಾಕಿಕೊಳ್ಳುವವರೆಗೂ ಅಷ್ಟೆ, ಆಮೇಲೆ ತಾನಾಗಿ ಬಿಗಿದುಕೊಳ್ಳುತ್ತದೆಯೆಂದು ಅವರಿಗೆ ಗೊತ್ತು. ತೀರಾ ಅಪಪ್ರಚಾರ ಎದುರಿ ಸುತ್ತಿರುವ ಆಕೆ ಸಮಾಧಾನವಾಗಿರಲು ಸಾಧ್ಯವಿಲ್ಲ. ಗೆಲುವು ಮನುಷ್ಯ ನನ್ನು ಯಾವ ಮಟ್ಟಕ್ಕೆ ಕೊಂಡೊಯ್ಯುತದೆಯೋ, ಸೋಲು ಅಷ್ಟೇ ಹೀನಾ ಮಾನವಾಗಿ ಭೂಗತ ಮಾಡುತ್ತೆ.

ಹೆಂಡತಿಯನ್ನು ಆಕೆಯ ಪಾಡಿಗೆ ಬಿಟ್ಟು ಫೋನ್ ಮುಂದೆ ಬಂದು ಕೂತವರು ನಾಲ್ಕಾರು ಜನಕ್ಕೆ ಫೋನ್ ಮಾಡಿದರು. ವಿಕಾಸ್‌ನ ಮೇಲೆ ಒಂದು ಕಣ್ಣಿಡುವಂತೆ ಈಗಾಗಲೇ ಹೇಳಿದ್ದರು.

ಒಂದು ವರಾಂಡದಲ್ಲಿ ಕೂತರು. ಕಾರಿನ ಕೀ ತಗೊಂಡು ಹೊರ ಬಂದರು. ಅಷ್ಟರಲ್ಲಿ ಜನ್ನು ಬರುತ್ತಿರುವುದನ್ನು ಕಂಡು ಹಿಂದಕ್ಕೆ ಬಂದು ಕೂತರು.

ವಂದಿಸಿದವನು ಅತ್ತಿತ್ತ ನೋಡಿದ. "ಏನಿಲ್ಲ ಸಾಬ್, ಮಾಮೂಲಾಗಿ

ಕಾಲೇಜಿಗೆ ಹೋಗಿ ಬರ್ತಾ ಇದ್ದಾರೆ....ಅಷ್ಟೊಂದು ಒಳ್ಳೆಯವರಾಗಿ ಕಾಣೋ ಅವರಿಂದ ಏನಾದೀತು ?" ತಲೆಯಾಡಿಸಿ ಬಿಟ್ಟ. ಚಿಂತಿತರಾದರು. ಹೋಗು ಎನ್ನುವಂತೆ ಸನ್ನೆ ಮಾಡಿದವರು ಒಳಗೆ ಬಂದರು.

ಮೆಕ್ಯಾನಿಕ್ ರಾಜುನ ಎಷ್ಟೋ ಸಲ ಸಂಪರ್ಕಿಸಲು ಪ್ರಯತ್ನಿಸಿ ನೋಡಿದ್ದರು. ಅವನದು ಒಂದೇ ಉತ್ತರ.

'ನಮಸ್ಕಾರ, ಇನ್ನು ನನ್ನ ಬಿಟ್ಬಿಡಿ. ಅವತ್ತು ನನ್ನ ಆ ಜನ ಪ್ರಾಣಾನೇ ತೆಗ್ದು ಹಾಕಿ ಬಿಡ್ತಾ ಇದ್ರು. ಎಂಗೋ ಬಚಾವ್ ಆದೆ. ಮುಂದೆ ಅಂಥ ನಮಕ್ ಹರಾಂ ಕೆಲ್ಸ ಬೇಡ".

ಅವನ ಮಾತುಗಳನ್ನು ಪೂರ್ತಿಯಾಗಿ ನಂಬಿರಲಿಲ್ಲ. ಮೆಕ್ಯಾನಿಕ್ ರಾಜು ಈಗಲೂ ಹಳೇ ಕಾರುಗಳನ್ನು ಕೊಂಡು ರಿಪೇರಿ ಮಾಡಿಸಿ ಮಾರುತ್ತಿದ್ದ. ಆದರೆ ಈಚೆಗೆ ಯಾವುದೇ ಕಂಪ್ಲೇಂಟ್ಸ್ ಇರಲಿಲ್ಲ.

ಅಸಹನೆಯಿಂದ ಹಾಲ್‌ನಲ್ಲಿ ಬಂದು ಕುಕ್ಕರಿಸಿದರು. ನೀರವತೆ ವ್ಯಾಪಿಸಿ ಕೊಂಡಿತ್ತು ಮನೆಯ ಪೂರ್ತಿ. ಹತ್ತು ನಿಮಿಷದಲ್ಲಿ ಬಂದ ಫೋನ್ ಅವರೆನ್ನೆತ್ತಿ ಬೀದಿಗೆ ಎಸೆದಂತಾಯಿತು.

"ನಿಮ್ಮ ಮಗನನ್ನು ಅರೆಸ್ಟ್ ಮಾಡಿದ್ದಾರೆ" ಚುಟುಕದ ಸುದ್ದಿ. ಅವರ ಜಂಘಾಬಲವೇ ಉಡುಗಿಹೋಯಿತು. ಸಮಾಜದಲ್ಲಿ ಪ್ರತಿಷ್ಠಿತ ವ್ಯಕ್ತಿಯವರ ಮಗ ಪೊಲೀಸರ ಕೈಯಲ್ಲಿ ಸಿಕ್ಕಿಬಿದ್ದಿದ್ದ. ಹಿಗೇಕೆ ?

o o • o

ವಿಕಾಸ್ ಕಾಲೇಜಿಗೆ ಹೊರಟಾಗ ಸುನಂದಮ್ಮ ಪರ್ಸ್ ವಿಷಯ ಪ್ರಸ್ತಾಪಿಸಿದರು. ವಿಕಾಸ್ ಅನುಮಾನಿಸಿದ. ಅವಳು ಯಾವುದೇ ಕಾರಣಕ್ಕೆ ಬಿಟ್ಟು ಹೋಗಿರಲಿ ಅವನ ಮನ ಸಂಶಯಿಸಿತು.

ಬಾಗಿಲವರೆಗೂ ಹೋದವನು ಹಿಂದಿರುಗಿದ "ಅವ್ಳೇ ಬಂದು ತಗೊಂಡ್ಹೋಗ್ತಾಳೆ. ಒಂದು ಕಡೆ ಇಟ್ಟುಬಿಡಮ್ಮ" ಹಣೆಯುಜ್ಜಿ ಹೇಳಿದ. ಆದರೂ ಅವನ ಮನದ ಆಂದೋಳನ ಮುಖದಲ್ಲಿ ಸ್ಪಷ್ಟವಾಗಿತ್ತು.

ಆಕೆ ಹೆದರಿದರು. "ಬೇಡಪ್ಪ....ಬೇಡ. ಪದೇ ಪದೇ ರಜನಿ ಈ ಮನೆಗೆ

ಬರೋದ್ಬೇಡ. ತೊಡೆದುಕೊಂಡ ಸಂಬಂಧ ದೂರಾನೇ ಉಳೀಲಿ. ನಾಳೆ ಇನ್ನಷ್ಟು ಹೊತ್ತುಕೊಳ್ಳುವುದು ಬೇಡ" ಸತ್ಯವನ್ನು ವಿಶ್ಲೇಶಿಸಿದ್ದರು. ಡೈವೋರ್ಸ್ ಸಿಕ್ಕ ಮೇಲೂ ಪಂಕಜಮ್ಮ ಹೇಳಿಕೊಳ್ಳುವುದು ನಿಂತಿರಲಿಲ್ಲ.

ಒಂದು ಕ್ಷಣ ಯೋಚಿಸಿದ ವಿಕಾಸ್ ನಿರ್ಧಾರಕ್ಕೆ ಬಂದ. "ಅವ್ಳಿಗೆ ಇಲ್ಲಿಗೆ ಮತ್ತೆ ಬರೋ ಮನಸಿರಲಾರ್ದು. ಬಹುಶಃ ಬಸ್ ಸ್ಟಾಪ್‌ಗೆ ಬಂದ್ರೆ ಕೊಡ್ತೀನಿ. ಅಥ್ವಾ ಯಾರ ಕೈಯಲ್ಲಾದ್ರೂ ಕೊಟ್ಟು ಕಳುಸ್ತೀನಿ" ಕೈಗೆತ್ತಿಕೊಂಡು ಮೃದುವಾಗಿ ಸವರಿದ. ಎದೆಯಲ್ಲಿ ಭಯಂಕರ ತಳಮಳ. ಪ್ರೀತಿಯ ಹೃದಯ ಸರೋವರದಲ್ಲಿ ಭಯಂಕರ ಆಂದೋಳನವನ್ನು ಎಬ್ಬಿಸಿ ಹೋಗಿದ್ದಳು. ಪ್ರಯಾಸದಿಂದ ಕಹಿಯನ್ನು ನುಂಗಿದ.

ಬಾಗಿಲವರೆಗೂ ಬಂದ ಸುನಂದಮ್ಮ ಕಣ್ತುಂಬಿ ಮಗನಿಗೆ ಹೇಳಿದರು.

"ನಮ್ಗೆ ಈ ಊರೇ ಬೇಡ ಕಣೋ! ಹೊರ್ಗೆ ತಲೆ ಇಟ್ರೆ ಇದೇ ಮಾತು ಗಳು. ಕೇಳಿ ಕೇಳಿ ಸಾಕಾಗಿದೆ, ನಾವು ಜನರ ಕಣ್ಣುಗಳಲ್ಲಿ ದೊಡ್ಡ ಅಪ ರಾಧಿಗಳು. ಏನು ಮಾಡಿದ್ವೋ, ಬಿಟ್ವೋ ಯಾರ್ಗೆ ಗೊತ್ತು"

ಸ್ವಲ್ಪ ದಿನಗಳ ಹಿಂದೆ ಸುನಂದಮ್ಮ ಇದೇ ಮಾತುಗಳನ್ನು ಆಡುತ್ತಿ ದ್ದರು. ಹಾಗೆಲ್ಲ ನಿರ್ಲಕ್ಷ್ಯದಿಂದ ಸಂತೈಯಿಸುತ್ತಿದ್ದ "ಆ ಅನ್ನೋ ಜನ ಯಾರು ? ನಾವು ಯಾಕೆ ಭಯಪಡ್ಬೇಕು. ನಾಲ್ಕು ದಿನ ಅಂದು ಸುಮ್ಮ ನಾಗ್ತಾರೆ" ಈಚೆಗೆ ಸುಮ್ಮನಿದ್ದ ಅವರ ಬಾಯಲ್ಲಿ ಇದೇ ಮಾತುಗಳ ಪುನರಾ ವರ್ತನೆ ಯಾಕೆ ? ಸಂಶಯಿತನಾದ.

ನಾಲ್ಕು ಹೆಜ್ಜೆ ಹಿಂದಕ್ಕೆ ಬಂದ "ಅಮ್ಮ, ಬೇರೇನೋ ಇದೆ ವಿಷಯ. ಮುಚ್ಚಿಡ್ದೆ ಹೇಳು" ಒತ್ತಾಯಿಸಿದ. ಆಮೇಲೆ ಅವರು ಬಾಯಿ ಬಿಟ್ಟಿದ್ದು "ನಮ್ಗೆ ಯಾಕೆ ಬೇಕಾಗಿತ್ತೋ, ಆ ಏಜನ್ಸಿ ? ನಾಳೆ ಏನಾದ್ರೂ ಹೆಚ್ಚು ಕಡ್ಮೆಯಾದ್ರೆ" ಅವನಿಗೆ ಅರ್ಥವಾಗಿತ್ತು. ಮತ್ತೆ ಪ್ರಶ್ನಿಸುವುದು ಬೇಡವೆನಿ ಸಿತು. ಏನು ಮಾಡಿದ್ರೂ ಯೋಚ್ಸಿ....ನ್ಯಾಯವಾದದ್ದೇ ನಿನ್ನ ಮಗ ಮಾಡ್ತಾನೆ" ಹೊರ ನಡೆದ.

"ಗುಡ್ ಮಾರ್ನಿಂಗ್ ಸರ್...." ಕೋಮಲ ಸ್ವರ. ಅವನ ಮುಖದ ಗಂಟುಗಳು ಒಂದೊಂದಾಗಿ ಬಿಚ್ಚಿಕೊಂಡವು. ವಾಚ್ ಕಡೆ ನೋಡುತ್ತ "ಹತ್ತು ನಿಮಿಷ ಲೇಟು" ಕೋಮಲ ಸಂಕೋಚಿಸಿದಾಗ ನಸುನಕ್ಕ. "ಅದ್ಕೆ

ಅಮ್ಮನೇ ಪನಿಶ್‌ಮೆಂಟ್ ಕೊಡ್ತಾರೆ. ಯಾವ್ದೇ ಫೋನ್ ಬಂದ್ರೂ ಅಮ್ಮ ರಿಸೀವ್ ಮಾಡೋಕೆ ಬಿಡ್ಬೇಡ" ಎಚ್ಚರಿಸುವುದನ್ನು ಮರೆಯಲಿಲ್ಲ.

ಅಷ್ಟು ಬಂದ ಮೇಲೆ ಕೆಲವು ವಿಷಯಗಳಲ್ಲಿ ಹಗುರವಾದ. ಕಮಲ ಪರಾಪ್ಯೂಮ್ ಕಡ್ಡಿಗಳ ವಿತರಣೆ ಈಗ ಹೆಚ್ಚಾಗಿತ್ತು. ತಾನೇ ಅಂಗಡಿಗಳನ್ನು ಸಂಪರ್ಕಿಸಿ ಹೆಚ್ಚು ಕೊಳ್ಳುವಂತೆ ಮಾಡುತ್ತಿದ್ದಳು. ಕೆಲವೇ ದಿನಗಳಲ್ಲಿ ಆವಳ ಸಾಧನ ದ್ವಿಮುಖ. 'ಫಿಜಿಕ್ಸ್' ಬಗ್ಗೆ ಆಸಕ್ತಿಯಿಂದಿದ್ದ ಈ ಹೆಣ್ಣಿಗೆ ಇದು ಹೇಗೆ ಸಾಧ್ಯವಾಯಿತು ಎಂದು ಯೋಚಿಸತೊಡಗಿದ.

ಅಂದು ಕರಿಮಣಿ ಸರ ಕೊಟ್ಟು ಹೋಗುವುದಕ್ಕೆ ಬಂದ ರಜನಿ ಪರ್ಸ್ ಬಿಟ್ಟು ಹೋಗಿದ್ದಳು. ಮತ್ತೆ ಬಂದು ಕೊಂಡೊಯ್ಯುವ ಸೂಚನೆ ಸಿಗಲಿಲ್ಲ. ಇಂದು ಯಾರ ಮುಖಾಂತರವಾದರೂ ಕಳುಹಿಸಿಕೊಡುವ ನಿರ್ಧಾರ ಮಾಡಿದ್ದ.

ಎದುರಾದ ಅಕೌಂಟೆಂಟ್ ವಾಸುದೇವಯ್ಯ ಇಷ್ಟಗಲ ಬಾಯಿ ತೆಗೆದರು. "ಯಾಕೆ ಈ ತರಹ ಯೋಚಿಸ್ತೆ, ಒಂದಿಷ್ಟು ಭಿನ್ನಾಭಿಪ್ರಾಯ ಇರೋಲ್ವೇನು. ನಿನ್ನ ಲೆಕ್ಕದಲ್ಲಿ ಯೋಚ್ಸಿದ್ರೆ....ಭಾರತದಲ್ಲಿದ ದಂಪತಿಗಳೆಲ್ಲ ಡೈವೋರ್ಸ್ ತಗೊಂಡು ಬೇರೆ ಬೇರೆಯಾಗಿ ಬಿಡ್ಬೇಕು. ಒಂದಿಷ್ಟು ಸುಧಾರ್ಸಿಕೊಳ್ಳಲಾರ್ವೇ ....ಹೋದೆಯಾ ?" ಅವರನ್ನೇ ನಿಷ್ಠೂರ ಮಾಡಿದರು. ಬೇರೆಯವರಾದರೇ ಒರಟಾಗಿ ಹೇಳುತ್ತಿದ್ದ. ಆದರೆ ವಿಶ್ವನಾಥಯ್ಯನವರ ಖಾಸ ಗೆಳೆಯ, ಕಾಶೀ ಯಾತ್ರೆ ಹೆಂಡತಿಯ ಜೊತೆ ಮುಗಿಸಿಕೊಂಡು ಬಂದಂಥ ಪುಣ್ಯ ಜೀವಿ.

"ಗ್ರಹಚಾರ ಕೆಟ್ಟು ಇನ್ನೊಂದ್ಸಾರ್ತಿಯಾದ್ರೆ ನಿಮ್ಮ ಮಾತನ್ನ ನೆನಪಿನಲ್ಲಿ ಇಟ್ಕೊಂಡ್ ಕಾರ್ಯಗತ ಮಾಡ್ತೀನಿ" ತಮಾಷೆಯಾಗಿ ಹೇಳಿ ಅವರಿಂದ ಬಿಡಿಸಿಕೊಂಡು ನಡೆದ.

ಅದೇ ಜನ, ಅದೇ ಮಾತುಗಳು. ಎಲ್ಲಿ ಬದಲಾಗಿರುವುದು? ಡೈವೋರ್ಸ್ ಅಂಥ ವಿಷಯವನ್ನು ಇನ್ನು ಸಾಧಾರಣವೆಂದು ಒಪ್ಪಿಕೊಳ್ಳಲು ಜನ ಸಿದ್ಧವಿಲ್ಲ.

ಬಸ್‌ಸ್ಟಾಪ್‌ಗೆ ಬಂದಾಗ ವಿಕಾಸ್ ತೀರಾ ಗಂಭೀರವಾಗಿದ್ದ. ಹೈ ಸೊಸೈಟಿಗೂ, ಮಿಡ್ಲ್‌ಕ್ಲಾಸ್ ಜೀವನಕ್ಕೂ ಮಧ್ಯೆ ಇರುವ ಅಂತರವನ್ನು ಗುರ್ತಿಸಿದ. ಡೈವೋರ್ಸ್ ತಗೊಂಡ ರಜನಿನ ಕೆಲವು ಮಹಿಳಾ ಕ್ಲಬ್‌ಗಳು ಸನ್ಮಾನಿಸಿದ್ದು ಅವನಿಗೆ ಗೊತ್ತಿತ್ತು. ಇವನ ಸುತ್ತಲಿನ ಜನ....

ಕೈಯಲ್ಲಿದ್ದ ಮೃದುವಾದ ಪರ್ಸ್ ಕೆಂಡದಂತೆ ಭಾಸವಾಗುತ್ತಿತ್ತು ಅವನಿಗೆ. ದೂರಕ್ಕೆ ಎಸೆದು ಕೈ ತೊಳೆದುಕೊಳ್ಳುವಷ್ಟು ರೋಷ. ಸರಾಗವಾಗಿ ಹರಿದುಹೋಗುತ್ತಿದ್ದ ಅವನ ಜೀವನ ಪ್ರವಾಹದಲ್ಲಿ ಬೆಂಕಿಯ ಘರ್ಷದಂತೆ ಎರಗಿದ ರಜನಿ ಲಾವರಸ ಉಗುಳಿಹೋಗಿದ್ದಳು.

ಕ್ಯೂ ಬಿಟ್ಟು ಸ್ವಲ್ಪ ದೂರದಲ್ಲಿ ನಿಂತಿದ್ದ ರಜನಿ ಅವನತ್ತ ನಾಲ್ಕು ಹೆಜ್ಜೆ ಬಂದಳು. "ಹಲೋ...." ಎಂದಾಗ ಅವಳ ಮುಖ ನೋಡಬೇಕೆನಿಸಲಿಲ್ಲ. "ಇಂಥ ಬೇಜವಾಬ್ದಾರಿ ಒಳ್ಳೇದಲ್ಲ!" ಪರ್ಸ್ ಅವಳತ್ತ ನೀಡಿದ. ನೆಲಕ್ಕೆ ಜಾರಿತು ಬಗ್ಗಿ ಹೆಕ್ಕಿಕೊಂಡಳು. ಅವಳ ಕಣ್ಣಂಚಿನಲ್ಲಿ ತುಂತುರು ಇಣುಕಿತು. ವಿಕಾಸ್ ಅವಳತ್ತ ನೋಡದೆಯೇ ಹೊರಟ. ಇಂದು ಬಸ್ಸಿಗೆ ಕಾಯುವ ಸಹನೆ ಅವನಲ್ಲಿ ಉಳಿಯಲಿಲ್ಲ. ಆಟೋ ಹತ್ತಿದ. ಅವರ ಹಿಂದೆಯೇ ಬಹಳ ದೂರದವರೆಗೂ ಹಿಂಬಾಲಿಸಿದ ನೋಟ ಹಿಂದಕ್ಕೆ ಬಂತು.

"ವಿಕಾಸ್, ನೀವು ನನ್ನ ಪ್ರೀತಿಸ್ಲಿಲ್ಲ. ಪ್ರೀತಿಸಿದ್ರೆ ಡೈವೋರ್ಸ್‌ಗೆ ಒಪ್ಕೋತಾ ಇರ್ಲಿಲ್ಲ" ಅವಳ ಮನ ಒಳಗೊಳಗೆ ಛೀರಿತು. ಈಗಲೂ ಅವಳು ಆರೋಪವನ್ನು ವಿಕಾಸ್‌ನ ಮೇಲೆ ಹೊರಿಸಿದಳೇ ವಿನಃ ತನ್ನದೆಂದು ಒಪ್ಪಿಕೊಳ್ಳಲಿಲ್ಲ. ಆವಳು ಬದಲಾಗಿಲ್ಲ ಅನ್ನುವುದಕ್ಕೆ ಇದೊಂದು ಕಾರಣ.

ಬಂದ ಕಾರು ಅಲ್ಲಿಯೇ ನಿಂತಿತು. ಅಖಿಲೇಶ್ ತಲೆ ಹೊರ ಹಾಕಿದ. "ಹಲೋ....ರಜನಿ, ನೀನಿಲ್ಲಿ !" ಆಶ್ಚರ್ಯ ವ್ಯಕ್ತಪಡಿಸಿದ. "ಬಸ್‌ಗೋಸ್ಕರ ಕಾಯ್ತ ಇದ್ದೀಯಾ ?" ಇದು ಬರೀ ಪ್ರಶ್ನೆ, ಅವಳು ಕಾಯಲಾರಳೆಂದು ಅವನಿಗೆ ಗೊತ್ತು. ಡೋರ್ ತಳ್ಳಿಕೊಂಡು ಇಳಿದ.

ಅಷ್ಟರಲ್ಲಿ ಬಸ್ಸು ಬಂದಿದ್ದರಿಂದ ಮುಂದಿನ ಕ್ಯೂ ಕರಗಿತು. ರಜನಿ ಶಿಲೆಯಂತೆ ನಿಂತಿದ್ದಳು. ಅಖಿಲೇಶ್ ಅವಳನ್ನು ದೀರ್ಘವಾಗಿ ನೋಡಿದ. ಅವಳ ಮಾನಸಿಕ ಸ್ಥಿತಿಯ ಪೂರ್ಣ ಅರಿವು ಅವನಿಗಿರಲಿಲ್ಲ.

"ರಜನಿ ಯಾರಿಗಾದ್ರೂ ವೆಯಿಟ್ ಮಾಡ್ತಾ ಇದ್ದೀರಾ ?" ಕೇಳಿದಾಗ ಚಲನೆ ಬಂದವಳಂತೆ "ಏನಿಲ್ಲ...." ಡೋರ್ ತೆಗೆದು ಅವನ ಕಾರು ಹತ್ತಿದಳು. ಕೈಯಲ್ಲಿಡಿದ ಪರ್ಸ್ ಅತಿ ಹಿತವಾಗಿತ್ತು. ಆ ಪರ್ಸ್ ವಿಕಾಸ್ ಕೈಯಲ್ಲಿತ್ತು ಅನ್ನೋ ಕಾರಣಕ್ಕೆ, ಅವಳಲ್ಲಿ ಮಧುರಾನುಭೂತಿ ಸಂಚಾರವಾಗಿತ್ತು.

ಸ್ಟಾರ್ಟ್ ಮಾಡಿದ ಅಖಿಲೇಶ್ ಅವಳತ್ತ ನೋಡಿದ. ಎಲ್ಲಾದ್ರೂ

ಹೋಗೋದು ಇದ್ಯಾ ?" ಕೇಳಿದ. ಅಡ್ಡಡ್ಡ ತಲೆಯಾಡಿಸಿದಳು. 'ಇಂಥ ಬೇಜವಾಬ್ದಾರಿ ಬದ್ಧಿಗೆ ಒಳ್ಳೇದಲ್ಲ' ಕಟುವಾಗಿ ಆಡಿದ್ದ ವಿಕಾಸ್. ಯಾವು ದರ ಬಗ್ಗೆ? "ಮನೆಗಾ?" ಮಂತ್ರೊತ್ತ್ರವನ್ನ ಪ್ರಶ್ನಿಸಿದ ಅಖಿಲೇಶ್. ಕಾರಿನ ವೇಗ ಹೆಚ್ಚಿಸಿದ.

ಮನೆಗೆ ಬಂದಾಗ ಪಂಕಜಮ್ಮ ಯಾವುದೋ ವಿಸಿಟಿಂಗ್ ಸಲುವಾಗಿ ಹೊರಗೆ ಹೋಗಲು ತಯಾರಿ ನಡೆಸಿದ್ದರು. ಆಕೆಯ ಹೊರಗಿನ ಪೂರ್ತಿ ಚಟು ವಟಿಕೆಗಳು ಸ್ಥಬ್ಧವಾಗಿರಲಿಲ್ಲ ಈಕೆಯಂಥ ಜನರನ್ನು ಓಲೈಸುವ ಜನ ಇನ್ನು ಸಮಾಜದಲ್ಲಿದ್ದರು.

ಮಗಳ ಸ್ವಭಾವದ ಬಗ್ಗೆ ಆಕೆಗೆ ಬೇಸರ. "ಈಚೆಗೆ ತೀರಾ ಅಪರೂಪ" ಅಖಿಲೇಶ್‌ನ ಬಗ್ಗೆ ಆಕೆಗೆ ಕೋಪವಿತ್ತು. ಅದಕ್ಕೆ ಪೂರ್ತಿ ಜವಾಬ್ದಾರಳು ಮಗಳು ಎನ್ನುವುದು ಆಕೆಗೆ ಗೊತ್ತು. ಅವನು ಟೀಪಾಯಿ ಅಂಚನ್ನ ಬೆರಳಿ ನಿಂದ ಸವರಿ ನೋಡಿದ. "ಈಚೆಗೆ ಬಿಜಿನೆಸ್ ಡೆವಲಪ್ ಆಗ್ತಾ ಇರೋದ್ರಿಂದ ನನ್ನ ಸಮಯಕ್ಕೂ ಬೆಲೆ ಬಂದಿದೆ. ಡ್ಯಾಡಿಗೂ ಖುಷಿ" ಸಂತೋಷದಿಂದಲೇ ಹೇಳಿದ. ಆಕೆ ಮುಖ ದಪ್ಪಗೆ ಮಾಡಿದರು, ಇಂಥ ಮಾತುಗಳನ್ನು ಆಕೆ ಒಪ್ಪಲು ಸಮರ್ಥ ಸಿದ್ಧವಿಲ್ಲ. ಮಗಳತ್ತ ಕಿಡಿ ಕಣ್ಣು ಹಾಯಿಸಿದರು.

ರಜನಿ ಎದ್ದು ಹೊರಟಳು. "ಎಲ್ಲಿ ಸಿಕ್ಕಿದ್ಲು ಈ ಮಹರಾಯಿತಿ !" ಮಗಳ ಮೇಲೆ ತೀರಾ ಅಸಮಾಧಾನವನ್ನು ಕಕ್ಕಿ ತುಟಿ ಕಚ್ಚಿಕೊಂಡರು. "ಬಸ್‌ಸ್ಟಾಪ್ ಬಳಿ ಬಹುಶಃ ಯಾರಿಗೋ ಕಾಯ್ತಾ ಇದ್ದಾರೇನೋ" ಅನುಮಾನ ವ್ಯಕ್ತಪಡಿಸಿದ ಅಖಿಲೇಶ್. ಆಕೆಯ ಗಂಟಲಲ್ಲಿ ಏನೋ ಸಿಕ್ಕಿಹಾಕಿಕೊಂಡಂ ತಾಯಿತು. ಡೈವೋರ್ಸ್ ಪಡೆದು ಕಾನೂನು ರೀತಿಯಲ್ಲಿ ರಜನಿ ವಿಕಾಸ್‌ನಿಂದ ಬೇರೆಯಾದರೂ ಮಾನಸಿಕವಾಗಿ ಈಗಲೂ ಅವನವಳಾಗಿಯೇ ಉಳಿದುಹೋಗಿ ಹೋಗಿದ್ದಳು. ಹೇಗೆ ಹೊರ ತರುವುದು ?

ಅಖಿಲೇಶ್ ಗಂಭೀರವಾಗಿ ಕೂತ. ಶ್ರೀಮಂತಿಕೆಯಲ್ಲಿ ಹುಟ್ಟಿ ಬೆಳೆದ ಅವನು ಹೆಸರಿನ ವ್ಯಾಮೋಹದಲ್ಲಿ ಓಡಾಟ ಹಚ್ಚಿಕೊಂಡಿದ್ದ. ಆಗ ಪರಿಚಯ ವಾದುದ್ದು ಪಂಕಜಮ್ಮ. ಆಮೇಲೆ ಅವನ ಓಡಾಟ ಮನೆಯವರೆಗೂ ಆವರಿಸಿ ಕೊಂಡಿತ್ತು. ಓಡಾಟ ಕೂಡ ಈಚೆಗೆ ಬೇಸರವೆನಿಸಿದ್ದರೂ ರಜನಿಗೆ ಡೈವೋರ್ಸ್ ಸಿಕ್ಕ ಮೇಲೆ ಅವನಲ್ಲಿ ಹೊಸ ಆಸೆಗಳು ಚಿಗುರಿಕೊಂಡಿದ್ದವು.

ಆದರೆ ಮನೆಯಲ್ಲಿ ಪ್ರಬಲ ವಿರೋಧ "ಎಲ್ಲರೂ ಯಾರ್‍ಗೊ ಅರ್ಪಿತ ವಾಗ್ದ ವಿಾಸಲು ಹೂವನ್ನು ಇಷ್ಟಪಡ್ತಾರೆ. ನೀನ್ಯಾಕೆ ಮದ್ವೆ ಆದವಳನ್ನು ಹಚ್ಚಿಕೊಂಡಿದ್ದೀಯಾ ! ಬೇರೆ ಹೆಣ್ಣುಗಳು ನಿಂಗೆ ಸಿಕ್ಕೋಲ್ವಾ ?" ಪ್ರತಿ ಯೊಬ್ಬರೂ ಇಂಥ ಮಾತುಗಳನ್ನೇ ಆಡಿದರು. ಮದುವೆಯಾದ ಹೆಣ್ಣಿಗೆ ಇನ್ನೊಂದು ಮದುವೆ ಈಗಿನ ಸ್ಥಿತಿಯಲ್ಲಿ ನಿಷಿದ್ಧ !

ಈ ಮಾತುಗಳು ಹೆಣ್ಣಿನ ಜೀವನದ ವಾಸ್ತವಿಕಕ್ಕೆ ಹಿಡಿದ ಕನ್ನಡಿ. ಸಮಾಜದ ದೃಷ್ಟಿಯಲ್ಲಿ ಈಗಲೂ ವಿಕಾಸ್ ಸಾಧಾರಣ ವ್ಯಕ್ತಿಯೇ. ಆದರೆ ಅವನಿಗೆ ಹೆಣ್ಣು ಕೊಡಲು ಜನ ಕ್ಯೂ ನಿಲ್ಲಬಹುದು. ಆದರೆ ಶ್ರೀಮಂತ ಪುತ್ರಿ ರಜನಿಯ ಮದುವೆ ಮಾತ್ರ ಕಷ್ಟ ! ಅವಳ ಜೊತೆ ಸ್ನೇಹದಿಂದಿರಲು, ಓಡಾಡಲು ಸಾಕಷ್ಟು ಜನ ಸಿಕ್ಕಬಹುದು ! ಆದರೆ....

ಅಖಿಲೇಶ್ ತಲೆ ಕೊಡವಿ ಬಗ್ಗಿ ಟೀಪಾಯಿ ಮೇಲಿದ್ದ ಪತ್ರಿಕೆ ಎತ್ತಿಕೊಂಡ.

ಪಂಕಜನ್ನು ತಮ್ಮ ಮುಖದ ಮೇಕಪ್‌ನ ಕೊನೆಯ ಸಲ ಟಚ್ ಮಾಡಲು ಒಳಗೆ ಹೋದಾಗ, ಗುರುಮೂರ್ತಿಗಳು ಬಂದು ಅವನ ಎದುರಿ ನಲ್ಲೇ ಕೂತರು. ಅಖಿಲೇಶ್‌ನ ಮುಖದ ಭಾವನೆಗಳನ್ನು ಕ್ಷಣಕಾಲ ಅಳೆದರು.

ಲೈಟರ್ ಬೆಳಗಿಸಿ ಸಿಗರೇಟು ಹಚ್ಚಿದವರು "ನಾನೇ ಫೋನ್ ಮಾಡ್ಬೇ ಕೂಂತ ಇದ್ದೆ" ನೇರವಾಗಿ ಅವನನ್ನು ನೋಡಿದರು. ಅಖಿಲೇಶ್ ಪತ್ರಿಕೆ ಯನ್ನು ಟೀಪಾಯಿ ಮೇಲೆ ಹಾಕಿ ಸರಿಯಾಗಿ ಕೂತ. "ಏನು ಅಂಥ ಅವಸರದ ವಿಷ್ಯ ?" ಕುತೂಹಲ ವ್ಯಕ್ತಪಡಿಸಿದ. ತಮ್ಮ ಅನುಮಾನ ನಿಜವಾಯಿತೆಂದು ಕೊಂಡರು ಗುರುಮೂರ್ತಿಗಳು.

"ಬೈ ದಿ ಬೈ, ಅಖಿಲೇಶ್" ವಿಶ್ವಾಸದಿಂದ ಶುರು ಮಾಡಿದರು. "ಸಮಸ್ಯೆಗಳಿಗೆ ಆದಷ್ಟು ಬೇಗ ಪರಿಹಾರ ಹುಡುಕ್ಕೋಬೇಕು. ಡೈವೋರ್ಸ್ ಬಗ್ಗೆ ಅಷ್ಟೊಂದು ಆತುರಗೊಂಡಿದ್ದು ರಜನಿಯ ಮದ್ವೆ ಬೇಗ ಮಾಡ್ಬೇ ಕೂಂತ್ಲೇ. ರಜನಿ ಇರೋ ಸ್ಥಿತಿಯಲ್ಲಿ ಒಂಟಿಯಾಗಿ ಬಿಡ್ಬಾರ್‍ದು. ಯಾವ ದಿನ ಇಟ್ಕೊಳ್ಳೋಣ, ಮದ್ವೆ ?" ಖಚಿತವಾದ ನಿಲುವಿಗೆ ಬಂದಂತೆ ನುಡಿದರು ಗುರುಮೂರ್ತಿಗಳು. ಪೆಟ್ಟುಗಳ ಮೇಲೆ ಪೆಟ್ಟುಗಳು ಬಿದ್ದು ಸ್ವಲ್ಪ ಮೆತ್ತ ಗಾಗೋ ಸೂಚನೆ ಸಿಕ್ಕಿತ್ತು ಅವರಿಗೆ.

ಅಖಿಲೇಶ್ ಒಂದೆರಡು ನಿಮಿಷ ಸುಮ್ಮನೆ ಕೂತ. "ನಿಮ್ಮ ಯೋಚ್ನೇ

ಒಳ್ಳೆದಿರ್ಬೆಹುದು. ರಜನಿ ಮನಸ್ಸು ಈ ಎರಡನೇ ಮದ್ವೆಗೆ ಸಿದ್ಧವಾಗಿದ್ಯೆ ಅನ್ನೋದು ತಿಳ್ಕೋಬೇಕು" ಎಂದ ದೃಢವಾಗಿ.

ತಾವು ನಿಂತ ನೆಲದಿಂದ ಒಂದಡಿಯಷ್ಟು ಕೆಳಗಿಳಿದ ಅನುಭವವಾಯಿತು. ತಮ್ಮ ದುರಂತ ಎಲ್ಲಿಂದ ಆರಂಭವಾಯಿತು.

"ರಜನಿ ಮನಸ್ಸು ತಿಳಿದೇ ಮದ್ವೆ ಆಗೋಕೆ ನಂಗಿಷ್ಟವಿಲ್ಲ!" ಅರೆ ಮನಸ್ಸಿಂದ ಅಖಿಲೇಶ್ ಮತ್ತೊಮ್ಮೆ ಸ್ಪಷ್ಟಪಡಿಸಿದ. ಕೆಳಕ್ಕೂ ಮೇಲಕ್ಕೂ ನೋಡಿದ ಗುರುಮೂರ್ತಿಗಳು ಅಖಿಲೇಶ್‌ನ ಮುಖದ ಭಾವನೆಗಳ ಹಿಂದಿದ್ದ ಚಿಂತನೆಯನ್ನು ಅಳೆಯತೊಡಗಿದರು. ಇದು ಒಳ್ಳೆಯದಲ್ಲ ಎಂಬ ತೀರ್ಮಾನಕ್ಕೆ ಬಂದರು.

"ರಜನಿ ಕೆಲವು ವಿಷ್ಯಗಳಲ್ಲಿ ಇನ್ನು ಚೈಲ್ಡಿಶ್ ತರಹ ಆಡ್ತಾಳೆ! ಅವ್ಳ ಮಾತು, ನಡೆತನ ಗಂಭೀರವಾಗಿ ತಗೋಬಾರ್ದು. ಅವ್ಳ ಸುದ್ದಿ ನಮ್ಗೆ ಇರಲಿ. ನೀನು ಎಂದೂ ರೆಡಿ ಅಂದ್ರೆ....ಅಂದೆ ಮದ್ವೆ" ಗುರುಮೂರ್ತಿಗಳು ಉತ್ಸಾಹ ತೋರಿದರು. ರಜನಿಯ ಅಸಹನೆ, ಸಿಡುಕಾಟಕ್ಕೆ ಮುಕ್ತಾಯವಾಡಬೇಕಿತ್ತು.

ಅಖಿಲೇಶ್ ಎದ್ದು ಹೊರ ಹೋದವನು ಎರಡು ನಿಮಿಷದ ತರುವಾಯ ಹಿಂದಿರುಗಿದ. "ನಾನೇನೋ ರೆಡಿ. ಮನೆಯವ್ರ ಒಪ್ಗೆ ಇಲ್ಲ" ಎಂದಾಗ ಗುರುಮೂರ್ತಿಗಳು ನಕ್ಕುಬಿಟ್ಟರು. "ಇಷ್ಟು ದಿನ ರಜನಿಗಾಗಿ ಓಡಾಡಿದ್ದು ನೀನೋ, ನಿನ್ನ ಮನೆಯವರೋ" ಬಂದ ಸಿಟ್ಟನ್ನು ಅಡಗಿಸಿಕೊಂಡರು. "ಅವ್ರ ಬಗ್ಗೆ ಚಿಂತೆ ಬೇಡ. ಹಿರಿಯರು ಕೆಲವು ವೇಳೆ ಆಶೀರ್ವಾದಕಷ್ಟೇ ಲಾಯಕ್" ತಾನು ಮನೆಗೆ ಹಿರಿಯನೆನ್ನುವುದು ಆ ಕ್ಷಣ ಮರೆತಂತೆ ಕಂಡರು. ಅವರು ರೂಢಿಸಿಕೊಂಡ ಬೆಳವಣಿಗೆಯೇ ಆ ರೀತಿಯದು.

ಅಖಿಲೇಶನ ಮುಖದ ಗೆಲುವು ತಗ್ಗಿತು. ಗುರುಮೂರ್ತಿಗಳು ಎಂಥ ಸಮಯಸಾಧಕರೆಂದು ಅವನಿಗೆ ಗೊತ್ತು. ಇಂದಿಗೂ ಅಳಿಯಂದಿರು ಅವರ ಕೈಗೊಂಬೆಗಳು. ಒಂದಿಷ್ಟು ಎಸೆದುಬಿಟ್ಟರೆ ನಾಯಿಗಳಂತೆ ಬಿದ್ದಿರುತ್ತಿದ್ದರು. ಬೇಕೆಂದಾಗ ಅಟ್ಟದ ಮೇಲೆ ಕೂಡಿಸಿ, ಬೇಡವೆಂದಾಗ ಮುಲಾಜಿಲ್ಲದೆ ಒದೆದು ಬಿಡುತ್ತಿದ್ದರು. ಸ್ವಾಭಿಮಾನವಿಲ್ಲದ ಬೆಳೆದ ಹೆಣ್ಣು ಮಕ್ಕಳು ಸ್ವಲ್ಪ ಭಿನ್ನವಾಗಿ ಕಾಣಿಸುತ್ತಿದ್ದುದು ರಜನಿಯೊಬ್ಬಳೆ.

ರಮೇಶ್, ರಾಘವನ್ ಬಗ್ಗಿಕೊಳ್ಳುವ ಸ್ವಭಾವ ನೋಡಿದಾಗ ಅವನಿಗೆ ಹುಚ್ಚೇರಿಸುವಂತಾಗುತ್ತಿತ್ತು

"ಹಲೋ ಅಖಿಲೇಶ್...." ಎನ್ನುತ್ತ ಬಂದ ಪ್ರಕಾಶ್. ಅಚ್ಚುಕಟ್ಟಿಲ್ಲದೇ ಹಾರುವ ಕ್ರಾಪ್‌ನಂತೆ ಅವನ ಬದುಕು ಕೂಡ ಅನಿಸಿತು. "ಈಚೆಗೆ ನಿನ್ನ ದರ್ಶನ ಬಹಳ ಅಪರೂಪವಾಗಿ ಬಿಟ್ಟಿದೆಯಲ್ಲ. ಕ್ರೇಜ್....ಕಮ್ಮಿ ಆಯ್ತ ?" ಕಣ್ಣೊಡೆದ. ಅವನು ಹಣೆಯೊತ್ತಿದ "ನೀನು ಸಿಗರೇಟು ಸೇದೋದರ ಮೂಲಕ ವಿಶ್ವದಾಖಲೆ ಸ್ಥಾಪಿಸಬೇಕೂಂತ ಇದ್ದೀಯಾ ಗಿನ್ನೆಸ್ ಬುಕ್ ಆಫ್ ವರ್ಲ್ಡ್ ರೆಕಾರ್ಡ್ಸ್‌ನಲ್ಲಿ ನಿನ್ನ ಹೆಸರು ನಮೂದಾದ್ರೂ ಹೆಚ್ಚಲ್ಲ" ಅವನ ಸಿಗರೇಟಿನ ಬಗ್ಗೆ ಅಖಿಲೇಶ್ ಬೇಸರ ವ್ಯಕ್ತಪಡಿಸಿದಾಗ ಕೆಟ್ಟ ನಗೆ ನಕ್ಕ.

ಪ್ರಕಾಶ್‌ಗೆ ಜೀವನದ ಬಗ್ಗೆ ಬಹಳ ಹಗುರವಾದ ಭಾವನೆ ಬದುಕಿನ ಬಗ್ಗೆ ಅವನ ನಂಬಿಕೆಗಳೇ ಬೇರೆ. ರಟ್ಟೆ ಮುರಿದು ಕಷ್ಟ ಪಡುವ ಜನರು ಅವನ ಪ್ರಕಾರ ಮೂರ್ಖರು. ಸ್ವಸುಖದ ಮನುಷ್ಯ. 'ಮಜಾ'ವಾಗಿ ಕಾಲ ಹಾಕುವುದೇ ಅವನ ಜೀವನ ಧ್ಯೇಯ.

ಮೌನವಾಗಿ ಕೂತ ಅಖಿಲೇಶ್ ಹೊರಗೆ ಬಂದ. ಈಚೆಗೆ ಅವನಿಗೆ ಒಂದಿಷ್ಟು ಸಮಾಚಾರ ಸಿಕ್ಕಿತ್ತು. ಸರಿಯಾದ ಸಾಕ್ಷ್ಯಾಧಾರಗಳಿಲ್ಲದ ಪ್ರಕಾಶ್ ಹೊರಗೆ ಬಂದಿದ್ದರೂ ಅವನು ಅರೆಸ್ಟ್ ಆದದ್ದಂತೂ ನಿಜ. ಇದು ಪಬ್ಲಿಕ್ ಆಗದಂತೆ ಗುರುಮೂರ್ತಿಗಳು ನೋಡಿಕೊಂಡಿದ್ದರೂ ಕೆಲವರ ಕಿವಿಗಂತು ಬಿದ್ದಿತ್ತು.

ಗುರುಮೂರ್ತಿಗಳು ಸ್ವರವೇರಿಸಿ ಕೂಗಿದರು "ಅಖಿಲೇಶ್...." ಒಲ್ಲದ ಮನಸ್ಸಿನಿಂದಲೇ ಒಳಗೆ ಬಂದ. ಅವರು ಪ್ರಕಾಶ್‌ನತ್ತ ತಿರುಗಿದರು. "ಸಿಂಪಲ್ ಮ್ಯಾರೇಜ್‌ಗೆ ಅರೆಂಜ್ ಮಾಡು" ಎಂದವರು. ಥಟ್ಟನೇ "ಮೊದಲ್ನೇ ಇನ್ವಿಟೇಷನ್ ವಿಕಾಸ್‌ಗೆ ಕಳ್ಸು. ಕೊರಗಿ ಕೊರಗಿ ಸಾಯ್ಲಿ" ಅವರ ಮುಖದಲ್ಲಿ ಕಾಠಿಣ್ಯತೆ ಮಿನುಗಿತು.

ಪ್ರಕಾಶ್ ಏನೋ ಹೇಳಲು ಮುಂದಾದಾಗ ಕಣ್ ಸನ್ನೆಯಿಂದಲೇ ಸುಮ್ಮನಾಗಿರಿಸಿದರು. ಅವನೆಂಥ ಎಚ್ಚರಗೇಡಿಯೆಂದು ಅವರಿಗೆ ಗೊತ್ತು.

ಮೇಲೆದ್ದ ಗುರುಮೂರ್ತಿಗಳು "ಇಂಥ ವಿಷ್ಯಗಳಲ್ಲಿ ನಿನ್ನ ತಲೆ ಕೆಡ್ಸ ಮಾಡದು. ಏನಾದ್ರೂ ಸಾಹಸಕಾರ್ಯ ಹಚ್ಕೋ" ವ್ಯಂಗ್ಯವಾಗಿ ಆಡಿದರು.

ಅನಾವಶ್ಯಕವಾಗಿ ಪೊಲೀಸರ ಕೈಯಲ್ಲಿ ಸಿಕ್ಕಿಹಾಕಿಕೊಂಡ ಮಗನ ಬಗ್ಗೆ ಅವರಿಗೆ ಬೆಂಕಿಯಂಥ ಸಿಟ್ಟು. ಹಣ ಹೋದುದ್ದು ಅಲ್ಲದೇ ಒಂದೂವರೆ ದಿನ ಟೆನ್ಷನ್‌ನಿಂದ ಒದ್ದಾಡಿ ಹೋಗಿದ್ದರು.

ಪ್ರಕಾಶ್‌ನ ಕಿರಿದಾದ ಕಣ್ಣುಗಳಲ್ಲಿ ವಿಸ್ಮಯ ಇಣುಕಿತು. ವ್ಯಂಗ್ಯ ಗುರ್ತಿಸಲಿಲ್ಲ. ಆದರೆ ಅವರು ಎಂದೂ ಇಂಥ ಮಾತುಗಳನ್ನು ಆಡಿದ್ದು ನೆನಪಿರಲಿಲ್ಲ. ಸಿಗರೇಟು ಅವನ ಆಲೋಚನಾ ಶಕ್ತಿಯನ್ನೇ ಕಮ್ಮಿ ಮಾಡಿರಬಹುದೇ ಗಡ್ಡ ಕೆರೆದ.

ಅವನ ಸಂದಿಗ್ಧತೆಯನ್ನು ನೋಡಿ ಅಖಿಲೇಶ್ ತುಟಿಯಂಚಿನಲ್ಲಿ ನಕ್ಕ "ಅರ್ಥವಾಯ್ತು !" ಪ್ರಕಾಶ್ ಭುಸುಗುಟ್ಟಿದ. "ಅವ್ರೇನೋ ಬುದ್ಧಿ ಕಟ್ಟಿ ಹೇಳಿದ್ರೂಂದ್ರೆ, ನಾನ್ಯಾಕೆ ತಲೆ ಕೆಡ್ಸಿಕೊಳ್ಳಿ. ಗೋ ಟು ಹೆಲ್" ಕ್ರಾಸ್ ಹಾರಿಸಿದ. ಅವನ ಕಣ್ಣುಗಳಲ್ಲಿ ಕಿಡಿಗಳು ಹಾರಿತು.

ಅಖಿಲೇಶ್ ಕ್ಷಣ ನಡುಗಿ ಹೋದ. ಎಲ್ಲಿಂದಲೋ ನುಸುಳಿ ಬಂದ ಭಯ ಅವನೆದೆಯಲ್ಲಿ ಸೇರಿಕೊಂಡಿತು. ಪ್ರಕಾಶ್ ಅಂಥ ವ್ಯಕ್ತಿಗಳು ಸಭ್ಯ, ಸೌಮ್ಯ, ಉತ್ತಮ ವ್ಯಕ್ತಿಗಳಾಗಲು ಸಾಧ್ಯವೇ ಇಲ್ಲವೆನಿಸಿತು. ಆಗ ಅವನ ಕಣ್ಮುಂದೆ ಮಿನುಗಿದ್ದು ಪಂಕಜಮ್ಮನ ವ್ಯಕ್ತಿತ್ವ.

ಜಾಗ ಖಾಲಿ ಮಾಡುವುದು ಉತ್ತಮವೆನಿಸಿತು. "ಬರ್ತೀನಿ" ಹೇಳ ಕ್ಕೆದ್ದ ಅಖಿಲೇಶ್‌ನ ರಭಸದಿಂದ ಎಳೆದು ಕೂಡಿಸಿದ" ಇನ್ನ ರಜನಿನೇ ನಿನ್ಕೈಗೆ ಸಿಕ್ಲಿಲ್ಲ. ಆಗ್ಲೇ ನನ್ನ ಬಗ್ಗೆ ಉದಾಸೀನ" ಅಸಹನೆಯಿಂದ ರೇಗಿದ ಪ್ರಕಾಶ್. ಚೇತರಿಸಿಕೊಳ್ಳಲು ಅವನಿಗೆ ಕ್ಷಣಗಳೆ ಬೇಕಾಯಿತು. ಎರಡು ಕೈ ಜೋಡಿಸಿದ.

"ಯಾವ ಮಾತುಗಳಿದ್ರೂ ಆಮೇಲೆ ಆಡೋಣ. ಸಧ್ಯಕ್ಕೆ ನನ್ನ ಬಿಟ್ಬಿಡು. ನಮ್ಮಪ್ಪ ನನ್ನ ಕೈಕಾಲು ಮುರಿಸೋಕೆ ಅಡ್ವಾನ್ಸ್ ಕೊಟ್ಟಿದ್ದಾರೆ. ಪೂರ್ತಿ ಅಕೌಂಟ್ ಅವ್ನ ಕೈ ಸೇರ್ದಂಗೇ ನೋಡ್ಕೋಬೇಕು. ಬೈ...." ಕೈಯೆತ್ತಿ ನಡೆದೆ ಬಿಟ್ಟ.

ಅಖಿಲೇಶ್ ಮೃದು ಮನಸ್ಸಿನ ವ್ಯಕ್ತಿಯಾದರೂ ಹೆಸರಿಗೆ ಸಾಯಲಿಯ್ಯವನು. ವೇದಿಕೆ, ಅದರ ಸಮೀಪ ಓಡಾಡುವುದೆಂದರೆ ಅವನಿಗೆ ಆಸಕ್ತಿ. ಇದಕ್ಕೆ ಸಾರ್ವಜನಿಕ ಹಿತಾಸಕ್ತಿ ಎನ್ನುವ ನೆಪದಲ್ಲಿ ಪಂಕಜಮ್ಮನ ಜೊತೆಯಲ್ಲಿ ಓಡಿಯಾಡುತ್ತಿದ್ದ. ಸಂಘ, ಸಂಸ್ಥೆ, ಸಂಘಟನೆ, ನೂರೆಂಟು ಕಾರ್ಯಕ್ರಮ

ಗಳು–ಈಚೆಗೆ ಪೂರ್ತಿಯಾಗಿ ಅರ್ಥ ಕಳೆದುಕೊಂಡಿದ್ದವು. ಅವನೆಷ್ಟು ಕಣ್ಣು ಕೆಂಪಗೆ ಮಾಡಿ ಹಾರಾಡತೊಡಗಿದ್ದರು.

ಪ್ರಕಾಶ್ ತಲೆ ತೀರಾ ಕೆಟ್ಟಂತಾಯಿತು. ಕೆಲವು ದಿನಗಳಿಂದ ಬರುತ್ತಿದ್ದ ಆದಾಯದಲ್ಲಿ ಅರ್ಧ ಭಾಗದಷ್ಟು ಕಮ್ಮಿಯಾಗಿತ್ತು. ಇವನು ಅರೆಸ್ಟ್ ಆದ ಮೇಲೆ ಕೆಲವು ವ್ಯಾಪಾರಗಳು ಪೂರ್ತಿ ಸ್ತಬ್ಧ. ಇದೊಂದು ಬಲವಾದ ಪೆಟ್ಟು. ಮೇಲ್ಮುಖಕ್ಕೆ ಗುರುಮೂರ್ತಿಗಳು ಗೆಲುವಿನಿಂದ ಕಂಡರೂ ಅರ್ಧದಷ್ಟು ಕುಗ್ಗಿ ಹೋಗಿದ್ದರು.

ಕೈಯಲ್ಲಿನ ಸಿಗರೇಟನ್ನು ಅಸಹನೆಯಿಂದ ಆಷ್‌ಟ್ರೇನೊಳಕ್ಕೆ ಅದುಮಿದ. ರಜನಿಗೆ ಡೈವೋರ್ಸ್ ಸಿಕ್ಕಾಗ ತನ್ನ ಗೆಲುವೆಂದುಕೊಂಡಿದ್ದ. ವಿಕಾಸ್ ಮೇಲಿನ ಸೇಡು ತೀರಿತ್ತು. ಆದರೆ ಅವನೇನು ಕುಗ್ಗಿದಂತೆ ಕಾಣಲಿಲ್ಲ. ಮತ್ತಷ್ಟು ಆತ್ಮವಿಶ್ವಾಸದಿಂದ ತಲೆಯೆತ್ತಿ ತಿರುಗುತ್ತಿದ್ದ. ಬಟ್ಟೆ ಬರೆಗಳಲ್ಲಿ ಕೂಡ ಮೊದಲಿಗಿಂತ ಅಚ್ಚುಕಟ್ಟು. ತುಟಿಯಂಚಿನಲ್ಲಿ ಅದೇ ಮಾಸದ ಕಿರುನಗು. ಅವನ ಸುತ್ತಲೂ ಅಭಿಮಾನವಿಟ್ಟುಕೊಂಡ ವಿದ್ಯಾರ್ಥಿಗಳ ಹಿಂಡು. ರಾಜನಂತೆ ಮೆರೆಯುತ್ತಿದ್ದ. ಇದನ್ನ ಗಮನಿಸುತ್ತಿದ್ದ ಪ್ರಕಾಶ್‌ನ ತಲೆ ಹೆಚ್ಚು ಬಿಸಿಯಾಗುತ್ತಿತ್ತು.

"ಹೃದಯಕ್ಕೆ ಬೆಲೆ ಕೊಡೋ ವಿಕಾಸ್ ಈ ಏಟಿನಿಂದ ಛಿದ್ರ ಛಿದ್ರ. ಅವನನ್ನ ಇನ್ಮೇಲೆ ನ್ಯೂರೋ ಸೆಂಟರ್‌ನಲ್ಲಿ ನೋಡ್ಬೇಕು" ಗೆಳೆಯರ ಮುಂದೆ ಜಂಬ ಕೊಚ್ಚಿಕೊಂಡಿದ್ದ. ಈಗ ಅವರೇ ಹಾಸ್ಯ ಮಾಡುತ್ತಿದ್ದರು.

"ನೋಡಿದ್ಯಾ, ಗಂಡು ಅಂದ್ರೆ ಅವ್ನೇ ಗಂಡು ! ನಿನ್ನಾಟವೇನು ಅವನ್ಹತ್ರ ನಡೀಲಿಲ್ಲ. ನಾಳೆ ಸಮಯ ಬಿದ್ರೆ ನೀನೇ ಅವ್ನ ಕಾಲು ಹಿಡೀಬೇಕಾಗುತ್ತೆ."

ಪ್ರಕಾಶ್‌ನ ಅವುಡುಗಳು ಬಿಗಿದುಕೊಂಡವು. ಟೀಪಾಯಿ ಮೇಲಿದ್ದ ಪೇಪರ್ ವೈಟನ್ನು ಎತ್ತಿ ಗೋಡೆಗೆ ಎಸೆದ. ಶಬ್ದ ಕೇಳಿಸಿತೇ ವಿನಹಃ ಅದರ ಸ್ಥಿತಿ ಏನಾಯಿತೆಂದು ಗಮನಿಸಲಿಲ್ಲ.

ವಿಕಾಸ್‌ನ ದಿಟ್ಟ ಮುಖ ನೋಡಿದಾಗಲೆಲ್ಲ ಅವನೆದೆಯಲ್ಲಿ ಕೋಲಾಹಲ. ವಿದ್ಯಾರ್ಥಿಗಳಲ್ಲಿ ಅವನ ಬಗ್ಗೆ ಕೆಟ್ಟ ಅಭಿಪ್ರಾಯ ಮೂಡಿಸಲು ಪ್ರಯತ್ನ

ಪಟ್ಟಿದ್ದ. ಕೆಲವು ಸಾವಿರಗಳು ಹೋಯಿತೇ ವಿನಃ ಏನು ಪ್ರಯೋಜನ ವಾಗಿರಲಿಲ್ಲ.

ರಜನಿಯನ್ನ ಅರಸಿಕೊಂಡು ಅವಳ ಕೋಣೆಗೆ ಹೋದ. ಅವಳಲ್ಲಿ ಮೊದಲಿನ ಚುರುಕು, ಗೆಲುವು ಇರಲಿಲ್ಲ. ಡೈವೋರ್ಸ್ ವಿಕಾಸ್‌ಗಿಂತ ಇವಳ ಮೇಲೆಯೇ ಹೆಚ್ಚು ಪರಿಣಾಮ ಬೀರಿತ್ತು.

"ಯಾಕೆ ಸುಮ್ನೆ ಕೂತಿದ್ದೀಯಾ ?" ಅವಳ ಪಕ್ಕದಲ್ಲಿಯೇ ಕೂತ. ರಜನಿ ಮುಖ ತಿರುಗಿಸಿಕೊಂಡಳು "ಇನ್ನೇನು ಮಾಡ್ಬೇಕು ? ಮಾಡೋಕೆ ತಾನೇ ಏನಿದೇ ? ಎಲ್ಲಾ ಮುಗಿದಂಗೇ !" ಅವಳ ಗಂಟಲುಬ್ಬಿ ಕಣ್ತುಂಬಿತು.

ಪ್ರಕಾಶ್‌ನ ಮುಖದಲ್ಲಿ ಕಹಿ ಇಣುಕಿತು. ಹಲ್ಮುಡಿ ಕಚ್ಚಿ ಮುಷ್ಟಿ ಹಿಡಿದು ಗಾಳಿಯಲ್ಲಿ ಗುದ್ದಿದ "ಛೆ, ನೀನು ಸಿಲ್ಲಿಗರ್ಲ್ ! ಸೆಂಟಿಮೆಂಟಲ್ ಫೂಲ್ ! ನಿಂಗೆ ಲೈಫ್‌ನ ಎಂಜಾಯ್ ಮಾಡೋದೇ ಗೊತ್ತಿಲ್ಲ. ನೀನು ಪಂಕಜಾಗೆ ಸರ್ಯಾದ ಮಗಳಲ್ಲ !" ಪ್ರಕಾಶ್ ಉಸುರಿದಾಗ ಬೆಚ್ಚಿ ಬಿದ್ದಳು. ತಾಯಿಯ ಬಗ್ಗೆ ಏಕವಚನದ ಸಂಬೋಧನೆ. ಇದು ಮೊದಲಿನಿಂದ ರೂಢಿ ಯಲ್ಲಿತ್ತೇನೋ, ಅವಳು ಗಮನಿಸಿರಲಿಲ್ಲ. ಇಂದು ಅವಳ ಕಣ್ಣುಗಳು ಕೆಂಪ ಗಾದವು.

"ಪ್ರಕಾಶ್, ನೀನು ಕೆಟ್ಟಿದ್ದೀಯಾ ಅಂದ್ಕೊಂಡಿದ್ದೆ. ಆದ್ರೆ ಪೂರ್ತಿ ಹಾಳಾಗಿದ್ದೀಯಾ !" ಅವಳ ಸ್ವರ ನಡುಗಿತು. ಪ್ರಕಾಶ್ ಜೋರಾಗಿ ನಕ್ಕ. "ಕೆಲವು ಪದಗಳ ಅರ್ಥ ನಂಗೆ ಗೊತ್ತಿಲ್ಲ. ಅವೆಲ್ಲ ಹಾಗೆಯೆ ಉಳ್ದು ಬಿಡ್ಲಿ. ಸಂಬಂಧಗಳು ಅಷ್ಟೆ." ಅಪರೂಗದ ಗಾಂಭೀರ್ಯ ಅವನಲ್ಲಿ ಇಣಕಿ ಮರೆಯಾ ಯಿತು. ಹಿಂದಿನ ಮಾತುಗಳನ್ನ ಮರೆತ. "ನೀನ್ಯಾಕೆ ತಲೆಯ ಮೇಲೆ ಕೈ ಯೊತ್ತು ಕೂತಿದ್ದೀಯಾ ? ವಿಕಾಸ್ ದಿನಕ್ಕೊಬ್ಬರ ಜೊತೆ ಮಜಾ ಉಡಾ ಯಿಸ್ತ ಇದ್ದಾನೆ."

"ಷಟಪ್" ಕನಲಿದಳು ರಜನಿ. ಎರಡು ಕಿವಿಗಳನ್ನು ಮುಚ್ಚಿಕೊಂಡು ಅಬ್ಬರಿಸಿದಳು. "ಇಲ್ಲ....ಇಲ್ಲ....ವಿಕಾಸ್ ಬಗ್ಗೆ ಅಂಥ ಮಾತುಗಳ್ನ ಆಡ್ಬೇಡ. ಅಂಥ ಲೈಫ್ ನಿನ್ನಂಥವ್ರಿಗೆ" ಮಂಡಿಯಲ್ಲಿ ಮುಖ ಮುಚ್ಚಿಕೊಂಡು ಬಿಕ್ಕಳಿಸಿ ದಳು. ತೀರಾ ಹುಚ್ಚಿಯಂತೆ ಕಂಡಳು ರಜನಿ. ಆವನ ಪ್ರಕಾರ ಇಂಥವರು ಸಹಾನುಭೂತಿಗೂ ಯೋಗ್ಯರಲ್ಲ.

ಮೇಲಿದ್ದವನು ರೇಗಿದ. "ಸುಮ್ನೆ ಈಗ ಯಾಕೆ ವಿಕಾಸ್‌ನ ನೆನ ಸ್ಕೊಂಡ್ ಗೋಳಾತ್ತೀಯಾ? ನಿನ್ನ ಕನಸ್ಸಿನಲ್ಲಿ ಬರೋಕ್ಕೊ, ಅವನಿಗೆ ಇಷ್ಟ ವಿರಲಾರದ್ದು. ಅವ್ನು ಕೆಲವು ದಿನ ನಿನ್ನ ಗಂಡನಾಗಿದ್ದ. ಅದು ನಿನ್ನ ಅದೃಷ್ಟ ಅಷ್ಟೆ" ಹೊರಗೆ ಹೋದ. ಹೊರಗೆ ಕೇಡ ಕಾರುತ್ತಿದ್ದರೂ ಪ್ರಕಾಶ್‌ನಂಥ ಕೆಟ್ಟ ವ್ಯಕ್ತಿಯ ಹೃದಯದಲ್ಲೂ ಕೂಡ ವಿಕಾಸ್‌ನಂಥನ ಮೇಲೆ ಅಭಿಮಾನ ವಿತ್ತು.

ಎಷ್ಟೋ ಹೊತ್ತು ರಜನಿ ಅಳುತ್ತಾ ಕೂತಿದ್ದಳು. ಬಿಕ್ಕುವಿಕೆ ನಿಂತರೂ ಅವಳಲ್ಲಿನ ದುಃಖ, ಕೋಪ ಕಡಿಮೆಯಾಗಲಿಲ್ಲ.

"ಡ್ಯಾಮ್....ಇಟ್...." ಹಾಸಿಗೆಯ ಮೇಲಿನ ದಿಂಬುಗಳನ್ನೆಲ್ಲ ಎತ್ತಿ ಎಸೆದಾಡಿದಳು. "ಎಲ್ಲಾ....ಸಾಯ್ಲಿ...." ಹುಚ್ಚಿಯಂತೆ ಅರಚಾಡಿದಳು. ಆದರೂ ಅವಳತ್ತ ಗಮನಕೊಡುವವರಾರು ಇರಲಿಲ್ಲ.

ಸಂಜೆ ಪಂಕಜಮ್ಮ ಬಂದಾಗಲೂ ಅದೇ ಸ್ಥಿತಿಯಲ್ಲಿದ್ದಳು. ಆಕೆಯ ಮೈ ಉರಿದುಹೋಯಿತು. ಆಕೆಯ ಸಾರ್ವಜನಿಕ ಜೀವನ ಶಿಥಿಲವಾಗು ತ್ತಿದ್ದರೆ, ಮನೆಯ ಒಳಗೆ ಬೆಂಕಿ ಹೊಗೆಯಾಡುತಿತ್ತು. ಶಾಂತಿಯೆಂಬುದೆ ಇರ ಲಿಲ್ಲ.

"ಏನಾಯ್ತು ನಿಂಗೆ ? ಸುಮ್ನೆ ಹೆತ್ತ ಹೊಟ್ಟೆ ಯಾಕೆ ಉರಿಸ್ತೀಯಾ ? ಮಧ್ಯಮ ದರ್ಜೆಯ ಬದ್ಕಿನಲ್ಲಿ ನಲುಗಿಹೋಗ್ತಾಳಲ್ಲಾಂತ ಎಷ್ಟೊಂದು ಧಾವಂತ ಪಟ್ಟೆ ಅದಕ್ಕಾಗಿ ತೆತ್ತ ಬೆಲೆ ಎಷ್ಟು ? ಆ ಒರಟ ನಿನ್ನ ಎಂದೋ ಕೊಂದುಬಿಡ್ತಾ ಇದ್ದ .. " ತಕ್ಷಣ ತಾಯಿಯ ಬಾಯನ್ನು ಕೈಯಿಂದ ಮುಚ್ಚಿ ದಳು.

"ಮಮ್ಮಿ, ನನ್ನ ಚಿತ್ರಹಿಂಸೆ ಮಾಡ್ಬೇಡಿ. ವಿಕಾಸ್‌ನ ಏನಾದ್ರೂ ಅಂದ್ರೆ........ನಂಗೆ ಕೇಳೋಕಾಗೋಲ್ಲ" ಅವರೆದೆಯ ಮೇಲೆ ಮುಖವಿಟ್ಟು ಮತ್ತಷ್ಟು ಕಣ್ಣೀರು ಸುರಿಸಿದಳು ನಿಂತ ನೆಲ ಬಿರುಕಾಗಿ ಇಬ್ಬರನ್ನು ನುಂಗು ತ್ತಿರುವ ಅನುಭವವಾಯಿತು ಪಂಕಜಮ್ಮನಿಗೆ. ಸ್ವರ ಒಣಗಿ ಹಣೆಯ ಮೇಲೆ ಬೆವರಿನ ಬಿಂದುಗಳು ಸಾಲುಗಟ್ಟಿ ನಿಂತವು.

ಎಲ್ಲೋ ಹತ್ತಿಕೊಂಡ ಬೆಂಕಿ ಹತ್ತಿರದಲ್ಲಿ ಹೊಗೆಯಾಡತೊಡಗಿತು.

ಈಗ ಸ್ವಲ್ಪ ಎಚ್ಚರ ತಪ್ಪಿದರೂ ಪೂರ್ತಿ ಭಸ್ಮವಾಗಿಬಿಡುವ ಅಪಾಯವಿದೆಯೆನಿಸಿತು. ಬಹಳ ತಾಳ್ಮೆಯಿಂದ ತಮ್ಮ ಧಾಟಿ ಬದಲಾಯಿಸಿಕೊಂಡರು.

"ಸಮಾಧಾನ ಮಾಡ್ಕೊ .. ಸಮಾಧಾನ ಮಾಡ್ಕೋ, ಇನ್ನು ವಿಕಾಸ್ ಬಗ್ಗೆ ಯೋಚಿಸೋದಾಗ್ಲಿ, ಅಭಿಮಾನವಿರಿಸಿಕೊಳ್ಳೋದಾಗ್ಲಿ... ಹುಚ್ಚುತನ ! ಅವ್ನಿಗೆ ಕೆಟ್ಟ ಸ್ವಾಭಿಮಾನ. ನಿನ್ಮುಖ ನೋಡೋ ಇಷ್ಟ ಕೂಡ ಅವ್ನಿಗೆ ಇರ್ಲಾರ್ದು. ನೀನು ಈಗ ಅಖಿಲೇಶ್ ಸ್ಲಿಪ್ ಆಗದ ಹಾಗೆ ನೋಡ್ಕೊ" ಮಗಳ ಬೆನ್ನನ್ನು ಪ್ರೀತಿಯಿಂದ ಸವರಿದರು. ಮೊದಲ ಸಲ ತಾವು ಮಾಡಿದ್ದು ತಪ್ಪೇನೋ ಎಂದು ಯೋಚಿಸಿದರು. ಅವಳ ಪಾಡಿಗೆ ಅವಳನ್ನು ಬಿಟ್ಟಿದ್ದರೇ ತಮ್ಮ ಕೆಲಸ ಎಷ್ಟೋ ಹಗುರವಾಗುತ್ತಿತ್ತು. ಗೆಲುವು ಅಂದುಕೊಂಡ ಸೋಲು ಅಲ್ಲಿಂದಲೇ ಷುರುವಾಗಿದ್ದು

ಆಕೆ ಚೇತರಿಸಿಕೊಳ್ಳಬೇಕಾದರೇನೇ ಬಹಳ ಹೊತ್ತು ಹಿಡಿಸಿತು. ಮುಖ ತೊಳೆದು ಬಂದು ಮಗಳ ಬಳಿ ಕೂತರು.

ನಿಸ್ತೇಜವಾದ ಮುಖ. ಗುಳಿ ಬಿದ್ದ ಕಣ್ಣುಗಳು. ಅವುಗಳ ಸುತ್ತಲಿನ ಕಪ್ಪು ಉಂಗುರ, ಅಸ್ತವ್ಯಸ್ತವಾದ ತಲೆಗೂದಲು. ದುರಂತ ಕಾದಂಬರಿಯ ನಾಯಕಿಯಂತೆ ಕಂಡಳು. ತಾಯಿ ಹೃದಯ ಕ್ಷಣ ಕಾಲ ಚಡಪಡಿಸಿತು. ನಿಜವಾಗಿಯೂ ಹೆದರಿದರು.

ಬೆವರಿಗಂಟಿದ ಮಗಳ ಹಣೆಯ ಮೇಲಿನ ಕೂದಲನ್ನು ಹಿಂದಕ್ಕೆ ತಳ್ಳಿದರು. "ರಜನಿ, ನೀನು ಓದಿದ ತಿಳಿವಳಿಕೆಯುಳ್ಳ ಹೆಣ್ಣು. ವಿಕಾಸ್ ಬರೀ ಜೋರು ಮಾಡಿ ನಿನ್ನನ್ನು ಬಗ್ಗಿಸೋಕೆ ಪ್ರಯತ್ನಪಟ್ಟನೇ ವಿನಃ ಪ್ರೀತಿಯಿಂದ ಓಲೈಸಿಕೊಳ್ಳಿಲ್ಲ. ಅಂಥವನ ಬಗ್ಗೆ ಭರವಸೆ ಇಟ್ಟುಕೊಳ್ಳೋದ್ರಿಂದ ಪ್ರಯೋಜನವಿಲ್ಲ. ಅದು ಮುಗಿದ ಕಥೆ, ಮೂಢತನದ ವರ್ತನೆ ನಿನ್ನಂಥವ್ರಿಗಲ್ಲ. ಬಿ ಡೇರ್. ನಿನ್ಗೇನು ಕಡಿಮೆಯಾಗಿದೆ ? ನಾವೆಲ್ಲ ನಿನ್ನ ಸಪೋರ್ಟ್‌ಗೆ ಇದ್ದೇವೆ. ಇಷ್ಟ ಬಂದಂತೆ ನಿನ್ನ ಬದ್ಕನ್ನ ರೂಪಿಸ್ಕೊ. ಆದರೆ... ಅಖಿಲೇಶ್ ನಿನ್ನ ಪ್ರೀತಿಸ್ತಾನೆ" ಕೊನೆಯಲ್ಲಿ ಒಂದು ಮಾತನ್ನು ಸೇರಿಸಿದರು. .ತುಂಬು ತಾಯ ಅಂತಃಕರಣದಲ್ಲಿ ಅವಳಿಗೆ ಮಿಂದಂತಾಯಿತು.

ಇಷ್ಟೆಷ್ಟು ಚುರುಕಾದರು ಪಂಕಜಮ್ಮ, ಕಬ್ಬಿಣ ಕಾದಾಗಲೇ ಬಡಿಯಬೇಕು ಎನ್ನುವ ಸಂಗತಿ ಆಕೆಗೆ ಗೊತ್ತು. ನನ್ಮಾತು ಕೇಳು. ಮೂರ್ನ್ಲೊತ್ತು

ಅಳ್ತಾ ಕೂಡೋದು ಏನು ಚೆನ್ನ, ವಿಕಾಸ್ ಎಂದಾದ್ರೂ ನಿಂಗೋಸ್ಕರ ಎರಡು ತೊಟ್ಟು ಕಣ್ಣೀರು ಇರಲಿ, ವೇದನೆಯ ನಿಟ್ಟುಸಿರಾದ್ರೂ ಚೆಲ್ಲಿದ್ದಾನ? ಖಂಡಿತ ಇಲ್ಲ. ಅವನು ಈಗ ಇನ್ನಷ್ಟು ಫ್ರೆಶ್ ಆಗಿ ಕಾಣ್ತಾನೆ, ನೀನು ಮುವ್ವತ್ತು ದಾಟಿದೋಳ ಹಾಗೆ ಇದ್ದೀಯಾ. ಶತಮಾನಗಳು ಹೆಣ್ಣಿನ ದುರ್ಬಲತೆಯನ್ನು ಗಂಡು ಚೆನ್ನಾಗಿ ಉಪಯೋಗ್ಸಿಕೊಂಡಿದ್ದಾನೆ" ಭಾಷಣದ ಹಾದಿ ಹಿಡಿದರು. ಇಂಥ ಉದ್ವೇಗಪೂರಿತ ಮಾತುಗಳನ್ನು ಆಡಿಯೇ ಆಕೆ ಸಾರ್ವಜನಿಕ ಜೀವನವನ್ನು ಪ್ರವೇಶಿಸಿದ್ದು.

ಅವರ ಒಡಬಡಿಕೆಗೆ ರಜನಿಯ ಮಿದುಳು ನಿಷ್ಕ್ರಿಯವಾಗಿತ್ತು. ಅರ್ಥವಾಗದ ಗೊಂದಲ ಮನದಲ್ಲಿ. ವಿಕಾಸ್ ಸ್ವಲ್ಪ ಕೂಡ ನೊಂದಂತೆ ಕಾಣಲಿಲ್ಲ. 'ಫ್ರೆಶ್' ಆಗಿಯೇ ಇದ್ದ. ಅವಳ ತಲೆಯಲ್ಲಿ ಹುಚ್ಚುಚ್ಚು ವಿಚಾರಗಳು.

ಕಡೆಯಲ್ಲಿ ಪಂಕಜಮ್ಮ ಒಂದು ಬಾಂಬ್ ಇಟ್ಟರು. "ವಿಕಾಸ್ ಮದ್ವೆ ಗೊತ್ತಾ?" ಬೆಚ್ಚಿಬಿದ್ದಳು ರಜನಿ. ತುಟಿಗಳು ಕಂಪಿಸಿ ನಾಲಿಗೆಯೊಡಗಿತು. "ಮಮ್ಮಿ ನೀನು ಹೇಳ್ತಾ ಇರೋದು ನಿಜ್ವಾ ?" ಕಣ್ತುಂಬಿ ಪುಟ್ಟ ಮಗುವಿನಂತೆ ಕೇಳಿದಾಗ ಪಂಕಜಮ್ಮನ ತಾಯಿ ಕರುಳು ಚುರಕ್ಕೆಂದಿತು. ಮಗಳು ಧೈರ್ಯ ತುಂಬಿಕೊಳ್ಳುವುದು ಆಕೆಗೆ ಬೇಕಿತ್ತು.

"ಯಾಕೆ ಸುಳ್ಳು ಹೇಳ್ಲಿ ? ನಿನ್ನಂಗೆ ಅಳ್ತಾ ಕೂಡೋಕೆ ಅವನೇನು ಹೆಣ್ಣಲ್ಲ ಈ ವಯಸ್ಸಿನಲ್ಲಿ ಒಂಟಿಯಾಗಿರೋ ಕರ್ಮ ಅವನಿಗ್ಯಾಕೆ? ಒಂದಿನ ನಿನ್ನ ಬಿಟ್ಟು ಇರ್ತಾ ಇದ್ನ ?" ನಯವಾಗೆ ಚುಚ್ಚಿದರೂ ಅವಳಲ್ಲಿ ಈ ಮಾತು ತೀವ್ರವಾಗಿ ಕೆಲಸ ಮಾಡಿತು. ಅವನ ಬಿಗಿಯಪ್ಪುಗೆಯಲ್ಲಿ ಕ್ಷಣ ನಲುಗಿದಂತಾಯಿತು "ಅಬ್ಬ....ಬಿಟ್ಟಿರೋದೂಂದ್ರೆ... " ಅವನ ಬೆಚ್ಚಗಿನ ತೋಳುಗಳೊಳಗೆ ಅಡಗಿಸಿಕೊಳ್ಳುತ್ತಿದ್ದ. ರಜನಿಯ ತಲೆ 'ಧೀಂ' ಎಂದಿತು.

ಮೇಲಕ್ಕೆದ್ದ ಪಂಕಜಮ್ಮ ಮಗಳತ್ತ ನೋಡಿದರು. ನೆಟ್ಟ ಬಾಣ ಸರಿಯಾಗಿ ಕೆಲಸ ಮಾಡಲು ಶುರು ಮಾಡಿತ್ತು. ಹೊಯ್ದಾಟ, ದ್ವಂದ್ವದ ಛಾಯೆ ಅವಳ ಮುಖದಲ್ಲಿ ಪ್ರಕಟಗೊಂಡಿತು.

"ಡೈವೋರ್ಸ್ ತಗೊಂಡ್ಮೇಲೆ ಎಲ್ಲಾ ಮುಗಿದಂಗೆ. ಇನ್ನು ಬೇರೆ ರೀತಿ ಯೋಚ್ಸು. ಹಿಂದಿನ ಬದ್ಕನ್ನು ನೆನಸ್ಕೊಂಡ್ ಅಳ್ತಾ ಕೂಡೋದು ಮೂರ್ಖತನ. ಮೂರ್ಹೊತ್ತು ಮನೆಯಲ್ಲಿ ಕೂತ್ಕೋಬೇಡ. ಓಡಾಟದಿಂದಲಾದ್ರೂ ಮದ್ಲಿನ ಕೆಂಪು ಮುಖದಲ್ಲಿ ತುಂಬಿಕೊಳ್ಳಿ" ಕೆನ್ನೆ ಸವರಿದರು.

ಅವರ ಕೈ ಹಿಡಿದು ಮತ್ತಷ್ಟು ಕಣ್ಣೀರು ಸುರಿಸಿದಳು. ಇವಳ ಕಣ್ಣುಗಳಲ್ಲಿ ಇನ್ನೆಷ್ಟು ಕೊಡ ಕಣ್ಣೀರು ಇರಬಹುದು ? ಯೋಚಿಸುವಂತಾಯಿತು.

"ಮಮ್ಮಿ, ಪ್ಲೀಸ್ ನಂಗೆ ಎರ್ಡು ದಿನ ಟೈಮ್ ಕೊಡು, ಚೇತರಿಸಿ ಕೊಂಡ್ಬಿಡ್ತೀನಿ" ಎಂದಾಗ ಬಗ್ಗಿ ಮಗಳ ಹಣೆಗೆ ಚುಂಬಿಸಿದರು. "ಓ....ಕೆ, ಹಾಗೇ ಮಾಡು. ಅವಕಾಶಗಳು ಬಂದಾಗ ನಾವು ಬುದ್ಧಿವಂತಿಕೆಯಿಂದ ಉಪಯೋಗಿಸ್ಕೋಬೇಕು. ಅವು ಮತ್ತೆ ಮತ್ತೆ ನಮಗಾಗಿ ಕಾದುಕೂಡೋಲ್ಲ. ಅಖಿಲೇಶ್ ಅಂಥ ಯುವಕ ತಪ್ಪಿಹೋದ್ರೆ....ನಾವು ಪರದಾಡಬೇಕಾಗುತ್ತೆ. ಮೈಂಡ್ ಇಟ್" ಮುಂದಲೆ ಸವರಿದರು. ನಿರ್ಲಿಪ್ತಳಂತೆ ಶೂನ್ಯದತ್ತ ದಿಟ್ಟಿಸಿದಳು ರಜನಿ.

"ಎದ್ದು ಮುಖ ತೊಳ್ದು ಬಟ್ಟೆ ಬದಲಾಯ್ಸಿ, ಷಾಪಿಂಗ್‌ಗೆ ಹೋಗ್ಬರೋಣ" ಮತ್ತಷ್ಟು ಹುರಿದುಂಬಿಸಿದರು.

ತಾಯಿ ಹೋದತ್ತಲೇ ನೋಡಿದಳು ರಜನಿ. ಭವ್ಯಸೌಧ ಹೊಡೆದು ಉರುಳಿಸಿ ಅದರ ಜಾಗದಲ್ಲಿ ಮುರುಕಲು ಗುಡಿಸಲು ಎಬ್ಬಿಸುವ ಹವಣಿಕೆ ಎನಿಸಿತು ಮುಂದಿನ ಬದುಕು.

ಸೋತವಳಂತೆ ಕಣ್ಣು ಮುಚ್ಚಿದಳು. ಮಾಂಗಲ್ಯದ ಸರ ಕೊಟ್ಟಾಗ, ಪರ್ಸ್ ಹಿಂದಿರುಗಿದಾಗ ಪಿಕಾಸ್‌ನಲ್ಲಿ ಯಾವುದೇ ಉದ್ವೇಗವಿದ್ದಂತೆ ಕಾಣಲಿಲ್ಲ, ಸಹಜವಾಗಿದ್ದ.

'ಸಂಬಂಧವೇ ಅರ್ಥಹೀನವಾದಾಗ ಆ ವಸ್ತು ಕೂಡ ತನ್ನ ಬೆಲೆ ಕಳೆದು ಕೊಳ್ಳುತ್ತೆ, ಇದಕ್ಕೆ ಯಾವ್ದೇ ಬೆಲೆ ಇಲ್ಲ' ಎಂದಿದ್ದ ಉದಾಸೀನವಾಗಿ ಮಾಂಗಲ್ಯದ ಸರವನ್ನು ಕೈಯಲ್ಲಿಡಿದು, ಆದರೆ ತಾನು ಅನುಭವಿಸಿದ ನೋವು ಎಷ್ಟು ? ಮುಖ ಮುಚ್ಚಿ ಅತ್ತಳು.

ಒಮ್ಮೆ ಕನಲಿ ಪ್ರಕಾಶ್ ಹೇಳಿದ್ದ. "ಡೈವೋರ್ಸ್‌ಗೇಂತ ಕೋರ್ಟಿನ ಮೆಟ್ಟಲು ಹತ್ತಿದ್ದು ಆಗಿದೆ. ಅದ್ರ ಅಮ್ಮ ಕಟ್ಟಿದ ತಾಳಿನ ಕೊರಳಿನಲ್ಲಿ ಹಾಕ್ಕೊಂಡ್ ಮೆರೀತೀಯಲ್ಲ. ಕಿತ್ತು ಅವ್ನ ಮುಖದ ಮೇಲೆ ಎಸೀ" ರೋಷಕ್ಕಿಂತ ಜಿಗುಪ್ಸೆಯೇ ಹೆಚ್ಚಾಗಿತ್ತು. ಆದರೆ ಆ ಕ್ಷಣದಲ್ಲಿ ಅವಳು ಅನುಭವಿಸಿದ ನೋವು ಅಪಾರ. ಮೂಡಿದ ನಂಬಿಕೆಗಳು ಒಡೆದುಹೋಗುವುದು ಎಷ್ಟು ಕಷ್ಟವೆನಿಸಿತ್ತು.

ಗುರುಮೂರ್ತಿಗಳು ಮಗಳನ್ನು ಪಕ್ಕದಲ್ಲಿ ಕೂಡಿಸಿಕೊಂಡು ಹೇಳಿದ್ದರು. "ಎಲ್ಲಾ ನಿರ್ಧಾರವಾದ್ಮೇಲೆ ಆ ಲಾಂಛನ ಯಾಕೆ ? ತೆಗ್ದು ಎಸೀ. ಇದೊಂದು ರೀತಿಯ ಗುಲಾಮತನ. ಯಾವ ಪ್ರಬುದ್ಧ ಮಹಿಳೆಯಾದ್ರೂ ಯೋಚ್ನೇ ಮಾಡಿದ್ದಾಳೆ ? ಒಂದು ಕ್ಷಣ ಸುಮ್ಮನಾದರು. ಪ್ರಶ್ನೆ ಅವರಲ್ಲೇ ಉದ್ಭವಿಸಿ ಕಾಡಿದರೂ ಮರುಕ್ಷಣ ತೊಡೆದುಹಾಕಿದರು.

"ತೆಗ್ದೇ ಬಿಡು. ಯಾವ್ದೇ ಅರ್ಥ ಇಲ್ಲ. "ಒಂದೇ ಮಾತಿನಲ್ಲಿ ಹೇಳಿದರೂ ಆ ಕ್ಷಣ ಮನದಲ್ಲಿನ ದ್ವಂದ್ವ ಗುರುಮೂರ್ತಿಗಳ ಮುಖದ ಮೇಲೆ ವ್ಯಕ್ತವಾಯಿತು.

ಆದರೆ ರಜನಿ ಎರಡು ದಿನ ಭಯಂಕರ ನೋವು ಅನುಭವಿಸಿದ್ದಳು. ಸುಂದರ, ಮಧುರ ನೆನಪುಗಳು ಅವಳನ್ನು ಕಾಡಿ ಮನ ಸ್ಥೈರ್ಯವನ್ನೇ ಕುಗ್ಗಿಸಿಬಿಡುತಿತ್ತು. ತೆಗೆದಿಟ್ಟಾಗ ಅವನ ಹೃದಯವೇ ಕಿತ್ತು ಬಾಯಿಗೆ ಬಂದಂತಾಗಿತ್ತು. ಇವು ಬಾಳಿನ ಪುಟದಲ್ಲಿ ಅಳಿಸಲಾರದೆ ಮುದ್ರಿತವಾದ ಕಪ್ಪು ಅಕ್ಷರಗಳು.

ಆತುರಾತುರವಾಗಿ ಬಂದ ಕೋಮಲ ತಟ್ಟನೆ ತಲೆ ಎತ್ತಿದಳು. ಜೇನು ಬಣ್ಣದ ಪ್ಯಾಂಟ್, ತಿಳಿ ಹಳದಿಯ ಚೆಕ್ಸ್ ಬುಶ್ ಷರ್ಟ್‌ನಲ್ಲಿ ವಿಕಾಸ್ ಅತ್ಯಂತ ಆಕರ್ಷಕವಾಗಿ ಕಂಡ.

"ಈ ಡ್ರೆಸ್‌ನಲ್ಲಿ ತುಂಬ ಚೆನ್ನಾಗಿ ಕಾಣ್ತೀರಾ, ಸರ್" ತುಟಿಯವರೆಗೂ ಬಂದ ಮಾತುಗಳು ಸಹಜವಾಗಿ ಆಡಿಬಿಟ್ಟಳು. ಕ್ಷಣ ವಿಕಾಸ್ ತಬ್ಬಿಬ್ಬಾದ. ಜೀವನದಲ್ಲಿ ಪ್ರಥಮ ಬಾರಿ ಒಂದು ಹೆಣ್ಣು, ಸುಂದರ ವಿದ್ಯಾವಂತ ಯುವತಿ ಅವನ ಎದುರಿನಲ್ಲಿಯೇ ಹೊಗಳಿದ್ದಳು. ಅರಿವಾಗದಂತೆ ರೋಮಾಂಚನಗೊಂಡ.

"ಅಂತೂ ನಿಮ್ಗೆ ಹೊಗಳೋದು ಗೊತ್ತು" ಹೊರ ನಡೆದ. ಉಲ್ಲಾಸ ಬಂದು ಅವನನ್ನು ಅಪ್ಪಿದಂತಾಯಿತು. ಅವನ ಸುಂದರ ರೂಪು, ದೃಢ ವ್ಯಕ್ತಿತ್ವದ ಬಗ್ಗೆ ಮೆಚ್ಚಿಕೊಂಡಿದ್ದರೂ ಅವನ ಎದುರು ಹೊಗಳಿರಲಿಲ್ಲವೇನೋ !

ಅಥವಾ ಅವರ ಮಾತುಗಳಿಂದ ವಿಕಾಸ್ ರೋಮಾಂಚಿತನಾಗಿರಲಿಲ್ಲವೇನೋ ! ಇಂದು ಸುಂದರ ಬೆಳದಿಂಗಳನ್ನು ಆಸ್ವಾದಿಸಿದಂತಾಯಿತು.

ಅಂದು ಕಾಲೇಜಿನಲ್ಲಿ ಕೂಡ ಹೆಚ್ಚು ಉತ್ಸಾಹದಿಂದ ಪಾಠ ಮಾಡಿದ. ವಿದ್ಯಾರ್ಥಿಗಳ ಪ್ರತಿಕ್ರಿಯೆಯನ್ನು ಗಮನಿಸಿದ. ಅವರುಗಳು ಪ್ರಶ್ನೆಗಳನ್ನು ಎತ್ತಿದಾಗ ಅತ್ಯಂತ ಸಮಾಧಾನಕರವಾಗಿ ಉತ್ತರಿಸಿದ. ಇಂದು ಅವನಿಗೆ ತೃಪ್ತಿ ನೀಡಿದ ದಿನ. ಹೇಗೆ ಸಾಧ್ಯವಾಯಿತು ? ಕೋಮಲ ಒಂದು ಮೆಚ್ಚಿಗೆಯ ನುಡಿ ಇಷ್ಟೆಲ್ಲ ಸ್ಫೂರ್ತಿ ತನ್ನಲ್ಲಿ ತುಂಬಿತೇ ? ಹೊಸ ಹೊಸ ವಿಚಾರಗಳು ಅವನಲ್ಲಿ ತುಂಬಿಕೊಂಡವು.

ಅವನು ಮನೆಗೆ ಬಂದಾಗ ಕೋಮಲ ಇನ್ನು ಇದ್ದಳು. ಮುಖ ನೋಡಿದ ಕೂಡಲೇ ಮೋಹಕವಾಗಿ ನಕ್ಕಳು. ಕಾಲೇಜಿನಲ್ಲೆಲ್ಲ 'ಬುಕ್ ವರ್ಮ್' ಎಂದು ಬಿರುದು ಪಡೆದುಕೊಂಡಿದ್ದ ಹೆಣ್ಣು ಇಷ್ಟು ಸುಂದರವಾಗಿ ನಗಬಲ್ಲಳೇ ? ಅವನಿಗೆ ಆಶ್ಚರ್ಯವಾಯಿತು. ಹೆಣ್ಣಿನ ಬಗ್ಗೆ ತನ್ನ ಅರಿವು ತೀರಾ ಕಮ್ಮಿ ಅನ್ನಿಸದೇ ಹೋಗಲಿಲ್ಲ.

"ಕೋಮಲ ಇವೇನು, ಇನ್ನು ಇದ್ದೀರಲ್ಲ" ಕೇಳಿದ. "ಇಲ್ಲ ಸರ್, ನೀವೇ ಬೇಗ ಬಂದಿದ್ದೀರಾ" ಎಂದಳು. ಚಕಿತನಾದ ವಿಕಾಸ್. ಎಂದಿಗಿಂತ ಮೊದಲು ಬಂದಿದ್ದ.

ಡ್ರೈವೋರ್ಸ್ ಸಿಕ್ಕ ಮೇಲೆ ಸ್ವತಂತ್ರಪಡೆದುಕೊಂಡವನಂತೆ ಆರಾಮಾಗಿ ಸಹೋದ್ಯೋಗಿಗಳ ಜೊತೆ ಕಾಲ ಕಳೆಯುತ್ತಿದ್ದ. ಮೆಕ್ಯಾನಿಕ್ ರಾಜು ಆಗಾಗ ಬಂದು ನೋಡುತ್ತಿದ್ದ. ಇವನು ಪೂರ್ತಿಯಾಗಿ ವಿಶ್ವಾಸವಿರಿಸಿದ್ದರಿಂದ ಅವನು ಮೋಸ ಮಾಡಲು ಹೋಗಿರಲಿಲ್ಲ ಮೂರು ತಿಂಗಳಲ್ಲಿ ಆರು ಕಾರುಗಳ ಕೈ ಬದಲಾಗಿದ್ದಕ್ಕೆ ಐವತ್ತು ಸಾವಿರಕ್ಕೂ ಮಿಕ್ಕಿ ಲಾಭ. ಗುರುಮೂರ್ತಿಗಳೇ ಆಗಿದ್ದರೆ ಒಂದೆರಡು ಲಕ್ಷಗಳ ಸಂಪಾದನೆ ಮಾಡಿಕೊಳ್ಳುತ್ತಿದ್ದರು. ಆದರೆ ನೈತಿಕವಾಗಿ ಅವರು ಕಳೆದುಕೊಳ್ಳುತ್ತಿದ್ದುದು ಬಹಳಷ್ಟು.

ನೇರವಾಗಿ ತನ್ನ ಕೋಣೆಗೆ ಹೋದವನು ಬಟ್ಟೆ ಬದಲಾಯಿಸಿ ಬಂದ. "ಇವತ್ತು ನನ್ನ ಕೈ ತಿಂಡಿ" ಏನೋ ಗುರುತು ಹಾಕುತ್ತಿದ್ದುದ್ದನ್ನು ಹಾಗೇ ಬಿಟ್ಟು ಒಳಗೆ ಎದ್ದು ಹೋದಳು. ಅವನ ಮನೆಯ ಪರಿಸರಕ್ಕೆ ಹೊಂದಿಕೊಂಡಿದ್ದಳು ಹೆಚ್ಚಾಗಿ.

ವಿಶ್ವನಾಥಯ್ಯನವರು ಬಂದು ಮಗನ ಜೊತೆ ಮಾತಿಗೆ ಕೂತಾಗ ಬಿಸಿ ಬಿಸಿ ಸಮೋಸಾ ತಂದಿಟ್ಟಳು.

"ಅಮ್ಮ, ನಿಮ್ಗೆ ಸಮೋಸಾ ಇಷ್ಟಾಂದ್ರು. ನಾನೇ ಮಾಡ್ದೇ. ಕ್ವಾಲಿಟಿ, ರುಚಿ ಬಗ್ಗೆ ಮಾತ್ರ ಗ್ಯಾರಂಟಿ ಕೊಡ್ಲಾರೆ" ಎಂದಾಗ ವಿಶ್ವನಾಥಯ್ಯ ನಕ್ಕುಬಿಟ್ಟರು. "ನನ್ನ ಮಗನತ್ರ ಸರ್ಟಿಫಿಕೇಟ್ ಅಷ್ಟೇನು ಕಷ್ಟವಲ್ಲ" ಎಂದರು. ಆದರೆ ಅವಳು ಅದನ್ನು ನಿಜವೆಂದು ಒಪ್ಪಿಕೊಳ್ಳಲಾರಳು. "ಐ ಡೋಂಟ್ ಬಿಲೀವ್, ಸರ್" ತೀರಾ ನಾಜೂಕಾದ ಸ್ವರದಲ್ಲಿ ಕೇಳಿಸಿದರೂ ಕೇಳಿಸದಂತೆ ಅತ್ಯಂತ ನಯವಾಗಿ ಹೇಳಿದಳು. ವಿಶ್ವನಾಥಯ್ಯನವರ ಲಕ್ಷ್ಯಕ್ಕೆ ಅವಳ ಮಾತು ಬರದಿದ್ದರೂ ವಿಕಾಸ್ ಹೆಚ್ಚು ಗಮನವಿಟ್ಟು ಕೇಳಿದ. ಅದರ ಹಿಂದಿನ ಉದ್ದೇಶವೇನು ?

ಅಪರೂಪಕ್ಕೆ ಯಾರೊಂದಿಗೋ ದೇವಸ್ಥಾನಕ್ಕೆ ಹೋಗಿದ್ದ ಸುನಂದಮ್ಮ ಹಿಂದಿರುಗಿದ್ದು ಸ್ವಲ್ಪ ತಡವಾಗಿಯೇ. ಅದುವರೆಗೂ ಕೋಮಲ ಇಲ್ಲೇ ಇದ್ದಳು.

"ಅಡ್ಗೆಯೆಲ್ಲಾ ಆಗಿದೆ" ಪೆನ್ನನ್ನು ಪರ್ಸ್‌ನೊಳಕ್ಕೆ ಹಾಕಿ ಮೇಲೆದ್ದಳು "ಇಲ್ಲೇ ಊಟ ಮಾಡ್ಕೊಂಡ್ಹೋಗು" ಎಂದರು ಸುನಂದಮ್ಮ. ಅವಳು ಒಪ್ಪಲು ಸಿದ್ಧವಿರಲಿಲ್ಲ. "ಬೇಡಮ್ಮ, ಬೆಳಿಗ್ಗೆ ಮಾಡಿಟ್ಟ ಅಡ್ಗೆ ವೇಸ್ಟ್ ಆಗುತ್ತೆ" ಬಾಗಿಲತ್ತ ನಡೆದಳು. ವಿಶ್ವನಾಥಯ್ಯ ಗಂಟೆ ನೋಡಿದರು. "ಒಬ್ಳೇ ಬೇಡ. ಆಗ್ಲೇ ಎಂಟೂ ಹತ್ತು ಆಯ್ತು" ಮೇಲೆದ್ದರು.

ವಿಶ್ವನಾಥಯ್ಯನವರು ಹೋದ ಮೇಲೆ ತಾಯಿ, ಮಗ ಇಬ್ಬರೇ ಉಳಿದರು.

"ಬಹಳ ಸಂಕೋಚದ ಸ್ವಭಾವ. ಒಂದಿಷ್ಟು ತಿಂಡಿ ಕೊಟ್ರೂ.... ತಿನ್ನೋಲ್ಲ. ಆ ಹೆಣ್ಣಿಗೆ ಊಟ, ತಿಂಡಿಯ ನೆನಪೇ ಇರೋಲ್ಲ" ಗೊಣಗಿಕೊಂಡರು ಸುನಂದಮ್ಮ.

ಅಷ್ಟರಲ್ಲಿ ಕಾಲಿಂಗ್‌ಬೆಲ್ ಸದ್ದಾಯಿತು. ವಿಕಾಸ್ ಎದ್ದು ಅತ್ತ ನಡೆದ.

"ನಮಸ್ಕಾರ....ಸಾಹೇಬ್ರೆ...." ಕೈ ಮುಗಿದ ರಾಜು. ಅವನು ಮನೆಯ ಬಳಿ ಬರುತ್ತಿದ್ದುದು ತೀರಾ ಅಗತ್ಯ ಬಿದ್ದಾಗ ಮಾತ್ರ. "ಆ ಮನುಷ್ಯ ನನ್ನ ಹೆದರಿಸೋಕೆ ಜನನಾ ಕಳ್ಸಿದ್ದಾನೆ. ಅಪ್ಪಿಗೆ ಸ್ವಲ್ಪ ಅನುಮಾನ" ಅತ್ತಿತ್ತ

ನೋಡಿ ಒಳಕ್ಕೆ ಬಂದ "ನಿಮ್ಮ ಮೇಲೆ ಒಂದು ಕಣ್ಣು ಇಟ್ಟಿದ್ದಾರೆ. ನಿಮ್ಗೆ ತಿಳ್ಸಿ ಹೋಗೋಣಾಂತ್ಬಂದೆ" ಎಂದಾಗ ಸಣ್ಣಗೆ ನಕ್ಕ. ಅವನು ಉರುಳಿಸಿದ ದಾಳಕ್ಕೆ ಪಗಡೆ ಬಿದ್ದಿತ್ತು. ಹೆಚ್ಚು ದಿನ ಬೇಕಾಗಿರಲಿಲ್ಲ ಅವರ ಪತನಕ್ಕೆ. ಅವರ ಸರ್ವನಾಶ ಮಾಡುವ ಉದ್ದೇಶವು ಅವನಿಗಿರಲಿಲ್ಲ.

"ಅವರಿಂದ ಏನು ಮಾಡೋಕಾಗೋಲ್ಲ. ಹಾಗೇನಾದ್ರೂ ಅವರುಗಳು ಯೋಚ್ಸಿದ್ರೆ ಅದ್ಕಿಂತ ಮೂರ್ಖತನ ಬೇರಿಲ್ಲ" ಜಾಣತನದಿಂದ ಹೇಳಿದ.

ಈಗಾಗಲೇ ಇನ್‌ಕಮ್ ಟ್ಯಾಕ್ಸ್‌ನವರು ಗುರುಮೂರ್ತಿಗಳನ್ನ ಮುತ್ತಿ ಕಿರಿಕಿರಿ ಪ್ರಾರಂಭಿದ್ದರು. ಅವರ ಅಲಕ್ಷ್ಯಕ್ಕೆ ಇದೊಂದು ಭಾರಿ ಪೆಟ್ಟು. ವಿಕಾಸ್ ಚಿಂತಿಸಿಯೇ ಇದ್ದ.

ಬೇರೇನೋ ಮಾತಾಡುತ್ತ ನಿಂತ ರಾಜು ಹೋದುದ್ದು ಅರ್ಧಗಂಟೆಯ ನಂತರವೇ. ಒಳಗೆ ಬಂದ ವಿಶ್ವನಾಥಯ್ಯನವರು ಗೊಣಗಿದರು.

"ಇಷ್ಟೊಂದು ಮರುವು ಇರುತ್ತಾ? ಅಡ್ಗೆ ಮಾಡಿ ಬಂದಿದ್ದೀನಿ ಅಂದ್ಳು. ಅಲ್ಲೇನು ಇಲ್ಲ. ಬೇಳೆ, ಅಕ್ಕಿ ಕುಕ್ಕರಿಗೆ ಸುರಿದು ಇಟ್ಟಿದ್ದಾಳೆ. ಅಷ್ಟೆ" ಇವೆಲ್ಲ ಕೋಮಲ ಬಗ್ಗೆಯ ಮಾತುಗಳು. ಕ್ಷಣ ವಿಕಾಸ್‌ಗೆ ಕಸಿವಿಸಿಯಾಯಿತು. ಅವಳು ಉತ್ತಮ ವಿದ್ಯಾರ್ಥಿಯಾಗಿದ್ದಳು ಎನ್ನುವುದನ್ನು ಬಿಟ್ಟು ಅವನಿಗೇನು ಗೊತ್ತಿಲ್ಲ.

ಇಂದು ಮಲಗಿದಾಗ ಅವನು ಕೋಮಲ ಬಗ್ಗೆಯೇ ಯೋಚಿಸಿದ. ಈಚೆಗೆ ಸ್ವಲ್ಪ ಗೆಲುವಾಗಿ ಕಾಣುತ್ತಿದ್ದರೂ ಅವಳೆದೆಯಲ್ಲಿ ದೊಡ್ಡ ವೇದನೆಯೇ ಇದೆಯೆಂದುಕೊಂಡ.

ಎದ್ದು ಹೊರಗೆ ಬಂದ. ಸಮೋಸಾದ ವಾಸನೆ ಇನ್ನು ಹಾಲ್‌ನಲ್ಲೆಲ್ಲ ಹರಡಿಕೊಂಡಿತ್ತು. 'ನಿಮ್ಗೆ' ಇಷ್ಟಾಂತ ಮಾಡ್ದೆ, ಸರಳವಾಗಿ ಕೋಮಲ ಹೇಳಿದ್ದರೂ ಅವನ ಮೇಲೆ ಹೆಚ್ಚು ಪರಿಣಾಮ ಬೀರಿತ್ತು. ಅವನಮ್ಮ ಅವನಿಗೆ ಇಷ್ಟವಾದುದ್ದನ್ನು ಮಾಡಿ ಬಡಿಸುತ್ತಿದ್ದರು. ಆದರೆ ಒಮ್ಮೆ ಕೂಡ ರಜನಿ ಆ ರೀತಿ ಯೋಚಿಸಿರಲಾರಳು.

ಬಾಗಿಲು ತೆಗೆದುಕೊಂಡು ಕಾಂಪೌಂಡ್‌ನೊಳಕ್ಕೆ ಕಾಲಿಟ್ಟ. ತುಂಬು ಬೆಳದಿಂಗಳು. ಗಿಡಗಳ ಮೇಲೆಲ್ಲ ತನ್ನ ಸೊಬಗನ್ನು ಬೀರಿ ಕಂಗೊಳಿಸುತ್ತಿತ್ತು.

'ನಿಮ್ಗೇ ಈ ಡ್ರೆಸ್ ಚೆನ್ನಾಗಿ ಕಾಣುತ್ತೆ' ಕೋಮಲಳ ಮಾತನ್ನ ಗಾಳಿ

ಮತ್ತೊಮ್ಮೆ ಹೂರಿಕೊಂಡು ಅವನಲ್ಲಿಗೆ ತಂದಿತು. ನವಿರಾಗಿ ಅವನ ಮೈ ಕಂಪಿಸಿತು. ಗಾಳಿಯೊಡನೆ ತೇಲಿದಂತಾಯಿತು. ಎಷ್ಟೋ ಹೊತ್ತು ಹೊರಗೆ ಕಳೆದು ಒಳಗೆ ಬಂದಾಗ ಐದಕ್ಕೆ ಎರಡು ನಿಮಿಷ. ಅದೊಂದು ಮಾತಿಗೆ ತಾನೆಷ್ಟು ಆಕರ್ಷಿತನಾದೆ ?

ಸ್ನಾನ, ತಿಂಡಿ ಮುಗಿಸಿ ಹೊರಡುವ ವೇಳೆಗೆ ನಾಲ್ಕಾರು ಬಾರಿ ಅವನ ನೋಟ ಬಾಗಿಲವರೆಗೂ ಧಾವಿಸಿ ಹಿಂದಿರುಗಿತು. 'ಕೋಮಲ ಯಾಕೆ ಬರ್ಲಿಲ್ಲ?' ಮನ ನಾಲ್ಕಾರು ಸಲ ಪ್ರಶ್ನಿಸಿಕೊಂಡಿತು.

ಉಡುಪು ತೊಡುವ ವೇಳೆಗೆ ಕೋಮಲ ಬಂದಳು. ಅವಳ ಕೈಯಲ್ಲಿ ಹೂಗೊಂಚಲಿತ್ತು. ವಿವಿಧ ಮಾದರಿಯ ಹೂಗಳನ್ನ ಸಂಗ್ರಹಿಸಿ ತಂದಿದ್ದಳು.

"ಗುಡ್ ಮಾರ್ನಿಂಗ್ ಸರ್" ಎಂದವಳು ಹೂದಾನಿಯಿಂದ ಹಳೆಯ ಹೂಗಳನ್ನ ತಗೆದು ಹೊಸ ಹೂಗಳನ್ನ ಸಿಕ್ಕಿಸಿ ಅವನ ಮುಂದಿಡಿದಳು. "ಹೇಗಿದೆ ಸರ್ ?" ವಿಕಾಸ್‌ಗೆ ತಮಾಷೆ ಮಾಡಬೇಕೆನಿಸಿತು. "ನಂಗೆ ಈ ಬಿಳಿ ಗುಲಾಬಿ ಇಷ್ಟವಾಗ್ಲಿಲ್ಲ" ಎಂದ ತಟ್ಟನೇ ಕಿತ್ತವಳೆ ಹೊರಗೆಸೆದುಬಿಟ್ಟಳು. ಬೆರಗಾದ. "ಇದೆಂಥ ಪೂಲಿಶ್‌ತನ, ನಾನು ಅಂದಿದಕ್ಕೆ ನೀವು ಬಿಸಾಡಿ ಬಿಡೋದೇ !" ಎಂದು ಹೊರಗೆ ನಡೆದ. "ನಿಮ್ಗೆ ಇಷ್ಟವಿಲ್ಲದ್ದು ನಾನು ಮಾಡೋಲ್ಲ" ಸಣ್ಣಗೆ ಅಂದಿದ್ದು ಅವನಿಗೆ ಕೇಳಿಸಿತು. ಬಿಸಿಲಿಗೆ ಬಿದ್ದ ಒಂಟಿ ಗುಲಾಬಿಯ ಗೊಂಚಲನ್ನು ಒಳಗೆ ತಂದ. ಕೋಮಲ ಪ್ರಶ್ನೆಯಾಗಿ ಕಾಡಿದಳು. ಆದರೂ ಅವನೆದೆಯಲ್ಲಿನ ಮಧುರವಾದ ರಾಗಕ್ಕೆ ಸಂಚಾಲನೆ ನೀಡಿದಳು.

ಇದೇ ಮೂಡಿನಲ್ಲಿ ಕಾಲೇಜಿಗೆ ಹೊರಟ. ಹುಮ್ಮಸ್ಸು, ಹುರುಪುಗಳ ಸಮ್ಮಿಲನ ಅವನಲ್ಲಿ ಏಕೀಭವಿಸಿತ್ತು. ಸರಳವಾಗಿ ಕಾಣುತಿದ್ದ ಲೈಫ್ ಛಾಲೆಂಜಾಗಿ, ಥ್ರಿಲ್ಲಾಗಿ ಕಂಡಿತು.

ಸಂಜೆ ಬಂದಾಗ ರಿಸೀವರ್ ಹಿಡಿದಿದ್ದ ಕೋಮಲ ಮೌನವಾಗಿ ಇಟ್ಟಳು. "ಕ್ಯಾಲೆಂಡರ್ ಕಳ್ಸಲ್ಲಾಂತ ಅಂಗ್ಡಿಯೋರ ತಕರಾರು" ಹಣೆಯುಜ್ಜಿ ಏನೋ ಗುರುತು ಹಾಕಿಕೊಂಡಳು. ವಹಿಸಿದ ಕೆಲಸದಲ್ಲಿ ಪೂರ್ಣವಾಗಿ ಮಗ್ನಳಾಗಿದ್ದಳು. ಹೇಗೆ ಇವಳಿಗೆ ಸಾಧ್ಯ ? ಅವಳಿಗೆ ವ್ಯಾಪಾರದ ಮೈಂಡಾಗಲಿ, ಕಮೀಷನ ಖಾಯಾಲಿಯಾಗಲಿ ಇಲ್ಲವೆಂದು ಅವನಿಗೆ ಗೊತ್ತು.

ಅವನು ಬಟ್ಟೆ ಬದಲಾಯಿಸುವ ವೇಳೆಗೆ ಕಾಫೀ ತಂದಿಟ್ಟಳು "ಬರ್ತೀನಿ, ಸರ್" ಪರ್ಸ್ ಕೈಗೆತ್ತಿಕೊಂಡಾಗ ಕೂಡುವಂತೆ ಸನ್ನೆ ಮಾಡಿದ "ನೀನು ಕಾಫೀ ಕುಡ್ಕೋಲ್ವಾ ?" ಬೇಡವೆನ್ನುವಂತೆ ತಲೆಯಾಡಿಸಿದಳು. "ನಾನು ಮನೆಗೆ ಹೋದ್ಮೇಲೆ ಅದೇ ಮಾಡೋದು. ಇರೋ ಡಿಕಾಷನ್‌ಗೆಲ್ಲ ಹಾಲು, ಸಕ್ಕರೆ ಬೆರೆಸಿಟ್ಟು ಆಗಾಗ ಕುಡ್ಯೋದು."

ಸಹಾನುಭೂತಿಯಿಂದ ಅವನ ಮನ ಕ್ಷಣ ಮೂಕವಾಯಿತು. "ಕೋಮಲ ಮನೆಗೆ ಹೋದ್ಮೇಲೆ ಏನ್ಮಾಡ್ತೀರಾ ?" ಆ ವಿಷಾದ ಅವಳ ಮುಖವನ್ನ ಆವರಿಸಿತು. "ಏನು ಮಾಡೋಲ್ಲ. ಕೆಲವೊಮ್ಮೆ ಅಡ್ಗೆ ಮಾಡ್ತೀನಿ, ನೆನಪಿದ್ರೆ ಊಟ, ಅಷ್ಟೆ. ಬರ್ತೀನಿ, ಸರ್" ಬಾಗಿಲು ದಾಟಿ ಹೊರ ನಡೆದಳು. ಅಷ್ಟು ದೂರ ಹೋದವಳು ಹಿಂದಿರುಗಿ ಬಂದಳು.

"ಅಮ್ಮ, ಅಪ್ಪ ಬರೋದು ಲೇಟಾಗುತ್ತೆ. ನೀವು ಊಟ ಮಾಡ್ಬಿಡೀಂತ ಹೇಳಿದ್ದಾರೆ. ಅಡ್ಗೆ ಬಿಸಿಯಾಗಿ ಕ್ಯಾರಿಯರ್‌ಗೆ ತುಂಬಿಟ್ಟಿದ್ದಾರೆ" ಎಂದವಳು ಹಿಂದಿರುಗಿದಳು.

"ಕೋಮಲ...." ಕರೆದ. "ನೀವೇನು ಹೋಗಿ ಅಡ್ಗೇ ಮಾಡ್ಬೇಕಾಗಿಲ್ವಲ್ಲ, ಕೂತ್ಕೊಳ್ಳಿ" ಎಂದವನು ಮನಸ್ಸು ಬದಲಾಯಿಸಿದ. "ನಾನು ಇವತ್ತು ನಿಮ್ಮ ಮನೆಗೆ ಬರ್ತೀನಿ" ಎದ್ದ. ನಿರಂತರವಾಗಿ ನೋಯುವಂತೆ ಕಾಣುವ ಹೆಣ್ಣಿಗೆ ತಾನೇನಾದರೂ ಮಾಡಲು ಸಾಧ್ಯವೇ ?

ಕೋಮಲ ಕಣ್ಣುಗಳಲ್ಲಿ ಗಲಿಬಿಲಿ ಇಣುಕಿತು. "ಕೆಲವು ವಿಷ್ಯದಲ್ಲಿ ನಾನು ತುಂಬಾ ಸೋಮಾರಿ. ನಿಮ್ಮ ವಿದ್ಯಾರ್ಥಿ ಅನ್ನೋ ಅಭಿಮಾನವಾದ್ರೂ ನಿಮ್ಗೆ ಇದೆ. ಅದ್ನ ಕಳ್ದುಕೊಳ್ಳೋಕೆ ನಂಗಿಷ್ಟವಿಲ್ಲ" ಎಂದಳು. ಆದರೆ ಅವನು ತನ್ನ ನಿರ್ಧಾರ ಬದಲಾಯಿಸಲು ಸಿದ್ಧವಾಗಲಿಲ್ಲ.

"ಹೋಗೋಣ ..." ಅವನೇ ಬೀಗದ ಕೈ ಗೊಂಚಲು ಕೈಗೆತ್ತಿಕೊಂಡ. "ನಿಮ್ಮ ಮೇಲಿನ ಅಭಿಮಾನವೇನು ಕಡ್ಮೆಯಾಗೋಲ್ಲ" ಅವಳ ವೈಯಕ್ತಿಕ ಜೀವನವನ್ನು ತಿಳಿಯಲೇಬೇಕೆಂಬ ನಿರ್ಧಾರಕ್ಕೆ ಬಂದ.

ಕೋಮಲ ಮೌನವಾಗಿ ಗೋಣಾಡಿಸಿದಳು. ದೊಡ್ಡ ಕಾಂಪೌಂಡ್, ಸುಂದರವಾದ ಬಂಗ್ಲೆ, ಮುಂದೆ ಬೆಳೆಸಿದ್ದ ಸುಂದರವಾದ ಹೂ ತೋಟ ಹುಬ್ಬೇರಿಸಿದ.

"ನಾನು ಔಟ್‌ಹೌಸ್‌ನಲ್ಲಿರೋದು" ಉಸುರಿ ಗೇಟು ತೆಗೆದಳು. ಬೆಳೆಸಿದ ಗಿಡಗಳ ಅಂದಕ್ಕೆ ತಲೆದೂಗುತ್ತ ಅವಳ ಜೊತೆಯಲ್ಲಿ ಹೆಜ್ಜೆ ಹಾಕಿದ. "ವಂಡರ್‌ಫುಲ್ ! ಒಳ್ಳೆ ಟೇಸ್ಟ್. ಎಷ್ಟು ಚೆನ್ನಾಗಿ ಬೆಳೆಸಿದ್ದಾರೆ" ಶಬಾಷ್ ಗಿರಿ ನೀಡಿದ. ಇವು ಯಾವುವು ತನಗೆ ಸಂಬಂಧವೇ ಇಲ್ಲವೆನ್ನುವಂತೆ ಕೋಮಲ ನಡೆಯುತ್ತಿದ್ದಳು.

ಬಂಗ್ಲೆಯ ಹಿಂಬಾಗಿಲಿಗೂ, ಔಟ್‌ಹೌಸ್‌ಗೂ ಹದಿನೈದು ಅಡಿಗಳಷ್ಟು ಅಂತರವಿತ್ತು. ಸಾಲಾಗಿ ಬಾಗಿಲ ಇಕ್ಕೆಡೆಗಳಲ್ಲಿ ಕ್ರೋಟನ್ ಪಾಟುಗಳನ್ನ ಜೋಡಿಸಿದ್ದರು.

ಪರ್ಸ್‌ನಲ್ಲಿ ಕೈ ಹಾಕಿದಳು " ಮೈ ಗಾಡ್, ಕೀ ಬಂಚೇ ಇಲ್ಲ" ತಲೆಯ ಮೇಲೆ ಕೈಯೊತ್ತಾಗ ವಿಕಾಸ್ ತಾನೇ ತೆಗೆದ ಫೋನ್ ಪಕ್ಕದಲ್ಲಿಯೇ ಇದ್ದ ಕೀ ಬಂಚನ್ನು ಗಮನಿಸಿದ್ದ.

ಸಂಕೋಚಿಸುತ್ತಲೆ ಬಾಗಿಲು ತಳ್ಳಿದಳು. ಟೇಬಲ್ಲು ಕುರ್ಚಿಗಳ ಮೇಲೆಲ್ಲ ಪುಸ್ತಕಗಳು ಹರಡಿಕೊಂಡಿದ್ದವು. ತಮ್ಮ ಮನೆಯಲ್ಲಿರುವಾಗ ಅಷ್ಟು ಕ್ರಿಯೇಟಿವ್ ಆಗಿ ಕಾಣುವ ಕೋಮಲ ಒಂಟಿಯಾಗಿದ್ದಾಗ ಯಾಕಿಷ್ಟು ಸೋಮಾರಿಯಾಗುತ್ತಾಳೆ ?

"ಕೂತ್ಕೊಳ್ಳಿ, ಸರ್...." ಕುರ್ಚಿಯತ್ತ ಕೈ ತೋರಿ ಆತುರದಿಂದ ಒಳಗೆ ಹೋದಳು. ತಂದೆ, ತಾಯಿ ಇಲ್ಲ ಸೋದರ ಮಾವನ ಮನೆಯಲ್ಲಿ ಓದಿಕೊಂಡಿದ್ದವಳು ಈಗ ಒಂಟಿಯಾಗಿದ್ದಾಳೆ. ಎನ್ನುವುದನ್ನು ವಿಶ್ವನಾಥಯ್ಯನವರು ಸಂಗ್ರಹಿಸಿ ಮಗನಿಗೆ ಹೇಳಿದ್ದರು.

ಕೋಮಲ ಹಾಲಿನ ಪಾತ್ರೆ ನೋಡಿದಳು. ಒಡೆದುಹೋಗಿತ್ತು. ಬೆಳಗಿನ ಕಾಫೀಗೆ ಬೇಕಾದಷ್ಟು ಮಾತ್ರ ಬಿಸಿ ಮಾಡಿಕೊಂಡು ಆಮೇಲೆ ಕಾಯಿಸಬೇಕೆಂದುಕೊಂಡವಳು ಮರೆತುಬಿಟ್ಟಿದ್ದಳು.

ಎರಡು ಲೋಟ ಜ್ಯೂಸ್ ಬೆರೆಸಿಕೊಂಡು ಬಂದವಳು ಅವನ ಮುಂದೆ ಒಂದು ಇಟ್ಟಳು "ಸಾರಿ ಸರ್, ನಿಮ್ಗೆ ಕಾಫೀ ಕೊಡೋಕೆ ಕೂಡ ಆಗ್ಲಿಲ್ಲ. ಹಾಲೆಲ್ಲ ಒಡೆದು ಹೋಗಿದೆ" ಗ್ಲಾಸ್‌ನತ್ತಲೇ ನೋಡುತ್ತಿದ್ದ ವಿಕಾಸ್ "ಹೋಗ್ಲಿ, ಊಟ ಮಾಡ್ಕೊಂಡೇ ಹೋಗ್ತೀನಿ" ಎಂದಾಗ ಪೆಚ್ಚಾದಳು.

ಹಿಂದಿನ ರಾತ್ರಿ ಮಾಡಿದ ಅಡಿಗೆಯನ್ನೇ ಬಡಿಸಿಕೊಂಡು ಬೆಳಗ್ಗೆ ಊಟ ಮಾಡಿದ್ದಳು. ರಾತ್ರಿಯ ಊಟದ ವಿಷಯವನ್ನೇ ಯೋಚಿಸಿರಲಿಲ್ಲ.

"ಬೇಡ ಸರ್, ನನ್ನ ಅಡ್ಗೆ ತೀರಾ ಕೆಟ್ಟದಾಗಿ ಇರುತ್ತೆ. ಆಮೇಲೆ ನೆನಪಾದಾಗಲೆಲ್ಲ ನಿಮ್ಮ ಮುಖದಲ್ಲಿ ಕಹಿ ಇಣಕೋದ್ಬೇಡ" ನಮ್ರತೆಯಿಂದ ನುಡಿದಳು. ಭಕ್ತಿ, ಅಭಿಮಾನ, ಗೌರವಕ್ಕೆ ಮೀರಿದ ಇನ್ನೊಂದು ಭಾವ ವಿಕಾಸ್ ಮೇಲಿತ್ತು. ಅದನ್ನು ಪ್ರಕಟಪಡಿಸುವಷ್ಟು ಸಮರ್ಥತೆ ತನಗಿಲ್ಲನೆಂದು ಅವಳ ಅಂದಾಜು.

ಜ್ಯೂಸ್ ಕುಡಿದು ಮೇಲಕ್ಕೆದ್ದ "ಕೋಮಲ, ನಿಮ್ಗೆ ಏನಾಗಿದೆ ? ನೀವು ವಿದ್ಯಾರ್ಥಿಯಾಗಿದ್ದಾಗ ನಿಮ್ಮ ಬಗ್ಗೆ ನಂಗೆ ಹೆಚ್ಚಿನ ಭರವಸೆ ಇತ್ತು. ಅದು ಹುಸಿಯಾಗಿಹೋಯ್ತು" ನಿರಾಸೆ ಇಣಕಿತು ಅವನಲ್ಲಿ. "ಗುಡ್‌ನೈಟ್." ಎಂದು ಹೊರಟವನು ಆ ಟೇಬಲ್ಲು ಮೇಲಿದ್ದ ನಾಲ್ಕು ಪುಸ್ತಕಗಳನ್ನು ಕೈಗೆತ್ತಿಕೊಂಡ. ಗಮನಿಸಲಾರದಂಥ ಸ್ಥಿತಿಯಲ್ಲಿದ್ದಳು ಕೋಮಲ.

ಆ ಕಾಂಪೌಂಡ್ ದಾಟಿ ಹೊರಗೆ ಬಂದ ವಿಕಾಸ್ ನೇರವಾಗಿ ನಡೆದು ಹಿಂದಿರುಗಿ ನೋಡಿದ. ಕೋಮಲ ಗೋಡೆಗೊರಗಿ ನಿಂತಿದ್ದಳು. ಚಿಕ್ಕಂದಿನಿಂದಲೂ ಅವಳಿಗೆ ಸಿಗಬೇಕಾದ ಪ್ರೀತಿ. ವಿಶ್ವಾಸಗಳಿಂದ ವಂಚಿತಳಾಗಿ ನಲುಗಿ ಹೋಗಿರಬೇಕೆಂದುಕೊಂಡ.

ವಿಕಾಸ್ ಬಂದ ಮೇಲೆ ವಿಶ್ವನಾಥಯ್ಯ, ಸುನಂದಮ್ಮ ಬಂದರು. ಈಗ ಹೊರಗೆ ತಿರುಗಾಡಲು ಅಷ್ಟೊಂದು ಅಂಜುತ್ತಿರಲಿಲ್ಲ. ಪರಿಸ್ಥಿತಿ ಅವರನ್ನು ಆ ಮಟ್ಟಕ್ಕೆ ತಂದಿತ್ತು.

"ಕೋಮಲ ನೀನು ಬಂದ್ಮೇಲೆ .. ಹೋದ್ಲಾ ?" ವಿಚಾರಿಸಿದ ಸುನಂದಮ್ಮ "ಅವ್ಳು ತಗೊಂಡ್ಹೋಗೋಕೆ ಒಂದಿಷ್ಟು ತಿಂಡಿ ತೆಗೆದಿಟ್ಟಿದ್ದೆ" ಎಂದುಕೊಂಡರು. ಡಬ್ಬಿ ಇಟ್ಟ ಜಾಗದಲ್ಲಿಯೇ ಇತ್ತು. "ಛೆ .. ಆ ಹುಡ್ಗೀಗೆ ಏನೂ ಬೇಡ. ತನ್ನ ಬಗ್ಗೆ ಯೋಚ್ಸಲಾರ್ದ ಕೆಲ್ಸವೇನಿದೆ ?" ತಮ್ಮ ಪಾಡಿಗೆ ತಾವು ಗೊಣಗುಟ್ಟಿಕೊಂಡರು.

ಊಟ ಮುಗಿಸಿದ ವಿಕಾಸ್ ತಂದ ಪುಸ್ತಕಗಳನ್ನು ತಿರುವಿದ. ಬರೀ ಫಿಲಾಸಫಿಗೆ ಸಂಬಂಧಪಟ್ಟ ಪುಸ್ತಕಗಳು. ಅವಳಿಗೆ ಫಿಸಿಕ್ಸ್‌ನಲ್ಲಿ ಆಸಕ್ತಿ ಇತ್ತು. ಆದರೆ ಫಿಲಾಸಫಿಯತ್ತ ಅವಳ ಮನ ಹೊರಳಲು ಕಾರಣವೇನು ?

ಒಂದು ಪುಸ್ತಕದ ಮಧ್ಯಭಾಗದಲ್ಲಿ ಚೀಟಿಯೊಂದು ಮಡಚಿಟ್ಟಲ್ಪಟ್ಟಿತ್ತು. ನಾಲ್ಕು ಮಡಿಕೆಯ ಆ ಕಾಗದವನ್ನು ಬಿಚ್ಚಿದ. ಅವನಿಗೆ ದಿಗ್ಭ್ರಮೆಯಾಯಿತು.

ಅವಳು ಮೊದಲ ದಿನ ವಿಕಾಸ್‌ನ ಕಂಡ ದಿನದಿಂದ ಅವನು ತೊಡುತ್ತಿದ್ದ ಬಟ್ಟೆಗಳು, ಅವನಿಗೆ ಆಸಕ್ತಿ ಇರುವ ವಿಷಯಗಳು, ಅವನ ಮಾತಿನ ವೈಖರಿ, ಕೆಲವು ಸೂಕ್ಷ್ಮ ಸಂದರ್ಭಗಳಲ್ಲಿ ಹೇಗೆ ಪ್ರತಿಕ್ರಿಯಿಸುತ್ತಾನೆಂಬುದನ್ನು ಅತ್ಯಂತ ಸೂಕ್ಷ್ಮವಾಗಿ, ಹೆಚ್ಚು ಸ್ಪಷ್ಟವಾಗಿ ಪುಟ್ಟ ಪುಟ್ಟ ಅಕ್ಷರಗಳಲ್ಲಿ ಕೊರೆದಿದ್ದಳು. ಇದು ಅವನು ಕಲ್ಪಿಸಿಕೊಳ್ಳಲಾರದ, ಊಹಿಸಲಾರದ ವಿಷಯ. ಕೋಮಲಾಗೆ ತನ್ನ ಬಗ್ಗೆ ಇಷ್ಟೊಂದು ಆಸಕ್ತಿ ? ಕ್ಷಣ ಅವನ ಮೈ ಪುಳಕಗೊಂಡಿತು.

ಮದುವೆಯಾಯಿತು. ವಯಸ್ಸಿಗೆ ಸಹಜವಾದ ಆಕರ್ಷಣೆ. ಒಂದು ರೀತಿಯ ಪ್ರೀತಿಯ ನಾಟಕ ರಜನಿಯೊಂದಿಗೆ ಮುಗಿದಿತ್ತು.

ಅವಳು ತನ್ನ ಬಗ್ಗೆ ಯೋಚಿಸುತ್ತಿದ್ದಳೇ ವಿನಹ ಅವನ ಬಗ್ಗೆ ಎಂದೂ ಕೇಳಿರಲಿಲ್ಲ. ಅಂಥ ಆಸಕ್ತಿ ಇರಲಿಲ್ಲ ಅದು ಅವಳ ಸಹಜ ಸ್ವಭಾವವೇನೋ ಒಗ್ಗಿಕೊಂಡಿದ್ದ. ಏನೂ ಅನ್ನಿಸಿರಲಿಲ್ಲ. ಅವಳ ಮೈಯ ಬಿಸಿಯಪ್ಪುಗೆಯಲ್ಲಿ ಕೂಡ ಇಂಥ ನವಿರಾದ ಭಾವನೆಯಿಂದ ಪುಳಕಗೊಂಡಿರಲಿಲ್ಲ.

ಪ್ರೇಮಮಯ ಪ್ರಪಂಚಕ್ಕೆ ಇಳಿದಂತಾಯಿತು.

ಬೆಳಗಿನಿಂದ ಬಹಳ ಖುಷಿಯಿಂದಿದ್ದ ರಜನಿ ಸಂಜೆ ಅಖಿಲೇಶ್ ಜೊತೆ ಕಾರಿನಲ್ಲಿ ಹೊರಟಾಗ ಗುರುಮೂರ್ತಿಗಳ ತುಟಿಯಂಚಿನಲ್ಲಿ ಕಿರುನಗು ಮಿನುಗಿತು. ಇದೆಂದು ಸಫಲತೆಯಾದರೂ ಕೆಲವನ್ನು ಮರೆಸಬಹುದೆಂಬ ನಂಬಿಕೆ.

ಎದ್ದು ಶತಪಥ ಹಾಕಿದವರು ಮಗನತ್ತ ನೋಡಿದರು. ನಿಶ್ಚಿಂತೆಯಿಂದ ಇರುವಂತೆ ಕಂಡ.

"ಪ್ರಕಾಶ್, ಈ ಬಿಸಿಯಲ್ಲೇ ಮದ್ವೆ ಮುಗ್ಸಿಬಿಡ್ಬೇಕು. ಹೆಚ್ಚು ತಡ ಮಾಡುವುದರಿಂದ ಅಖಿಲೇಶ್ ತಪ್ಪಿಹೋಗುವ ಸಂಭವ ಉಂಟು," ಎನ್ನುತ್ತಂದ

ಯಾವುದೇ ಪ್ರಯೋಜನವಿಲ್ಲದಿದ್ದರೂ ತಮ್ಮ ಚಿಂತನೆಯನ್ನು ' ಅವನ ಮುಂದಿಟ್ಟರು. ಪ್ರಕಾಶ್ ಕೈ ಕೊಡವಿದ. ಅಖಿಲೇಶ್ ರೀತಿ-ನೀತಿಗಳ ಬಗ್ಗೆ ಅವನಿಗೂ ಅನುಮಾನ.

ಅವನದೇ ಮಾತುಗಳನ್ನು ತನ್ನದಾಗಿರಿಸಿಕೊಂಡು ಉಸುರಿದ "ಅವನಿಗೆ ಕಡೇ ಪಕ್ಷ ಅವನಮ್ಮನ ಒಪ್ಪಿಗೆಯಾದ್ರೂ ಪಡೆಯಲೇಬೇಕೆಂಬ ಆಕಾಂಕ್ಷೆ. ಆಕೆ ಹಠವಾದಿ. ಇನ್ನಿಗೆ ಅಮ್ಮನ ಮುದ್ದು. ಅದೇ ತೊಡಕಾಗಿರೋದು." ಪ್ರಕಾಶ್‌ನ ವಿವರಣೆ ಕೇಳಿ ಅವರು ಮುಖ ಸಿಂಡರಿಸಿದರು. ಅವನ ಕೈಯಲ್ಲಿನ ಸಿಗರೇಟ್ ಕೆಳಗೆ ಬಿತ್ತು. ಬೂಟು ಕಾಲಿನಲ್ಲೇ ಅದೇ ಸ್ಥಳದಲ್ಲಿ ಹೊಸಕಿದ.

ಗುರುಮೂರ್ತಿಗಳ ಬುದ್ಧಿಗೆ ಕ್ಷಣ ಮಂಕು ಕವಿದಂತಾಯಿತು. ಅವರು ಮಗನ ಬಗ್ಗೆ ತಿಳಿದಿದ್ದಕ್ಕಿಂತ ಹೆಚ್ಚು ಕೆಟ್ಟಿದ್ದ. ಇದು ಶುಭ, ಅಶುಭ ಎಂದು ಯೋಚಿಸಲಾರರು. ಅವನ ಪುಂಡು ಪೋಕರಿ ರಾಜಕೀಯದ ಬಿಸಿ ಇವರಿಗೆ ತಟ್ಟಿದ್ದರೂ ಬುದ್ಧಿ ಹೇಳಲು ಹೋಗಿರಲಿಲ್ಲ. ಅದೇನೂ ಅಂಥ ಅಗತ್ಯವಾಗಿ ಕಂಡಿರಲಿಲ್ಲ.

ಆದರೆ ಯಾರೋ ಎಸೆದ ಸರಪಣಿಯ ಉರುಳಿಗೆ ಸಿಕ್ಕಿ ಸ್ಟೇಷನ್ ಸೇರಿದಾಗ ತಮ್ಮ ಅಂದಾಜಿಗಿಂತ ಅವನ ಬುದ್ಧಿಯ ಮಟ್ಟ ಕಡಿಮೆಯೆಂದು ಅರ್ಥ ಮಾಡಿಕೊಂಡಿದ್ದರು. ಅವರು ಆಯ್ದುಕೊಂಡ ಹಾದಿ ಲಾಭದಾಯಕವಾಗಿದ್ದರೂ ಅತ್ಯಂತ ದುರ್ಗಮ. ಅಪಾಯಗಳು, ಎಡರು ತೊಡರುಗಳು ಇದ್ದೇ ಇರುತಿತ್ತು. ಅದನ್ನೆಲ್ಲಾ ನಿರ್ವಹಿಸುವ ಸಾಮರ್ಥ್ಯ ಇವನಿಗಿದೆಯೇ ? ಅವರಿಗೆ ಅನುಮಾನವೇ.

ಮಗನ ಭುಜದ ಮೇಲೆ ಕೈ ಇಟ್ಟರು. "ಮೈಂಡ್ ಯುವರ್ ವೇಸ್. ನಿನ್ನ ರೀತಿ-ನೀತಿಗಳನ್ನ ಉತ್ತಮಪಡಿಸ್ಕೋ. ಇಲ್ಲದಿದ್ರೆ ಭವಿಷ್ಯದಲ್ಲಿ ತೊಂದರೆಗೆ ಒಳಗಾಗಬೇಕಾಗುತ್ತೆ" ಎಚ್ಚರಿಸಿದರು. ಪ್ರಕಾಶ್ ಕೆರಳಿದ.

"ನಿನ್ನಂಥವನಿಗೆ ನನ್ನಂಥ ಮಗನನ್ನ ಬಿಟ್ಟು ವಿಕಾಸ್ ಅಂಥವ್ರು ಹುಟ್ಟೋಕೆ ಸಾಧ್ಯನಾ ? ಬೇವಿನ ಮರದಲ್ಲಿ ಬೇವಿನ ಫಲವೇ !" ಹಂಗಿಸಿದ. ಗುರುಮೂರ್ತಿಗಳು ಹಲ್ಲುಮುಡಿಯನ್ನು ಕಚ್ಚಿ ಸಿಟ್ಟನ್ನು ನುಂಗಿದರು.

ಅಷ್ಟರಲ್ಲಿ ಒಳಗೆ ಬಂದ ರಜನಿ ತನ್ನ ಕೋಣೆಗೆ ಹೋದಳು. ಮರಳಿ ಪರ್ಸ್ ಹಿಡಿದು ಬಂದಳು. "ಡ್ಯಾಡಿ...." ಎಂದಾಗ ಅವಳ ಮುಖವನ್ನು

ದಿಟ್ಟಿಸಿದರು. ಮಗಳ ಮುಖ ಗೆಲುವಾಗಿ ಕಂಡರೂ ಆಗ ತಾನೇ ಅರಳಿದ ಶುಭ್ರ ಹೂವಿನಂತೆ ಕಾಣಲಿಲ್ಲ. "ವ್ಹಾಟ್ ...?" ಸಣ್ಣಗೆ ನಕ್ಕರು. ಆ ನಗುವೊಂದು ಅವರಿಗೆ ವರ. ಒಳಗಿನ ಸಂಯಮ ಕಾದುಕೊಳ್ಳಲು ಕೊಟ್ಟ ಅನುಗ್ರಹ.

ತಕ್ಷಣ ರಜನಿಯ ಮುಖ ಮಂಕಾಯಿತು. ಕೆಂಪೊಡೆಯಬೇಕಾದ ಕೆನ್ನೆಗಳು ಬಿಳಿಚಿಕೊಂಡವು. ಹಣೆಯ ಮೇಲೆ ಸ್ವೇದ ಬಿಂದುಗಳು. ಇದನ್ನು ಯಾವ ಗಂಡೂ ಇಷ್ಟಪಡಲಾರ !

"ಎನಿ... ರಾಂಗ್ ?" ಪ್ರಶ್ನಿಸಿದರು ಹತ್ತಿರಕ್ಕೆ ಬಂದು. ಏನಿಲ್ಲವೆನ್ನುವಂತೆ ತಲೆಯಾಡಿಸಿದಳು. "ಷಾಪಿಂಗ್‌ಗೆ ಹೋಗ್ಬರ್ತೀನಿ. ಮಮ್ಮಿ ಮನೆಯಲ್ಲೇ ಇರೊಂತ ಹೇಳಿದ್ರು. ಮರೆತಿದ್ದೆ" ಅವಳ ಸ್ವರ ನಿರ್ಜೀವವಾಗಿತ್ತು. ಗುರುಮೂರ್ತಿಗಳು ಮಗಳ ಹತ್ತಿರಕ್ಕೆ ಹೋಗಿ ಧೈರ್ಯ ತುಂಬುವಂತೆ ಅವಳ ಬೆನ್ನ ಮೇಲೆ ಕೈಯಾಡಿಸಿದರು.

"ಇದೊಂದು ಛಾನ್ಸ್, ಫ್ರೀಯಾಗಿರು. ಹಿಂದಿನ ಕೆಲವು ದಿನಗಳ ದಾಂಪತ್ಯವನ್ನು ಕನಸೆಂದು ಮರ್ತುಬಿಡು. ನಿನ್ನ ಮುಂದೆ ವಿಶಾಲವಾದ ಬದ್ಕು ಇದೆ. ಹೊಸ ಹೂವನ್ನೇ ಎಲ್ಲಾ ಇಷ್ಟಪಡೋದು. ಇದ್ಕೆ ಅಖಿಲೇಶ್ ಕೂಡ ಹೊರತಲ್ಲ. ಜ್ಞಾಪ್ಕ ಇರ್ಲಿ" ಎಚ್ಚರಿಸುವುದರ ಜೊತೆಗೆ ಸತ್ಯವನ್ನೇ ನುಡಿದಿದ್ದರು.

ರಜನಿ 'ಹ್ಞೂ'ಗುಟ್ಟಿ ಹೊರಗೆ ಬಂದಳು. ಹೆಣ್ಣು, ಗಂಡುಗಳಿಗೆ ಸಿಕ್ಕುವ ಪುರಸ್ಕಾರ, ಮನ್ನಣೆ, ನ್ಯಾಯದಲ್ಲಿ ಅಪಾರ ಅಂತರವಿದೆಯೆನಿಸಿತು. ಇದು ತೀರಾ ಕ್ರೂರ. ಛೀರಬೇಕೆನಿಸಿತು. ಇಂಥ ಪ್ರಶ್ನೆಗಳಿಗೆ ಅವಳಮ್ಮನಂಥ ಸಮಾಜ ಸುಧಾರಕರೂ ಉತ್ತರಿಸಲಾರರು.

ಸ್ಟೀರಿಂಗ್ ವ್ಹೀಲ್ ಹಿಡಿದ ಅಖಿಲೇಶ್ ಕಣ್ಣರೆ ಹಿಡಿದು ಮೋಹಕವಾಗಿ ನಕ್ಕ. ವಾಸ್ತವಿಕತೆಯ ಅರಿವಿದ್ದರೂ ರಜನಿಯ ಮೇಲೆ ಅವನಿಗೆ ಪ್ರೇಮ ಅಥವಾ ಪ್ರೇಮವೆನ್ನುವ ಆಕರ್ಷಣೆ.

ಹತ್ತಿ ಕೂತ ರಜನಿ ತಾಯಿಯನ್ನು ಜ್ಞಾಪಿಸಿಕೊಂಡಳು. "ಡ್ಯಾಡಿಗೆ ಹೇಳ್ದೆ. ಆದ್ರೂ ನಂಗೆ ಮಮ್ಮಿ ಭಯ. ಕಾರಣವೇ ಇಲ್ದೇ ಕೂಗಾಡಿ ಬಿ.ಪಿ. ಜಾಸ್ತಿ ಮಾಡ್ಕೋತಾರೆ" ಮನದ ಭಯವನ್ನು ಅವನ ಮುಂದೆ

ಬಿಚ್ಚಿಟ್ಟಳು. ಅಖಿಲೇಶ್ ಕ್ರಾಪನ್ನು ಒರಟಾಗಿ ಹಿಂದಕ್ಕೆ ತಳ್ಳಿ ಕಾರು ಸ್ಟಾರ್ಟ್ ಮಾಡಿದ. ರಜನಿ ಪಂಕಜಮ್ಮನ ಮಗಳಾಗಿ ಉಳಿಯುವುದು ಅವನಿಗೆ ಬೇಕಿರಲಿಲ್ಲ.

"ಅವೆಲ್ಲ ಮಾಮೂಲಿ ! ಹೊರ್ಗ್ಗಿನ ಕೆಲ್ಸಗಳಲ್ಲಿ ಸಿಂಗೆ ಹೇಳಿದ ಮಾತು ಗಳನ್ನ ಅವ್ರು ಮರ್ರು‌ಬಿಟ್ಟಿರುತ್ತಾರೆ. ಈಗ ಅವ್ರಿಗೆ ಅಂಥ ರಾಜಕಾರ್ಯ ವೇನೂ ಇಲ್ಲ" ಅಖಿಲೇಶ್ ಕಣ್ಣೊರೆಸುವ ಮಾತಾಡಿದ. ಅದರಲ್ಲಿ ಅಸಡ್ಡೆಯೇ ಹೆಚ್ಚಿಗಿತ್ತು.

ಸ್ಕ್ಯಾರಿಷಾೌಸ್‌ನ ಮುಂದೆ ಕಾರು ನಿಂತಾಗ ರಜನಿ ಇಳಿಯಲು ಹಿಂದೂ ಮುಂದೂ ನೋಡಿದಳು. ಕ್ಷಣ ಉತ್ಸಾಹಗೊಳ್ಳುತ್ತಿದ್ದ ಅವಳ ಮನ ಮರು ಕ್ಷಣವೇ ಸತ್ತುಹೋಗುತ್ತಿತ್ತು.

ಮಗುವಿನಂತೆ ಅವನತ್ತ ನೋಡಿದಳು. "ಬೋರ್ ಅಖಿಲೇಶ್ ! ನಂಗೇನೂ ಬೇಡ" ಎಂದಾಗ ಅಖಿಲೇಶ್ ಸುಸ್ತಾದ. ಪೂರ್ತಿ ಎಟುಕದ ಹೂವಿನ ಬಗ್ಗೆ ಅವನ ಆಸಕ್ತಿ ಇನ್ನೂ ಕುಂದಿರಲಿಲ್ಲ. ಮೃದುವಾಗಿ ಕೈ ಹಿಡಿದು ತುಟಿಗೊತ್ತಿಕೊಂಡು ಕಣ್ಣಲ್ಲೇ ಗೆಲುವನ್ನು ತುಂಬಿದ. "ನನ್ನ ಮನ ಸ್ಸಿಗೆ ತುಂಬ ನೋವಾಗುತ್ತೆ."

ಮುಗುಳ್ನಕ್ಕ ರಜನಿ ಪ್ರಯತ್ನಪೂರ್ವಕವಾಗಿ ಇಳಿದಳು. ದೊಡ್ಡ ಷೋ ರೂಂ ಇಬ್ಬರೂ ಒಳಗೆ ಬಂದಾಗ ಅದರ ಪ್ರಾಕಾರ ಲೈಟ್‌ಹೌಸಿನಂತೆ ಕಂಡಿತು. ಅದರ ಮಧ್ಯೆ ಬಣ್ಣ ಬಣ್ಣದ ಸೀರೆಗಳ ಕಾರಂಜಿ. ಸಾಮಾನ್ಯ ಹೆಂಗಸರು ನೋಡಿ ಸಂತೃಪ್ತಿಗೊಳ್ಳಬೇಕಾದ ಸ್ಥಳ.

ಅವಳ ಸೊಂಟ ಬಳಸಿ ಹೆಜ್ಜೆ ಹಾಕಿದ ಅಖಿಲೇಶ್ ಕೆನ್ನೆಯ ಬಳಿ ಉಸುರಿದ "ನಾನೇನೂ ಸೀರೆಗಳ ಚ್ಯೂಸ್‌ನಲ್ಲಿ ಬುದ್ಧಿವಂತನೂ ಅಲ್ಲ, ಎಕ್ಸ್ ಪೀರಿಯನ್ಸೂ ಇಲ್ಲ. ಆಯ್ಕೆ ನಿಂದು, ಬಿಲ್ಲು ನಂದು" ಹಿತವೆನಿಸಿತು ಅವನ ಸ್ವರ.

ಹತ್ತಾರು, ಹಲವಾರು ಸೀರೆಗಳನ್ನು ತೆಗೆಸಿ ಹಾಕಿ ಒಂದೆರಡು ಸಾಧಾ ರಣ ಸೀರೆಗಳನ್ನು ಆರಿಸಿದಾಗ ಅಖಿಲೇಶ್ ಅಸಮಾಧಾನಗೊಂಡ,

"ಇವೆಲ್ಲಾ ತೀರಾ ಸಿಂಪಲ್. ನನ್ನ ಮೊದಲ ಪ್ರೆಸಂಟೇಷನ್ ಇಷ್ಟೊಂದು ಚೀಪಾಗೋದ್ಬೇಡ. ಗ್ರಾಂಡಾಗಿರೋದು ಆರ್‍ಸು. ನಾನು ಕೊಡಿತೀನಿ"

ಅವನು ಕೌಂಟರ್ ಬಳಿ ನಡೆದ. ರಜನಿ ಸೀರೆಗಳ ಮತ್ತೊಂದು ವಿಭಾಗಕ್ಕೆ ಹೋದಳು.

ಬಿಚ್ಚಿ ಹರಡಿದ ಸೀರೆಯ ಮೇಲೆ ಕೈ ಇಟ್ಟಳು. ತೀರಾ ಪರಿಚಿತ ಸ್ವರ "ಸಣ್ಣ ಚೌಕ್ಳಿ ಇರೋ ಸೀರೆಗಳ್ನ ತೆಗೀರಿ." ಬಹಳ ಪ್ರಯಾಸದಿಂದ ನೋಟ ಅತ್ತ ಹರಿಸಿದಳು. ಸ್ವಲ್ಪ ದೂರದಲ್ಲಿ ಕೂತ ವಿಕಾಸ್ ಮತ್ತೊಂದು ಸೀರೆಯ ಸೆರಗನ್ನು ಪರೀಕ್ಷಿಸುತ್ತಿದ್ದ. ಅದೇ ಸೊಬಗು, ಮೊದಲಿನದೇ ಗಾಂಭೀರ್ಯ. ತುಟಿಯಂಚಿನ ಮಾಸದ ಕಿರುನಗೆಯಲ್ಲಿ ಹೊಸತನ. ಕ್ಷಣ ಉಸಿರುಗಟ್ಟಿದಂತಾಯಿತು ಅವಳಿಗೆ.

'ನೋಡಿದ್ಯಾ, ನೀನು ಕೊರಗಿ ಕೊರಗಿ ಹಂಚಿ ಕಡ್ಡಿ ಆಗಿದ್ದೀಯಾ ! ಅವ್ನು ಫಳಫಳ ಹೊಳೆಯೋ ಚಿನ್ನದ ಹಾಗೇ ಇದ್ದಾನೆ. ಇದು ನಿನ್ನ ಹಣೆ ಬರಹ' ಮನ ಮೂದಲಿಸಿತು. ಎಚ್ಚೆತ್ತಳು.

ಸೇಲ್ಸ್‌ಮನ್ ಇತ್ತ ಬಂದ. "ಯಾವ ತರಹ ಸೀರೆಗಳು ಬೇಕು, ಮೇಡಮ್" ಎಂದಾಗ ದಿಟ್ಟತನ ಮೈಗೂಡಿಸಿಕೊಂಡಳು. "ಗ್ರಾಂಡಾಗಿರೋ ಸೀರೆಗಳ್ನ ತೋರ್‍ಸಿ" ತೀರಾ ಪರಿಚಿತ ದನಿಯಿ. ವಿಕಾಸ್ ಅತ್ತ ತಿರುಗಲಿಲ್ಲ. ಗಂಡಿನ ಹೃದಯಗಳ ಜೊತೆ ಆಡುವ ಹೆಣ್ಣುಗಳ ಬಗ್ಗೆ ಅವನಿಗೆ ತಿರಸ್ಕಾರ. ಸುನಂದಮ್ಮ ವಾರೆ ನೋಟ ಹರಿಸಿದರು. ಮೊದಲಿನಷ್ಟು ಅಳುಕು ಇಲ್ಲ ದಿದ್ದರೂ, ಮುಖದ ನೋವಿನೆಳೆಗಳು ಮತ್ತಷ್ಟು ಆಳವಾದವು.

ತನ್ನ ಮುಂದಿದ್ದ ಸೀರೆಯತ್ತ ತಾಯಿಯ ಗಮನ ಸೆಳೆದ ವಿಕಾಸ್ "ಈ ಒಡಲಿಗೆ ಇಂಥ ಅಂಚು ಚೆನ್ನಾಗಿದೆ. ಅಂಥ ಗ್ರಾಂಡಾಗೇನಿಲ್ಲ. ಆರಾಮಾಗಿ ದೇವಸ್ಥಾನ, ನೆಂಟರ ಮನೆಗೆ ಉಡ್ಬೋದು" ಮೆಚ್ಚಿದ ಸೀರೆಯನ್ನು ತಾಯಿ ಯತ್ತ ಹಿಡಿದ. ಆಕೆಯ ಮನವೆಲ್ಲೋ. ಚೇತನ ಕಳೆದುಕೊಂಡವರಂತೆ ಕಂಡರು. ಅರ್ಥಮಾಡಿಕೊಂಡರು, ಲಕ್ಷ್ಯವಹಿಸಲಿಲ್ಲ.

ಆ ಸೀರೆಯ ಜೊತೆ ಇನ್ನಷ್ಟು ಸೀರೆಗಳನ್ನು ತರಿಸಿ ನೋಡಿ ಮತ್ತೊಂದು ಸೀರೆ ಆಯ್ಕೆ ಮಾಡಿದ. "ಇವೆರಡೂ ಪ್ಯಾಕ್ ಮಾಡಿ ಕಳ್ಸಿ" ಎಂದವ ಹೊರಗೆ ನಡೆದ. ಸುನಂದಮ್ಮ ಹಿಂಬಾಲಿಸಿದರು.

ದೊಡ್ಡ ದೊಡ್ಡ ಜರಿ ಬಾರ್ಡರ್ ಇರೋ ಸೀರೆಗಳನ್ನು ತರಿಸಿ ನೋಡು ತ್ತಿದ್ದ ಸೊಸೆಯನ್ನು ಕದ್ದು ಕದ್ದು ದಿಟ್ಟಿಸಿ ನೋಡಿದ್ದರು. ಫ್ಲಶ್ ಮಾಡಿ

ತಿದ್ದಿದ ಹುಬ್ಬುಗಳು ನೀಟಾಗಿ ಕಾಣುತ್ತಿದ್ದವು. ಕುತ್ತಿಗೆಯವರೆಗೂ ಕತ್ತರಿಸಿದ ಕೂದಲು ಬೆನ್ನನ್ನು ಮುತ್ತಿಕ್ಕುತಿತ್ತು. ತುಟಿಯ ಬಣ್ಣ, ಮುಖದ ಮೇಕಪ್‌ನಲ್ಲಿ ಹೆಚ್ಚು ಚೆಲುವಾಗಿ ಕಂಡರೂ ಮುಖ ಸಿಂಡರಿಸಿದ್ದರು.

ಕೌಂಟರ್‌ನಲ್ಲಿ ಬಿಲ್ಲು ತೆತ್ತು ಪ್ಯಾಕೆಟ್ ಪಡೆದೇ ಹಿಂದಿರುಗಿದಾಗ ಸುಸಂದಮ್ಮ ಯಾವುದೋ ಲೋಕದಲ್ಲಿದ್ದರು. "ಹೋಗೋಣಮ್ಮ..." ಎಂದಾಗ ವಾಸ್ತವಕ್ಕೆ ಮರಳಿದರು. "ಹೋಗೋಣ" ಕಡವರಿಸಿದರು. ಅಲ್ಲೇ ಕೂತಿದ್ದ ಅಖಿಲೇಶ್ ಮೆಲ್ಲನೆದ್ದ. "ಹಲೋ... ಸರ್!" ಎಂದ. ಕೊಡಬೇಕಾದ ಮರ್ಯಾದೆಯನ್ನು ಕೊಟ್ಟ. "ಹಲೋ....ಹೇಗಿದ್ದೀರಾ?" ನೀಡಿದ ಕೈ ವಿಕಾಸ್ ಕುಲುಕಿದ. ಆದರೆ ಅವನೇ ಸಂಕೋಚಿಸಿದ. "ಫೈನ್... ಸರ್" ನಿಲ್ಲುವುದು ಅವನಿಗೆ ಕಷ್ಟವೆನಿಸಿತು.

ಹಿಂದಕ್ಕೆ ತಿರುಗಿ ತಾಯಿಗೆ ಒಂದು ಮಿತಿಯಲ್ಲಿ ಪರಿಚಯಿಸಿದ. ಹೊರ ಬಂದ ರಜನಿ ಹಿಂದೆಯೇ ನಿಂತಳು. ಅವಳ ಕಣ್ಣಿನ ಕಿಡಿ ಮತ್ತಷ್ಟು ಪ್ರಜ್ವಲಿಸಿತು.

"ಒಬ್ರೇ....ಇಲ್ಲಿ!" ವ್ಯಂಗ್ಯವಿರಲಿಲ್ಲ. ಸಹಜವಾಗಿ ಪ್ರಶ್ನಿಸಿದ. ಆದರೆ ಅಖಿಲೇಶ್‌ನ ಎದೆಗೆ ಈಟಿ ಹಾಕಿ ಜಗ್ಗಿದಂತಾಯಿತು. "ನಾನೊಬ್ನೇ ಅಲ್ಲ! ರಜನಿನು ಬಂದಿದ್ದಾಳೆ. ಸುಳ್ಳು ಉಸುರಬೇಕೆನಿಸಲಿಲ್ಲ ಅವನಿಗೆ.

"ಕಂಗ್ರಾಜ್ಯುಲೇಷನ್....ಬೇಗ ಇನ್ವಿಟೇಷನ್ ಕಳ್ಸಿ" ತನ್ನ ಒಬ್ಬ ವಿದ್ಯಾರ್ಥಿಗೆ ಸಲಿಗೆಯಿಂದ ಹೇಳಿದಂತಿತ್ತು. ಮತ್ತೊಮ್ಮೆ ಕೈ ಕುಲುಕಿ ಬೀಳ್ಕೊಟ್ಟ. ಬದುಕು ಒಂದು ವಿಚಿತ್ರ ವರ್ತುಲವೆನಿಸಿತು.

ಸರಳವಾಗಿ ನಡೆದುಹೋದ ವಿಕಾಸ್‌ನ ನೋಡಿ ಅವನ ಧೀಮಂತ ವ್ಯಕ್ತಿತ್ವಕ್ಕೆ ಬೆರಗಾದ. ಅಖಿಲೇಶ್‌ಗೆ ಮಂಕು ಬಡಿದಂತಾಯಿತು. ಹೇಗೆ ಸಾಧ್ಯ? ಹೇಗೆ ಸಾಧ್ಯ? ಬದಲಾವಣೆಗೆ ಹೊಂದಿಕೊಳ್ಳುವ ಅವನ ದಿಟ್ಟತನಕ್ಕೆ ಬೆರಗಾದ.

"ಅಖಿಲೇಶ್...." ಸ್ವರ ಬಂದತ್ತ ತಿರುಗಿದ.

"ನಂಗೆ ಯಾವ್ದೂ ಇಷ್ಟವಾಗ್ಲಿಲ್ಲ!" ಬೇಸರದಿಂದ ಹೇಳಿದಾಗ ಪ್ರಯಾಸದ ನಗೆ ಬೀರಿದ. "ನಾನೇ ಸೆಲೆಕ್ಟ್ ಮಾಡ್ತೀನಿ. ಕಾಮೆಂಟ್ಸ್ ಮಾತ್ರ

ಫೇವರ್ ಆಗಿರ್ಬೇಕು" ಅವನ ಕೋರಿಕೆಯ ಗೆಲುವನ್ನು ಬಹಳ ಪ್ರಯಾಸದಿಂದ ಅರಗಿಸಿಕೊಂಡಳು ರಜನಿ.

ಸೀರೆಗಳನ್ನು ಪ್ಯಾಕ್ ಮಾಡಿಸಿ ಬಿಲ್ ತೆತ್ತು ಹೊರಗೆ ಬಂದಾಗ ಇಬ್ಬರೂ ಪೂರ್ತಿ ಬೆವತುಹೋಗಿದ್ದರು.

"ತುಂಬ ಸೆಕೆ!" ಕರ್ಚೀಫ್‌ನಿಂದ ಮುಖದ ಬೆವರನ್ನು ತೊಡೆದ. ಅದು ಏಯಿರ್ ಕಂಡೀಷನರ್ ಅಳವಡಿಸಿದ ಷೋ ರೂಂ. ಅದರ ತಂಪು ಅವನ ಸೆಕೆ ಯನ್ನು ತಡೆಯಲು ಸಮರ್ಥವಾಗಲಿಲ್ಲ.

ರಜನಿಯ ಕಣ್ಣುಗಳು ಯಾರನ್ನೋ ಹುಡುಕುತ್ತಿದ್ದವು. "ಹೌದೌದು" ಎಂದಳು. ಎತ್ತಲೋ ನೋಡಿದ. ವಿಕಾಸ್‌ನ ಉದಾಸೀನತೆಯನ್ನು ಪೆಟ್ಟು ಅವಳನ್ನು ದಹಿಸುತ್ತಿತ್ತು.

ಅರ್ಥಮಾಡಿಕೊಂಡವನಂತೆ ಹೇಳಿದ "ವಿಕಾಸ್ ಆಗ್ಲೇ ಹೋದ್ರು. ರಿಯಲಿ ಜಂಟಲ್‌ಮನ್. ಯಾರಾದ್ರೂ ಅಭಿಮಾನಿಸುವಂಥ ವ್ಯಕ್ತಿತ್ವ" ಮನಃಪೂರ್ವಕವಾಗಿ ಹೊಗಳಿದ. ಸಿಡಿಮಿಡಿಗೊಂಡಳು ರಜನಿ.

"ಯಾರ್ ವಿಕಾಸ್ ? ನಂಗೆ ಅವ್ರಿಂದ ಏನಾಗ್ಬೇಕಾಗಿದೆ ಹೋದರೆಷ್ಟು, ಬಿಟ್ಟರೆಷ್ಟು ? ಹೆಣ್ಣುಗಳ ಜೀವ್ನ ಹಾಳು ಮಾಡಲು ಹೇಳಿ ಮಾಡ್ಸಿದಂಥ ವ್ಯಕ್ತಿ, ಬ್ರೂಟ್...." ಕನಲಿದಳು.

ಅಖಿಲೇಶ್‌ಗೆ ನಗು ಬಂತು. ಅವನಿಗೆ ರಜನಿಯ ಮೇಲೆ ಆಸೆ ಇದ್ದರೂ ವಿಕಾಸ್‌ನ ದೂರುವಂಥ ಸಣ್ಣತನವಿಲ್ಲ. ಆಳಕ್ಕೆ ಇಳಿದು ಯೋಚಿಸಿದಷ್ಟು ಪಂಕಜನ್ನು ಸ್ಪಷ್ಟವಾಗಿ ಬಿಡುತ್ತಿದ್ದರು. ಎಲ್ಲರ ಬದುಕಿನಲ್ಲೂ ಪ್ರಾಧಾನ್ಯತೆ ಗಿಟ್ಟಿಸಬೇಕೆನ್ನುವ ಆಕೆ ಒಳ್ಳೆಯ ವ್ಯಕ್ತಿಯಾಗಿ ಕಂಡಳು.

ಸೀರೆಯ ಪ್ಯಾಕೆಟ್‌ನ ಹಿಂದಿನ ಸೀಟಿಗೆ ಎಸೆದು ಮುಂದಿನ ಡೋರ್ ತೆರೆದ. ರಜನಿ ಹತ್ತಿ ಕೂತಳು. ಬಗ್ಗಿ ಕೇಳಿದ. "ಮತ್ತೆಲ್ಲಾದ್ರು ಹೋಗೋ ಪ್ರೋಗ್ರಾಂ ಉಂಟಾ ?" ರಜನಿ ತಲೆ ಕೆಳಗೆ ತಗ್ಗಿತು. ಕರ್ಚೀಫ್‌ನಿಂದ ಕಣ್ಣೀರು ತೊಡೆದುಕೊಂಡಳು. "ಅರರೆ, ಯಾಕೆ ಕಣ್ಣೀರು ? ವಿಕಾಸ್‌ಗೂ ನಿಂಗೂ ಡೈವೋರ್ಸ್ ಪಡೆದ ಮೇಲೆ ಎಂತಹ ಸಂಬಂಧ. ಅದು ನಿನ್ನ ಬದ್ಕಿನಲ್ಲಿ ಮುಗ್ದ ಅಧ್ಯಾಯ. ವಿಕಾಸ್ ನಿನ್ನ ಬಗ್ಗೆ ಯೋಚಿಸಲು ಕೂಡ ಇಷ್ಟಪಡ ಲಾರನು" ಸ್ಪಷ್ಟಪಡಿಸಿದ. ಅವನ ಸ್ವರ ಅವನಿಗೆ ಅರಿವಾಗದಂತೆ ಒರಟಾಗಿತ್ತು.

ವಿಕಾಸ್ ಜೀವನದಿಂದ ಹೊರಬಂದ ಇವಳೊಬ್ಬ ದುರಾದೃಷ್ಟ ಹೆಣ್ಣಾಗಿ ಕಂಡಳು.

ನಿಧಾನವಾಗಿ ತಲೆಯೆತ್ತಿ ಅಖಿಲೇಶ್‌ನ ಕಣ್ಣೊಳಗೆ ಇಣುಕಿದಳು. ವ್ಯಂಗ್ಯವೋ, ವೊನಚೋ, ಸಹಜವೋ-ಅವಳಿಗೊಂದೂ ತಿಳಿಯಲಿಲ್ಲ. ಕಣ್ಣು ಮುಂದೆ ಬಹಳ ದೂರದವರೆಗೂ ಮಂಜು ಇಡೀ ಪರಿಸರವೇ ಇಬ್ಬನಿಯಲ್ಲಿ ತುಂಬಿಹೋದ ಅನುಭವ.

"ಹೌದು, ಅಖಿಲೇಶ್. ಡೈವೋರ್ಸ್ ಪಡೆದ್ಮೇಲೆ ಎಲ್ಲಾ ಮುಗಿದಂಗೆ" ಸ್ವರ ಒತ್ತಿ ಬಿಡಿಬಿಡಿಯಾಗಿ ನುಡಿದಳು. ಒಳಗಿನ ಕುದಿ ಅವಳೆದೆಯ ಪ್ರೀತಿ, ಪ್ರೇಮವನ್ನು ಧ್ವಂಸ ಮಾಡುತ್ತಿತ್ತು.

ಮೃದುವಾಗಿ ಅವಳ ಕೆನ್ನೆ ತಟ್ಟಿ ಕಾರು ಸ್ಟಾರ್ಟ್ ಮಾಡಿದ ಅಖಿಲೇಶ್. ಕಾರು ಹೋಟೆಲ್ ಮುಂದೆ ನಿಂತಾಗ ಅವಳತ್ತ ನೋಡಿದ. ಮುಖಭಾವದಲ್ಲಿ ಯಾವ ಏರಿಳಿತವು ಇಲ್ಲದಿದ್ದರೂ ವಿಷಾದನೀಯವಾದ ಗಾಂಭೀರ್ಯತೆ ತುಂಬಿಕೊಂಡಿತ್ತು.

"ಕೂಲ್ ಡ್ರಿಂಕ್ಸ್... ತಗೋಳೋಣ" ಇಳಿಯಲು ಹೋದವನ ರಿಟ್ಟೆ ಹಿಡಿದುಕೊಂಡಳು. "ಬೇಡ ಅಖಿಲೇಶ್, ನನ್ನ ಮನಸ್ಥಿತಿ ಸರಿಯಲ್ಲ. ನೇರವಾಗಿ ಮನೆಗೆ ಹೋಗೋಣ. ಎಕ್ಸ್‌ಕ್ಯೂಜ್ ಮಿ" ಅಖಿಲೇಶ್ ಅವಳ ಸರಿಸಿ ಸರಿಯಾಗಿ ಕೂತು ಕಾರು ಸ್ಟಾರ್ಟ್ ಮಾಡಿದ. ರಜನಿ ಒಂದು ಪ್ರಶ್ನೆಯಾಗಿ ಕಾಡಿದಳು. ಕಾರಿನ ಚಕ್ರಗಳು ನಿಧಾನವಾಗಿ ಉರುಳುತ್ತಿದ್ದವು

ಮನೆಯ ಮುಂದೆ ಇಳಿದಾಗ ರಜನಿಗೆ ಬವಳಿ ಬಂದಂತಾಯಿತು. ಮಿದುಳಿನಲ್ಲಿ ಭಯಂಕರ ಗೊಂದಲ. ಎಲ್ಲಿ ಸಿಡಿದುಹೋಗುವುದೋ ಎಂದು ಎರಡು ಕೈಯಲ್ಲೂ ತಲೆಯನ್ನು ಭದ್ರವಾಗಿ ಹಿಡಿದುಕೊಂಡಳು.

ಅಖಿಲೇಶ್. ಅವಳನ್ನು ಬಳಸಿ ಆಸರೆ ನೀಡಿದ. "ರಿಲ್ಯಾಕ್ಸ್........ ಮಾಮ್ಸ್ಕೀ" ಅಪನಿದೆಯಲ್ಲಿ ಮುಖ ಮುಚ್ಚಿಕೊಂಡಳು. ನಿಧಾನವಾಗಿ ನಡೆಸಿ ಕೊಂಡು ಹೋದ.

ಪಂಕಜಮ್ಮ ಹಾರಿ ಬಿದ್ದರು "ಏನಾಯ್ತು ?" ಅಂಥ ಕಾಳಜಿ ಇಲ್ಲದ ಸ್ವರ. ಆಕೆ ಯಾವ ಮೂಡಿನಲ್ಲಿದ್ದಳೋ.

ಕೋಣೆಗೆ ಕರೆದೊಯ್ದು ಮಲಗಿಸಿ, ಎದೆಯವರೆಗೂ ಬ್ಲಾಂಕೇಟ್ ಹೊದ್ದಿಸಿದ. ಕಣ್ಣುಗಳನ್ನು ಭದ್ರವಾಗಿ ಮುಚ್ಚಿಕೊಂಡಿದ್ದಳು. ಅವಳ ಮುಂಗೂದಲಲ್ಲಿ ಕೈಯಾಡಿಸಲು ಹೋದ ಕೈ ಹಿಂದಕ್ಕೆ ಬಂತು. ಅಖಿಲೇಶ್ ಹೊರಗೆ ನಡೆದ.

ಎದುರು ಸಿಕ್ಕ ಪಂಕಜಮ್ಮನಿಗೆ ಹೇಳಿದ "ಅಂಥದೇನಿಲ್ಲ, ಬರೀ ತಲೆ ನೋವು ಇರ್ಬಹ್ದು. ಸುಮ್ನೇ ಬಿಟ್ರೆ ತಾನೇ ಸರಿಹೋಗ್ತಾಳೆ" ಪಂಕಜಮ್ಮ ಅದನ್ನು ಒಪ್ಪಿಕೊಳ್ಳಲಿಲ್ಲ. "ತಲೆನೋವಿಗೆ ಇಷ್ಟೊಂದು ಅಪ್‌ಸೆಟ್ ಆಗಿ ಬಿಡ್ತಾಳೆ ?" ಕಣ್ಣು ಕೆಂಪಗೆ ಮಾಡಿದರು. "ವೀಕ್‌ನೆಸ್ ಇರ್ಬಹ್ದು. ಬೇಕಾದ್ರೆ ಡಾಕ್ಟ್ರ ಹತ್ರ ಚೆಕ್‌ಅಪ್ ಮಾಡ್ಸಿ" ಆಕೆಯನ್ನು ಸವರಿಕೊಂಡೇ ಹೊರಗೆ ಹೋದ.

ಈಗ ಅವನಿಗೆ ತಲೆ ಸಿಡಿತ ಷುರುವಾಗಿತ್ತು. ರಜನಿಯನ್ನು ಕಂಡಾಗ ಅವಳ ಬಗ್ಗೆ ಯೋಚಿಸಿದಾಗ ಪ್ರೀತಿಯ ಅಲೆಗಳು ಉಕ್ಕಿ, ಅವಳನ್ನು ಪಡೆಯಲು ಎಂಥ ಸಾಹಸಕ್ಕಾದರೂ ಕೈ ಹಾಕುವಂತೆ ಪ್ರೇರೇಪಿಸುತ್ತಿತ್ತು. ಸಮಯ, ಸಂದರ್ಭಗಳು, ಅವಳ ನಡವಳಿಕೆ ಭವಿಷ್ಯದಲ್ಲಿ ನಿರಾಶಾದಾಯಕವಾಗಿತ್ತು.

ಸೋತವನಂತೆ ಸೋಫಾ ಮೇಲೆ ಕುಕ್ಕರಿಸಿದ. "ಹಲೋ...." ಅಪರಿಚಿತ ಸ್ವರ. ತಲೆಯೆತ್ತಿದ ಬೇಸರದಿಂದ "ಹಲೋ...." ಎಂದ. ಪೆಸ್ಸಿಲ್ಲಾ ಒಂದು ತರಹ ನಕ್ಕಳು. "ಬೈ ದಿ ಬೈ....ನೀವು ಅಖಿಲೇಶ್" ಮೆಚ್ಚಿಗೆಯಿಂದ ನೋಡಿದಳು. "ಹೌದೆಂದು... " ತಲೆದೂಗಿದ.

ಪೆಸ್ಸಿಲ್ಲಾ ಆದರದಿಂದ "ಥ್ಯಾಂಕ್ಯೂ, ಕಂಗ್ರಾಜುಲೇಷನ್" ಅವನ ಕೈ ಕುಲುಕಿದಳು. ಅಖಿಲೇಶ್ ವಿಸ್ಮಿತನಾದ. ಪರದೆಯ ಮೇಲೆ ಸರಸರ ಓಡುವ ಚಿತ್ರಗಳಂತೆ ಕಂಡವು ಘಟನೆಗಳು. ಕೂದಲಲ್ಲಿ ಕೈ ಹಾಕಿ ಕಿತ್ತ.

"ನೀವು ಯಾರು ?" ಸಹನೆ ಕಳೆದುಕೊಂಡ. "ಯಾವುದಕ್ಕಾಗಿ ನೀವು ಧನ್ಯವಾದಗಳನ್ನು ತಿಳಿಸಿದ್ದು ?" "ಸೀ ಯೂ...." ಹೊರಟೇಬಿಟ್ಟಳು. ಪೆಸ್ಸಿಲ್ಲಾ ಹಿಂದೆಯೇ ಹೋಗಿ ರಿಕ್ವೆಸ್ಟ್ ಮಾಡಿಕೊಂಡರೂ ನಿಲ್ಲಲಿಲ್ಲ. ಅವನ ಕಾರು ಮರೆಯಾದ ಮೇಲೆ ನಿಧಾನವಾಗಿ ಒಳಗೆ ಬಂದು ಮೊದಲಿನ ಸ್ಥಳ

ದಲ್ಲಿಯೇ ಕೂತಳು. ಇಂಥ ವಿಷಯಗಳಲ್ಲಿ ಸತ್ಯ ಎಲ್ಲಿಯೋ ಹುದುಗಿಹೋಗಿ ನಾಟಕೀಯತೆ ಮಾತ್ರ ಉಳಿದುಹೋಗುತ್ತದೆಯೆಂದು ಅವಳಿಗೆ ಗೊತ್ತು.

ಸಂಪ್ರದಾಯಬದ್ಧ ಈ ದೇಶದಲ್ಲಿ ಮದುವೆಗೆ ವಿಶಿಷ್ಟವಾದ ಪವಿತ್ರತೆ ಇತ್ತು. ಆ ಬಗ್ಗೆ ಎಷ್ಟೇ ತೊಂದರೆ ಅನುಭವಿಸುತ್ತಿರುವ ಹೆಣ್ಣು ಕೂಡ ಯೋಚಿಸಲು ಇಚ್ಛಿಪಡಲಾರಳು. ಇನ್ನು ಕೆಲವು ಡೈವೋರ್ಸ್‌ಗಳು ಆತುರ ದಿಂದಲೋ, ಸ್ವಾಭಿಮಾನದಿಂದಲೋ ಆಗುತ್ತಿತ್ತು. ಆಮೇಲೆ ಪಶ್ಚಾತ್ತಾಪ ಪಡೋ ಸ್ತ್ರೀ, ಪುರುಷರು ಉಂಟು. ಇದರ ಬಗ್ಗೆ 'ಹಿಂದೂ ಮ್ಯಾರೇಜಸ್ ಅಂಡ್ ಡೈವೋರ್ಸ್' ಬಗ್ಗೆ ಒಂದು ಪುಸ್ತಕ ಬರೆಯಲು ಪ್ರಾರಂಭ ಸಿದ್ಧತೆ ಮಾಡಿಕೊಂಡಿದ್ದಳು ಊಹಾಪೋಹದ ಕಲ್ಪನೆ, ಅತಿ ರಂಜಕತೆಯನ್ನು ಬಿಟ್ಟು ಅವರುಗಳನ್ನೇ ಭೇಟಿ ಮಾಡಿ ಹೆಚ್ಚು ವಿಷಯ ಸಂಗ್ರಹಿಸಲು ಇಚ್ಛಿಸಿ ದ್ದಳು. ಈ ಪ್ರಯತ್ನಕ್ಕೆ ಅಂಥ ಪುರಸ್ಕಾರವೇನೂ ಸಿಕ್ಕಿರಲಿಲ್ಲ. ಬರೀ ಸುಳ್ಳುಗಳ ಸರಮಾಲೆ, ಅವಿವೇಕ, ತೀವ್ರವಾದ ಉದ್ವೇಗ ಮಾತ್ರ ಕಂಡು ಬರುತ್ತಿತ್ತು. ಆದರೂ ಸತ್ಯ ಅರಿಯಲೇಬೇಕೆಂಬ ಪಟ್ಟು.

ನಾಲ್ಕಾರು ಬಾರಿ ಪ್ರಯತ್ನಿಸಿದ್ದರೂ ರಜನಿಯಿಂದ ಅಂಥ ಉತ್ತಮ ಪ್ರತಿಕ್ರಿಯೆಯೇನೂ ಸಿಕ್ಕಿರಲಿಲ್ಲ. ತೀರಾ ಬಾಲಿಶ ಹಟ, ಮಾತುಗಳು. ಇವೇನೂ ಅವಳು ಬರೆಯಬಹುದಾದ ಪುಸ್ತಕಕ್ಕೆ ಸಹಕಾರಿಯಾಗಿರಲಿಲ್ಲ. ಆದರೂ ಅವಳ ಮನದ ಪ್ರಾಮಾಣಿಕ ಒಳತೋಟಿಯನ್ನು ಅರಿಯಲೇಬೇಕೆಂಬ ಅಭಿಲಾಷೆ

ಕೂತ ಪೆಸ್ಸಿಲ್ಲಾ ಪಂಕಜಮ್ಮನಿಗಾಗಿಯೇ ಕಾದಳು. ಬಹಳ ಹೊತ್ತಿನ ಮೇಲೆ ಹೊರಬಂದರು. ಆಕೆಯ ಮುಖದಲ್ಲಿದ್ದಿದ್ದು ತೀರಾ ದ್ವಂದ್ವದ ಹೋರಾಟ ಭಾವ. ಆಕೆ ಬಾಯಿ ತೆರೆದರೆ ವಿಚಾರದ ಸುರಿಮಳೆಯೇ.

"ನಮ್ಮ ರಜನಿ ತೀರಾ ಸೆನ್ಸಿಟೀವ್. ಏನು ವಿದ್ಯೆಯೋ, ವಿಚಾರವೋ? ಅಲ್ಪ ಸ್ವಲ್ಪ ಬದಲಾವಣೆ ಇನ್ನ ನೂರು ವರ್ಷವಾದ್ರೂ ಬೇಕು. ಹೆಣ್ಣಿನಲ್ಲಿ ಪ್ರತಿಭಟನೆ ಅನ್ನೋದೇ ಇಲ್ಲ" ಒಗಟಿನಂತೆ ಮಾತಾಡಿದರು.

ಪೆಸ್ಸಿಲ್ಲಾ ಗದ್ದಕ್ಕೆ ಪೆನ್ನು ಒತ್ತಿ ಮೌನವಾಗಿ ಕೂತಳು. ಡೈವೋರ್ಸ್ ನಿಂದ ರಜನಿ ನೊಂದ ಹಾಗೆ ಕಂಡಳೇ ವಿನಹ ಬಿಡುಗಡೆಯ ನಿಟ್ಟುಸಿರು ಚೆಲ್ಲಿ ದಂತೆ ಕಾಣಲಿಲ್ಲ. ಅಂಥ ಮೋಡಿ ಹಾಕುವ ಗಂಡಸರ ಬಗ್ಗೆ ಸಿಟ್ಟಾದಳು.

"ಮಿಸೆಸ್ ಪಂಕಜಾ ಗುರುಮೂರ್ತಿ, ನಿಮ್ಮ ಮಗ್ಳಿಗೆ ವಿಕಾಸ್ ಮೇಲೆ

ಇನ್ನು ಪ್ರೀತಿ ಇರೋ ಹಾಗೆ ಕಾಣುತ್ತೆ. ಸಿವಿಲ್ ರೀತಿಯಲ್ಲಿ ಬಿಡುಗಡೆ ಸಿಕ್ಕರೂ ಸಂಪ್ರದಾಯವಾಗಿ ಅವಳಿನ್ನು ಬಂಧಿಯಾಗೇ ಇದ್ದಾಳೆ" ಪೆಸ್ಸಿಲ್ಲಾ ವಿವರಿಸಿದಳು.

ಆಕೆ ಸೋಫಾದಿಂದ ಅರ್ಧ ಅಡಿ ಮುಂದಕ್ಕೆ ಬಂದರು. "ದಟ್ಸ್ ಕರೆಕ್ಟ್, ಹೆಣ್ಣನ್ನು ಯಾರು ಬಂಧನದಲ್ಲಿ ಇಟ್ಟಿಲ್ಲ, ಆದ್ರೆ....ಅನ್ಗೇ ಇರೋಕೆ ಇಷ್ಟಪಡ್ತಾಳೆ. ಸೆಂಟಿಮೆಂಟಲ್ ಫೂಲಿಷ್‌ನೆಸ್" ಮಗಳ ಬಗ್ಗೆ ಜಿಗುಪ್ಸೆಗೊಂಡರು. ಈಗಿನ ಹತ್ತು ಗೊಂದಲಗಳ ನಡುವೆ ಮಗಳೊಂದು ಸಮಸ್ಯೆ ಆಕೆಗೆ.

ಅವಳಿಗೆಲ್ಲ ಈ ವಿಷಯ, ಮಾತುಗಳು ಪರಿಚಿತವೆ. ಆದರೆ ರಜನಿಯ ಬಾಯಿಂದಲೇ ಸೂಕ್ಷ್ಮಾಸೂಕ್ಷ್ಮಗಳನ್ನು ಅರಿಯಬೇಕು ಎನ್ನುವ ಆಸೆ.

"ದಟ್ಸ್ ಆಲ್, ನಾಳೆ ನಾನು ದೆಹಲಿಗೆ ಹಿಂದಿರುಗಬೇಕಾಗಿದೆ. ಇಂದು ರಜನಿಯತ್ರ ಮಾತಾಡಿ ವಿಚಾರ ವಿನಿಮಯ ನಡೆಸ್ಲೇಬೇಕು. ಯಾರವೋ ಹಳೆಯ ಮಾತುಗಳು, ಭಾಷಣಗಳ ಸಾಲುಗಳನ್ನು ತುಂಬುವುದಕೋಸ್ಕರ ನಾನು ಪುಸ್ತಕ ಬರೆಯಬೇಕಾಗಿಲ್ಲ. ನಂಗೆ ಅಂಥ ಅಗತ್ಯವೂ ಇಲ್ಲ. ಸ್ವಲ್ಪ ನಿಮ್ಮ ಮಗಳ ಮನವೊಲಿಸಿ ಭೇಟಿಗೆ ಅವಕಾಶ ಮಾಡ್ಕೊಡಿ."

ಪೆಸ್ಸಿಲ್ಲಾ ಬೇಡಿಕೆಗೆ ಆಕೆ ಬೇಸರಿಸಿದರು. ಹಾಗೆಂದು ಆಕೆ ನಿಷ್ಠೂರ ಕಟ್ಟಿಕೊಳ್ಳಲಾರರು. ಆಕೆ ದೊಡ್ಡ ಪತ್ರಿಕೆಯ ವರದಿಗಾರಳು. ಸರಿಯಾದ ವಿಷಯ ಸಂಗ್ರಹಿಸಿ ಒಂದು ಲೇಖನ ಪ್ರಕಟಿಸಿಬಿಟ್ಟರೆ ಆಕೆ ಹೆದರಿದರು. ಹೆಸರು ಸಮಾಜದಲ್ಲಿ ವ್ಯಕ್ತಿಯ ಮಟ್ಟವನ್ನು ಹೇಗೆ ಏರಿಸುತ್ತದೆಯೋ, ಹೋಗುವಾಗ ಸಮಸ್ತವನ್ನು ಕಳೆದುಕೊಂಡು ದಿಕ್ಕೆಟ್ಟುಹೆ ರೋಧಿಸುವವನ ಚಿತ್ರ ಸೃಷ್ಟಿಸಿ ಹೋಗುತ್ತೆ. ಅದಕ್ಕೆ ತಿಳಿದ ವಿವೇಕಿಗಳು ತಮ್ಮ ಕರ್ತವ್ಯದ ಕಡೆ ಗಮನ ಕೊಡುತ್ತಾರೇನೇ ವಿನಃ ತಾವು ಮಾಡಿದ ಕೆಲಸದಿಂದ ಸಮಾಜದಲ್ಲಿ ತಮಗೆಂಥ ಹೆಸರು ಸಿಕ್ಕುತ್ತೆ. ಆದ್ದರಿಂದ ತಮಗೆ ಲಭಿಸುವ ಸ್ಥಾನಮಾನಗಳನ್ನು ಲೆಕ್ಕ ಹಾಕಲಾರರು. ನಿರ್ಲಿಪ್ತವಾಗಿ ತಮ್ಮ ಕೆಲಸ ಮುಂದುವರಿಸಿಕೋಡು ಹೋಗುತ್ತಾರೆ.

ಕಡೆಗೆ ಪಂಕಜಮ್ಮ ಒಂದು ನಿರ್ಧಾರಕ್ಕೆ ಬಂದರು. "ನಿಮ್ಮ ಪ್ರಕಾರ ಅವಳಿನ್ನು ಸಂಪ್ರದಾಯದ ಬಂಧನದಲ್ಲೇ ಇದ್ದಾಳೆ. ಅವಳ್ಹತ್ರ ಮಾತಾಡಿ

ಪ್ರಯೋಜನವಿಲ್ಲ. ನಾನೇ ಎಲ್ಲಾ ಹೇಳಿದ್ದೀನಿ. ಏನಾದ್ರೂ ದಾಖಲೆಗಳು ಬೇಕಾದ್ರೆ ಒದಗಿಸಿಕೊಡ್ತೀನಿ" ಪೆಸ್ಸಿಲ್ಲಾ ಮನವೊಲಿಸಲು ನೋಡಿದರು. ತಲೆ ಯಾಡಿಸಿದಳು "ನೋ .. ನೋ ಇಷ್ಟಕ್ಕೇ ತೃಪ್ತಿಗೊಳ್ಳೋ ಹಾಗಿದ್ರೆ ನಾನು ಹತ್ತಾರು ಸಲ ನಿಮ್ಮ ಮನೆಗೆ ಅಲೆಯಬೇಕಾಗಿರಲಿಲ್ಲ ಕೆಲವೊಮ್ಮೆ ಸತ್ಯ ಎಲ್ಲೋ ಹೂತುಹೋಗಿರುತ್ತೆ. ಪ್ರತಿಯೊಂದಕ್ಕೂ ಒಂದೇ ಲೇಬಲ್ ಹಚ್ಚಿ ದರೆ ಸ್ವಯಂಕೃತ ಅಪರಾಧವಾಗುತ್ತೆ. ಆತ್ಮಹತ್ಯೆ ಮಾಡಿಕೊಂಡಂಗೆ" ಅವಳು ಗಂಭೀರವಾಗಿ ಚಿಂತಿಸಿದಾಗ ಪಂಕಜಮ್ಮ ಗಲಿಬಿಲಿಗೊಂಡರು.

ಮಗಳ ಬಗ್ಗೆ ಅವರಿಗೆ ಭರವಸೆ ಇಲ್ಲ. ಕ್ಷಣ ಗೆಲುವಾಗಿದ್ದರೆ ಮರುಕ್ಷಣ ದಿಂಬಿನಲ್ಲಿ ಮುಖ ಹುದುಗಿಸಿ ಅಳುತ್ತಿದ್ದಳು. ಅರ್ಧ ದಿನ ಪಂಜರದಿಂದ ಹೊರಬಿದ್ದ ಪಕ್ಷಿಯಂತೆ ಗೆಲುವಾಗಿ ಹಾರಾಡಿದರೆ, ಇನ್ನರ್ಧ ದಿನ ಸಮಸ್ತ ವನ್ನೂ ಕಳೆದುಕೊಂಡವಳಂತೆ ಗೋಳಿಡುತ್ತಿದ್ದಳು.

ತಕ್ಷಣ ಪೆಸ್ಸಿಲ್ಲಾಗೆ ಅಖಿಲೇಶ್‌ನ ನೆನಪಾಯಿತು. ಎಲ್ಲಾ ತೆರೆಮರೆ ಯಲ್ಲಿ ಉಳಿದುಬಿಡುವಂಥ ಜನ.

ಕೈಯಲ್ಲಿದ್ದ ಬಾಲ್‌ಪೆನ್ನನ್ನು ಪರ್ಸ್‌ನೊಳಕ್ಕೆ ಹಾಕಿ "ನೀವು ಪರ್ಮಿಷನ್ ಕೊಟ್ರೆ, ನಾನೇ ಹೋಗಿ ರಜನಿ ಹತ್ರ ಮಾತಾಡ್ತೀನಿ" ಅರೆ ಮನಸ್ಸಿನಿಂದಲೇ ಆಕೆ ಒಪ್ಪಿಗೆ ಸೂಚಿಸಿದರು.

"ಅವ್ಳ ತೀರಾ ಎಕ್ಸೈಟ್ ಆಗೋಂಥ ಪ್ರಶ್ನೆಗಳನ್ನ ಕೇಳ್ಬೇಡಿ. ಇನ್ನೂ ಸಂಕೋಚದ ತೆರೆಯಲ್ಲೇ ಇರುವ ಹೆಣ್ಣು. ಎಲ್ಲಾ ಹೇಳಿಕೊಳ್ಳ ಲಾರಳು.

ಅವರ ಮಾತುಗಳಿಗೆ ಒಪ್ಪಿಗೆ ಸೂಚಿಸಿ ರಜನಿಯ ಕೋಣೆಗೆ ಬಂದಳು. ಅಂಗಾತ ಮಲಗಿ ಸೀಲಿಂಗ್ ದಿಟ್ಟಿಸುತ್ತಿದ್ದವಳು ತಕ್ಷಣ ಗೋಡೆ ಕಡೆಗೆ ತಿರುಗಿದಳು.

ಪೆಸ್ಸಿಲ್ಲಾ ಅಲ್ಲೇ ಇದ್ದ ಛೇರ್ ಮೇಲೆ ಕೂತಳು. "ಎಕ್ಸ್‌ಕ್ಯೂಜ್ ಮಿ...ಮಿಸ್ ರಜನಿ. ನಿಮ್ಮನ್ನು ಡಿಸ್ಟರ್ಬ್ ಮಾಡಲೇಬೇಕಿದೆ. ಪ್ಲೀಸ್ ಕೋಪರೇಟ್ ಮಾಡಿ" ಮನವೊಲಿಸುವಂತೆ ಕೇಳಿದಳು. ಇಂಥವರನ್ನೇ ಭೇಟಿ ಮಾಡಿ ಅವರ ಸ್ಥಿತಿಗಳು ಹೆಚ್ಚಾಗಿ ಅಧ್ಯಯಿಸಿಕೊಂಡಿದ್ದಳು.

ರಜನಿ ನಿಧಾನವಾಗಿ ಎದ್ದು ಕೂತಳು.

"ಮದ್ವೆ ಅನ್ನೋದು ಇಬ್ಬರ ಮಧ್ಯದ ವೈಯಕ್ತಿಕ ಜೀವನ. ಮೂರನೆಯವರ ಪ್ರವೇಶ ಯಾಕೆ ?" ಅವಳು ಕೇಳಿದ ಪ್ರಶ್ನೆಗಳಿಂದಲೇ ರಜನಿ ಬುದ್ಧಿವಂತಳಲ್ಲವೆನಿಸಿತು. "ಆಫ್‌ಕೋರ್ಸ್, ಆ ತರಹ ಉಳಿದಾಗ ಮಾತ್ರ. ಮೂರನೆಯವರಿಗೇನು, ಕಾನೂನು ಕೂಡ ಪ್ರಶ್ನಿಸಿದೆ. ಯಾವ್ದು ಗುಪ್ತವಾಗಿ ಉಳಿದಿಲ್ಲ" ಸಿಧಾನವಾಗಿ ಪೆಸ್ಸಿಲ್ಲಾ ವಿವರಿಸಿದಾಗ ಗಾಬರಿಯಾದಳು ರಜನಿ. ತನಗೇನಾಗಿದೆ ?

ತಕ್ಷಣ ಮೆತ್ತಗಾಗಿಬಿಟ್ಟಳು. "ಸುಮ್ನೇ ನನ್ನ ಡಿಸ್ಟರ್ಬ್ ಮಾಡ್ಬೇಡಿ. ನಿಮ್ಮ ಲೇಖನಿ, ಸಂದರ್ಶನ, ಸಂಘಟನೆ ಯಾವ್ದೂ ಬೇಡ !" ರಜನಿ ಸಹನೆ ಕಾಯ್ದುಕೊಳ್ಳುವ ಹಂತಕ್ಕೆ ಹೋದಳು. ಆದರೆ ಪೆಸ್ಸಿಲ್ಲಾ ಒಂದಿಂಚು ಅಲುಗಾಡಲಿಲ್ಲ.

"ನಿಮ್ಗೆ ಬೇಕಿಲ್ಲದೇ ಇರ್ಬಹುದ್ದು. ನಿಮ್ಮ ಧೈರ್ಯ, ಸಿಧ್ಧಾರ ಹತ್ತು ಜನ ಮಹಿಳೆಯರಿಗೆ ಆದರ್ಶವಾಗುತ್ತೆ. ಮುನ್ನುಗ್ಗುವ ಛಲ ಮೂಡಿಸುತ್ತೆ. ಹೆಣ್ಣಿನ ಮೇಲೆ ಈ ಶತಮಾನದಲ್ಲೂ ನಡೆಯುತ್ತಿರುವ ದಬ್ಬಾಳಿಕೆಗಳು ಘನ ಘೋರ. ಆದರೂ ಚಿಪ್ಪಿನೊಳಗೇ ಉಳಿದಿದ್ದಾಳೆ. ಅವಳನ್ನು ಎಚ್ಚೆತ್ತ ಮಹಿಳೆಯರು ಹೊರ ತಂದು ಕಾಪಾಡಬೇಕಿದೆ" ತನ್ನ ಉದ್ದೇಶಗಳನ್ನ ಅತ್ಯಂತ ಸ್ಪಷ್ಟವಾಗಿ ವಿವರಿಸಿದಳು. ರಜನಿ ದೀರ್ಘವಾಗಿ ಉಸಿರೆಳೆದು ದಬ್ಬಿದಳು. ಅವಳ ತುಟಿಯಂಚಿನಲ್ಲಿ ಮಿನುಗಿದ್ದು ನೋವಿನ ನಗೆ.

ಎಷ್ಟೇ ಯೋಚಿಸಿದರೂ ವಿಕಾಸ್ ಇಂಥ ತಪ್ಪನ್ನೆ ಮಾಡಿದ್ದಾನೆ ಎಂದು ಸ್ಪಷ್ಟಪಡಿಸುವುದು ರಜನಿಗೆ ಕಷ್ಟ. ಅವನು ತನ್ನನ್ನು ಪ್ರೀತಿಸಲಿಲ್ಲ ಎಂದು ಹೇಳಬಹುದು. ಪ್ರೀತಿಯೆಂದರೇ ಸದಾ ಹೆಂಡತಿಯ ಹಿಂದೆ ಮುಂದೆ ಸುತ್ತುವ ಮಂಗ ಚೇಷ್ಟೆನೇ ; ಎಂದು ಕೇಳಿದರೇ ಏನೆಂದು ಉತ್ತರಿಸುವುದು ? ಎಲ್ಲಾ ಬರೀ ಗೊಂದಲಮಯ.

"ಕೆಲವು ಗಂಡಸರು ದೈಹಿಕವಾಗಿ ಹೆಂಗಸರನ್ನ ಹಿಂಸಿಸಿದರೇ. ಕೆಲವರು ಮಾನಸಿಕ ಸ್ಥಿತಿಯ ಮೇಲೆ ದೌರ್ಜನ್ಯ ನಡೆಸುತ್ತಾರೆ. ಇದಕ್ಕಿಂತ ಹೀನಾಯವಾದ ಸ್ಥಿತಿಯಲ್ಲಿ ಹೆಣ್ಣುಗಳು ದಿನಗಳನ್ನು ಕಳೆಯುತ್ತಿದ್ದಾರೆ."

ಮಧ್ಯದಲ್ಲಿಯೇ ಪೆಸ್ಸಿಲ್ಲಾ ಮಾತುಗಳನ್ನು ರಜನಿ ತಡೆದಳು. "ನನ್ನ ಕೇಸು ನಿಮ್ಮ ವ್ಯಾಪ್ತಿಗೆ ಬರೋಲ್ಲ ಎಂದಾಗ ಪೆಸ್ಸಿಲ್ಲಾ ವಿಸ್ಮಿತಳಾದಳು.

ತಿತ್ತಿಕ್ಕಲಾರದ ಕುತೂಹಲ ಕಣ್ಣುಗಳಲ್ಲಿ ಇಣುಕಿತು. "ವ್ಹಾಟ್.....?" ಅವಳ ಹುಬ್ಬೇರಿ ಕೆಳಗಿಳಿಯಿತು. "ಪ್ಲೀಸ್, ಹೇಳಿ... ತುಂಬ ಸಸ್ಪೆನ್ಸ್ ಆಗಿದೆ ಏಕ್ಕ" ಮಂಚದಿಂದ ಇಳಿದ ರಜನಿ ಕಿಟಕಿಯ ಬಳಿ ಹೋಗಿ ನಿಂತಳು.

"ನನ್ನ ಮಾತುಗಳಿಂದ ನಿಮ್ಗೆ ಯಾವ್ದೇ ಅನ್ಕೂಲವಿಲ್ಲ ಈ ರಜನಿನ ಸುಮ್ನೇ ಬಿಟ್ಬಿಡಿ. ನಿಮ್ಮ ಪ್ರಕಾರ ನೋಯುವ, ನೊಂದ ಹೆಣ್ಣುಗಳ ಬಗ್ಗೆ ನಂಗೂ ಸಹಾನುಭೂತಿ ಇದೆ. ವಿಶ್ ಯು ಬೆಸ್ಟ್ ಆಫ್ ಲಕ್". ಮನಸ್ಸಿನ ಶೂಕ ಕಳೆದುಕೊಂಡವಳಂತೆ ಹೇಳಿದಳು.

ಮಧ್ಯೆ, ಪ್ರವೇಶಿಸಿದ ಪಂಕಜಮ್ಮ ಪೆಸ್ಸಿಲ್ಲಾನ ತಡೆದರು.

"ಮತ್ತೆ ಮತ್ತೆ ಇದೇ ಪ್ರಶ್ನೆಗಳನ್ನ ಕೇಳೋದ್ರಿಂದ ಗೊಂದಲದಲ್ಲಿ ಬೀಳ್ತಾಳೆ. ಅವ್ಳ ಮಾನಸಿಕ ಸ್ಥಿತಿ ಸ್ವಲ್ಪ ಕುದುರಲಿ" ಆಕೆಯ ಬೇಡಿಕೆಯನ್ನ ಪೆಸ್ಸಿಲ್ಲಾ ತಳ್ಳಿಹಾಕಲಿಲ್ಲ, ರಜನಿಗೆ ವಂದಿಸಿ ಹೊರಗೆ ಬಂದಳು.

'ನನ್ನ ಕೇಸ್ ನಿಮ್ಮ ವ್ಯಾಪ್ತಿಗೆ ಬರೋಲ್ಲ.' ಆ ಮಾತಿನ ಒಳಹೊರಗುಗಳನ್ನ ಕೆದಕಲೂ ಪೆಸ್ಸಿಲ್ಲಾಗೆ ಆಸಕ್ತಿಯಿದ್ದರೂ ಸಾಧ್ಯವಾಗದೆನಿಸಿತು. ಗೊಂದತೆಯ ನಡುವೆ ನಿಂತರು ಪಂಕಜಮ್ಮ.

ಗುರುಮೂರ್ತಿಗಳು ಸಿಗರೇಟನ್ನ ಆಷ್‌ಟ್ರೇನೊಳಕ್ಕೆ ಅದುಮಿ ಪೆಸ್ಸಿಲಾ ಅತ್ತ ನೋಡಿದರು.

"ನಮಸ್ತೆ ಸರ್, ರಜನಿಯವ್ರು ಏನೂ ಹೇಳೋಕೆ ಇಷ್ಟಪಡೋಲ್ಲ. ಅದ್ಕೇ ಹತ್ತಾರು ಕಾರಣಗಳು ಇರಬಹ್ದು, ಪ್ರಮುಖವಾಗಿ ವಿಕಾಸ್ ಮೇಲಿನ ಅಭಿಮಾನ" ಅವಳ ವಿಶ್ಲೇಷಣೆಗೆ ಗುರುಮೂರ್ತಿಗಳು ತುಟಿಯಂಚಿನಲ್ಲಿ ನಕ್ಕರು.

"ನೋ... ನೋ....ಇನ್ನ ಹಸಿ ಬಿಸಿ, ಗಂಡಸರಿಗಿಂತ ಹೆಚ್ಚಾಗಿ ಹೆಂಗಸರು ಆದರ್ಶಗಳನ್ನು, ಸಂಪ್ರದಾಯಗಳನ್ನು ತಲೆಯಲ್ಲಿ ತುಂಬಿಕೊಂಡಿರ್ತಾರೆ. ಹೊರ್ಗೆ ಬರೋದು ತೀರಾ ನಿಧಾನ. ಆ ಸ್ಥಿತಿನೇ ನಮ್ಮ ರಜನಿದು. ನಾವು ಸ್ವಲ್ಪ ಎಚ್ಚರ ವಹಿಸದಿದ್ರೆ ಹತ್ತರೊಳಗೆ ಹನ್ನೊಂದು ಆಗಿಬಿಡ್ತಾ ಇತ್ತು. ಇವ್ಳು ಲಕ್ಕಿ. ಮದ್ವೆ ಮಾಡ್ತಾ ಕೂಡಲೇ ಮಗಳ ಜವಾಬ್ದಾರಿ ಹರಿದು ಕೊಳ್ಳೋಕೆ ನಾವು ಸಿದ್ಧವಾಗ್ಲಿಲ್ಲ" ಚಾಣಾಕ್ಷತೆಯಿಂದ ನುಡಿದರು. ಈ

ಮಾತುಗಳು ಪೆಸ್ಸಿಲ್ಲಾ ಮೇಲೆ ಯಾವುದೇ ತೀವ್ರತರವಾದ ಪರಿಣಾಮ ಬೀರಲು ಸಮರ್ಥವಾಗಲಿಲ್ಲ.

"ನಿಮ್ಮ ಮಾತು ನಿಜವಿರಬಹುದು. ಆದ್ರೆ ನನ್ನ ಮನಸ್ಸಿನ ಅನಿಸಿಕೆ.." ಕ್ಷಣ ಸುಮ್ಮನಾದಳು. "ಡೈವೋರ್ಸ್ ಸಿಕ್ಕಿದರೂ ನಿಮ್ಮ ಮಗಳು ಇನ್ನು ವಿಕಾಸ್‌ನ ಮಾನಸಿಕ ಹಿಡಿತದಲ್ಲೇ ಇದ್ದಾಳೆ. ಅದು ಅವಳಿಗೆ ಇಷ್ಟ ಕೂಡ."

ಸತ್ಯ ಬೇರೆಯವರ ಬಾಯಿಂದ ಹೊರ ಬಿದ್ದಾಗ ದಿಗ್ಭ್ರಮರಾದರು ಗುರುಮೂರ್ತಿಗಳು ಒಂದು ಕ್ಷಣ ತಕ್ಷಣ ಎಚ್ಚೆತ್ತುಕೊಂಡರು.

"ಸಂಪ್ರದಾಯ ಸಂಕೋಲೆಯ ನಡುವಿನ ಬಂಧನದಲ್ಲಿ ತೊಳಲಾಡುತ್ತಿರಬಹುದು ರಜನಿ. ಆದ್ರೆ ಅವ್ಳು ವಿಕಾಸ್‌ನ ಬಯಸೋಕೆ ಸಾಧ್ಯವಿಲ್ಲ. ದಾಂಪತ್ಯ ಜೀವನ ಅವಳಿಗೆ ಕೊಟ್ಟಿದ್ದು ಬರೀ ಕಹಿ" ಖಾರವಾಗಿ ನುಡಿದರು.

ಇನ್ನು ಮಾತಾಡಿ ಪ್ರಯೋಜನವಿಲ್ಲವೆನಿಸಿತು ಪೆಸ್ಸಿಲ್ಲಾಗೆ. ಥ್ಯಾಂಕ್ಯೂ ಸರ್....ಬರ್ತೀನಿ. ಸೀ ಯೂ ಎಗೇನ್ ಸೋಫಾ ಮೇಲಿನ ಪರ್ಸ್ ಕೈಗೆತ್ತಿಕೊಂಡಳು. ಗುರುಮೂರ್ತಿಗಳು ಕ್ಷಣ ಯೋಚಿಸಿದರು.

"ನಮ್ಮ ರಜನಿ ಮದ್ವೆ ಬುಧುವಾರ. ಈ ನಾಲ್ಕು ದಿನವಿದ್ದೇ ಹೋಗಿ. ನಮ್ಮ ಆಹ್ವಾನಕ್ಕೆ ನಿಮ್ಮ ಒಪ್ಗೇ ಇದೆಯೆಂತಲೇ ನನ್ನ ಭಾವನೆ. ಈ ವಿವಾಹಕ್ಕೆ ನೀವು ನಮ್ಮ ವಿಶೇಷ ಗೆಸ್ಟ್."

ಪೆಸ್ಸಿಲ್ಲಾ ಖುಷಿಯಿಂದ ತಲೆ ಕುಣಿಸಿದಳು. "ಷೂರ್, ನಂಗಂತೂ ಸಂತೋಷದ ವಿಷ್ಯ. ಹೆಣ್ಣು ಇಷ್ಟೊಂದು ದಿಟ್ಟಳಾಗುವುದು ಶುಭ ಸೂಚನೆ. ನಂಗೆ ಒಂದಿಷ್ಟು ಫೋಟೋಗಳು ಬೇಕು. ಖಂಡಿತ ಬರ್ತೀನಿ" ಹರ್ಷ ವ್ಯಕ್ತಪಡಿಸಿದಳು.

ಪೆಸ್ಸಿಲ್ಲಾ ಹೋದ ಮೇಲೆ ಗುರುಮೂರ್ತಿಗಳು ಮಗಳ ಮೇಲೆ ಹಾರಾಡಿದರು. ಈ ವಿವಾಹದ ಮೂಲಕ ತಮ್ಮ ಸೋಲುಗಳಿಗೆ ಮಂಗಳ ಹಾಡಬೇಕೆಂದಿದ್ದ.

ಮಗಳ ಪಕ್ಕದಲ್ಲಿ ಕೂತು ನಯವಾಗಿ ಬುದ್ಧಿ ಹೇಳಿದರು. "ಸ್ವಲ್ಪ ಗೆಲುವಾಗಿರೋದ್ಬೇಡ್ವಾ! ಸುಮ್ನೆ! ನಿನ್ನ ರೀತಿ ನೀತಿಗಳಿಂದ ಅಖಿಲೇಶ್ ವಿಮುಖನಾಗ್ತಾನೆ. ಆಮೇಲೆ ಕೊರಗಬೇಕಾದವ್ಳು ನೀನೇ. ಅಂತರಪಿಶಾಚಿಯಾಗ್ತೀಯಾ" ರಜನಿ ಮುಖ ತಿರುಗಿಸಿಕೊಂಡಳು.

"ನಾನು ಏನಾದ್ರೂ ಆಗ್ತೀನಿ ! ನಿಮಗ್ಯಾಕೆ ?" ಮಗಳ ಮಾತು ಕೇಳಿದ ಕೂಡಲೇ ಅವರ ಸಿಟ್ಟು ನೆತ್ತಿಗೇರಿತು. ಬಲವಾಗಿ ಕೆನ್ನೆಗೆ ಬಾರಿಸಿ ಬಿಟ್ಟರು "ಈಡಿಯಟ್ ! ಏನೇನೋ ಮಾತಾಡ್ತೀಯಾ ! ಸ್ವಲ್ಪವಾದ್ರೂ ಕಾಮನ್‌ಸೆನ್ಸ್ ಬೇಡ್ವಾ ! ಬದುಕೋದು ತಿಳಿಯದವನ್ನ ಕೈಯಲ್ಲಿ ಇಟ್ಟು ನಾವೆಷ್ಟು ಚಡಪಡಿಸಿದ್ವಿ, ಗೊತ್ತಾ ? ನಿನ್ಮೇಲೆ ಅವ್ನಿಗೆ ಪ್ರೀತಿ ಇದ್ದಿದ್ರೆ.... ಇಲ್ಲೇ ಬಿದ್ದು ಸಾಯ್ತಾ ಇದ್ದ. ಅದಂತೂ ಆಗಿಹೋಯ್ತು. ಅಖಿಲೇಶ್‌ನ ಜೊತೆಗಾದ್ರೂ ಸುಖವಾಗಿರೋ ಪ್ರಯತ್ನ ಮಾಡು" ಅರ್ಭಟಿಸಿದರು.

ಇಷ್ಟು ಕೋಪ ಬಂದಿದ್ದು ಅವಳು ಕಂಡೇ ಇರಲಿಲ್ಲ. ನಗುತ್ತಾ, ಜಾಣತನದಿಂದ ಅವರ ಕೆಲಸಗಳನ್ನ ಮುಗಿಸಿಕೊಂಡುಬಿಡುತ್ತಿದ್ದರು. ಇಂದಿನ ಅವರ ದಿಕ್ಕೆಟ್ಟ ಮನಸ್ಥಿತಿಗೆ ಹತ್ತಾರು ಕಾರಣಗಳು ಇದ್ದವು.

ಪ್ರಕಾಶ್ ಅರೆಸ್ಟಾದ ವಿಷಯದಲ್ಲಿ ಪೊಲೀಸರು ಇನ್ನು ಗುಮಾನಿ ಇಟ್ಟು ಕೊಂಡಿದ್ದರು. ಇವರ ಚಲನವಲನಗಳ ಮೇಲೆ ಪೊಲೀಸ್ ಡಿಪಾರ್ಟ್‌ಮೆಂಟಿನ ಪೂರ್ತಿ ಕಣ್ಣು. ಅದರ ಜೊತೆ ಪಂಕಜಮ್ಮನ ಕೋರ್ಟ್ ಅಲೆದಾಟ. ಅದರ ಬಗ್ಗೆ ಪತ್ರಿಕೆಗಳಲ್ಲಿ ಬರುವ ಲೇಖನ. ಆದಾಯದ ಕುಸಿತ. ಪೂರ್ತಿ ಟೆನ್ಷನ್ ನಿಂದ ಒದ್ದಾಡಿ ಹೋಗುತ್ತಿದ್ದರು.

ಪೆಟ್ಟು ತಿಂದ ಕೆನ್ನೆ ಮರಗಟ್ಟಿತು ಅವಳ ಪೂರ್ತಿ ಮೈ ತಣ್ಣಗಾ ಯಿತು. ಪೂರ್ಣ ಚೇತನವೇ ಬತ್ತಿಹೋದಂತೆ ಕೂತಳು. ಬುದ್ಧಿ ಬಂದ ಮೇಲೆ ತಿಂದ ಎರಡನೇ ಪೆಟ್ಟು. ವಿಕಾಸ್‌ನಿಂದ ತಿಂದ ಮೊದಲ ಹೊಡೆತ ಹೃದಯಕ್ಕೆ ಬಿದ್ದಿದ್ದರೇ, ಗುರುಮೂರ್ತಿಗಳು ಕೊಟ್ಟ ಏಟು ಅವಳ ಮಿದು ಳನ್ನ ತಟ್ಟಿ ಎಚ್ಚರಿಸಿತ್ತು.

ಯಾಕೆ ಹೊಡೆದರು ? ಇಬ್ಬರ ಉದ್ದೇಶಗಳಿಗೂ ತಾಳೆ ನೋಡತೊಡಗಿ ದಳು. ವಿಕಾಸ್ ಆಕ್ರೋಶಕ್ಕೆ ಬಿದ್ದ ಪೆಟ್ಟನಿಂದ ಕೆರಳಿದ್ದ. ಇಲ್ಲಿ ಗುರುಮೂರ್ತಿ ಗಳ ಅಹಂಕಾರಕ್ಕೆ ಬಿದ್ದ ಹೊಡೆತ. ಕೈಯೆತ್ತುವ ಅಭ್ಯಾಸ ಗಂಡಿಗೆ ಎಂದಿ ನಿಂದ ಶುರುವಾಯಿತು ? ಏಟು ತಿನ್ನುವ ಅಭ್ಯಾಸ ಹೆಣ್ಣು ಮೈಗೂಡಿಸಿ ಕೊಂಡಾಗಿನಿಂದ ಇರಬಹುದೆ ?

ಪೆಟ್ಟು ಬಿದ್ದ ನೋವಿಗಿಂತ, ಅದರ ಹಿಂದಿನ ಮನಸ್ಥಿತಿಯ ಬಗ್ಗೆ ಯೋಚಿಸತೊಡಗಿದಳು. ಆಳವಾದ ಸಂಶೋಧನೆ ಬೇಕೆನಿಸಿತು.

ದಿಂಬಿನ ಮೇಲೆ ತಲೆ ಇಟ್ಟು ಕಣ್ಮುಚ್ಚಿದಳು. ಎಂದಿನಂತೆ ಅಳು ಬರಲಿಲ್ಲ. ವಿಕಾಸ್‌ನ ನೆನಪಾಯಿತು. ಕೈ ಹಿಡಿದ ಹೆಣ್ಣನ್ನು ಪ್ರೀತಿಸಿರಬಹುದು, ಪುರಸ್ಕರಿಸಬಹುದು. ಆದರೆ ಅಭಿಮಾನ ಮೂಡಿರಲಾರರು. ಎಂದೂ ತಾನು ಹಾಗೆ ನಡೆದುಕೊಂಡಿಲ್ಲ ಒಂದೇ ದಾರಿಯಲ್ಲಿ ನಿಂತಿದ್ದವಳು ಸುತ್ತಮುತ್ತಲು ತಿರುಗಿ ಸುತ್ತಲಿನ ಸ್ಥಿತಿಯನ್ನು ವೀಕ್ಷಿಸಿದಂತಾಯಿತು.

ಮತ್ತೆ ಎದ್ದು ಕೂತಳು. ವಿಕಾಸ್‌ನ ಗಂಭೀರ ಮುಖ ತೇಲಿತು. ಅವನಿಗೂ, ತನಗೂ ಯಾವ ರೀತಿಯ ಸಂಬಂಧ ? ಕಾನೂನು ತನ್ನನ್ನು ಬಿಡುಗಡೆಗೊಳಿಸಿದೆಯಲ್ಲ. ಮತ್ತೆ ಮಲಗಿದಳು. ಮನದಲ್ಲಿ ನಿಂತು ಕಾಡುವ ಅವನನ್ನ ಹೇಗೆ ಹೊರದಬ್ಬುವುದು ?

ರಂಜಿತಳ ಎಚ್ಚರಿಕೆ ನೆನಪಾಯಿತು. "ಆ ಸ್ಥಾನ ಯಾವಾಗ್ಲೂ ಖಾಲಿ ಇರಬಾರ್ದು. ತುಂಬ ಅಪಾಯ, ಅಖಿಲೇಶ್'ನ ತುಂಬಿಬಿಡು. ಪ್ರೀತಿಯನ್ನು ಪುದು ಅರ್ಥವಾಗಬೇಕಾದರೆ ಅಖಿಲೇಶ್ ಅಂಥ ರೊಮ್ಯಾಂಟಿಕ್ ವ್ಯಕ್ತಿಯನ್ನು ತನ್ನವನನ್ನಾಗಿ ಮಾಡ್ಕೋಬೇಕು."

ಆದರೆ ಅಖಿಲೇಶ್ ಅಂಥ ರೊಮ್ಯಾಂಟಿಕ್ ವ್ಯಕ್ತಿಯಾಗಿ ರಜನಿಗೇನು ಕಂಡಿರಲಿಲ್ಲ. ಆದರೆ ವಿಕಾಸ್‌ನ ಕಣ್ಣುಗಳಲ್ಲಿ ಮಿನುಗುತ್ತಿದ್ದ ರಸಿಕತೆಯ ಮಹಾಪೂರದಲ್ಲಿ ಅವಳೇನು, ಯಾವ ಹೆಣ್ಣಾದರೂ ಕರಗಿಬಿಡಬಹುದೆಂಬ ನಂಬಿಕೆ ಅವಳದು. ಹಲ್ಲು ಕಿರಿಯುವುದು, ಸಿಳ್ಳೆಯೊಡೆಯುವುದು, ಇದೆಲ್ಲ ವನ್ನು ಹೆಣ್ಣು ಮಂಗ ಚೇಷ್ಟೇ ಎಂದೇ ತಿಳಿದಾಳು !

ಅವಳ ಮಾನಸಿಕ ಕ್ಷುಬ್ಧ ಸ್ಥಿತಿ ಕೆಲವು ಕಾಲದ ನಂತರ ನಿಂತಿತು. ವಿಕಾಸ್‌ನ ಅರಿಯುವ ಅಗತ್ಯವಿತ್ತು. ಹೃದಯದಲ್ಲಿನ ಅವನ ವಿಗ್ರಹ ತುಸು ಅಲ್ಲಾಡಿತು.

ಕಾಲೇಜಿಗೆ ರಜ. ವಿಕಾಸ್ ಪುಸ್ತಕದ ಬರವಣಿಗೆಗೆ ಕೈ ಹಾಕಿದ. ಮಧ್ಯಮ ದರ್ಜೆಯ ಬದುಕನ್ನು ಕಂಡರೆ ಅಸಹ್ಯಿಸಿಕೊಳ್ಳುತ್ತಿದ್ದ ಗುರುಮೂರ್ತಿಗಳು ಅದರ ರುಚಿಯನ್ನು ನೋಡುವ ದಿನಗಳು ಹತ್ತಿರವಾಗಿತ್ತು.

ಯಾವುದನ್ನು ಅಸಹ್ಯಿಸಿಕೊಳ್ಳುತ್ತಿದ್ದರೋ ಅದನ್ನು ಅಪ್ಪಿಕೊಳ್ಳಬೇಕಿತ್ತು. ಇದರಿಂದ ಹೆಚ್ಚು ಕಡಿಮೆ ಅವನು ಕೈಗೊಂಡ ಕೆಲಸ ಮುಗಿದಿತ್ತು.

ತಾಯಿ ಬಂದ ಕೂಡಲೇ ವಿಕಾಸ್ ಬಾಲ್ ಪೆನ್ನನ್ನು ಪಕ್ಕಕ್ಕಿಟ್ಟ. ಬಂದ ವರಿ ಮಗನ ಮುಂದೆ ಕೂತರು ಚಡಪಡಿಕೆ ಆಕೆಯ ಮುಖದಲ್ಲಿ ವ್ಯಕ್ತವಾಗುತ್ತಿತ್ತು. ಸಣ್ಣಗೆ ನಕ್ಕು ಪ್ರಶ್ನಿಸಿದ.

"ಏನಮ್ಮ ವಿಷ್ಯ ? ಮಗ್ಳ ಯೋಚನೇನಾ ? ನೀವುಗಳು ಬೇಕಾದ್ರೆ.... ಹೋಗ್ಬನ್ನಿ. ಸಧ್ಯಕ್ಕೆ ಒಂದ್ವರ್ಷ ಬರೋಕೆ ಆಗೋಲ್ಲಾಂತ ನಿಖಿಲಾ ಗಂಡ ಬರ್ದಿದ್ದಾನೆ. ನಾವು ಬಲ್ವಂತ ಪಡ್ಸೋದ್ಬೇಡ."

ಆಕೆ ಮುಖ ಪಕ್ಕಕ್ಕೆ ತಿರುಗಿಸಿದರು. ದೂರದಲ್ಲಿ ಸುಖವಾಗಿರುವ ಮಗಳಿಗಿಂತ, ಹತ್ತಿರದಲ್ಲಿ ಮೂಕವಾಗಿ ವೇದನೆ ಅನುಭವಿಸುತ್ತಿರುವ ಮಗನ ಬಗ್ಗೆ ಆಕೆಗೆ ಚಿಂತೆ.

"ಇನ್ನೆಷ್ಟು ದಿನ ಈ ರೀತಿ ಇರೋದು ? ರಜನೀನೆ ಮದ್ವೆ ಆಗೋಕೆ ಸಿದ್ಧವಾಗಿರುವಾಗ, ಗಂಡಾದ ನೀನ್ಯಾಕೆ ಹಿಂದೇಟು ಹಾಕೋದು ? ನೋಡಿ ದೋರು ನಾಲ್ಕು ಮಾತು ಅಂದುಕೊಳ್ಳೋಕೆ, ಅವಕಾಶವಾಗುತ್ತೆ."

ಅರ್ಥಮಾಡಿಕೊಂಡ ವಿಕಾಸ್ ಹಗುರವಾಗಿ ನಕ್ಕುಬಿಟ್ಟ. ಈ ವಿಷಯವಾಗಿ ರಜನಿಯ ಬಗ್ಗೆ ಮಾತಾಡಲು ಅವನಿಗಿಷ್ಟವಿಲ್ಲ. ಅವಳಿಗಿಷ್ಟ ಬಂದವ ರೊಡನೆ ಆರಾಮಾಗಿರೋದು ಉತ್ತಮ. ಅವಳ ನೆನಪು ಸಿಹಿಗಿಂತ ಹೆಚ್ಚು ಕಹಿಯೆನಿಸಿತು.

ಮಗನ ಮೌನವನ್ನು ಏನೆಂದು ಊಹಿಸಿದರೋ, ಸುನಂದಮ್ಮ ಇನ್ನು ಅಷ್ಟು ಹೇಳಿದರು. "ಹೆಣ್ಣಿಗೆ ಬರವೇನು ಇಲ್ಲ. ಅವರಾಗೇ ಹುಡ್ಕಿಕೊಂಡು ಅಲೀತಾ ಇದ್ದಾರೆ. ನಾಲ್ಕಾರು ಸಂಬಂಧಗಳಲ್ಲಿ ಒಂದನ್ನು ಒಪ್ಕೋ! ಎಷ್ಟು ದಿನಾಂತ ಒಂಟಿ ಬದ್ಕು"

ಪುಸ್ತಕ, ಸಲಕರಣೆಗಳನ್ನು ತೆಗೆದಿಟ್ಟು ಮೇಲೆದ್ದ. ಈಗ್ಲೇ ಏನೂ ಹೇಳ್ಬೇಡಿ. ಇನ್ನಷ್ಟು ದಿನ ಈ ಪ್ರಸ್ತಾಪ ಬೇಡ. ನಂಗೇನು ಒಂಟಿಯಾಗಿರೋಕೆ ಕಷ್ಟವಲ್ಲ. ಇದುವರ್‍ಗೂ ಹಾಗೆ ಅನ್ನಿಸಿಯೇ ಇಲ್ಲ. ರಜನಿ ಇದ್ದಾಗಿನ ತಳಮಳದ ಸ್ಥಿತಿ ಈಗಿಲ್ಲ. ಆರಾಮಾಗಿದ್ದೀನಿ. ಸಧ್ಯಕ್ಕೆ ಹಾಗೇ ಬಿಡಿ" ಹೊರ ಬಂದು ನಿಂತ.

ಗೂಡಿನ ಸ್ಫೂರ್ತಿಗೆ ಹೆಣ್ಣು ಬೇಕು. ರಜನಿ ಬಾಳಿಗೆ ಬಂದಳು. ತೋಳು ತೆರೆದಾಗ ಒಂದಾದಳು. ಬೆಚ್ಚನೆಯ ಸುಖವನ್ನು ಹಂಚಿಕೊಂಡಳು. ಇದಿಷ್ಟೇ ದಾಂಪತ್ಯದ ಉದ್ದೇಶ ? ವ್ಯವಸ್ಥೆಯ ಬಗ್ಗೆ ಯೋಚಿಸತೊಡಗಿದ.

"ಗುಡ್ ಮಾರ್ನಿಂಗ್ ಸರ್" ಅಪರಿಚಿತ ಸ್ವರ ನಿಧಾನವಾಗಿ ಅತ್ತ ತಿರುಗಿದ. "ನಾನು ಪೆಸ್ಸಿಲ್ಲಾ ಅಂತ ನ್ಯೂಸ್ ರಿಪೋರ್ಟರ್. ನಿಮ್ಹತ್ರ ಮಾತಾಡೋ ಉದ್ದೇಶದಿಂದ್ಲೇ ಬಂದೆ. ನಂಗೋಸ್ಕರ ಒಂದಷ್ಟು ನಿಮಿಷ ವಿನಿಯೋಗಿಸೋಕೆ ಸಾಧ್ಯನೇ ?" ಸೌಜನ್ಯತೆ ಇತ್ತು ಅವಳಲ್ಲಿ

ಮುಗುಳ್ನಕ್ಕು ತಲೆದೂಗಿದ. ಮೊದಲ ನೋಟದಲ್ಲಿಯೇ ಅಳೆದು, ಸುರಿದು ನಿರ್ಧಾರಕ್ಕೆ ಬಂದ.

"ಅಫ್‌ಕೋರ್ಸ್....ಒಳ್ಗಡೆ ಬನ್ನಿ" ಕರೆದೊಯ್ದ. ಸುನಂದಮ್ಮ ತಕ್ಷಣ ಮೇಲೆದ್ದರು. ಅವಳತ್ತ ದೃಷ್ಟಿಹರಿಸಿದರು. ಆಕೆಯ ಕಣ್ಣಲ್ಲಿನ ಪ್ರಶ್ನೆಗೆ ವಿಕಾಸ್ ಸಮಾಧಾನ ಹೇಳಿದ.

"ಈಕೆ ಪೆಸ್ಸಿಲ್ಲಾ ಅಂತ. ನ್ಯೂಸ್ ರಿಪೋರ್ಟರ್ ಪ್ರೊಫೆಷನಲ್ ಆದ್ರೆ....ಹೆಣ್ಣಿಗೆ ನ್ಯಾಯ ದೊರಕಿಸಿಕೊಡುವಲ್ಲಿ ಈಕೆಗೆ ಅಷ್ಟೆ ಆಸಕ್ತಿ. ಅನ್ಯೇ ಲೇಖನಿ ಉಪಯೋಗಿಸ್ತಾ ಇದ್ದಾರೆ. ಬಹುಶಃ ಮಹಿಳಾ ಸಂಘಟನೆ, ಹೋರಾಟದ ಮುಂಚೂಣಿಯಲ್ಲಿರಬೇಕು."

ಪೆಸ್ಸಿಲ್ಲಾ ಗೊಂಬೆಯಂತೆ ನಿಂತಳು. ತನ್ನ ಬಗ್ಗೆ ಇಷ್ಟೊಂದು ಸಂಗ್ರಹಿಸಿದ್ದಾ ? ಅಥವಾ ಕಲ್ಪನೆಯಾ ? ಅಥವಾ ಬೇರೆಯವರಿಂದ ಇನ್‌ಫರ್ಮೇಷನ್ ಸಿಕ್ಕಿರಬಹುದಾ ? ಅವನ ಬುದ್ಧಿಮತ್ತೆಯಿಂದ ತೂಗುವ ಕಣ್ಣುಗಳು ಇವೆಲ್ಲವನ್ನು ಅಲ್ಲಗಳೆದವು.

"ನೀವು ತುಂಬ ಬುದ್ಧಿವಂತರು !" ಮುಕ್ತವಾಗಿ ಹೊಗಳಿದಾಗ ಸಣ್ಣಗೆ ನಕ್ಕ. "ನಿಮ್ಮ ಬಗ್ಗೆ ಗೆಸ್ ಮಾಡ್ದೇಂತ್ಲೇ ? ಸಾಧಾರಣ ಮನುಷ್ಯ ಕೂಡ ನಿಮ್ಮ ಮುಖದ ಭಾವನೆಗಳನ್ನು ಓದಿಬಿಡಬಲ್ಲ" ತಣ್ಣಗೆ ಹೇಳಿದ. ಅವಳು ತುಟಿ ಕಚ್ಚಿ ತನ್ನ ಚಿಂತನೆಯಲ್ಲೇ ಮಗ್ನವಾಗಿದ್ದಳು.

"ಥ್ಯಾಂಕ್ಸ್ ಫಾರ್ ಯುವರ್ ಕಾಮೆಂಟ್ಸ್" ಎಂದಾಗಲೂ ಪೆಸ್ಸಿಲ್ಲಾ ಮುಖದ ಬಿಗಿತ ಕಡಿಮೆಯಾಗಲಿಲ್ಲ. ಮಾನಸಿಕವಾಗಿ ನರಳುತ್ತಿರುವ ರಜನಿ

ಯನ್ನು ನೆನಪು ಮಾಡಿಕೊಳ್ಳುತ್ತಿದ್ದಳು. ವಿಕಾಸ್ ಅಷ್ಟೇನು ಕುಂದಿದಂತೆ ಕಾಣಲಿಲ್ಲ.

ಸುನಂದಮ್ಮ ಎದ್ದು ಒಳಗೆ ಹೋದರು. ಆಕೆಗೆ ಇನ್ನು ಭಯ ತಪ್ಪಿರಲಿಲ್ಲ.

ವಿಕಾಸ್ ಕೂತು ನೇರವಾಗೇ ಪ್ರಶ್ನಿಸಿದ. "ಏನು ವಿಷ್ಯ ? ನನ್ನಂಥ ಸಾಮಾನ್ಯ ಮನುಷ್ಯನ ಸಂದರ್ಶನ ಯಾವ್ದೇ ಪತ್ರಿಕೆಗೆ ಬೇಕಿರಲಾರ್ದು. ನೀವು ಬಂದ ಉದ್ದೇಶ ?" ಎಂದವ "ಬಹುಶಃ ಪ್ರಯೋಜನವಾಗ್ದು" ಸ್ಪಷ್ಟಪಡಿಸಿದ. ಇಂಥ ಹೆಣ್ಣುಗಳನ್ನು ಪಂಕಜಮ್ಮ ಕಳಿಸಿದ್ದರು. ಅಂದು ಹೆದರಿರಲಿಲ್ಲ. ಇಂದು ಬೆದರಲುಲಾರ. ಈ ವಿಷಯನ ಒಂದು ಛಾಲೆಂಜ್ ಆಗಿ ಸ್ವೀಕರಿಸಿದ್ದ.

ಷಾರ್ಟ್‌ಹ್ಯಾಂಡ್ ಬುಕ್, ಬಾಲ್ ಪೆನ್ನು ಹೊರ ತೆಗೆದ ಪೆಸ್ಸಿಲ್ಲಾ" ನನ್ನ ಪರಿಚಯವನ್ನು ಊಹಿಸಿದ್ದೀರಿ. ನಿಮ್ಮಿಂದ ಒಂದು ಹೆಣ್ಣಿಗೆ ಅನ್ಯಾಯವಾಗಿದೆ !" ಅವಳ ಸ್ವರದಲ್ಲಿನ ಕಾಠಿಣ್ಯತೆ ಗುರ್ತಿಸಿದ. ಮೃದುವಾಗಬಹುದಾದ ಹೆಣ್ಣು ಅನ್ಯಾಯಗಳ ಬಗ್ಗೆ ಸಿಡಿದಾಗ ಕಲ್ಲಾಗುತ್ತಾಳೆ ಎನ್ನುವುದಕ್ಕೆ ಉದಾಹರಣೆಯೆನಿಸಿತು.

"ಯೂ ಆರ್ ಟೂ ಲೇಟ್. ಎಲ್ಲದರ ತೀರ್ಮಾನವಾಗಿದೆ. ಈಗ ಅದ್ರ ಪ್ರಸ್ತಾಪ ಅನಾವಶ್ಯಕ. ನೀವು ಬರಬೇಕಾದ್ದು ನನ್ನ ಬಳಿಯಲ್ಲ. ಯಾರ್ಗೇ ಅನ್ಯಾಯವಾಗಿದ್ಯೋ, ಅವ್ರನ್ನ ಹೋಗಿ ವಿಚಾರ್ಸಿ ಏನಾದ್ರೂ ನಿಮ್ಮ ಬರವಣಿಗೆಗೆ ಗ್ರಾಸ ಸಿಕ್ಬಹುದ್ದು" ಅವನು ಸಹನೆ ಕಳೆದುಕೊಳ್ಳದಿದ್ದರೂ ಮುಖ ಕೆಂಪಗಾಯಿತು ಅನಾವಶ್ಯಕವಾಗಿ ವಿಕಾಸ್ ಮನೆಯ ಮುಂದೆ ಘೋಷಣೆಗಳನ್ನು ಕೂಗಿದ್ದರು. ಸರದಿ ಉಪವಾಸ ಆರಂಭಿಸಿದ್ದರು. ಇದೆಲ್ಲ ಯಾರ ಮೂಲಕ ?

'ಕೆಲಸದಿಂದ ವಜಾ ಮಾಡಿ' ಕಾಲೇಜಿನ ಗೋಡೆಗಳ ಮೇಲೆಲ್ಲಾ ವಿಕಾಸ್‌ನ ಹೆಸರು ರಾರಾಜಿಸಿತ್ತು. ದಿಟ್ಟತನದಿಂದ ಎದುರಿಸಿ ಗೆಲುವು ಪಡೆದಿದ್ದ. ಎಷ್ಟೋ ಸಲ ಅವನ ಸಹೋದ್ಯೋಗಿಗಳೇ ಹೇಳುತ್ತಿದ್ದರು : "ವಿಕಾಸ್, ನೀನು ಆಗೋ ಹೊತ್ಗೆ ಎದರಿಸ್ದೇ, ಸಹಿಸ್ಕೊಂಡೆ, ನಾವಾಗಿದ್ರೆ ಆತ್ಮಹತ್ಯೆ ಮಾಡಿಕೊಂಡು ಬಿಡ್ತಾ ಇದ್ವಿ" ಇವೆಲ್ಲ ಅವನ ನೆನಪಿನಲ್ಲಿ ಅಚ್ಚ

ಹಸಿರು. ಕೆಲವು ತಿಂಗಳುಗಳ ದಾಂಪತ್ಯಕ್ಕೆ ಅವನು ತೆತ್ತ ಬೆಲೆ ಅಧಿಕ. ನೆನಪಾದರೆ ಮೈಯಲ್ಲಿ ಮುಳ್ಳುಗಳೇ ಏಳುತ್ತಿದ್ದವು.

ವಿಕಾಸ್ ಎದ್ದು ಹೋದ. ಪ್ರಿಸ್ಸಿಲ್ಲಾ ವಯಸ್ಸು ಈಗ ಮುವ್ವತ್ತು. ಕನಸ್ಸುಗಣ್ಣಿನ ಹದಿನಾರರ ಹುಡುಗಿಯಂತೆ ಯೋಚಿಸಿದಳು. ಗಂಡು ಎನ್ನುವ ಒಂದೇ ಕಾರಣಕ್ಕೆ ಆರೋಪವೇರಿಬಿಡಲು ಅವಳಿಗಿಷ್ಟವಿಲ್ಲ.

ವಿಕಾಸ್ ಕಾಫೀ ತಂದಿಟ್ಟ "ತಗೊಳ್ಳಿ, ವೇಳೆ ಯಾವಾಗ್ಲೂ ಅಮೂಲ್ಯ. ಮಾತುಗಳು ಕೃತಿಗೆ ಇಳಿದಾಗಲೆ ಯಾವುದೇ ಸಮಸ್ಯೆಗೆ ಪರಿಹಾರ" ಅರ್ಥ ಗರ್ಭಿತವಾಗೇ ಹೇಳಿದ. ಪ್ರಿಸ್ಸಿಲ್ಲಾ ತಲೆದೂಗಿ ಕಪ್ ಬರಿದು ಮಾಡಿಟ್ಟಳು.

ಈಗಾಗಲೇ ಸಾಕಷ್ಟು ವರ್ಷಗಳಿಂದ ಪೇಪರಿಗಾಗಿ ಕೆಲಸ ಮಾಡಿದವಳು. ಹೆಣ್ಣುಗಳಿಗೆ ಆಗುತ್ತಿರುವ ಅನ್ಯಾಯಗಳ ವಿರುದ್ಧ ನಿರಂತರವಾಗಿ ತನ್ನ ಲೇಖನಿಯನ್ನು ಉಪಯೋಗಿಸಿದ್ದಲ್ಲದೇ, ತಾನೇ ಹೋರಾಟಕ್ಕೆ ಮುನ್ನುಗ್ಗುತ್ತಿದ್ದಳು. ಸ್ವಲ್ಪದಕ್ಕೆಲ್ಲ ಸೋಲು ಒಪ್ಪಿಕೊಳ್ಳುವ ಜಾಯಮಾನ ಅವಳದಲ್ಲ. ಲಜ್ಜೆ, ಸಂಕೋಚ ಅವಳ ಹತ್ತಿರ ಸುಳಿಯದು.

ವಿಕಾಸ್‌ನ ಮುಖವನ್ನು ಅವಲೋಕನ ದೃಷ್ಟಿಯಲ್ಲಿ ನೋಡಿದಳು. ಅಗಲವಾದ ಹಣೆ, ತೀಕ್ಷ್ಣತೆ ಇದ್ದರೂ ಪ್ರಶಾಂತವಾದ ಕಣ್ಣುಗಳು, ಸ್ವಾಭಿಮಾನದಿಂದ ಬಿಗಿದ ಹುಬ್ಬುಗಳು, ಎತ್ತರಕ್ಕೆ ತಕ್ಕಂತೆ ದೃಢವಾದ ಶರೀರ. ಹೆಣ್ಣನ್ನು ಕಟ್ಟಿ ಹಾಕಲು ಇಷ್ಟು ಸಾಕು. ಮನದಲ್ಲಿಯೇ ರಜನಿಯ ಸ್ಥಿತಿಯನ್ನು ನೆನೆದು ನಕ್ಕಳು.

"ಸಾರಿ....ಆ ಚಾಪ್ಟರ್‌ನ ಬಿಟ್ಟುಬಿಡೋಣ" ಎಂದವಳು ಗಂಭೀರವಾಗಿ ಪ್ರಾರಂಭಿಸಿದಳು. "ನಮ್ದು ಸಂಪ್ರದಾಯದ ದೇಶ. ಎಲ್ಲಾ ಕಂಪ್ಯೂಟರೈಸ್ ಆಗೋ ದಿನಗಳು ಹತ್ತಿರವಾಗ್ತ ಇವೆ. ಆದರೆ ಹೆಣ್ಣಿನ ಜೀವನದಲ್ಲಿ ನಾವು ಅಂಥ ಬದಲಾವಣೆಗಳನ್ನು ಕಾಣಲಾಗುತ್ತಿಲ್ಲ. ಇದಕ್ಕೆ ಕಾರಣ ನಾವು, ನೀವು ಯೋಚಿಸಬೇಕಾಗಿದೆ. ನೂರಕ್ಕೆ ತೊಂಬತ್ತರಷ್ಟು ಪತಿ–ಪತ್ನಿಯರಲ್ಲಿ ಸಾಮರಸ್ಯವಿಲ್ಲ ಕಾನೂನಿನಲ್ಲಿ ಸಾಕಷ್ಟು ಅವಕಾಶಗಳು ಇದ್ರೂ ತಾಳಿ ಕಟ್ಟಿಸಿಕೊಂಡ ಗಂಡನಿಂದ ಬೇರೆಯಾಗೋಕೆ ಇಷ್ಟಪಡೋಲ್ಲ" ಪೀಠಿಕೆ ಮೊದಲಿಟ್ಟಾಗ ವಿಕಾಸ್ ಬೇಸರದಿಂದ ಹಣೆಯುಜ್ಜಿದ. ಸದ್ಯಕ್ಕೆ ಈ ವಿಷಯದಲ್ಲಿ ತಲೆ ಕೆಡಿಸಿಕೊಳ್ಳಲು ಅವನಿಗೆ ಸಹನೆ ಇರಲಿಲ್ಲ.

"ಕಮ್ ಟು ದಿ ಪಾಯಿಂಟ್. ಬಳಸು ಮಾತು ನಂಗೆ ಇಷ್ಟವಾಗೋಲ್ಲ. ನನ್ನಿಂದ ನಿಮ್ಗೇನಾಗ್ಬೇಕು ?" ಅಸಹನೆ ಸಿಡಿಯಿತು. ಸತ್ತುಹೋದ ವಿಷ್ಯಕ್ಕೆ ಜೀವ ತೇಯುವ ಮನೆಯವರನ್ನು ಸಂಕಟಕ್ಕೆ ಗುರಿಪಡಿಸಲು ಅವನು ಸಿದ್ಧನಿಲ್ಲ.

ಪೆಸ್ಸಿಲ್ಲಾ ಕೂಡ ಅವನ ತಾಳ್ಮೆ ಪರೀಕ್ಷಿಸುವುದು ಸರಿಯಲ್ಲವೆಂಬ ನಿರ್ಧಾರಕ್ಕೆ ಬಂದಳು. "ದಟ್ ಈಸ್ ಕರೆಕ್ಟ್. ಈಗಾಗಲೇ ಸಾಕಷ್ಟು ವಿಷ್ಯ ಸಂಗ್ರಹಣೆ ಆಗಿದೆ. ಡೈವೋರ್ಸ್‌ನ ಹಿನ್ನೆಲೆಯಲ್ಲಿ ಬೇರ್ಪಟ್ಟ ಗಂಡು-ಹೆಣ್ಣಿನ ಮನಸ್ಥಿತಿಯನ್ನು ನೇರವಾಗಿ ಅವರಿಂದ್ಲೇ ತಿಳ್ಕೊಳ್ಳೋ ಉದ್ದೇಶ." ವಿಕಾಸ್ ಮೇಲಕ್ಕೆದ್ದ.

"ಎಕ್ಸ್‌ಕ್ಯೂಜ್ ಮಿ. ಮದ್ವೆಯಲ್ಲದ ಮದ್ವೆಯ ನಂತರದ ಡೈವೋರ್ಸ್ ಬಗ್ಗೆ ವ್ಯಾಖ್ಯಾನ ಮಾಡಲು ನಂಗಿಷ್ಟವಿಲ್ಲ. ನಿಮ್ಮ ಮನಸ್ಸಿನ ಕೇಂದ್ರ ವ್ಯಕ್ತಿ ಹೆಣ್ಣಾಗ್ಲಿ, ನೊಂದ ಹೆಣ್ಣುಗಳ ಕಂಡು ಹೆಚ್ಚು ತಿಳಿದು ಬರೀರಿ. ಕೋಪ, ಮುಗ್ಧತೆಗೆ ಒತ್ತು ಬೇಡ. ವಿಶ್ ಯೂ ಬೆಸ್ಟ್ ಆಫ್ ಲಕ್. ನಿಮಗೆ ಮನಸ್ಸಿದ್ದರೇ ರಜನೀನೇ ಮತ್ತೆ ಭೇಟಿ ಮಾಡಿ" ಕೈ ಜೋಡಿಸಿದ. ನೋಟ್ ಬುಕ್, ಬಾಲ್‌ಪೆನ್ನನ್ನು ಪರ್ಸಿಗೆ ಸೇರಿಸಿ ಎದ್ದಳು.

ಹೊರಟ ಪೆಸ್ಸಿಲ್ಲಾ ಹಿಂದಕ್ಕೆ ಬಂದಳು. "ಸಾರಿ, ನಿಮ್ಗೂ ರಜನಿಯ ಮದ್ವೆಯ ಇನ್ವಿಟೇಷನ್ ಬಂದಿರಬೇಕಲ್ಲ" ಕೆಣಕುವ ಧಾಟಿ ಇತ್ತು.

"ಸಂತೋಷ, ಇನ್ನೂ ಕರೆಯೋಲೆ ಬಂದಿಲ್ಲ ಅಕಸ್ಮಾತ್ ಬಂದ್ರೆ ನಾನು ನೀವು ಮತ್ತೆ ಅಲ್ಲೇ ಮೀಟ್ ಮಾಡೋಣ" ನಸುನಕ್ಕು ಕೈಯೆತ್ತಿ ಬೀಳ್ಕೊಟ್ಟ. ಏರುಪೇರಿಲ್ಲದ ಅವನ ವ್ಯಕ್ತಿತ್ವಕ್ಕೆ ಬೆರಗಾದಳು. ಗಂಡು ಹೀಗಿದ್ದರೇನೇ ಚೆನ್ನ ! ಅವಳ ಮನ ಹೇಳಿತು.

ಗೇಟಿನವರೆಗೂ ಹೋಗಿ ವಿಕಾಸ್ ಬೀಳ್ಕೊಟ್ಟು ಒಳಗೆ ಬಂದ. ಸುನಂದಮ್ಮ ಕಣ್ಣೀರಿಡುತ್ತಿದ್ದರು. ಈಗ ಸಮಾಧಾನಿಸಲಾರದ ಮನಸ್ಥಿತಿ ಅವನದು.

"ಅಮ್ಮ ಸ್ವಲ್ಪ ಹೊರ್ಗಡೆ ಹೋಗ್ಬರ್ತೀನಿ" ಹೊರಗೆ ನಡೆದ. 'ಎಲ್ಲಿಗೆ ಹೋಗುವುದು ?' ಹತ್ತಿರದಲ್ಲಿರುವ ಪಾರ್ಕ್‌ನ ಮರದ ಬೆಂಚಿನಲ್ಲಿ ಹೋಗಿ ಕೂತ.

ಸಂಜೆಯ ಸೊಬಗಿಗೆ ಹಚ್ಚ ಹಸಿರು ಶೃಂಗಾರಗೊಂಡು ಚಿತ್ತ ಅಪಹರಿಸು

ವಂತಿತ್ತು. ಅಲ್ಲಲ್ಲಿ ಜನರಿದ್ದರೂ ಗದ್ದಲದ ವಾತಾವರಣವಿರಲಿಲ್ಲ. ಅತ್ಯಂತ ಪ್ರಶಾಂತವಾಗಿತ್ತು.

ಎರಡು ದಿನದಿಂದ ಕೋಮಲ ಬಂದಿರಲಿಲ್ಲ. ಯಾವುದೋ ಇಂಟರ್‌ವ್ಯೂ ಅಂದಿದ್ದಳು. ನಾಲ್ಕಾರು ಸಲವಾದರೂ ಸುನಂದಮ್ಮ ಅವಳನ್ನು ನೆನಸಿಕೊಂಡಿದ್ದರು. ಹೊತ್ತು ತಂದಿದ್ದ ಪುಸ್ತಕದಲ್ಲಿ ಮಡಚಿಟ್ಟ ಕಾಗದವನ್ನು ನೆನಪು ಮಾಡಿಕೊಂಡ. ದಿನಕ್ಕೊಮ್ಮೆ ಓದುತ್ತಿದ್ದ. ಆದರೆ ಅದರ ಆಕರ್ಷಣೆ ಯೇನು ಕಮ್ಮಿ ಆಗಿರಲಿಲ್ಲ. ಜೀವನದಲ್ಲಿ ತಾಯಿಯ ನಂತರ ಅವನ ಬಗ್ಗೆ ಆಸಕ್ತಿವಹಿಸಿದಳು ಅವಳೊಬ್ಬಳೇ ಅನಿಸಿತು.

"ಹಲೋ ಸರ್" ಕೋಮಲ ಸ್ವರ. ಆಶ್ಚರ್ಯದಿಂದ ಕಣ್ಣರಳಿಸಿದ. "ಹಲೋ .. ಇಂಟರ್‌ವ್ಯೂ ಮುಗೀತಾ ?" ಕೇಳಿದ. ಮುಗುಳ್ನಕ್ಕಳು. ಸುಂದರ ನಗೆ ಅನಿಸಿತು. ಸಂಜೆಯ ಹೊಂಗಿರಣಗಳ ನರ್ತನದಲ್ಲಿ ಅಲೆಅಲೆ ಯಾಗಿ ಉಕ್ಕುವ ಸಾಗರದಂತೆ ಕಂಡಿತು. ಇಷ್ಟೊಂದು ಕೋಮಲ ಸಂತೋಷ ವಾಗಿರುವುದನ್ನು ಅವನೆಂದೂ ಕಂಡಿರಲಿಲ್ಲ.

ಸುತ್ತಲೂ ಕಣ್ಣಾರಳಿಸಿದವಳು ದೂರದ ಮರದತ್ತ ಕಣ್ಣು ಹಾಯಿಸಿದಳು "ಸರ್. ಅಲ್ಲಿ ಕೂತ್ಕೋಳೋಣ" ಎಂದಾಗ ಅವನು ಒಲ್ಲೆಯನ್ನಲಿಲ್ಲ. ಕೋಮಲ ಅಂಥ ಬುದ್ಧಿವಂತ ಹುಡುಗಿ ಗೆಲುವಾಗಿರಬೇಕೆಂಬುದೇ ಆಶಿಸು ತ್ತಿದ್ದ.

ಅಚ್ಚುಕಟ್ಟಾಗಿ ಬೆಳೆಸಿದ ಹುಲ್ಲು. ಕೂತು ಕೋಮಲ ಅತ್ತ ನೋಡಿದ. "ನಿಮ್ಮ ಇಂಟರ್‌ವ್ಯೂ ಸಕ್ಸೆಸ್ ಇರ್ಬಹುದ್ದು" ಎಂದು ಛೇಡಿಸಿದ. ತಲೆಯಾಡಿ ಸಿದಳು. "ನಾನು ಯಾವ ಇಂಟರ್‌ವ್ಯೂಗೂ ಹೋಗಿರಲಿಲ್ಲ. ಸುಳ್ಳು ಹೇಳ್ದೆ" ಒಪ್ಪಿಕೊಳ್ಳಲು ಅವಳಿಗೇನು ಸಂಕೋಚವಿರಲಿಲ್ಲ" ಇದು ನಿಜಾಂತ ನಿಮ್ಗ ತಿಳಿದೇ ನಂಬೋದು ಕಷ್ಟ."

ಸ್ವಲ್ಪ ಚಾಚಿದ ಮೊಣಕಾಲುಗಳ ಗದ್ದವೂರಿ ಕೂತ ಕೋಮಲ ಒಂದೆ ರಡು ನಿಮಿಷಗಳು ಮೌನವಾಗಿದ್ದಳು. "ಮೂರು ದಿನದ ಹಿಂದೆ ಹಳೇ ಪುಸ್ತಕ ಗಳನ್ನೆಲ್ಲ ಪೇಪರ‍್ನವನಿಗೆ ಹಾಕ್ದೆ...." ನಿಧಾನಿಸಿದಳು. "ಒಂದು ತಪ್ಪು ಆಗಿ ಹೋಗಿತ್ತು. ನಾನು ಒಂದು ಚೀಟಿ ಇಟ್ಟ ಪುಸ್ತಕ ಕೂಡ ಸೇರಿಹೋಗಿತ್ತು. ಅದಕ್ಕಾಗಿ ಎರಡು ದಿನ ತಪಾಸಣೆ" ಅವಳು ಪಟ್ಟ ಪಾಡನ್ನೆಲ್ಲ ಹೇಳಿಕೊಂಡಳು.

"ಸಿಕ್ತಾ....." ಕೇಳಿದ.

"ಇಲ್ಲ, ಆದ್ರೆ....ಅದನ್ನು ಪುನಃ ಬರ್ದೇ ಆ ಪೇಪರ್ ಕಳ್ದುಹೋದ ರೇನು....ನನ್ನ ಮನದಲ್ಲಿದ್ದುದ್ದನ್ನ ಎತ್ತಿ ಒಯ್ಯಲು ಯಾರಿಗೆ ಸಾಧ್ಯ?" ಆತ್ಮ ವಿಶ್ವಾಸದಿಂದ ನುಡಿದಳು. ನವಿರಾದ ಮಂದಾನಿಲವೊಂದು ಅವನನ್ನು ಸೋಕಿ ದಾಟಾಯಿತು, ಪುಲಕಿತಗೊಂಡ.

ಮತ್ತಷ್ಟು ಉತ್ಸಾಹ ಮೂಡಿತು. ಆ ಅಜ್ಞಾತ ಪೇಪರಿನ ಬಗ್ಗೆ ನೋಟ್ ಮಾಡಿಕೊಂಡಿದ್ರಾ ?" ಎನ್ನುತ್ತಲೇ ಹೋಗುತ್ತಿದ್ದ ಕಳ್ಳೇ ಕಾಯಿ ಹುಡುಗನನ್ನು ಹತ್ತಿರಕ್ಕೆ ಕರೆದ.

ಕೋಮಲನೆ ಕರ್ಚೀಫ್‌ಗೆ ಕಳ್ಳೇಕಾಯಿ ಹಾಕಿಸಿಕೊಂಡು ಎರಡರ ಒಂದು ನೋಟನ್ನು ಕೊಟ್ಟಳು.

"ಆ ಪೇಪರ್ ಸಿಗದೇ ಇದ್ದಿದ್ದಿದ್ದಕ್ಕಾ ಪಾರ್ಟಿ ?" ಅವಳ ಮುಖದಲ್ಲಿ ನವರಾಗಗಳು ಮೂಡಿ ಮರೆಯಾದವು. ಪ್ರತಿಕ್ರಿಯಿಸಲಾರದೇ ಹೋದಳು.

ಕಳ್ಳೇಕಾಯಿ ಮುಗಿಯುವ ಹೊತ್ತಿಗೆ ಪೂರ್ತಿ ಕತ್ತಲಾಯಿತು. ವಿಕಾಸ್ ಮೇಲೆದ್ದ "ನಾಳೆ ಬೆಳಗ್ಗೆ ಬೇಗ ಬನ್ನಿ. ಅಮ್ಮ ನಾಲ್ಕಾರು ಸಲ ಪೇಚಾಡಿ ಕೊಂಡ್ಳು" ಎಂದಾಗ ಕೋಮಲ ಯಾವುದೋ ಮೂಡಿದಲ್ಲಿದ್ದವಳು ಹ್ಞೂ ಗುಟ್ಟಲಿಲ್ಲ.

ಒಬ್ಬನೇ ವಿಕಾಸ್ ಮನೆಗೆ ಬಂದಾಗ ವಿಶ್ವನಾಥಯ್ಯ ಬಹಳ ಗೆಲುವಿ ನಿಂದ ಮಾತಾಡುತ್ತಿದ್ದರು. ಅದರಲ್ಲಿ ಒಂದು ಸೀರಿಯಸ್ ವಿಷಯದ ಪ್ರಸ್ತಾ ಪವು ಇತ್ತು.

"ನಮ್ಮ ಈಗೋ ತೃಪ್ತಿಗಾಗಿ ಮದ್ವೆ ವಿಷ್ಯದಲ್ಲಿ ಅನ್ನಿಗೆ ಒತ್ತಾಯ ಮಾಡೋದ್ಬೇಡ. ಜಾತ್ಕಾ, ಶಕುನ ನೋಡಿ ನಾಲ್ಕಾರು ಸಲ ಗುರುಮೂರ್ತಿ ಗಳ ಮನೆಗೆ ಓಡಾಡಿ ಮಾಡಿದ....ಮದ್ವೆ...." ನಿಟ್ಟುಸಿರು ಎರಚಾಡಿತು. ಆ ವಿಷಯದಲ್ಲಿ ಅವರಿಗಿನ್ನು ನೋವಿತ್ತು.

ವಿಕಾಸ್ ಮೌನವಾಗಿ ತನ್ನ ಕೋಣೆಗೆ ಹೋದ. ಕೋಮಲ ಅಂಥ ಜಾಣ ಹುಡುಗಿಯ ಕೈಯಲ್ಲಿ ಅಭಿಮಾನಿಸಿಕೊಳ್ಳುವುದು, ಅವಳು ಆಸಕ್ತಿವಹಿ ಸುವುದು ಕ್ಷಣ ಅದೃಷ್ಟವೆನಿಸಿತು.

ಇಂದು ವೈ ಮನದಲ್ಲಿ ಉತ್ಸಾಹ ತುಂಬಿಕೊಂಡಿತು. ಇದು ಮದುವೆ

ಯಾದ ಅವನಿಗೂ ಹೊಸ ಅನುಭವ. ಫಿಲಂ, ಪಿಕ್‌ನಿಕ್ ಬಿಟ್ಟು ಅವನ ಯಾವುದೇ ವಿಷಯಗಳಲ್ಲಿ ರಜನಿ ಆಸಕ್ತಿವಹಿಸಿರಲಿಲ್ಲ. ಸಂಜೆ ಹೊತ್ತು ಸಾಧಾರಣವಾಗಿ ಅವನು ಟೀ ಕುಡಿಯುತ್ತಿದ್ದ. ಅಷ್ಟು ದಿನ ಜೊತೆಯಲ್ಲಿದ್ದ ರಜನಿಗೆ ಆ ವಿಷಯವೇ ಗೊತ್ತಿಲ್ಲ ಎನ್ನುವಂತೆ ವರ್ತಿಸುತ್ತಿದ್ದಳು. ಪ್ರೀತಿ ಪ್ರೇಮವಲ್ಲದ ಯಾಂತ್ರಿಕ ಬದುಕೆನಿಸಿತು.

ದಿನಕ್ಕಿಂತ ಒಂದಿಷ್ಟು ಜಾಸ್ತಿಯೇ ಊಟ ಮಾಡಿದ. ಆ ಏಜನ್ಸಿಯ ಬಗ್ಗೆ ತಂದೆಯ ಜೊತೆ ಮಾತಾಡಿದ. ಮಲಗುವ ಮುನ್ನ ತಾಯಿಗೆ ಹೇಳಿದ.

"ಕೋಮಲ ಬೆಳಿಗ್ಗೆ ಬಂದ್ರೆ....ಬ್ಯಾಂಕ್‌ಗೆ ಕಳ್ಸಿ ಹಣ ತರಿಸು" ಎಂದು ಚೆಕ್‌ಗೆ ಸಹಿ ಹಾಕಿಟ್ಟು ಮಲಗಿದ. ಗಾಢವಾದ ನಿದ್ದೆ. ಯಾವುದೋ ಸ್ಫೂರ್ತಿ ಅವನ ಬದುಕಿಗೆ ಉತ್ಸಾಹ ತುಂಬುತ್ತಿತ್ತು.

ಸುನಂದಮ್ಮ ಬಾಗಿಲಿಗೆ ಬಂದರು.

"ವಿಕಾಸ್, ನಾನು ನಿಮ್ಮ ತಂದೆ ಶಾಮಣ್ಣನವ್ರ ಮಗ್ಳ ಮದ್ವೆಗೆ ಹೋಗ್ಬರ್ತೀನಾಂತ" ಎಂದರು ಸುನಂದಮ್ಮ. ವಿಕಾಸ್ ಎದ್ದು ಕೂತ. ಅವನಿಗೆ ನಿಜವಾಗಿಯೂ ಸಂತೋಷವಾಗಿತ್ತು.

"ಹೋಗ್ಬನ್ನಿ, ನಂಗೇನು ತೊಂದರೆ ಇಲ್ಲ."

ಅವರು ಹೊರಗಿನ ಜೀವನಕ್ಕೆ ಹೊಂದಿಕೊಳ್ಳುತ್ತಿರುವುದು ಅವನಿಗೆ ಅತ್ಯಂತ ಸಂತೋಷದ ವಿಷಯ. ತಿಂಗಳುಗಟ್ಟಲೇ ಮನೆ ಬಿಟ್ಟು ಅಲ್ಲಾಡಿರಲಿಲ್ಲ. ಬೆಂದು, ನೊಂದು, ಸಾಂತ್ವನಗೊಂಡವರು ಬೇಗ ಚೇತರಿಸಿಕೊಳ್ಳಬೇಕಿತ್ತು.

ಕೋಮಲ ಬಂದಾಗ ಸರಿಯಾಗಿ ಎಂಟು ಹತ್ತು. ಅವಳು ಮೆಚ್ಚಿದ್ದ ಪ್ಯಾಂಟ್, ಷರಟು ತೊಟ್ಟು ರೆಡಿಯಾಗಿದ್ದ.

"ಸಾರಿ ಸರ್...." ವಿದ್ಯಾರ್ಥಿನಿಯಂತೆ ಅವನ ಕ್ಷಮೆ ಬೇಡಿದವಳು ಏಜನ್ಸಿಯ ಫೈಲ್‌ನಲ್ಲಿ ಮಗ್ನವಾಗಿದ್ದಳು. "ಅಪ್ಪ, ಅಮ್ಮ ಮದ್ವೆಗೆ ಹೋಗಿದ್ದಾರೆ.

ಫೋನ್ ಬಂದ್ರೆ ರಿಸೀವ್ ಮಾಡ್ಕೊಳ್ಳಿ. ಮೆಕ್ಯಾನಿಕ್ ರಾಜು ಬಂದರೆ ರಾತ್ರಿ ಎಂಟರ ನಂತರ ಬರೋಕೆ ಹೇಳಿ" ಇದಿಷ್ಟು ಹೇಳಿದ. ಬಗ್ಗಿ ತಲೆಯಾಡಿಸುತ್ತಿದ್ದವಳು ಮೆಲ್ಲನೆ ತಲೆಯೆತ್ತಿದಳು. ಅವಳು ಮೆಚ್ಚಿ ಆರಾಧಿಸುತ್ತಿದ್ದ ವ್ಯಕ್ತಿ ವಿಕಾಸ್ ಒಬ್ಬನೇ. ಮೈ ಮರೆತು ಕಣ್ತುಂಬ ನೋಡಿದಳು. ಕಣ್ಣೀರಿನ ಪರೆ ಮತ್ತೆ ಮತ್ತೆ ಅಡ್ಡವಾದಾಗ ಒರೆಸಿಕೊಂಡು ನೋಡಿದಳು. ಅವಳೀಗ ಅಯೋಮಯವಾದ ಸ್ಥಿತಿಯಲ್ಲಿದ್ದಳು. ಆರಾಧನೆ, ಆಪ್ಯಾಯಮಾನ ತುಂಬಿಕೊಂಡ ಅವಳ ನೋಟದಿಂದ ಅತ್ತಿತ್ತ ಚಲಿಸುವುದು ಕೂಡ ಅವನಿಗೆ ಇಷ್ಟವಾಗಲಿಲ್ಲ. ನಂತರ ಬಿಕ್ಕಿ ಬಿಕ್ಕಿ ಅಳಲು ಶುರು ಮಾಡಿದಾಗ ವಿಕಾಸ್ ಹೊರಗೆ ನಡೆದ.

ಅವನೆದೆಯಾಳದ ನವಿರಾದ ಭಾವನೆಗಳೆಲ್ಲ ರೂಪುಪಡೆದುಕೊಂಡಿದ್ದವು. ವಿಷಾದದ ತೆರೆಗಳ ನಡುವೆ ಆನಂದದ ಸುಯ್‌ಗಾಳಿ. ಮೈಮರೆಸುವ ಪುಳಕ, ಧನ್ಯತೆಯ ಭಾವ.

ನಾಲ್ಕು ಪಟ್ಟು ಉತ್ಸಾಹದಿಂದ ಪಾಠ ಮಾಡಿದ. ವಿದ್ಯಾರ್ಥಿಗಳೊಂದಿಗೆ ಹರಟಿದ. ಸಂಜೆ ಗಾರ್ಡನ್ ಹೋಟೆಲ್‌ಗೆ ಬಂದ ಕಾಫಿ ಕುಡಿಯಲು.

ಸೀಟ್‌ಗಾಗಿ ಅವನ ಕಣ್ಣುಗಳು ಅರಸಿ ಒಂದೆಡೆ ನಿಂತಿತು. ಗದ್ದಕ್ಕೆ ಕೈಯೂರಿ ಕೂತಿದ್ದಳು. ಸೆಲ್ವಾರ್ ಕಮೀಜ್‌ನಲ್ಲಿ ಇನ್ನು ಪುಟ್ಟ ಹುಡುಗಿಯಂತೆ ಕಂಡಳು.

ಬೇರೆಡೆ ನೋಟ ಹರಿಸಿದ. ತಾನಾಗಿ ಎದ್ದು ಬಂದಳು. "ಅಲ್ಲಿ ಸೀಟ್ ಇದೆ !" ತುಟಿ ಕಚ್ಚಿ ತಲೆದೂಗಿ ಅತ್ತ ಹೆಜ್ಜೆ ಹಾಕಿದವನು ಸಿಂಕು ಸುತ್ತಲೂ ಕಣ್ಣಾಡಿಸಿದ. "ಥ್ಯಾಂಕ್ಯೂ, ನೀವು ಕೂತ್ಕೊಳ್ಳಿ" ಹೆಜ್ಜೆಗಳನ್ನು ಬೇರೆಡೆ ಹಾಕಿದ. ರಜನಿಯ ಕಣ್ಣಂಚಿನಲ್ಲಿ ಕಂಬನಿ ಶೇಖರವಾಯಿತು. ಮುಖ ಪಕ್ಕಕ್ಕೆ ತಿರುಗಿಸಿಕೊಂಡು ಕಣ್ಣೀರೊತ್ತಿಕೊಂಡಳು. ಗಮನಿಸಲಿಲ್ಲ ವಿಕಾಸ್.

ಕೂತ ರಜನಿ ಅವನತ್ತ ಎದ್ದು ಬಂದಳು. ಸಿಡಿಯೋ ಮಿದುಳು, ಆರ್ಭಟಿಸೋ ಹೃದಯ, ಇವೆರಡರ ಮಧ್ಯೆ ನಲುಗಿಹೋದ ಮನ ಅವಳ ಇಡೀ ಚೇತನವನ್ನೇ ಕುಗ್ಗಿಸುತ್ತಿತ್ತು.

"ಇಲ್ಲಿ ಕೂತ್ಕೋಬಹುದಾ ?" ನಿಧಾನವಾಗಿ ತಲೆ ತಲೆಯತ್ತಿ ಮುಗು

ವೆಯಿಟರ್ ಅವನ ಮುಂದೆ ಕಾಫೀ ತಂದಿಟ್ಟು ರಜನಿಯತ್ತ ನೋಡಿದ. ನಿರ್ವಿಕಾರವಾಗಿ ವಿಕಾಸ್ ಕಪ್ ಎತ್ತಿ ತುಟಿಗೆ ಹಚ್ಚಿದ. ಮತ್ತೆ ಮೂರ್ಖತನ ದಿಂದ ಆತ್ಮಹತ್ಯೆ ಮಾಡಿಕೊಳ್ಳುವುದು ಅವನಿಗೆ ಬೇಕಿರಲಿಲ್ಲ.

"ಏನಾದ್ರೂ ತಿಂಡಿ ತಗೊಂಡ್ಬಾ. ದೋಸೆ, ಇಡ್ಲಿ, ಪೂರಿ ಯಾವು ದಾದ್ರೂ ಸರಿ" ಅವನನ್ನ ಕಳಿಸಿ ವಿಕಾಸ್‌ನತ್ತ ನೋಡಿದಳು. ನಿಧಾನವಾಗಿ ಕಾಫೀ ಗುಟುಕರಿಸುತ್ತಿದ್ದ. ಅವಳೆದೆಯಲ್ಲಿ ಅವಲಕ್ಕಿ ಭತ್ತ ಕುಟ್ಟಿದಂತಾ ಯಿತು.

ಡೈವೋರ್ಸ್ ಪಡೆಯುವ ಮುನ್ನ ಹೇಳಿದ್ದ "ರಜನಿ ಇನ್ನೊಂದ್ಸಲ ಯೋಚಿಸ್ಸು. ಪಾಶ್ಚಾತ್ಯ ದೇಶಗಳ ಹಾಗೆ ವಿವಾಹ ಸಂಬಂಧವನ್ನು ಕಿತ್ತೊಗೆ ಯುವುದು ಸುಲಭವಲ್ಲ" ಆಗ ಮುಖ ತಿರುಗಿಸಿ ತನ್ನ ಕರಾರಿನ ಮೇಲೆ ನಿಂತಿ ದ್ದಳು. ಒಂದಿಂಚು ಅಲುಗಾಡಿರಲಿಲ್ಲ.

ರಜನಿಯ ಕೋಪ, ಸಿಟ್ಟು, ಸ್ವಾಭಿಮಾನ ಒಮ್ಮೆಲೇ ಕರಗಿ ವಿಕಾಸ್ ನೆದೆಯ ಬೆಚ್ಚಗಿನ ಆಸರೆಗೆ ಹೋಗಿಬಿಡಬೇಕೆಂಬ ಹಂಬಲ. ಆದರೆ....ಹೇಗೆ? ಮುರಿದ ದಾಂಪತ್ಯ. ಇನ್ನು ಕೆಲವು ಕಾಲದ ನಂತರ ಪೂರ್ತಿ ಮರೆತು ಹೋಗುವ ವಿಷಯ !

ಕಪ್ ಕೆಳಗಿಟ್ಟು ವೆಯಿಟರ್ ತಂದಿಟ್ಟ ಬಿಲ್ಲಿಗೆ ನೋಟು ಹಾಕಿ ಹೊರ ಡಲು ಎದ್ದ.

"ವಿಕಾಸ್ ಸ್ವಲ್ಪ ಹೊತ್ತು ಕೂತ್ಕೊಳ್ಳಿ" ರಜನಿಯ ದನಿಯಲ್ಲಿ ಯೋಚನೆ ಇತ್ತು. ನಿರಾಕರಿಸಲು ಅವನಿಂದಾಗಲಿಲ್ಲ. ಆದರೂ ಇದು ಒಳ್ಳೆಯ ಲಕ್ಷಣವಲ್ಲವೆನಿಸಿತು.

ಮದುವೆಯ ನಿಖರವಾದ ಸುದ್ದಿ ಅವನವರೆಗೆ ತಲುಪಿತ್ತು. ಈಗ ರಜನಿ ಮಾಜಿ ಗಂಡನ ಭೇಟಿ, ಮಾತು-ಸಾಮಾನ್ಯವಾಗಿ ಯೋಚಿಸಿದಾಗ ಆಕೆಯ ಭವಿಷ್ಯದ ದೃಷ್ಟಿಯಿಂದ ಕೆಡುಕೆನಿಸಿತು. ಅಖಿಲೇಶ್ ಮಾತ್ರವಲ್ಲ, ಯಾರೂ ಸಹಿಸಲಾರದಂಥದ್ದು. ಬರೀ ಗೊಂದಲದಲ್ಲಿ ಕೆಡವುತ್ತೆ. ಇಂಥ ಸಣ್ಣ ಪುಟ್ಟ ವಿಚಾರವು ರಜನಿಗೆ ತಿಳಿಯದೇ ? ಗೊತ್ತಿದ್ದರೂ ಒಂದು ರೀತಿಯ ಉದಾ

ಸೀನವ್ರೋ ? ಈಗಾಗಲೇ ತಮ್ಮ ಇಂಥ ನಡವಳಿಕೆಯಿಂದ ಬೇಕಾದಷ್ಟು ಕಿತ್ತಿದರು ಆ ಕುಟುಂಬ.

ಬಂದ ಪೂರಿ, ದೋಸೆಯನ್ನ ಮುರಿದು ಮುರಿದು ಹಾಕಿದಳೇ ವಿನಹಃ ಒಂದಿಷ್ಟೂ ತಿನ್ನಲಿಲ್ಲ. ವಿಕಾಸ್ ಬೇರೆಯ ರೀತಿಯಲ್ಲಿ ಯೋಚಿಸಲಾರಂಭಿಸಿದ. ಗುರುಮೂರ್ತಿಗಳ ಮತ್ತೊಂದು ಜಾಲವ್ರೋ ! ಗಮನಿಸಿದರೂ ಗಮನಿಸದಂತೆ ಎದ್ದು ಹೊರಗೆ ಬಂದ.

ಡೈವೋರ್ಸ್‌ನ ಕಲ್ಪನೆಯನ್ನ ಕೂಡ ಇಟ್ಟುಕೊಳ್ಳದ ವಿಕಾಸ್ ಆ ಸಮಯದಲ್ಲಿ ಹೆಚ್ಚು ನೊಂದಿದ್ದ. 'ಅವಳಿಗಿಷ್ಟವಿಲ್ಲವೆಂದ ಮೇಲೆ ಅವಳೊಂದಿಗೆ ಸಂಸಾರ ಮಾಡುವ ಹಟವೇಕೆ ?' ಈ ಅರ್ಥ ಬರುವ ಮಾತುಗಳನ್ನೇ ಅವರಿವರು ಆಡಿದ್ದರು.

ರಜನಿ ಬಂದಾಗ ವಿಕಾಸ್ ಹೆಜ್ಜೆಯ ವೇಗವನ್ನೇನು ಹೆಚ್ಚಿಸಲಿಲ್ಲ. ಪೂರ್ತಿ ಕತ್ತಲಾಗಿತ್ತು. ವಿದ್ಯುತ್ ದೀಪಗಳು ಆ ಕೊರತೆಯನ್ನು ತುಂಬಲು ಹೆಣಗಾಡುತ್ತಿದ್ದವು. ತಲೆಯೆತ್ತಿ ಆಕಾಶದತ್ತ ನೋಡಿದ. ಅಲ್ಲಲ್ಲಿ ಮೋಡಗಳ ಸುಳಿವು ಇದ್ದರೂ ಮಳೆ ಬರುವ ದಟ್ಟ ಸೂಚನೆಯೇನು ಕಂಡು ಬರಲಿಲ್ಲ.

"ಏನು ಮಾತಾಡೋದಿದೆ ?" ತಟ್ಟನೇ ಜೊತೆಯಲ್ಲಿ ಹೆಜ್ಜೆ ಹಾಕುತ್ತಿದ್ದ ರಜನಿಯನ್ನು ಪ್ರಶ್ನಿಸಿದ. ಎರಡು ಕಣ್ಣುಗಳ ಮೌನದ ನಂತರ, "ಇಲ್ಲೆಲ್ಲಾದ್ರೂ ಕೂತು ಮಾತಾಡೋಣ" ಎಂದಳು.

ವಿಕಾಸ್ ಮುಖ ಗಂಟಿಕ್ಕಿದ "ಆಡೋಕೆ ಏನು ಮಾತು ಉಳಿದಿದೆ. ನಮ್ಮಂಥ ಮಧ್ಯಮ ದರ್ಜೆಯ ಜನರಿಂದ ಆಕಾಶದತ್ತ ನೋಡುವ ನಿಮ್ಮಂಥವ್ರಿಗೆ .. ಕೆಲ್ಸವೇನು ? ಬೇರೊಬ್ಬ ವ್ಯಕ್ತಿಯ ವ್ಯಕ್ತಿತ್ವವನ್ನು ಅನುಮಾನಿಸುವ ಅದರ ಮೇಲೆ ಚಪ್ಪಡಿ ಎಳೆಯಲು ಬಯಸಿದ್ದ ಜನರ ಬಗ್ಗೆ...." ಮುಖ ಪಕ್ಕಕ್ಕೆ ತಿರುಗಿಸಿಕೊಂಡ.

ರಜನಿಯ ಕಣ್ಣಂಚಿನಲ್ಲಿ ನೀರಾಡಿತು. ಇಂದಿಗೂ ಅವಳದು ದ್ವಂದ್ವ ಮನಸ್ಥಿತಿ. ವಿಕಾಸ್‌ನ ಸ್ವಾಭಿಮಾನದ ಮುಖವನ್ನ ಮನದುಂಬಿಕೊಳ್ಳುವಂತೆ ನೋಡಿದಳು.

ವಿಕಾಸ್ ಸ್ವಲ್ಪ ಮೆತ್ತಗಾದ "ರಜನಿ, ನಿನ್ನ ಮಾತು ಬೇಗ ಮುಗ್ಸು.

ಬದ್ಕನ್ನ ಹೊರೆಯಾಗಿ ಮಾಡ್ಕೋಬೇಡ. ಸ್ವಲ್ಪ ತಿಳುವಳಿಕೆಯಿಂದ ವರ್ತಿಸು. ತಪ್ಪುಗಳು ಮತ್ತೆ ಮತ್ತೆ ಪುನರಾವರ್ತನೆಯಾಗೋದ್ಬೇಡ" ಬುದ್ಧಿ ಹೇಳಿದ.

ಸಿಧಾನವಾಗಿ ಪರ್ಸ್‌ನಿಂದ ಇನ್ವಿಟೇಷನ್ ತೆಗೆದು ಮುಂದಿಡಿದಳು.

"ಥ್ಯಾಂಕ್ಯೂ...." ತೆಗೆದುಕೊಂಡು ಕಣ್ಮುಂದೆ ಹಿಡಿದಾಗ ಕ್ಷಣ ಮಬ್ಬು ಕವಿದಂತಾಯಿತು ಅವನಿಗೆ. ಮರುಕ್ಷಣ ಚೇತರಿಸಿಕೊಂಡ. ದೀಪಗಳ ಬೆಳಕಿನಲ್ಲಿ ಅಕ್ಷರಗಳು ಸ್ಪಷ್ಟವಾಗಿದ್ದವು.

"ಕಂಗ್ರಾಜುಲೇಷನ್...." ಕಾರ್ಡನ್ನ ಮತ್ತೆ ಕವರ್‌ಗೆ ಸೇರಿಸಿದ. "ಬೆಸ್ಟ್ ಆಫ್ ಲಕ್...." ಶುಭ ಕೋರಿದ. ವಿಕಾಸ್‌ನ ಕಣ್ಣುಗಳು ಮಂದ ಬೆಳಕಿನಲ್ಲಿ ಜ್ಯೋತಿಗಳಂತೆ ಬೆಳಗುತಿತ್ತು. ರಜನಿ ತನ್ನ ಒಬ್ಬ ಮುಗ್ಧ ವಿದ್ಯಾರ್ಥಿನಿಯಂತೆ ಕಲ್ಪಿಸಿಕೊಂಡ.

ಒಂದಿಷ್ಟು ದೂರ ನಡೆದು ಮರದ ಬಳಿ ನಿಂತ.

"ರಜನಿ, ಅಖಿಲೇಶ್ ರಿಯಲೀ ಜಂಟಲ್‌ಮನ್. ವಿಷ್ಯ ಹೇಗಾದ್ರೂ.... ಇರಲಿ. ಒಂದು ಹೆಣ್ಣಿಗೆ ಅನ್ಯಾಯವಾದಾಗ ಬರೀ ಬಾಯ್ಬಿಡುವ ಜನರ ಬಾಯನ್ನು ಮುಚ್ಚಿಸಿದ್ದಾನೆ. ಅದ್ಕೇ ತಾನೇ ಮುಂದಾಗಿದ್ದಾನೆ. ಈಗಾಗ್ಲೇ ನೀವಿಬ್ರೂ ಒಬ್ಬರನ್ನೊಬ್ರು ಅರ್ಥ ಮಾಡಿಕೊಳ್ಳೋಕೆ ಸಾಕಷ್ಟು ಕಾಲಾವಕಾಶವಿತ್ತು." ಅವನ ಸೊಂಟ ತಬ್ಬಿ ಬೈಕ್ ಮೇಲೆ ಸುತ್ತುವ ರಜನಿಯ ಚಿತ್ರ ನೆನಪಿಸಿಕೊಂಡ. "ಇನ್ನೊಂದ್ವಿಷ್ಯ ಅವ್ನ ಸ್ವಾಭಿಮಾನನ ನಿಮ್ಮಪ್ಪ, ಅಮ್ಮನಿಗೆ ಒತ್ತೆ ಇಡೋಕೆ ಹೋಗ್ಬೇಡ. ಬದುಕ್ಕೊಂದು ಸುಂದರ ಕಾವ್ಯ" ವಿವೇಚನೆಯಿಂದ ಅರ್ಥವಾಗುವಂತೆ ಹೇಳಿದ.

ಬಾಯಿಗೆ ಕರ್ಚೀಫ್ ಒತ್ತಿ ಮುಖ ಪಕ್ಕಕ್ಕೆ ತಿರುಗಿಸಿ ಕಣ್ಣೀರು ಮಿಡಿದಳು. ಎಂಥದ್ದೋ ನೋವು ಅವನೆದೆಯಲ್ಲಿ ಕೂಡ. ರಜನಿಯ ದ್ವಂದ್ವ ವಿಕಾಸ್‌ಗೆ ಅರ್ಥವಾದರೂ ನಿಸ್ಸಹಾಯಕ.

"ರಜನಿ ಯಾಕೆ ಅಳು ? ಡೈವೋರ್ಸ್ ತಗೊಂಡು ನಾವಿಬ್ರೂ ಬೇರ್ಪಟ್ಟರೂ ಶತ್ರುಗಳಲ್ಲ. ಓದಲಾದ ಪುಸ್ತಕ ಮುಚ್ಚಿಟ್ಟು ಆಗಿದೆ. ಮತ್ತೆ ತೆಗೆದು ಓದಿದರೂ ಮುಚ್ಚಿಟ್ಟ ಹಿನ್ನೆಲೆಯ ಮನಸ್ಸೇ. ಯಾರಿಗೂ ಹಿತವಿಲ್ಲ. ನಿನ್ನ ಹೊಸ ದಾಂಪತ್ಯ ಜೀವನ ಸುಖವಾಗಿರಲಿ" ಮನಃಪೂರ್ವಕವಾಗಿಯೇ ಹಾರೈಸಿದ. ಕೋಪ ಆ ಕುಟುಂಬದ ಮೇಲೆ ಮಾತ್ರ. ಕೀಲುಗೊಂಬೆಯಾದ

ಇವಳ ಬಗ್ಗೆ ಸಹಾನುಭೂತಿ. ಒಮ್ಮೊಮ್ಮೆ ಜಿಗುಪ್ಸೆಯಿಂದ ಅಸಹ್ಯಿಸಿ ಕೊಳ್ಳುತ್ತಿದ್ದ.

ಅವಳೆವೆಯ ಅಭಿಮಾನದ ಉದ್ದಗಲಕ್ಕೂ ವಿಕಾಸ್ ಬೆಳೆದು ನಿಂತ. ಆ ಎತ್ತರ ತನ್ನಂಥವಳಿಗೆ ಎಟುಕಲಾರದೆನಿಸಿತು ರಜನಿಗೆ.

ಮುಂದೆ ನಡೆದ ವಿಕಾಸ್‌ನ ಅವಳ ಮಾತುಗಳು ತಡೆದು ನಿಲ್ಲಿಸಿದವು. "ನಂಗೆ ಅತ್ತೆ ಅಪ್ಪನ್ನ ನೋಡ್ಬೇಕು. ಅಪ್ಪ ಆಶೀರ್ವಾದ ಬೇಕು" ಅನು ಮಾನಿಸಿದ. ಕ್ಷಣ ಎಲ್ಲಾ ಪೆಟ್ಟಿ ಕಲ್ಲಾದ.

"ಖಂಡಿತಾ ಬಾ. ಅಖಿಲೇಶ್‌ನೊಂದಿಗೆ ಬಂದರೂ ಸಂತೋಷ. ಸಂಪ್ರದಾಯಸ್ಥೆಯಾದ ಅಮ್ಮ ಬದಲಾವಣೆಗೆ ಹೊಂದಿಕೊಳ್ಳೋದು ಕಷ್ಟ. ಆದ್ರೂ ನಿಂಗೆ ಆಶೀರ್ವಾದ ಸಿಕ್ಕುತ್ತೆ" ನಿಲ್ಲದೇ ನಡೆದ.

ಈಗಾಗಲೇ ತನಗೆ ಬಿದ್ದ ಹೊಡೆತಗಳ ಹಿನ್ನೆಲೆಯಲ್ಲಿ ಯಾರಿರಬಹು ದೆಂದು ತಪಾಸಿಸಿರುವ ಗುರುಮೂರ್ತಿಗಳು ಸೇಡಿಗಾಗಿ ಮತ್ತೇನಾದರೂ ಮಸಲತ್ತು ಮಾಡಬಹುದೆಂಬ ಗುಮಾನಿ ವಿಕಾಸ್‌ಗೆ.

ವಿಕಾಸ್ ಮನೆಗೆ ಬಂದಾಗ ವರಾಂಡದಲ್ಲಿ ಕೋಮಲ ಒಬ್ಬಳೇ ಕೂತಿ ದ್ದಳು. ಒರೆಕೋರೆಗಳಿಂದ ಒಂದು ಚಿತ್ರ ಬಿಡಿಸಿ ಅದಕ್ಕೊಂದು ಪುಟ್ಟ ಕವನ ಬರೆದು ಶೀರ್ಷಿಕೆ ಕೊಟ್ಟಿದ್ದಳು—'ನವಚೈತ್ರ.'

ಪೂರ್ತಿ ಅದರಲ್ಲೇ ಮಗ್ನಳಾದ ಅವಳನ್ನು ನೋಡಿದ. ಪ್ರೀತಿಗೆ ಎಷ್ಟೊಂದು ಮುಖಗಳು. ಕೆಮ್ಮಿ ಒಳಗೆ ಹೋದಾಗ ಆ ಪೇಪರನ್ನ ಮಡಚಿ ಕೋಮಲ ಪರ್ಸಿಗೆ ತುರುಕಿ ಮೇಲೆದ್ದಳು,

"ಇನ್ನೂ ಯಾರೂ ಬಂದಿಲ್ಲ, ಸರ್" ಎಂದಳು.

ವಿಕಾಸ್ ನಿಧಾನವಾಗಿ ಬಟ್ಟೆ ಬದಲಾಯಿಸಿ ಬಂದು ಕೂತ.

"ಕೋಮಲ ಮನೆಗೆ ಹೋಗಿ ಏನ್ಮಾಡ್ತೀರಾ ?" ಕಾಲು ಮೇಲೆ ಕಾಲು ಹಾಕಿ ನೇರವಾಗಿ ಅವಳನ್ನ ನೋಡಿದ. "ಏನ್ಮಾಡ್ತೀನಿ, ಏನ್ಮಾಡ್ತೀನಿ..." ಅವಳ ಪಾಡಿಗೆ ಅವಳೇ ಅಂದುಕೊಂಡಳು. ಪ್ರೇಮ ಒಂದು ರೀತಿಯ ಹುಚ್ಚೆ ನಿಸಿತು ಅವನಿಗೆ. "ಅಡಿಗೆ ಇದ್ರೆ ಊಟ ಮಾಡ್ತೀರಿ. ಇಲ್ಲದಿದ್ರೆ ಮಲಗ್ತೀರಿ. ಅಷ್ಟೇ....ತಾನೇ ?" ಹೂ ಗುಟ್ಟಿದರೂ ನಕ್ಕುಬಿಟ್ಟಳು ಕೋಮಲ ಮುಕ್ತ ವಾಗಿ. "ಅದೇನು ಬರೆದಿಟ್ಟಿದಿರೋ, ನೋಡೋಣ ಕೊಡಿ" ಕೈ ಚಾಚಿದ,

ಅಭಿಮಾನ ಬೆಳೆಸಿಕೊಂಡಂಥ ವ್ಯಕ್ತಿ ಏನಾದರೂ ಕೇಳಿದರೇ ಇಲ್ಲವೆಂದಾಳೇ ?" ಬೇಡ ಸರ್, ನನ್ನ ವಿದ್ಯಾರ್ಥಿನಿ ಬುದ್ಧಿವಂತೆ ಅಂತ ತಿಳ್ಕೊಂಡಿದ್ರಿ. ಈಗ ನನ್ನ ಸೋಮಾರಿತನ, ಬೇಜವಾಬ್ದಾರಿತನದಿಂದ ನಿಮ್ಮ ಅಭಿಮಾನ ಸ್ವಲ್ಪ ಮಟ್ಟಿಗೆ ಕಳ್ಕೊಂಡಿದ್ದೀನಿ. ಮತ್ತಷ್ಟು ಇಳಿಯೋದ್ಬೇಡ. ಅದಷ್ಟಾದ್ರೂ ಕಡೆವರ್ಗೂ ಉಳಿಸ್ಕೋಬೇಕು" ಭಾವುಕಳಂತೆ ನುಡಿದಳು.

"ಬರ್ತೀನಿ, ಸರ್" ಎಂದವಳೇ ಪರ್ಸನ್ನು ಅಲ್ಲೇ ಮರೆತು ಹೋಗಿ ಬಿಟ್ಟಳು. 'ಕೋಮಲ ನೀವು ಸದಾ ಏನನ್ನ ಯೋಚಿಸ್ತೀರಾ ?' ಎಂದು ಪ್ರಶ್ನಿಸಿದರೇ ಅವಳ ಹೃದಯ ಹೆಚ್ಚು ಸ್ಪಷ್ಟವಾಗಿ ಹೇಳುತ್ತಿತ್ತು "ನಿಮ್ಮ ಬಗ್ಗೆ...." ಎಂದು.

ಸಂತೋಷದ ಗುಂಗಿನಲ್ಲಿ ವ್ಯೆ ಮರೆತವನು ಅವಳ ಪರ್ಸ್ ನೋಡುವ ಸ್ವತಂತ್ರ ವಹಿಸಿದ. ಭಾವನೆಗಳ ತೀವ್ರವಾದ ಒತ್ತಡಕ್ಕೆ ಅವನು ಒಳಗಾಗಲೇ ಬೇಕಾಯಿತು.

ಪೆನ್ನು, ಬಾಲ್‌ಪೆನ್ನು, ಒಂದಿಷ್ಟು ಚಿಲ್ಲರೆ ಜೊತೆ ಕೀಬಂಚ್, ಅಚ್ಚ ನಾಲ್ಕು ಬಿಳಿಯ ಹಾಳೆಗಳನ್ನು ಪಂಚ್ ಮಾಡಿ ಮಡಿಸಿಟ್ಟಿದ್ದಳು. ಬಿಡಿಸಿ ನೋಡಿದ. ತೀರಾ ಕೊರೆದಿದ್ದ ಅಕ್ಷರಗಳು ಸ್ಪಷ್ಟವಾಗಿದ್ದವು. ಪುಸ್ತಕದಲ್ಲಿ ಮಡಿಚಿಟ್ಟಿದ್ದ ಪೇಪರನ್ನು ಬಿಡಿಸಿದ. ಯಾವುದೇ ವ್ಯತ್ಯಾಸ, ತಪ್ಪುಗಳಿರಲಿಲ್ಲ. ನೋಟ್ಸ್‌ನ ಕಾಪಿ ಮಾಡಿದಂತಿತ್ತು. ತಾರೀಖಿನ ಜೊತೆ ಅವನು ತೊಟ್ಟ ಬಟ್ಟೆ, ಅಂದಿನ ಮೂಡ್, ಪಾಠದ ವೈಖರಿಯನ್ನು ಸಂಕ್ಷಿಪ್ತವಾಗಿ ಬರೆದಿಟ್ಟಿದ್ದಳು. ಒಂದು, ಎರಡು ದಿನದ್ದಲ್ಲ. ಪ್ರತಿಯೊಂದು ದಿನದ್ದೂ ಬರೆದಿಟ್ಟಿದ್ದಳು.

ವಿಕಾಸ್‌ನ ಎದೆ ಭಾರವಾಗಿ ಕಣ್ಣುಗಳು ಮಬ್ಬಾಯಿತು. ಬದುಕಿನಲ್ಲಿ ಇಂಥ ಒಂದು ಸಂತೋಷವಿದೆಯೆಂಬ ವಿಶಿಷ್ಟವಾದ ಅನುಭವವುಂಟಾಯಿತು.

ಸುನಂದಮ್ಮ, ವಿಶ್ವನಾಥಯ್ಯ ಮನೆಗೆ ಬಂದಾಗ ಒಂಬತ್ತು ಇಪ್ಪತ್ತು. ಪೆಚ್ಚಾಗದಿದ್ದರೂ ಹೋಗುವಾಗಿನ ಗೆಲುವು ಅವರ ಮುಖದ ಮೇಲಿರಲಿಲ್ಲ.

ಕೈಕಾಲು ತೊಳೆದುಬಂದ ವಿಶ್ವನಾಥಯ್ಯ ಮೆಲುದನಿಯಲ್ಲಿ ಹೆಂಡತಿಗೆ ಹೇಳುತ್ತಿದ್ದರು :

"ಅಷ್ಟಿಗೆ ಹಿಂಸೆ ಆಗೋಂಥ ಪ್ರಸ್ತಾಪ ಎತ್ತೋದ್ಬೇಡ. ಅವನೆದೆ ಗಟ್ಟಿ

ಆಗಿರೋ ಹೊತ್ಗೆ ಇದನ್ನೆಲ್ಲ ತಡೆದುಕೊಂಡ. ಇಲ್ಲದಿದ್ರೆ... ಸನ್ಯಾಸಿ ಆಗಿ ದೇಶಾಂತರ ಹೋಗಬೇಕಿತ್ತು."

ಅವರ ಮಾತುಗಳನ್ನ ಕೇಳಿ ವಿಕಾಸ್ ಸಣ್ಣಗೆ ನಕ್ಕ. ಬರೀ ವಿಷಾದದ ಅಲೆಗಳು ಉಕ್ಕಿ ಹರಿಯಿತು.

"ರಜನಿಗೆ ನಾವೇನು ಮಾಡಿದ್ವಿ ? ವಿಕಾಸ್ ಎಂಥಾದ್ದೋ ಒರಟಾಗಿ ನಡ್ಕೊಂಡ್ನಾ ?" ದುಗುಡದಿಂದ ಸುನಂದಮ್ಮ ಹೇಳಿಕೊಳ್ಳುತ್ತಿದ್ದರು. ಇವೆಲ್ಲ ಪೂರ್ತಿಯಾಗಿ ನಿಲ್ಲಬೇಕಾದರೆ ಸ್ವಲ್ಪ ಕಾಲವೇ ಬೇಕೆನಿಸಿತು ಅವನಿಗೆ.

ತಾನೇ ತಟ್ಟೆ ಹಾಕಿ ನೀರಿಟ್ಟು ಬಂದ. "ಬನ್ನಿ, ಊಟ ಮಾಡೋಣ." ಮೆಲ್ಲಗೆ ವಿಶ್ವನಾಥಯ್ಯನವರು ನೋಟವೆತ್ತಿ ಮಗನ ಕಣ್ಣುಗಳಲ್ಲಿ ಇಣುಕಿದರು. "ಯಾಕೋ ಹಸಿವು ಇಲ್ಲ. ಮಧ್ಯಾಹ್ನದ ಮದ್ವೆ ಊಟ ಹೊಟ್ಟೆ ಭಾರ. ಇನ್ಮೇಲೆ ರಾತ್ರಿ ಊಟ ಬಿಡೋದು ಒಳ್ಳೇದು" ಎಂದರು. ತಂದೆಯ ಜೀರ್ಣ ಶಕ್ತಿಯ ವಿಷಯ ಅವನಿಗೆ ಗೊತ್ತು. ಸಂಜೆ ತಿಂಡಿ ತಿಂದರೂ ರಾತ್ರಿ ಗಡತ್ತಾಗಿ ಊಟ ಮಾಡುತ್ತಿದ್ದರು.

"ಸಧ್ಯಕ್ಕೆ ಒಂದೂಟ ಮಾಡೋಷ್ಟು ವಯಸ್ಸೇನು ಆಗಿಲ್ಲ. ಅಪ್ಪ ಆಮೇಲೆ ಯೋಚಿಸ್ಸೋಣ" ಎಬ್ಬಿಸಿಕೊಂಡು ಹೋದ.

ನಗು ನಗುತ್ತಲೇ ವಿಕಾಸ್ ಹೊಟ್ಟೆ ತುಂಬ ಊಟ ಮಾಡಿದ. ಜೀವನದಲ್ಲಿ ಚೇತರಿಕೆ ಬೇಕಾಗಿತ್ತು. ಈಗಲೇ ಪಾತಾಳಕ್ಕೆ ಇಳಿದ ತಾಯ್ತಂದೆಯರನ್ನು ಮತ್ತಷ್ಟು ಕೆಳತಳ್ಳುವ ಇಚ್ಛೆ ವಿಕಾಸ್‌ಗಿಲ್ಲ.

ತಾಯಿಯ ಊಟ ಮುಗಿದ ಮೇಲೆ ಟವಲಿಗೆ ಕೈಯೊತ್ತುತ್ತ ನಿಂತವನು ನಿಧಾನವಾಗಿ ಹೇಳಿದ.

ಅಮ್ಮ, ರಜನಿ ಸಿಕ್ಕಿದ್ಳು. ಇನ್ವಿಟೇಷನ್ ಕೊಟ್ಟಿದ್ದಾಳೆ. ಮದ್ವೆಗೆ ಮುನ್ನ ನಿಮ್ಮ ಆಶೀರ್ವಾದ ಬೇಕಂತೆ. ಸ್ನೇಹಿತರ, ಪರಿಚಿತರ ಹೆಣ್ಣು ಮಗ್ಳು ಬಂದಾಗ ಹೇಗೆ ಕಾಣ್ತೀಯೋ, ಹಾಗೆ ಕಂಡ್ರೆ ಸಾಕು."

ನಿಬ್ಬೆರಗಾದರು ಸುನಂದಮ್ಮ. ಅವರ ಬಾಯಿಂದ ಮಾತೇ ಹೊರಡಲಿಲ್ಲ. ರಜನಿ ವಿಲಕ್ಷಣ ಹೆಣ್ಣಾಗಿ ಕಂಡಳು. ಮಗುವಿನಂತೆ ತಮ್ಮ ಹಿಂದೂ ಮುಂದೆ ಓಡಾಡಿಕೊಂಡಿದ್ದ ಹೆಣ್ಣು....ಅವರಲ್ಲಿನ ಚಲನೆಯೇ ಸತ್ತಂತಾಯಿತು.

ಕೋಣೆಗೆ ಹೋಗಿದ್ದವನು ಮದುವೆಯ ಆಮಂತ್ರಣ ಕೈಯಲ್ಲಿಡಿದು ಬಂದು ತಂದೆಯ ಮುಂದೆ ಹಾಕಿದ. ಅವರು ಮುಟ್ಟಲಿಲ್ಲ.

"ಭೇಷ್, ನಾವು ರಜಸಿನ ಅರ್ಥಮಾಡಿಕೊಳ್ಳಲಿಲ್ಲ !" ಅವರ ಸ್ವರದಲ್ಲಿ ಆಕ್ರೋಶದ ನೆರಳಾಡಿತು. ವಿಕಾಸ್ ಅಲ್ಲೇ ಕೂತ "ಯಾವ್ದೇ ಮಾತುಗಳು ಅನಗತ್ಯ. ಗಂಡು ಇಂಥ ತಪ್ಪುಗಳ್ನ ಮಾಡ್ತಾನೇ ಬಂದಿದ್ದಾನೆ. ಅಪರೂಪ ಕ್ಕೊಮ್ಮೆ ಹೆಣ್ಣು ಇಂಥ ಬದಲಾವಣೆಯತ್ತ ಹೆಜ್ಜೆ ಹಾಕಿದಾಗ ಇಲ್ಲಿ ನಮ್ಮ ವೈಯಕ್ತಿಕ ನೋವು, ಅವಮಾನವನ್ನು ಮರೆತುಬಿಡಬೇಕು" ಮಗನ ಮಾತು ಗಳಿಗೆ ಯಾವುದಾದರೂ ಯಾವುದೇ ಪ್ರತಿಕ್ರಿಯೆ ವ್ಯಕ್ತಪಡಿಸಲಾರದೆ ಎದ್ದು ಹೋದರು.

ಅವರೆದೆಯಲ್ಲಿ ಎಷ್ಟೋ ಕುದಿತವಿದ್ದರೂ ಖಂಡಿತ ಮಗನ ಮೇಲೆ ಒತ್ತಡವೇರಲಾರರು. ಇದಕ್ಕೆ ಕಾರಣ ಅವರಿಗೆ ಮಗನ ಮೇಲಿದ್ದ ಪ್ರೀತಿ, ವಾತ್ಸಲ್ಯಗಳಿಗಿಂತ, ಅಭಿಮಾನ ಗೌರವಗಳಿಗೆ ಹೆಚ್ಚು ಬೆಲೆ ಕೊಡುತ್ತಿದ್ದರು.

ಬಹಳ ಹೊತ್ತಿನ ಮೇಲೆ ಅವರು ಒಳಗೆ ಬಂದಾಗ ಇನ್ವಿಟೇಷನ್‌ಗಳ ಬಾಕ್ಸ್‌ನಲ್ಲಿತ್ತು ಮದುವೆಯ ಆಮಂತ್ರಣ ಪತ್ರಿಕೆ. ಮಗನ ಮನಸ್ಥಿತಿಯನ್ನು ಅರ್ಥಮಾಡಿಕೊಂಡರು. ಆದರೆ ಯಾಕೋ ಮನಸ್ಥಿತಿಯನ್ನು ಎದುರಿಸುವ ಧೈರ್ಯ ಅವರಿಗಿಲ್ಲ. ಈ ಮದುವೆ ಮುಗಿಯುವವರೆಗೂ ಊರಿನಲ್ಲಿರುವುದೇ ಬೇಡವೆಂದು ನಿಶ್ಚಯಿಸಿದರು.

ಇಡೀ ರಾತ್ರಿ ಯೋಚಿಸಿ ವಿಕಾಸ್ ಒಂದು ನಿರ್ಧಾರಕ್ಕೆ ಬಂದ. ಕಮಲ ಪರ್‌ಫ್ಯೂಮ್ ಏಜನ್ಸಿ, ಮೆಕ್ಯಾನಿಕ್ ರಾಜುವಿನ ಜೊತೆ ಕಾರಿನ ವಹಿವಾಟು ಎಲ್ಲಾ ನಿಲ್ಲಿಸಿಬಿಡಲು ನಿಶ್ಚಯಿಸಿದ್ದ. ಅವನಿಗೆ ಪೂರ್ತಿಯಾಗಿ ತನ್ನ ಪ್ರೊಫೆ ಷನ್‌ನಲ್ಲಿಯೇ ಮಗ್ನವಾಗುವ ಇಷ್ಟ. ತುಂಬ ಹಣ ಸಂಪಾದಿಸಬೇಕೆಂಬ ಕನವರಿಕೆ ಅವನಿಗಿಲ್ಲ. ಹಿಡಿದ ಕೆಲಸ ಮುಗಿಸಿದ್ದ. ಮತ್ತೆ ಸಾಧಿಸಬೇಕಾದ್ದು ಏನು ಇರಲಿಲ್ಲ. ಗುರುಮೂರ್ತಿಗಳಿಗೊಂದು ಪೆಟ್ಟು. ಭೇಟಿ ಮಾಡಿ ಒಮ್ಮೆ ವಿಚಾರಿಸಬೇಕೆನಿಸಿತು.

ಕಾಲೇಜಿಗೆ ರಜೆ ಹಾಕಿ ಮನೆಯಲ್ಲೇ ಇದ್ದ. ಕೋಮಲ ಎಂದಿನಂತೆ ಬಂದಾಗ ಕ್ಷಣ ಯೋಚಿಸಿದ.

"ಇನ್ನು ಇಲ್ಲೇನು ಕೆಲ್ಸ ಇಲ್ಲ. ಏಜನ್ಸಿನ ನನ್ನ ವಿದ್ಯಾರ್ಥಿಗೆ ಬಿಟ್ಟು ಕೊಡೋ ನಿರ್ಧಾರ ಮಾಡಿದ್ದೀನಿ. ಅವೆಲ್ಲ ತುಂಬ ರಿಸ್ಕ್. ಟೆನ್ಷನ್ ಜಾಸ್ತಿ. ಸದಾ ಲಾಭ-ನಷ್ಟಗಳ ಯೋಚ್ನೆ-ಇದ್ರಿಂದ ನಾನೆಲ್ಲಿ ವ್ಯಾಪಾರಿಯಾಗಿ ಬಿಡ್ತೀನೋ ಅನ್ನೋ ಭಯ" ನಿಧಾನವಾಗಿ ಹೇಳಿದ.

ಅಮಾವಾಸ್ಯೆಯ ಕತ್ತಲು ಕವಿದಂತಾಯಿತು ಕೋಮಲ ಮುಖಕ್ಕೆ. ಬದುಕಿಗೆ 'ನವಚೈತ್ರ' ಬರೆದಿದ್ದರೂ ಅಂಥ ಕನಸ್ಸಿನಲ್ಲಿ ಬದುಕಬೇಕೆಂಬ ಆಸೆ ಅವಳಿಗಿತ್ತು

"ಓ.ಕೆ. ಸರ್...." ಮೇಲೆದ್ದಳು.

ಅಷ್ಟರಲ್ಲಿ ಫೋನ್ ರಿಂಗಾಯಿತು. ಸಾಕ್ಷಾತ್ ಗುರುಮೂರ್ತಿಗಳ ಸ್ವರ. ಬಿಗುಮಾನ ಬಿಟ್ಟು ಕ್ಷಮಾಪಣೆ ಕೇಳಿದರು. "ರಜನಿ ನೀನೆಲ್ಲಿದ್ದೀ ಬಿಡ್ಬೋಲ್ಲ ಅಂತಾಳೆ..." ಹೇಳುತ್ತಲೇ ಹೋದರು. ಸಾವಧಾನವಾಗಿ ಕೇಳಿದ. "ಟೂ ಲೇಟ್...." ರಿಸೀವರ್ ಇಟ್ಟ. ಮತ್ತೆ ರಿಂಗಾಯಿತು. ರಜನಿಯ ಅಳು, ಮಾತುಗಳು, ಬಿಕ್ಕುವಿಕೆ. ಅಂಥಹುದಕ್ಕೆ ಕಲ್ಲಾಗಿದ್ದ "ರಾಂಗ್....ನಂಬರ್" ಫೋನಿಟ್ಟ. ಮತ್ತೆ ಎಷ್ಟು ಸದ್ದು ಮಾಡಿದರೂ ಎತ್ತಲಿಲ್ಲ. ಕೋಮಲ ನೋಡುತ್ತಲೇ ಇದ್ದಳು.

"ತನ್ನನ್ನು ಒಂದು ಹೆಣ್ಣು ಆಸಕ್ತಿಯಿಂದ ಗಮನಿಸೋದು....ತುಂಬ ಅಮೂಲ್ಯ, ಅದು ಎಷ್ಟರ ಮಟ್ಟಿಗೆ ಗಂಡಿನ ಬಾಳಿಗೆ ಸ್ಫೂರ್ತಿಯಾಗುತ್ತೆ ಅನ್ನೋದು ನಿನ್ನ ಮೂಲಕವೇ ಗೊತ್ತಾಗಿದ್ದು ಕೋಮಲ" ಮನ ಬಿಚ್ಚಿ ಉಸುರಿದ. ಕೋಮಲ ತಬ್ಬಿಬ್ಬಾದಳು.

o o o

# ನಮ್ಮಲ್ಲಿ ದೊರೆಯುವ ಕನ್ನಡ ಪುಸ್ತಕಗಳು

ಕಾದಂಬರಿಗಳು —— (ಸಾಮಾಜಿಕ, ಐತಿಹಾಸಿಕ, ಪೌರಾಣಿಕ)

ಸಣ್ಣ ಕಥೆಗಳು

ಕವನ ಸಂಗ್ರಹಗಳು

ನಾಟಕಗಳು

ಆಧ್ಯಾತ್ಮಿಕ ಮತ್ತು ಪೌರಾಣಿಕ ಗ್ರಂಥಗಳು

ವಿಶ್ವವಿದ್ಯಾಲಯದ ಪ್ರಕಟಣೆಗಳು

ಸಂಗೀತ ಪುಸ್ತಕಗಳು

ಶಿಶು ಸಾಹಿತ್ಯ

ಪ್ರಬಂಧ ಹಾಗೂ ಪ್ರೌಢಗ್ರಂಥಗಳು

ಜ್ಯೋತಿಷ್ಯ ಶಾಸ್ತ್ರಗ್ರಂಥಗಳು

ವೈಜ್ಞಾನಿಕ ಪುಸ್ತಕಗಳು

*ಹಾಗೂ ಇತರ ಪುಸ್ತಕಗಳಿಗಾಗಿ ಒಮ್ಮೆ ಭೇಟಿಕೊಡಿ*

*ಅಥವಾ*

*ಪುಸ್ತಕಗಳ ಪಟ್ಟಿಗಾಗಿ ಇಂದೇ ಬರೆಯಿರಿ*

**ಗೀತಾ ಏಜನ್ಸೀಸ್**

ಬಳೇ ಪೇಟೆ ಚಾಕ · ಬೆಂಗಳೂರು 2A